ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ

# ಮಲ್ಲಾರ

ಶ್ರೀ ವಿಕಾರಿ ಸಂವತ್ಸರ
ಮಾಘ-ಫಾಲ್ಗುಣ
ಫೆಬ್ರವರಿ 2020
₹ 12.00



ವಿಶೇಷ ಲೇಖನ

## ಭದ್ರಾಚಲದ ಭಕ್ತ ರಾಮದಾಸ

RAMAIAH
Indic Specialty Ayurveda
RESTORATION HOSPITAL

# ರಾಮಯ್ಯ ಆಯುರ್ವೇದ


# ಯೋಗ @ ರಾಮಯ್ಯ

ಆಸನ

ಪ್ರಾಣಾಯಾಮ

ಯೋಗ ವಿಶ್ರಾಂತಿ

ಧ್ಯಾನ



ಸಮಯ
ಸೋಮವಾರದಿಂದ ಶುಕ್ರವಾರದವರೆಗೆ

@ 6.30AM , 7.30 AM
@ 5.30PM , 6.30PM

## ಶುಲ್ಕ ತಿಂಗಳಿಗೆ **500** ರೂ

## 08022183456, 8099959595

ರಾಮಯ್ಯ ಇಂಡಿಕ್ ಸ್ಪೆಷಾಲಿಟಿ ಆಯುರ್ವೇದ ರೆಸ್ಟೋರೇಷನ್ ಆಸ್ಪತ್ರೆ
ನ್ಯೂ ಬಿ ಇ ಎಲ್ ರೋಡ್, ಎಂ ಎಸ್ ರಾಮಯ್ಯ ನಗರ, ಎಮ್ ಎಸ್ ಆರ್ ಐ ಟಿ ಪೋಸ್ಟ್, ಮತ್ತಿಕೆರೆ, ಬೆಂಗಳೂರು – 560 054

www.ramaiahayurveda.com

## ಒಳ ಪುಟಗಳಲ್ಲಿ...


**ಮನುಕುಲಕ್ಕೆ ಬಂದ ಬೆಳಕು ಶ್ರೀ ಮಧ್ವಾಚಾರ್ಯರು**
● ಡಾ. ಅನಸೂಯಾದೇವಿ



6

**ರಾಮಪ್ರಿಯನನ್ನು ಅರಸಿ ಬಂದ ಬೀಬಿ ನಾಚ್ಚಿಯಾರ್**
● ಡಾ. ಬಾಬು ಕೃಷ್ಣಮೂರ್ತಿ




10

**ಪಾವನ ಬೋಧನ**
● ನಂ. ನಾಗಲಕ್ಷ್ಮೀ




18

**ಶೌನಕ**
● ಡಾ. ಎಸ್. ಹೇಮಲತಾ



20

**ಉಪಕೋಶಾ**
● ಡಾ. ಎಸ್.ಆರ್. ಲೀಲಾ



28

**ಭಕ್ತಿಯಿಂದ ವಿಶುದ್ಧ ಆನಂದದ ಲಾಭ**
● ಸಿದ್ದವನಹಳ್ಳಿ ಕೃಷ್ಣಶರ್ಮಾ




32

**‘ಏನು ಶೆಟ್ಟರೇ, ಬರೀ ಸೊನ್ನೆ ಸುತ್ತುತ್ತಿದ್ದೀರಲ್ಲ’**
● ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ



60


ಫೆಬ್ರವರಿ–೨೦೨೦
ಶ್ರೀ ವಿಕಾರಿ ಸಂವತ್ಸರ
ಮಾಘ_ಫಾಲ್ಗುಣ

ಸಂಪುಟ ೨೦ ● ಸಂಚಿಕೆ ೨



ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
**ಡಾ. ಎಂ.ಆರ್. ಜಯರಾಮ್**

ನಿರ್ವಾಹಕ ಸಂಪಾದಕರು
**ಡಾ. ಬಾಬು ಕೃಷ್ಣಮೂರ್ತಿ**

ಸಂಪಾದಕೀಯ ವಿಳಾಸ:
**ಶ್ರೀ ಯೋಗಿ ನಾರೇಯಣ ಅಧ್ಯಯನ ಕೇಂದ್ರ**
ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ,
ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ,
ಬೆಂಗಳೂರು–560 054. ☎: 080–40502965 /7204095848
E-mail: mallaramagazine@hotmail.com

ಮುದ್ರಕರು:
**ಲಾವಣ್ಯ ಮುದ್ರಣ,**
ವಿದ್ಯಾಪೀಠ,
ಬೆಂಗಳೂರು–560 050.


ವಿನ್ಯಾಸ: ಕಿಶೋರ್ ಕೆ.ಟಿ., ಮಂಡ್ಯ


# ನಿಮ್ಮೊಡನೆ...

**ಆತ್ಮೀಯ ಮಲ್ಲಾರ ಓದುಗರೇ ನಮಸ್ಕಾರ.**

ಕಳೆದೆರಡು ತಿಂಗಳುಗಳಲ್ಲಿ ಕರ್ನಾಟಕದ ಕೆಲವರು ಶ್ರೇಷ್ಠ ವ್ಯಕ್ತಿಗಳನ್ನು ಕಳೆದುಕೊಂಡಿದ್ದೇವೆ. ಹಿರಿಯ ಸಾಹಿತಿಗಳಾದ ಪ್ರೊ. ಎಲ್.ಎಸ್. ಶೇಷಗಿರಿರಾಯರು ವಿಧಿವಶರಾದ ಕೆಲವು ದಿನಗಳಲ್ಲೇ ಪೂಜ್ಯ ಪೇಜಾವರ ವಿಶ್ವೇಶತೀರ್ಥ ಸ್ವಾಮಿಗಳು ವೈಕುಂಠವಾಸಿಗಳಾದರು. ಅವರ ಹಿಂದೆಯೇ ಕೈಲಾಸವಾಸಿಯಾದವರು ಹಿರಿಯ ಸಂಶೋಧಕರು, ಆದರ್ಶವಾದಿ ಹಾಗೂ ಧರ್ಮನಿಷ್ಠ ಚಿಂತಕ ಡಾ. ಚಿದಾನಂದಮೂರ್ತಿಯವರು. ಈ ಮೂರು ಹಿರಿಯ ಜೀವಗಳಿಗೆ ಮಲ್ಲಾರ ಶ್ರದ್ಧಾಂಜಲಿ ಸಲ್ಲಿಸುತ್ತದೆ.

ಪೂಜ್ಯ ಪೇಜಾವರ ಶ್ರೀಗಳದೂ ನಮ್ಮ ಧರ್ಮಾಧಿಕಾರಿಗಳಾದ ಶ್ರೀ ಎಂ.ಆರ್. ಜಯರಾಮ್‌ರವರದೂ ವಿಶಿಷ್ಟ



ಸಂಬಂಧ. ಇಬ್ಬರೂ ಆಗಾಗ ಬಹು ಮುಕ್ತವಾಗಿ ಧಾರ್ಮಿಕ ಸಂಗತಿಗಳನ್ನು ಕುರಿತು ಚರ್ಚಿಸುತ್ತಿದ್ದರು. ಪೂಜ್ಯರು ಕೈವಾರ ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಿ ಅಲ್ಲಿನ ವ್ಯವಸ್ಥೆ, ಪೂಜಾ ವಿಧಾನ, ವಾತಾವರಣ ಮುಂತಾದವುಗಳನ್ನು ನೋಡಿ ಸಂತೋಷ ವ್ಯಕ್ತಪಡಿಸಿದ್ದುಂಟು.

ದಿ. ಎಂ.ಎಸ್. ರಾಮಯ್ಯನವರ ಕಾಲದಿಂದಲೂ ಅವರ ಕುಟುಂಬಕ್ಕೂ ಪೇಜಾವರ ಶ್ರೀಗಳಿಗೂ ಅತ್ಯಂತ ಘನಿಷ್ಠ ಸಂಬಂಧ. ಗೋಕುಲದಲ್ಲಿರುವ ಕಲ್ಯಾಣ ಮಂಟಪದ ಉದ್ಘಾಟನೆ ನಡೆದಿದ್ದೇ ಅವರ ಕೈಗಳಿಂದ. ನಮ್ಮ ಧರ್ಮಾಧಿಕಾರಿಗಳಾದ ಶ್ರೀ ಜಯರಾಮ್‌ರವರಿಗೆ ಪೂಜ್ಯಪಾದರ ಆತ್ಮೀಯ ಸಂಬಂಧ ನಾಲ್ಕೂವರೆ ದಶಕಗಳದು. ಕೈವಾರದ ಭಜನೆ ಸಂಪ್ರದಾಯವನ್ನು ಬಹುವಾಗಿ ಮೆಚ್ಚಿಕೊಂಡ ಶ್ರೀಗಳು ಸಂಕೀರ್ತನಾ ಯಾತ್ರೆಗಳಿಂದಲೇ ಧರ್ಮ ಜಾಗೃತಿ, ಭಕ್ತಿ ಉದ್ದೀಪನ ಸಾಧ್ಯ ಎಂದು ಧರ್ಮಾಧಿಕಾರಿಗಳವರ ಬಳಿ ಹೇಳುತ್ತಿದ್ದರು. ದೇಶದಲ್ಲಿ ಧರ್ಮಕ್ಕೆ ಆಗುತ್ತಿರುವ ಅನ್ಯಾಯಗಳ ಬಗ್ಗೆ ತೀವ್ರ ಕಳವಳಗೊಳ್ಳುತ್ತಿದ್ದ ಇಬ್ಬರೂ ಸುದೀರ್ಘ ಚರ್ಚೆಗಳ ಅನಂತರ ‘ಧಾರ್ಮಿಕ ನೇತಾರರು ಜನಸಾಮಾನ್ಯರ ಬಳಿಗೆ ಹೋಗುವುದೊಂದೇ ದಾರಿ’ ಎಂಬ ಸಮಾನ ಅಭಿಪ್ರಾಯಕ್ಕೆ ಬಂದು ತಲಪುತ್ತಿದ್ದರು. ಅದಕ್ಕೆ ಉದಾಹರಣೆಯಾಗಿ ಶ್ರೀಗಳು ಮಲ್ಲೇಶ್ವರದ ಹರಿಜನ ಕಾಲೋನಿಯಲ್ಲಿ ಪಾದಯಾತ್ರೆ ನಡೆಸಿ ದಲಿತ ಬಂಧುಗಳೊಂದಿಗೆ ಸಂವಾದ ನಡೆಸಿ ಅಂದಿನ ಸಾಂಪ್ರದಾಯಿಕ ವಾತಾವರಣದಲ್ಲಿ ದೊಡ್ಡ ಕ್ರಾಂತಿಯನ್ನೇ ಮಾಡಿದರು.

ಧರ್ಮಾಧಿಕಾರಿಗಳ ಗೋಕುಲ ನಿವಾಸಕ್ಕೆ 3–4 ಬಾರಿ ಭೇಟಿ ನೀಡಿರುವ ಸ್ವಾಮಿಗಳು ಸುಮಾರು 14–15 ಸಲ ಅವರ ಜೊತೆ ಧಾರ್ಮಿಕ ಚರ್ಚೆಯಲ್ಲಿ ತೊಡಗಿದ್ದರು. ದಾಸ ಸಾಹಿತ್ಯ ಹಾಗೂ ಹರಿದಾಸ ಪರಂಪರೆಯನ್ನು ಆಮೂಲಾಗ್ರವಾಗಿ ಅಧ್ಯಯನ ನಡೆಸಿರುವ ಧರ್ಮಾಧಿಕಾರಿಗಳು “ಪೇಜಾವರ ಶ್ರೀಗಳು ನನ್ನ ದೃಷ್ಟಿಯಲ್ಲಿ ವ್ಯಾಸರಾಯರ ಪುನರವತಾರ ಅನ್ನಿಸುತ್ತದೆ” ಎಂದು ಉದ್ಗರಿಸಿ ಶ್ರೀಗಳವರ ನೆನಪಿಗೆ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ.

ನಿಮ್ಮ ವಿಶ್ವಾಸಿ
**ನಿರ್ವಾಹಕ ಸಂಪಾದಕ**

# ಪ್ರತಿಸ್ಪಂದನ

● ಶೇಷಾದ್ರಿಪುರಂ ಪ್ರಥಮ ದರ್ಜೆ ಪದವಿ ಕಾಲೇಜು ಆಡಿಟೋರಿಯಂ, ಯಲಹಂಕದಲ್ಲಿ ನಡೆದ ಧರ್ಮ ಚಿಂತನೆಯಲ್ಲಿ ಶ್ರೀ ತಾತಯ್ಯನವರ ತತ್ತ್ವಪದಗಳನ್ನು ಭಕ್ತ ಸಮೂಹದಲ್ಲಿ ಅವಕಾಶ ಲಭಿಸಿದ್ದು ನನ್ನ ಜನ್ಮದಲ್ಲಿ ಮರೆಯಲಾಗದ ಕ್ಷಣ. ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಅವರ ನುಡಿಗಳಂತು ಸುವರ್ಣಾಕ್ಷರಗಳು. ಆಧ್ಯಾತ್ಮಿಕ ಚಿಂತಕರಾದ ಡಾ. ಬಾಬುಕೃಷ್ಣಮೂರ್ತಿಯವರ ಗುರು ಸಾಕ್ಷಾತ್ಕಾರದ ಮಾತುಗಳು ನಮ್ಮ ಬಾಳಿನುದ್ದಕ್ಕೂ ದಾರಿ ದೀಪವಾಗುವುದರಲ್ಲಿ ಸಂಶಯವಿಲ್ಲ.

■ **ಜಕ್ಕೂರು ಶ್ರೀ. ಎಸ್. ನಾಗರಾಜು,** ಬೆಂಗಳೂರು–560 064.

●ಪ್ರತಿ ತಿಂಗಳೂ ಮಲ್ಲಾರದಲ್ಲಿ ಪ್ರಕಟಗೊಳ್ಳುತ್ತಿರುವ ಯತಿರಾಜ್ ವೀರಾಂಬುಧಿಯವರ 'ವಿಷ್ಣು ಸಹಸ್ರನಾಮ'ದ ಪದಗಳು ತುಂಬ ಚೆನ್ನಾಗಿದೆ. ಭಗವಂತನ ಕೆಲಸ ಸೃಷ್ಟಿ, ಸ್ಥಿತಿ, ಲಯ ಮಾತ್ರವಲ್ಲ, ಭಕ್ತನ್ಯಾರಾದರೂ ಭಕ್ತ ಸಹಾಯ ಮಾಡಿದರೆ ತತ್‌ಕ್ಷಣವೇ ಅಲ್ಲಿ ಅವನು ಪ್ರತ್ಯಕ್ಷನಾಗುತ್ತಾನೆಂದು ಹೇಳಿರುವುದು ಭಕ್ತಿಯ ಮಹತ್ತ್ವವನ್ನು ಹೆಚ್ಚಿಸಿದೆ.

■ **ಶ್ರೀ ರಾಜಶೇಖರ್,** ಯಶವಂತಪುರ–560 022.

ಮಲ್ಲಾರದ ಪ್ರತಿ ಮಾಹೆಯಲ್ಲಿ ಬರುವ ಎಲ್ಲ ವಿಷಯಗಳಿಂದ ಒಂದನ್ನೂ ಬಿಡದೆ ಎಲ್ಲವನ್ನೂ ಓದುತ್ತಿದ್ದೇನೆ. ಎಲ್ಲವೂ ಓದುವಂತಹ ವಿಷಯಭರಿತ ಲೇಖನಿಗಳಾಗಿವೆ. ಹರಿದಾಸ ಶ್ರೇಷ್ಠ ಶ್ರೀ ಪುರಂದರದಾಸರ ಹಾಗೂ ನಾದಬ್ರಹ್ಮ ಶ್ರೀ ತ್ಯಾಗರಾಜರ ಆರಾಧನೆಗೆ ಸಂಬಂಧಪಟ್ಟಂತಹ ಚಿತ್ರಸಹಿತ ಲೇಖನಗಳು ಶ್ಲಾಘನೀಯ.

■ **ಶ್ರೀ. ಎ.ಕೆ. ಅನಂತಮೂರ್ತಿ,** ಬೆಂಗಳೂರು–560 050.

●ತುರುಷ್ಕ ರಾಜನ ಅನೇಕ ಮಕ್ಕಳ ಪೈಕಿ ಒಬ್ಬಳಾದ ಬೀಬಿ ನಾಚ್ಚಿಯಾರ್ ಶ್ರೀ ತಿರುನಾರಾಯಣನ ಉತ್ಸವ ಮೂರ್ತಿಯನ್ನು ಅಪ್ಪಿಕೊಂಡಿರುವ ಕಥೆಯನ್ನು ಓದಿ ನಾನು ಭಾವಭರಿತನಾದೆ. ಎಂತಹ ಮುಗ್ಧ ಭಕ್ತಿ ಆ ಹೆಣ್ಣಿನದು. ನಿಜವಾಗಿಯೂ ಹೇಳುವುದಾದರೆ, ಇಂತಹ ಪ್ರತಿಯೊಂದು ವಿಷಯಗಳನ್ನೂ ಓದುಗರಿಗೆ ಮನಮುಟ್ಟುವಂತೆ ತಿಳಿಸುವುದರಲ್ಲಿ ಡಾ. ಬಾಬು ಕೃಷ್ಣಮೂರ್ತಿಯವರದು ಎತ್ತಿದ ಕೈ.

■ **ವಿದ್ವಾನ್, ನಾಗಭೂಷಣಯ್ಯ,** ಮೈಸೂರು–570 018.


●ರಾಜ ಸದಾಶಿವರಾಯರು ಬರಿ ರಾಜರಾಗಿದ್ದು, ರಾಮರಾಜನ ಕಾಲದಲ್ಲಿ ವಿಜಯನಗರದ ವೈಭವ ಏನಿತ್ತು ಎಂದು ಬಹಳ ಆಶ್ಚರ್ಯಕರವಾದ ಹಾಗೂ ಕುತೂಹಲಕರವಾದ ಇತಿಹಾಸದ ವಿಷಯಗಳನ್ನು 'ತಿರುಮಲ ಚರಿತ್ರಾಮೃತಮ್' ಲೇಖನದಲ್ಲಿ ತಿಳಿಸಿದ ಕನ್ನಡಾನುವಾದಕಿ ಸೂರ್ಯವಂಶಿಯವರಿಗೆ ಧನ್ಯವಾದಗಳು.

■ **ಶ್ರೀ ಕೆ.ಎನ್. ನಾಗೇಂದ್ರಮೂರ್ತಿ,** ಕೋಟಂಬಳ್ಳಿ–571117.

●ಧಾರ್ಮಿಕ ಮನೋಭಾವದ, ಯಾರಿಗೂ ತೊಂದರೆ ನೀಡದ, ಯಾರನ್ನೂ ತುಸುವಾದರೂ ನೋಯಿಸದ ಸಾತ್ತ್ವಿಕತೆಯ ಸಂತ ನರಸೀ ಮೆಹ್ತಾರ ಲೇಖನವನ್ನು ಓದಿ, ಸಂತೋಷಗೊಂಡೆ. ಈ ಲೇಖನದಲ್ಲಿ ಚಿತ್ರಗಳನ್ನು ನೋಡಿ ನಾನು ಮೈಮರೆತೆ. ಅಷ್ಟು ಭಕ್ತಿಭಾವದಿಂದ ನರಸೀ ಮೆಹ್ತಾರು ದೈವದಲ್ಲಿ ಲೀನವಾಗಿರುವುದನ್ನು ಎತ್ತಿತೋರಿಸುತ್ತಿವೆ.

■ **ಶ್ರೀಮತಿ ಸುನಂದ,** ತುಮಕೂರು–572 101.

●ಜನವರಿ ತಿಂಗಳ ಮಲ್ಲಾರ ೧ನೇ ತಾರೀಖು ನನ್ನ ಕೈಸೇರಿತು. ಪ್ರತಿಯೊಂದು ಲೇಖನವನ್ನೂ ಓದುತ್ತಿರುವಾಗ, ನನ್ನನ್ನು ಒಂದು ಕಡೆ ನಿಲ್ಲಿಸಿ, ಓದಿಸಿದ ಲೇಖನವೆಂದರೆ, ಸಂತ ವಿನೋಬಾ ಬಾವೆಯ 'ಗೀತಾ ಪ್ರವಚನ'ದಲ್ಲಿ ಪ್ರಕಟಗೊಂಡ ಅಂಕಣ. 'ಏಕಾಗ್ರತೆ ಸಾಧಿಸುವುದು ಹೇಗೆ?' ಎಂಬುದು. ಹೃದಯದಲ್ಲಿನ ಈ ಸಾಗರವನ್ನು ಕಾಣಲು ಕಲಿಯಿರಿ. ಹೊರಗಿನ ನಿರಭ್ರ ನಿರ್ಮಲ ನೀಲ ಆಕಾಶವನ್ನು ಕಂಡು ಚಿತ್ತವನ್ನು ನಿರಭ್ರಗೊಳಿಸಿ, ನಿರ್ಮಲಗೊಳಿಸಿ ಎಂಬ ಆರಂಭದ ಸಾಲುಗಳು ನನ್ನನ್ನು ಯೋಚಿಸುವಂತೆ ಮಾಡಿದವು. ಕನ್ನಡಾನುವಾದವನ್ನು ಸಿದ್ದವನಹಳ್ಳಿ ಕೃಷ್ಣಶರ್ಮಾ ತುಂಬ ಸರಳವಾಗಿ ಮಾಡಿದ್ದಾರೆ.




■ **ಶ್ರೀ ಅಶ್ವತ್ಥನಾರಾಯಣ,** ಆನೇಕಲ್–562 106.

●ಶ್ರೀ ಕಂಚಿ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳವರ ದೈವಾವಾಣಿ ಗ್ರಂಥದಿಂದ ಆಯ್ದ 'ಧರ್ಮದ ಹಿಂದಿನ ವೈಭವ ಮತ್ತು ಇಂದಿನ ಅವನತಿ' ಲೇಖನವೂ ಅತ್ಯಂತ ವಿಷಯಭರಿತ ಹಾಗೂ ಜ್ಞಾನಭರಿತ ಮಾಹಿತಿಗಳನ್ನೊಳಗೊಂಡಿದೆ. ಇಂತಹ ಲೇಖನಗಳನ್ನು ಓದುವುದರಿಂದ ನಮ್ಮ ಧರ್ಮದ ನಮಗೆ ಇನ್ನೂ ಹೆಚ್ಚು ಶ್ರದ್ಧೆ, ಗೌರವಗಳು ವೃದ್ಧಿಸುತ್ತವೆಂಬುದರಲ್ಲಿ ಯಾವುದೇ ಸಂಶಯವಿಲ್ಲ.

■ **ಶ್ರೀ ವೇಣುಗೋಪಾಲ್,** ಕೋಲಾರ–563 101.

● ಡಿಸೆಂಬರ್ ೧೪ರಂದು ಯಲಹಂಕದಲ್ಲಿ ನಡೆದ ಧರ್ಮಚಿಂತನೆಯಲ್ಲಿ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಅವರ ನುಡಿಯಲ್ಲಿ ಎಲ್ಲ ಅವಿದ್ಯೆಗಳು ಹಾಗೂ ಕರ್ಮಗಳು ನಾಶವಾದ ನಂತರವೇ ಮನಸ್ಸು ಸಂಪೂರ್ಣ ಏಕಾಗ್ರತೆಯಿಂದ ನಿಶ್ಚಲವಾಗಲು ಸಾಧ್ಯ ಎಂಬುದನ್ನು ಮನಮುಟ್ಟುವಂತೆ ಹೇಳಿದರು. ಅಂತರಂಗದ ಅನ್ವೇಷಣೆ ಗುರುವಿನಿಂದ ಪರಿಪೂರ್ಣ, ಮಾನಸಿಕ ಭಜನೆ ಶ್ರೇಷ್ಠ ಎಂಬ ಮಾತುಗಳು ಅರ್ಥಗರ್ಭಿತವಾಗಿವೆ.

■ **ಶ್ರೀ ಕೆ. ನಂಜುಂಡಪ್ಪ** ಚಿಕ್ಕಬಳ್ಳಾಪುರ–562101.



# ಹೀಗೊಂದು ಅನಿಸಿಕೆ...

● ಡಾ। ಬಾಬು ಕೃಷ್ಣಮೂರ್ತಿ

## ಯುಗದ್ರಷ್ಟಾರ ರಾಮಕೃಷ್ಣ ಪರಮಹಂಸ



ಭಾರತದ ಸನಾತನ ಧರ್ಮವನ್ನು ಉದ್ಧರಿಸಲು ಕಾಲ ಕಾಲಕ್ಕೆ ಮಹಾಪುರುಷರು ಅವತರಿಸಿ ಬಂದಿದ್ದಾರೆ. ಹೀಗೆ ಅವತರಿಸಿ, ಹತ್ತೊಂಬತ್ತನೇ ಶತಮಾನದಲ್ಲಿ ಅಂತಹ ಕಾರ್ಯವನ್ನು ಮಾಡಿದವರು ಬಂಗಾಳದ ದಕ್ಷಿಣೇಶ್ವರದ ಸಂತ ಎಂದು ಜಗತ್ಪ್ರಸಿದ್ಧರಾದ ಶ್ರೀ ರಾಮಕೃಷ್ಣ ಪರಮಹಂಸರು. ಅವರ ವ್ಯಕ್ತಿತ್ವದ ಪ್ರೇರಣೆಯಿಂದ ನಮ್ಮ ಪ್ರಾಚೀನ ವೇದಾಂತ ಮಾರ್ಗದ ಪುನರುದ್ಧಾರವಾಯಿತು.

ರಾಮಕೃಷ್ಣರು ದಕ್ಷಿಣೇಶ್ವರ ಕಾಳಿ ಮಂದಿರದಲ್ಲಿಯೇ ಕುಳಿತಿದ್ದರೂ ಆ ಕಾಲದ ಬಂಗಾಳದ ಮಹಾ ಪ್ರತಿಭಾಶಾಲಿ ವ್ಯಕ್ತಿಗಳನ್ನು ಅಯಸ್ಕಾಂತದಂತೆ ಆಕರ್ಷಿಸಿದರು. ಅವರದು ಅವಧೂತ ವ್ಯಕ್ತಿತ್ವ. ಸ್ವಾಮಿ ವಿವೇಕಾನಂದರ ಗುರುಗಳು. ತಮ್ಮ ತಪಶ್ಶಕ್ತಿಯನ್ನೆಲ್ಲ ಧಾರೆ ಎರೆದು ನರೇಂದ್ರನನ್ನು ಸ್ವಾಮಿ ವಿವೇಕಾನಂದನನ್ನಾಗಿ ಮಾಡಿ ಒಬ್ಬ ಯುಗ ಪುರುಷನನ್ನು ಜಗತ್ತಿಗೆ ನೀಡಿದ ಕೀರ್ತಿಗೆ ಪಾತ್ರರು.

ಅವರೇ ನಿಜವಾದ ಜಾತ್ಯತೀತವಾದಿ! ಎಲ್ಲ ಮತಗಳನ್ನು ಅರಿತಿದ್ದ ರಾಮಕೃಷ್ಣರು ಹಲವು ಬಗೆಯ ಸಾಧನೆಗಳನ್ನು ಮಾಡಿ ಸತ್ಯಾನ್ವೇಷಣೆ ಮಾಡಿದವರು. ಎಲ್ಲ ಮತಗಳ ಮೂಲ ಪ್ರೇರಣೆ ಭಾರತದ ಸನಾತನ ಧರ್ಮವೇ ಎಂಬುದನ್ನು ಸಾಕ್ಷಾತ್ಕರಿಸಿಕೊಂಡಿದ್ದ ಅವರು 'ಕುರಿತೋದದೆಯಂ ಕಾರ್ಯ ಪ್ರಯೋಗ ಪರಿಣತಮತಿಗಳ್' ಎಂಬ ಅತ್ಯಂತ ಪ್ರಾಚೀನ ಕನ್ನಡ ಕಾವ್ಯ ಕವಿರಾಜ ಮಾರ್ಗದ ಉಕ್ತಿಯಂತೆ ಭಗವಂತನಿಂದ ನೇರ ಜ್ಞಾನವನ್ನು ಪಡೆದ ಮಹಾಮಹಿಮರು. ಅವರ ಎದುರು ಬಂಗಾಳದ ಹಾಗೂ ಭಾರತದ ಅಂದಿನ ಅನೇಕ ಮಹಾನ್ ಬುದ್ಧಿಶಾಲಿಗಳೂ ಸಹ ಅವರ ಜ್ಞಾನದ ಆಳ ವೈಶಾಲ್ಯಗಳನ್ನು ನೋಡಿ ನಿಬ್ಬೆರಗಾಗಿ ನತಮಸ್ತಕರಾಗುತ್ತಿದ್ದರು. ಅಂಥ ಜ್ಞಾನ ನಿಧಿ ಪರಮಹಂಸರಾಗಿದ್ದರು.

ಆಧ್ಯಾತ್ಮಿಕ ಜೀವನವೆಂದರೆ ಸೃಷ್ಟಿಯ ಸರ್ವಸ್ವವೂ ಬ್ರಹ್ಮನೆಂಬ ಒಂದೇ ಎಂಬ ಸತ್ಯದ ಅರಿವನ್ನು ಪಡೆಯಲು ಮಾಡುವ ಸಾಧನೆಯೇ ಆಗಿದ್ದು ಅದನ್ನು ಸೂಕ್ತ ದೃಷ್ಟಾಂತಗಳಿಂದ ಸರಳ ಮಾತುಗಳಲ್ಲಿ ವಿವರಿಸುತ್ತಿದ್ದ ಮಹಾ ಮಹಿಮರು ಅವರಾಗಿದ್ದರು.

ಭೌತಿಕವಾದದ ಮೇಲೆ ನಿಂತಿರುವ ವೈಚಾರಿಕತೆ ಆಧುನಿಕ ಚಿಂತನಶೀಲ ಜಗತ್ತಿನ ಆಧಾರವಾಗಿದೆ. ನೇರ ಗ್ರಹಿಕೆ, ಪ್ರಮಾಣೀಕರಣ ಹಾಗೂ ಸಾಮಾನ್ಯೀಕರಣಗಳಿಂದ ಅನುಭವಕ್ಕೆ ಬರುವ ವಿಚಾರಗಳು ಮಾತ್ರ ಸತ್ಯ. ಮಿಕ್ಕಿದ್ದೆಲ್ಲವೂ ಸ್ವೀಕಾರಾರ್ಹವಲ್ಲ ಎಂಬ ಪಾಶ್ಚಾತ್ಯ ಚಿಂತನೆಗಳೇ ತುಂಬಿ ಹೋಗಿ ಭಾರತೀಯ ವೇದಾಂತ ವಿಚಾರಗಳಿಗೆ ಭಾರಿ ಆಘಾತ ಉಂಟಾಗಿದ್ದ ಕಾಲ ರಾಮಕೃಷ್ಣರ ಕಾಲವಾಗಿತ್ತು.

ಈಗಲೂ ಪರಿಸ್ಥಿತಿ ಅದಕ್ಕಿಂತ ಭಿನ್ನವಾಗಿಲ್ಲ. ಅದೂ ಅಲ್ಲದೆ ಆಗ ದೇಶವನ್ನಾಳುತ್ತಿದ್ದ ಆಂಗ್ಲರು ಸನಾತನ ಧರ್ಮಕ್ಕೆ ಎಷ್ಟು ಧಕ್ಕೆ ಉಂಟುಮಾಡಬಹುದಾಗಿತ್ತೋ ಅದಕ್ಕೂ ಮೀರಿ ದಮನ ಚಕ್ರವನ್ನುರುಳಿಸುತ್ತಿದ್ದರು. ಹಿಂದೂ ಧರ್ಮವೆಂದರೆ ಅದೊಂದು ಅಮಾನುಷ, ಅರ್ಥಹೀನ, ಬರ್ಬರ ಮತವೆಂದು ಪುಸ್ತಕಗಳೂ ಪತ್ರಿಕೆಗಳೂ ಹಾಗೂ ಸಾರ್ವಜನಿಕ ವೇದಿಕೆಗಳ ಮೂಲಕ ಸಾರುತ್ತಿದ್ದರು. ಅಂದಿನ ಯುವ ಪೀಳಿಗೆ ಪಾಶ್ಚಾತ್ಯ ಆಚಾರ ವಿಚಾರಗಳಿಂದ ಪ್ರೇರಿತವಾಗಿತ್ತು. ಹಿಂದೂ ಧರ್ಮವನ್ನು ಹಳಿಯುವುದೂ ಪಾಶ್ಚಾತ್ಯ ದುರಭ್ಯಾಸಗಳಿಗೆ ದಾಸರಾಗುವುದೂ ಅಂದಿನ ಯುವ ಜನತೆಗೆ ಪ್ರಿಯವಾದ ಕೆಲಸವಾಗಿತ್ತು. ಆಂಗ್ಲ ಶಿಕ್ಷಣ ಪದ್ಧತಿ, ಕ್ರೈಸ್ತ ಪಾದ್ರಿಗಳ ಅಪಪ್ರಚಾರಗಳ ಹಾವಳಿಯಿಂದ ಹಿಂದೂ ಧರ್ಮಕ್ಕೆ ಹಾಗೂ ವೇದಾಂತ ವಿಚಾರಗಳಿಗೆ ಅಪಾರ ಹಾನಿಯಾಗಿತ್ತು. ಅಂಥ ಸಂದರ್ಭದಲ್ಲಿ ರಾಮಕೃಷ್ಣ ಪರಮಹಂಸರು ತಮ್ಮ ಸರಳ ಸಂಭಾಷಣೆಗಳ ಮೂಲಕ, ಜೀವನ ಶೈಲಿಯ ಮೂಲಕ, ಚಿಂತನಶೀಲತೆಯ ಮೂಲಕ ವಿದ್ವಜ್ಜನರಿಗೆ ವೇದಾಂತ ಮಾರ್ಗದ ಮಹತ್ತ್ವವನ್ನು ಪರಿಚಯಿಸಿದರು. ಅವರ ಪ್ರಯತ್ನಗಳ ಫಲವೇ ಅವರ ಶಿಷ್ಯ ಶ್ರೇಷ್ಠ ಸ್ವಾಮಿ ವಿವೇಕಾನಂದ ಹಾಗೂ ಅವರ ಘನ ಕಾರ್ಯಗಳು.

ಭಾರತದ ಪಾರಂಪರಿಕ ಜೀವನ ಮೌಲ್ಯಗಳನ್ನು ಪುನರ್ಪ್ರತಿಷ್ಠಾಪಿಸಲು ಆಗ ಅನೇಕ ಚಳವಳಿಗಳು ನಡೆದಿದ್ದವು. ಬ್ರಹ್ಮ ಸಮಾಜ, ಆರ್ಯ ಸಮಾಜ, ಥಿಯಾಸಫಿಕಲ್ ಸೊಸೈಟಿ ಮುಂತಾದವು. ಆದರೆ ರಾಮಕೃಷ್ಣರ ಕೃಪಾಶೀರ್ವಾದದಿಂದ, ಅವರ ವಿಚಾರಗಳ ಪ್ರಚಾರಕ್ಕಾಗಿ ವಿವೇಕಾನಂದರು ಆರಂಭಿಸಿದ ರಾಮಕೃಷ್ಣ ಮಿಷನ್ ಹಲವು ದಶಕಗಳಿಂದ ಹಿಂದೂ ಧರ್ಮ, ತತ್ತ್ವಶಾಸ್ತ್ರ ಹಾಗೂ ಜೀವನ ಪದ್ಧತಿಗಳನ್ನು ಪಸರಿಸಲು ಸೊಂಟಕಟ್ಟಿ ನಿಂತ ಸಹಸ್ರ ಸಹಸ್ರ ತೇಜಸ್ವಿ ಸಂನ್ಯಾಸಿಗಳ ಪರಂಪರೆಯನ್ನೇ ಸೃಷ್ಟಿಸಿದೆ. ಅದರ ಸಂಪೂರ್ಣ ಶ್ರೇಯಸ್ಸು ರಾಮಕೃಷ್ಣರಿಗೆ ಸಲ್ಲಬೇಕು.

1836ರ ಫೆಬ್ರವರಿ 18ರಂದು ಪಶ್ಚಿಮ ಬಂಗಾಳದ ಹೂಗ್ಲಿ ಜಿಲ್ಲೆಯ ಕಾಮಾರಪುಕೂರ್ ಎಂಬ ಗ್ರಾಮದ ಒಂದು ಸಾಂಪ್ರದಾಯಿಕ, ಧರ್ಮನಿಷ್ಠ ಕುಟುಂಬದಲ್ಲಿ ಜನಿಸಿದ ರಾಮಕೃಷ್ಣರ ಮೊದಲ ಹೆಸರು ಗದಾಧರ. ಬಾಲ್ಯದಿಂದಲೂ ಅಪೂರ್ವ ಆಧ್ಯಾತ್ಮಿಕ ಅನುಭೂತಿಗಳನ್ನು ಪಡೆಯುತ್ತಿದ್ದ ಅವರು ಆಗಾಗ ಸಮಾಧಿ ಸ್ಥಿತಿಗೆ ಒಳಗಾಗುತ್ತಿದ್ದರು. ಯೌವನದಲ್ಲಿ ಕೊಲ್ಕತಾ ಬಳಿಯ ದಕ್ಷಿಣೇಶ್ವರದ ಕಾಳಿ ದೇವಾಲಯದಲ್ಲಿ ಅರ್ಚಕರಾದರು.

ಆಗಲೇ ಅವರು ಆಧ್ಯಾತ್ಮಿಕ ಪ್ರಯೋಗಗಳಲ್ಲೂ ತೊಡಗಿಸಿಕೊಂಡರು. ವೇದಾಂತದ ಅಂತಿಮ ಗುರಿಯಾದ ಬ್ರಹ್ಮನೇ ತಾನೆಂದು ಭಾವಿಸುವ ಅದ್ವೈತ ಮಾರ್ಗವನ್ನು ಸಾಧನೆಯ ಮೂಲಕ ಸಾಕ್ಷಾತ್ಕರಿಸಿಕೊಂಡ ಮಹಾಸಾಧಕರು ರಾಮಕೃಷ್ಣರು. ಅವರ ಆಧ್ಯಾತ್ಮಿಕ ಸಾಧನೆಗಳಿಗೆ ಇಂಬಾಗಿ ಬಂದವರು ಮಾತೆ ಶಾರದಾ ದೇವಿ. ತನ್ನ ಗಂಡನ ಅನುರೂಪ ಮಡದಿಯಾಗಿ ಬಂದ ಅವರೂ ತಪಸ್ವಿನಿಯೇ.

ರಾಮಕೃಷ್ಣರಿಗೆ ಗಂಟಲ ಕ್ಯಾನ್ಸರ್ ಬಂದಾಗ ಕೊಲ್ಕತಾದ ನಗರ ಪ್ರದೇಶದಲ್ಲಿದ್ದ ಕಾಸೀಪುರ ತೋಟದ ಮನೆ ಎಂಬಲ್ಲಿ ಶುಶ್ರೂಷೆಗೆ ಒಳಗಾಗಿದ್ದಾಗ ರಾಮಕೃಷ್ಣಪಂಥದ ಬೀಜಾರೋಪಣವಾಯಿತೆನ್ನಬಹುದು. 1886ರ ಜನವರಿ 1ರಂದು ಎಲ್ಲರಲ್ಲೂ ಆಧ್ಯಾತ್ಮಿಕ ಜಾಗೃತಿ ಉಂಟಾಗುವಂತೆ ಬಹಿರಂಗವಾಗಿ ಆಶೀರ್ವದಿಸಿ ಘೋಷಣೆ ಮಾಡಿದರು. ಒಂದು ದಿನ ಅವರ ಬಳಿ ಇದ್ದ ಯುವ ಶಿಷ್ಯರಿಗೆ ಕಾಷಾಯ ವಸ್ತ್ರವನ್ನು ನೀಡಿ ರಾಮಕೃಷ್ಣ ಪಂಥದ ಸಂನ್ಯಾಸಿ ಪರಂಪರೆಯನ್ನು ಆರಂಭಿಸಿದರು. 1886ರ ಆಗಸ್ಟ್ 16ರಂದು ಕಾಸೀಪುರದ ತೋಟದ ಮನೆಯಲ್ಲಿ ಕ್ಯಾನ್ಸರ್ ರೋಗದ ಕಾರಣ ಸಮಾಧಿಯನ್ನು ಹೊಂದಿದ ಈ ಅವಧೂತರು ಪಾಶ್ಚಾತ್ಯೀಕರಣದಿಂದ ಭಾರತೀಯರನ್ನು ಹಿಂದೂ ಧರ್ಮದ ಮೂಲ ಸ್ರೋತಕ್ಕೆ ತರಲು ದಾರಿ ತೋರಿದ ಮಹಾನ್ ಯುಗ ಪ್ರವರ್ತಕರು. ಇದೇ ಫೆಬ್ರವರಿ 25 ಪರಮಹಂಸರ ಜನ್ಮದಿನ. ●



# ಮನುಕುಲಕ್ಕೆ ಬಂದ ಬೆಳಕು ಶ್ರೀ ಮಧ್ವಾಚಾರ್ಯರು



■ಡಾ. ಅನಸೂಯಾದೇವಿ
ನಿವೃತ್ತ ಪ್ರಾಧ್ಯಾಪಕಿ, ಚಿಂತಕಿ, ಕಾದಂಬರಿಗಾರ್ತಿ.

ಉತ್ತರ ಭಾರತದಲ್ಲಿ ಅನೇಕಾನೇಕ ಸಂತರುಗಳು ಕಾಲ ಕಾಲಕ್ಕೆ ಜನಿಸಿ ಮನುಕುಲಕ್ಕೆ ಸನ್ಮಾರ್ಗವನ್ನು ತೋರಿದಂತೆಯೇ ದಕ್ಷಿಣ ಭಾರತದಲ್ಲೂ ಅನೇಕ ಮಂದಿ ಸಂತ ಗುರುಗಳು, ಆಚಾರ್ಯ ಶ್ರೇಷ್ಠರು ಜನಿಸಿ ಅಧ್ಯಾತ್ಮ ಲೋಕದ ದಿವ್ಯ ಹಣತೆಯನ್ನು ಬೆಳಗಿದ್ದಾರೆ. ಭಾರತ ದೇಶ ಅನೇಕ ತತ್ತ್ವಜ್ಞಾನಿಗಳಿಗೆ, ದಾರ್ಶನಿಕರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜನ್ಮ ನೀಡಿದ ಭೂಮಿಯಾಗಿದೆ. ಅದರಲ್ಲಿಯೂ ಎಲ್ಲ ಬಗೆಯ ಧಾರ್ಮಿಕ ಪಂಥಗಳಿಗೂ ಆಶ್ರಯವಿತ್ತು ಆ ಮೂಲಕ ಭಕ್ತಿಯ ಔನ್ನತ್ಯವನ್ನು ಸಾರಿದ ನಾಡು ಕರ್ನಾಟಕವಾಗಿದೆ. ಇಡೀ ಭಾರತದಲ್ಲಿ ಭಕ್ತಿ ಮತ್ತು ಧರ್ಮವನ್ನು ಪ್ರತಿಪಾದಿಸಿದ ಮುಖ್ಯ ಮತತ್ರಯಗಳ ಸ್ಥಾಪಕರೆನಿಸಿಕೊಂಡಿರುವವರು ಶಂಕರಾಚಾರ್ಯರು, ರಾಮಾನುಜಾಚಾರ್ಯರು ಹಾಗೂ ಮಧ್ವಾಚಾರ್ಯರು. ಪರಕೀಯರ ದಾಳಿಯಲ್ಲಿ ಭಾರತ ನಲುಗಿ ತತ್ತರಿಸುತ್ತಿರುವಾಗ ದೇಶದ ಜನರನ್ನು ಭಾವತತ್ತ್ವದ ಮೂಲಕವೇ ಒಂದುಗೂಡಿಸಿ ಮೇಲೆತ್ತಲು, ಭಕ್ತಿ ತತ್ತ್ವದ ಪ್ರಕಾಶಿಕೆಯನ್ನು ಎಲ್ಲೆಡೆಯೂ ದೀವಟಿಗೆಯಾಗಿಸಿಕೊಂಡು, ನೀತಿ ನಿಯಮಗಳ ನೈತಿಕತೆಯನ್ನು ಜನಸಾಮಾನ್ಯರಲ್ಲಿ ನೆಲೆಗೊಳಿಸಲು ಶ್ರಮಿಸಿದವರು ಶ್ರೀ ಮಧ್ವಾಚಾರ್ಯರು. ಮೂಲೆಗುಂಪಾಗಿದ್ದ ಮಾನವ ಬದುಕಿನ ಧರ್ಮವನ್ನು ಪುನರುಜ್ಜೀವನಗೊಳಿಸಿ ಅದರ ಮೌಲ್ಯಗಳನ್ನು ಮರುಸ್ಥಾಪನೆ ಮಾಡಲು ಮುಂದಾದ ಮಹನೀಯರು ಅವರು.

> ದ್ವೈತ ತತ್ತ್ವದ ಪ್ರತಿಪಾದಕರಾದ ಶ್ರೀ ಮಧ್ವಾಚಾರ್ಯರು ಶಿಶಿರ ಋತುವಿನ ಶುಕ್ಲ ಪಕ್ಷದ ನವಮಿಯಂದು ಆತ್ರೇಯ ಉಪನಿಷತ್ ಪಠಿಸುತ್ತ ಪುಷ್ಪ ವೃಷ್ಟಿಯ ನಡುವೆಯೇ ಅದೃಶ್ಯರಾಗಿಬಿಟ್ಟರೆಂಬ ಪ್ರತೀತಿ ಇದೆ. ಹೀಗಾಗಿ ಈ ಶುಕ್ಲ ನವಮಿಯನ್ನು ಮಧ್ವ ನವಮಿ ಎಂದೇ ಇಂದಿಗೂ ಆಚರಿಸಲಾಗುತ್ತಿದೆ.
>
> ತಮ್ಮ ಎಪ್ಪತ್ತೊಂಬತ್ತನೇಯ ವಯಸ್ಸಿನಲ್ಲಿ (ಕ್ರಿ.ಶ. 1317ರಲ್ಲಿ) ಒಬ್ಬರೇ ಬದರಿಕಾಶ್ರಮಕ್ಕೆ ಪಯಣಿಸಿದರು. ಅನಂತರ ಅವರೆಲ್ಲಿಯೂ ಯಾರಿಗೂ ಕಾಣಿಸಲಿಲ್ಲ. ಹೀಗಾಗಿ ಅದೃಶ್ಯರಾದರೆಂಬ ಪ್ರತೀತಿ ಹುಟ್ಟಿರಬಹುದು.

ಇಂದು ಪಾಜಕ ಕ್ಷೇತ್ರವೆನಿಸಿ ಪ್ರಸಿದ್ಧವಾಗಿರುವ ದಕ್ಷಿಣ ಕರಾವಳಿಯ ಉಡುಪಿಯ ಸಮೀಪದಲ್ಲೇ ಇರುವ ಪುಟ್ಟ ಹಳ್ಳಿ "ಪಾಜೆ"ಯಲ್ಲಿ ನಡಿಲ್ಲಾಯ ಮನೆತನದಲ್ಲಿ ಜನಿಸಿದ ಆಚಾರ್ಯ ಮಧ್ವರ ಹುಟ್ಟು ಹೆಸರು 'ವಾಸುದೇವ' ಕ್ರಿ.ಶ. 1200ರಿಂದ 1280ರವರೆಗೂ ಮಧ್ವಾಚಾರ್ಯರ ಕಾಲವೆಂದು ಸಂಶೋಧಕರು ನಿರ್ಣಯಕ್ಕೆ ಬಂದಿದ್ದಾರೆ.

ವಾಸುದೇವನಿಗೆ ಬಾಲ್ಯದಿಂದಲೇ ಅಧ್ಯಾತ್ಮದತ್ತ ತೀವ್ರ ಒಲವು, ವಿರಕ್ತಿ ಮಾರ್ಗದತ್ತ ತೀವ್ರ ಸೆಳೆತ. ಹೀಗಿರುವ ಬಾಲಕ ತನ್ನ ಹನ್ನೊಂದನೆಯ ವಯಸ್ಸಿನಲ್ಲೇ ಮನೆಯಿಂದ ದೂರ ನಡೆದು

ಉಡುಪಿಯ ಪರಿಸರದಲ್ಲಿ ಆಗ ಪ್ರಖ್ಯಾತರೆನಿಸಿಕೊಂಡಿದ್ದ ಅಚ್ಯುತ ಪ್ರಜ್ಞರೆಂಬ ಯತಿಗಳಿಂದ ಸಂನ್ಯಾಸ ದೀಕ್ಷೆ ಪಡೆದ. ಆ ಗುರುಗಳು ಈ ವಾಸುದೇವನಿಗೆ "ಪೂರ್ಣಪ್ರಜ್ಞ" ಎಂದು ಸಂನ್ಯಾಸದ ಅಭಿನಾಮವನ್ನು ಅಭಿದಾನವಾಗಿ ನೀಡಿದರು. ಹೀಗೆಯೇ ಈ ಬಾಲಕ ಬಾಲ್ಯದಲ್ಲೇ ಯತಿದೀಕ್ಷೆ ಪಡೆದು ಮುಂದೆ ವೇದಾಂತ ಸಾಮ್ರಾಜ್ಯದ ಪಟ್ಟಾಭಿಷೇಕದಲ್ಲಿ "ಆನಂದ ತೀರ್ಥ" ಎಂಬ ಹೆಸರನ್ನು, ಯಶಸ್ಸನ್ನು ಪಡೆದುಕೊಂಡ. ಜೊತೆಗೆ ತಾನೇ ಮೆಚ್ಚಿಕೊಂಡು ಆವಿಷ್ಕರಿಸಿಕೊಂಡ ನಾಮ "ಮಧ್ವ" ಎಂಬುದಾಗಿ! ಇದೇ ಅವರ ಕಾವ್ಯನಾಮವಾಯಿತು. ಈ ಹೆಸರಿಂದಲೇ, ಮಧ್ವಾಚಾರ್ಯರೆಂದು ಮುಂದೆ ವಿಖ್ಯಾತಿ ಹೊಂದುವಂತಾಯಿತು.

### ಪಾಜಕ ಕ್ಷೇತ್ರ

ಇದು ಮಧ್ವಾಚಾರ್ಯರ ಹುಟ್ಟೂರು. ಉಡುಪಿಯ ಶ್ರೀಕೃಷ್ಣ ಮಠದಿಂದ ಸು. 13 ಕಿ.ಮೀ. ದೂರದಲ್ಲಿದೆ. ಇಲ್ಲಿ ಮಧ್ವರು ಜನ್ಮ ತಾಳಿದ ಮನೆ, ಅಕ್ಷರಾಭ್ಯಾಸ ಮಾಡಿದ ಸ್ಥಳ ಇವೆಲ್ಲವನ್ನೂ ನೋಡಬಹುದು.

ವಿದ್ಯಾ ಪೀಠವೊಂದು ಇಲ್ಲಿಯೇ ನೆಲೆಗೊಂಡಿದ್ದು ವೇದ, ಸಂಸ್ಕೃತ ಪಾಠ ಪ್ರವಚನ ಇತ್ಯಾದಿ ನಡೆಯುತ್ತಿವೆ. ಮಧ್ವ ಮಂದಿರವೊಂದು ಸ್ಥಾಪಿತಗೊಂಡು ಇಲ್ಲಿಯೇ ಎಲ್ಲ ರೀತಿಯ ಸೇವೆಗಳನ್ನು, ದೇವ ಕಾರ್ಯಗಳನ್ನು ಈಗಲೂ ಮಾಡಿಸಬಹುದಾಗಿದೆ.

ಇಲ್ಲಿಯೇ ಮಧ್ವಾಚಾರ್ಯರ ಪಾದಗಳನ್ನು ಕೆತ್ತನೆಯಲ್ಲಿ ಮೂಡಿಸಲಾಗಿದ್ದು, ಇದು ಭಕ್ತಾದಿಗಳ ಶ್ರದ್ಧೆ, ನಂಬಿಕೆಗಳಿಗೆ ನೆಲೆವೀಡು ಎನ್ನಿಸಿದೆ.

ಹತ್ತಿರದಲ್ಲೇ ಕುಂಜಾಮಗಿರಿ ದೇವಸ್ಥಾನವೂ ಇರುವ ಪ್ರಸಿದ್ಧ ಕ್ಷೇತ್ರವೆನಿಸಿಕೊಂಡಿದೆ.

ಈ ಮುಂಚೆ ಯಾರೂ ಹೇಳಿರದ ಹೊಚ್ಚ ಹೊಸ ವಿಚಾರಗಳನ್ನು ಮಧ್ವಾಚಾರ್ಯರು ತಮ್ಮ ಜ್ಞಾನ ತತ್ತ್ವಜ್ಞಾನದಲ್ಲಿ ಕೊಟ್ಟಿದ್ದಾರೆ. ಬುದ್ಧಿಯ ನೆರವು, ಮನಸ್ಸಿನ ಸಹಕಾರ, ದೇಹದ ಉಪಕಾರದಿಂದ ಬದುಕಿನ ವಿಕಾಸವೆಂದವರು ಅವರು. ಮೂಢನಂಬಿಕೆಗಳನ್ನು ಸಾರಾಸಗಟ್ಟಾಗಿ ವಿರೋಧಿಸಿದರು.

ಮೂಢನಂಬಿಕೆಯೆಂದರೆ ಇದು ನಿರ್ಜೀವ (ಪುನರಾವೃತ್ತಿ) ಎಂದು ತಿರಸ್ಕರಿಸಿದರು. ಇಂಥ ಮಹನೀಯರಾದ ಮಧ್ವಾಚಾರ್ಯರು ಅದೃಶ್ಯರಾದ ದಿನವನ್ನೇ 'ಮಧ್ವನವಮಿ' ಎಂದು ಆಚರಿಸಿ ಅವರನ್ನು ನೆನೆಯುತ್ತಾರೆ.

ಪ್ರಪಂಚದಲ್ಲಿನ ಯಾವ ಶಬ್ದವೂ ಯಾವ ನಾದವೂ ಯಾವ ಭಾಷೆಯ ಯಾವ ಪದವೂ ಯಾವ ಹೆಸರೂ ದೇವರ ಹೆಸರೇ; ಅದೆಲ್ಲವೂ ನಡೆಯುವುದು ಒಬ್ಬ ಸರ್ವೋತ್ತಮ ದೇವರನ್ನು ಕುರಿತೇ ಹೇಳುತ್ತದೆ. ಮೂಲತಃ ಭಗವಂತನ ಹೆಸರಲ್ಲದ ಯಾವ ಪದವೂ ಯಾವ ನಾದವೂ ಜಗತ್ತಿನ ಯಾವ ಭಾಷೆಯಲ್ಲಿ ಇಲ್ಲ.



ಮಧ್ವಾಚಾರ್ಯರು ಮಂಡಿಸಿರುವ ಸಿದ್ಧಾಂತದಲ್ಲಿ ಮೂಲತಃ ಎರಡು ತತ್ತ್ವಗಳಿವೆ ಎಂದು ಬನ್ನಂಜೆ ಗೋವಿಂದಾಚಾರ್ಯರು ವಿವರಿಸುತ್ತಾರೆ. ಅವು ಹೀಗಿವೆ:

1) ಸ್ವತಂತ್ರ ತತ್ತ್ವ (Independent Reality)–ಇದೇ ವಿಶ್ವದ ಸೃಷ್ಟಾರನಾದ ಭಗವಂತ.

2) ಅಸ್ವತಂತ್ರ ತತ್ತ್ವ (Dependent Reality) –ಆ ಭಗವಂತನಿಂದ ಸೃಷ್ಟಿಗೊಂಡಿರುವ ಸಮಸ್ತ ವಿಶ್ವ.

ಪಕ್ಷಿಗಳ ಚಿಲಿಪಿಲಿ ಇರಲಿ, ಪ್ರಾಣಿಗಳ ಕೂಗು, ಗರ್ಜನೆಗಳಿರಲಿ, ವೇದಮಂತ್ರ ಘೋಷಗಳಿರಲಿ, ಎಲ್ಲ ಶಬ್ದಗಳೂ ಭಗವಂತನ ಗುಣಗಾನವನ್ನೇ ಮಾಡುತ್ತದೆ ಎಂದು ಮೊತ್ತ ಮೊದಲು ಸಾರಿದವರು ಮಧ್ವಾಚಾರ್ಯರು.

ನಾರಾಯಣನೊಬ್ಬನೇ ಸರ್ವೋತ್ತಮನಾದ ಸ್ವತಂತ್ರನಾದ ಪರದೈವ. ಸಮಸ್ತ ವೇದಗಳೂ ಅವನೊಬ್ಬನನ್ನೇ ಅಗ್ನಿ, ಇಂದ್ರ, ವರುಣ ಎಂಬ ನಾನಾ ಬಗೆಯ ಗುಣನಾಮ(ಇಋಣಃಜಣ) ಗಳಿಂದ ಸ್ತುತಿಸುತ್ತವೆ. "ಏಕೋ ದೇವಃ" ಎನ್ನುವುದೇ ಸಮಸ್ತ ವೈದಿಕ ವಾಙ್ಮಯದ ತಿರುಳು. ಯಾರು ಎಲ್ಲದರ ಒಳಗೂ ಹೊರಗೂ ತುಂಬಿರುವವನೋ ಅವನೇ ಆ 'ವಿಷ್ಣು' ವಾಚಕ ಭಗವಂತ. ಅವನ ಒಂದೊಂದು ಹೆಸರೂ ಅವನ ಒಂದೊಂದು ಗುಣ ಸಂಧಾನದಿಂದಾಗಿ ಬಂದಿದೆ. ಎಲ್ಲ ನಾಮಗಳನ್ನು ಹೊತ್ತವನು ಒಬ್ಬನೇ ದೇವ; ಎಲ್ಲ ದೇವತೆಗಳಿಗೂ ನಾಮವನ್ನು ಕೊಟ್ಟವನೂ ಅವನೇ. – ಇದು ಮಧ್ವಾಚಾರ್ಯರ ಬೋಧನೆಗಳಲ್ಲಿನ ಮುಖ್ಯ ತಿರುಳುಗಳಲ್ಲಿ ಒಂದು.

ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ತ್ವವೆಂದರೆ: "ಭಗವಂತ ಬಿಂಬವಾದರೆ ಜೀವರು ಅವನ ಪ್ರತಿಬಿಂಬ. ಒಂದು ಬಿಂಬಕ್ಕೆ ಅನೇಕ ಅನಂತ ಪ್ರತಿಬಿಂಬಗಳು ಇರುವಂತೆ ಈ ಸೃಷ್ಟಿಯಲ್ಲಿ ಅವನ ಅಧೀನದಲ್ಲಿ ಅನೇಕಾನೇಕ ಜೀವರುಗಳು ಪ್ರತಿಯೊಬ್ಬ ಜೀವಕ್ಕೂ ಅದರದ್ದೇ ಆದ ಸ್ವಂತ ಸ್ವಭಾವವಿದೆ. ಎಲ್ಲ ಜೀವರುಗಳಲ್ಲಿಯೂ ಅಂತರ್ಯಾಮಿಯಾಗಿ ಭಗವಂತನು ಸಮಾತ್ಮನು, ಬಿಂಬವು ಒಂದೇ; ಆದರೆ ಪ್ರತಿಬಿಂಬಗಳ ಅಭಿವ್ಯಕ್ತಿಯು ಬೇರೆ ಬೇರೆಯಾಗಿ ಇರುತ್ತದೆ. ಪ್ರತಿಯೊಬ್ಬ ವ್ಯಕ್ತಿಗೂ ಅವನದ್ದೇ ಆದ ಸ್ವಂತ ವ್ಯಕ್ತಿತ್ವವಿದೆ. ಪ್ರತಿ ವ್ಯಕ್ತಿತ್ವದಲ್ಲಿರುವ ಸ್ವಭಾವ, ಜ್ಞಾನಾನಂದಗಳ ಪೂರ್ಣ ಅಭಿವ್ಯಕ್ತಿಯೇ ಆಯಾ ಜೀವಕ್ಕೆ ಮೋಕ್ಷ. ಇದರ ಹೊರತಾಗಿ ಎಲ್ಲ ಜೀವರುಗಳೂ ಒಂದು ಇನ್ನೊಂದರ ಹಾಗೆ ಎಲ್ಲರೂ ಒಂದೇ ಆಗುವುದು ಮೋಕ್ಷವಲ್ಲ.

ತಮ್ಮ ತತ್ತ್ವವಾದದಲ್ಲಿ ಮಧ್ವಾಚಾರ್ಯರು ಹೇಳುವುದು:

"ಜೀವ ಎಂದರೆ ಬೀಜದ ಹಾಗೆ. ದೊಡ್ಡ ಮರವಾಗಿ ಬೆಳೆಯುವ ಶಕ್ತಿ ಆ ಬೀಜದಲ್ಲಿಯೇ ಇದೆ. ಆದರೆ ತನ್ನಲ್ಲಿರುವ ಶಕ್ತಿಯನ್ನು ಅದು ತಾನೇ ಬೆಳೆಸಿಕೊಳ್ಳಲಾರದು. ಅದನ್ನೊ ಒಬ್ಬನು ಕೃಷಿಕನು ಅದಕ್ಕೆ ಬೇಕಾದ ವಾತಾವರಣವನ್ನು ಕಲ್ಪಿಸಿಕೊಟ್ಟು ಬೆಳೆಸಬೇಕಾಗಿದೆ. ಅಪ್ರಜ್ಞಾವಸ್ಥೆಯಲ್ಲಿರುವ ಜೀವವನ್ನು ಈ ಪ್ರಪಂಚ ಎನ್ನುವ ತೋಟದಲ್ಲಿ ಬಿತ್ತಿದ ಕೃಷಿಕನೇ ಭಗವಂತ. ಜೀವದ ವಿಕಾಸಕ್ಕಾಗಿ, ಅದರ ಸ್ವಭಾವದ

ಈ ಪ್ರಪಂಚದಲ್ಲಿ ಭೇದಗಳೂ ಪಂಚ ವಿಧವಾಗಿವೆ ಎನ್ನುತ್ತಾರೆ ಆಚಾರ್ಯ ಮಧ್ವರು:

ಜಡ-ಜಡಗಳ ಭೇದ
ಜಡ-ಜೀವರುಗಳ ಭೇದ
ಜೀವ-ಜೀವರ ಭೇದ
ಜಡ-ಪರಮಾತ್ಮರ ಭೇದ
ಜೀವ-ಪರಮಾತ್ಮರ ಭೇದ

ಈ ಭೇದಗಳು ತಾತ್ಕಾಲಿಕವೂ ಅಲ್ಲ ಕಣ್ಣಿಗೆ ತೋರುವ ಮಾಯೆಯೂ ಅಲ್ಲ, ಇದು ಬದಲಿಸಲಾಗದ ವಸ್ತುವಿನ ಸಹಜ ಧರ್ಮ ಇದು ಪ್ರಕೃತಿ ನಿಯಮ ಇದು ಸಹಜ ಗುಣ!

ಪೂರ್ಣಾಭಿವ್ಯಕ್ತಿಗಾಗಿ ಈ ಭೂಮಿಯಲ್ಲಿನ ಸಂದರ್ಭ, ಸಂಬಂಧ, ವಾತಾವರಣಗಳನ್ನು ಹೊಂದಿಸಿದ. ಹೀಗೆ 'ಜೀವ'ಕ್ಕೆ ತನ್ನ ಪೂರ್ಣ ಸ್ವಭಾವದ ಅಭಿವ್ಯಕ್ತಿಯೇ ಮುಕ್ತಿ, ಮೋಕ್ಷ."

ತನ್ನತನದ ಪ್ರಜ್ಞೆಯೇ ಇಲ್ಲದೆ, ತಾನಿದ್ದೇನೆ ಎನ್ನುವ ಅರಿವೇ ಇಲ್ಲದೆ 'ಜೀವ' ವ್ಯರ್ಥವಾಗುತ್ತಿತ್ತು. ಭಗವಂತ ಭೂಮಿಯ ಈ ಅನುಭವಗಳ ಮಣ್ಣಿನಲ್ಲಿ ಬಿತ್ತದಿದ್ದರೆ! ಜೀವವು ಲೋಕದಲ್ಲಿ ಅನುಭವಗಳನ್ನು ಪಡೆಯದು ಬೆಳೆಯಲಿ, ವಿಕಸಿಸಿ ಮೋಕ್ಷ ಪಡೆಯಲಿ ಎಂದು ಭಗವಂತನು ನಮ್ಮನ್ನು ಇಲ್ಲಿ ಕಳುಹಿಸಿದ್ದಾನೆ.

ಹೀಗೆ ಅನಂತ ಜೀವರು ಭಗವಂತನೆಂಬ ಬಿಂಬದ ಅನಂತ ಪ್ರತಿಬಿಂಬಗಳು ಎಂದು ಆಚಾರ್ಯ ಮಧ್ವರು ಪ್ರತಿಪಾದಿಸಿದ್ದಾರೆ. ಜೊತೆಗೆಯೇ ಈ ಜೀವರುಗಳು ಚಿದ್‌ರೂಪದಿಂದ ಭಗವಂತನ ಸಾದೃಶ್ಯದ ಸೂತ್ರದಲ್ಲಿ ಹೆಣೆದುಕೊಂಡಿದ್ದಾರೆ. ಜೀವರಂತೆಯೇ ಸೃಷ್ಟಿಗೆ ಮೂಲದ್ರವ್ಯಗಳಾಗಿ ಜಡದ್ರವ್ಯಗಳೂ ಅನಂತವಾಗಿವೆ. ಪಂಚಭೂತಗಳು, ಪಂಚ ತನ್ಮಾತ್ರಗಳು, ಪಂಚ ಕೋಶಗಳು, ಪಂಚೇಂದ್ರಿಯಗಳು...ಹೀಗೆ ಈ ಪಂಚೀಕೃತ ಪ್ರಪಂಚದೊಳಗೆ ಪ್ರಾಣತತ್ತ್ವವೂ ಪಂಚರೂಪದಿಂದ ತುಂಬಿಕೊಂಡಿದೆ.

"ಆಚಾರ್ಯರ ಮಹಾಭಾರತ ತಾತ್ಪರ್ಯ ನಿರ್ಣಯ"

ಮಧ್ವಾಚಾರ್ಯರ ಈ ಕೃತಿಯು ಅನೇಕ ಒಳನೋಟಗಳನ್ನು ತೆರೆದುಕೊಡುವ ಒಂದು ಸಂಶೋಧನಾತ್ಮಕ ಗ್ರಂಥವಾಗಿದೆ. ಅನೇಕ ಇನ್ನಿತರ ಗ್ರಂಥಗಳ ತೌಲನಿಕ ಅಧ್ಯಯನ, ನೂರಾರು ಮೂಲ ಪ್ರತಿಗಳ ತುಲನೆಯಿಂದ ಮೂಲ ಪಾಠದ, ಆ ಮೂಲಕವೇ ಮೌಲಿಕ ಅರ್ಥದ ನಿರ್ಧಾರ ಇವುಗಳನ್ನೆಲ್ಲ ಒಳಗೊಂಡಿರುವ ಸಂಶೋಧನಾತ್ಮಕ ಕೃತಿ ಇದು.

ಮಧ್ವಾಚಾರ್ಯರು ಹೀಗೆ ತಮ್ಮ 'ತತ್ತ್ವವಾದ'ದಲ್ಲಿ ಬಹುಮುಖ್ಯದ ಕೊಡುಗೆಯಾಗಿ ನೀಡಿದ್ದೆಂದರೆ, ಅದು ವ್ಯಕ್ತಿ ವೈಶಿಷ್ಟವಾದ, ಮತ್ತು ತರತಮನ ಹಾಗೂ ಸ್ವಭಾವ ವಾದ! ಅವರು ಸಾಮಾಜಿಕವಾಗಿ ಬಹು ಮಹತ್ತ್ವದ ಸಂಗತಿ ಹೇಳಿದ್ದೆಂದರೆ ಜಾತಿ ಬೇರೆ, ವರ್ಣ ಬೇರೆ ಎಂದು ಸಾರಿದುದು. ವರ್ಣವೆಂದರೆ ಬಣ್ಣ. ಆತ್ಮದ ಬಣ್ಣ ಎಂದರೆ ಆತ್ಮದ ಸ್ವಭಾವ! ವ್ಯಕ್ತಿಯ ಜೀವದ ಸ್ವಭಾವ. ಜಾತಿ ಎಂದರೆ ದೇಹದ ವ್ಯವಸ್ಥೆಗೆ ಸಂಬಂಧಿಸಿದ್ದು. ಜೀವಕ್ಕೆ ಜಾತಿ ಭೇದ ಇಲ್ಲ. ಆಯಾ ಜೀವದ ಸ್ವಭಾವ ವ್ಯಕ್ತಿತ್ವದಿಂದ ವ್ಯಕ್ತವಾಗುವಂಥದ್ದು. ವರ್ಣ ಎಂದು ವಿಶ್ಲೇಷಿಸಿದ್ದಾರೆ. (ಗೀತೆಯಲ್ಲಿ ಕೃಷ್ಣನ ಮೂಲಕ ವ್ಯಕ್ತವಾಗಿರುವ ಚಾತುರ್ವರ್ಣ್ಯದ ಅರ್ಥವೂ ಇದೇ. ಜೀವಾತ್ಮದ ಸ್ವಭಾವ ಎನ್ನುವ ಅರ್ಥದ ವಿಂಗಡನೆ.

ಮಧ್ವಾಚಾರ್ಯರದ್ದೇ ಆದ ವಿಶೇಷ, ವಿಶಿಷ್ಟ ಚಿಂತನೆಯ ಒಂದು ತುಣುಕೆಂದರೆ ಜೀವದ ಲಿಂಗ ಭೇದವನ್ನು ಕುರಿತು ಹೇಳಿದುದು! ಜೀವಕ್ಕೆ ಲಿಂಗ ಭೇದವಿಲ್ಲ ಎಂದು ಅಲ್ಲಿಯವರೆಗೂ ಎಲ್ಲರೂ ತಿಳಿದಿದ್ದಾಗ "ಅದು ತಪ್ಪು. ಗಂಡು ಜೀವ ಗಂಡು ಜೀವವೇ, ಹೆಣ್ಣು ಜೀವ ಹೆಣ್ಣು ಜೀವವೇ. ಜೀವದಲ್ಲಿ ಇಲ್ಲದೇ ಜಡದೇಹಕ್ಕೆ ಲಿಂಗ ಇರುವುದಿಲ್ಲ. ಚೇತನದ ಸ್ಪರ್ಶದಿಂದ ಜಡಕ್ಕೆ ಲಿಂಗ ಬರುವುದು. ಹೆಣ್ಣು ಜೀವ, ಗಂಡು ಜೀವ ಎನ್ನುವುದು ಆಯಾ ಜೀವದ ಸಹಜ ಧರ್ಮ. ಎರಡೂ ಮೋಕ್ಷ ಯೋಗ್ಯ ಜೀವರುಗಳೇ" ಎಂದು ಸಾರಿದ್ದಾರೆ.

ಆತ್ಮದ ಅರಿವೇ ಕೊನೆಯ ಸಾಕ್ಷಾತ್ಕಾರವಲ್ಲ. ಆತ್ಮ ಸಾಕ್ಷಾತ್ಕಾರವಾದಾಗ (self realisation) ತನ್ನ ಅರಿವು ತನಗಾಗುತ್ತದೆ. ಹೀಗೆ ತನ್ನನ್ನು ತಾನು ಕಂಡುಕೊಂಡವನಿಗೆ ಅದರಾಚೆಗಿರುವ ಪರಮಾತ್ಮನ ಸಾಕ್ಷಾತ್ಕಾರದ ಹಾದಿ ಸುಗಮವಿರುತ್ತದೆ. (God realisation) ಮೊದಲು ಅಹಂ ತತ್ತ್ವದ ಸಾಕ್ಷಾತ್ಕಾರ, ಅನಂತರ ಸಃ ಎಂಬ ಪರತತ್ತ್ವದ ಸಾಕ್ಷಾತ್ಕಾರ. ಇದೇ "ಸೋಹಂ" ತತ್ತ್ವದ ತಿರುಳೆಂದು ವಿವರಿಸಿದ್ದಾರೆ.

ತತ್ತ್ವಜ್ಞಾನ ಪರಂಪರೆಯಲ್ಲಿ "ಕಿರಿದರೊಳ್ ಪಿರಿದರ್ಥವಂ" ಹೇಳಿರುವ ಮಧ್ವಾಚಾರ್ಯರ ಗ್ರಂಥಗಳ ವ್ಯಾಪ್ತಿ, ವಿಷಯ ಹರವು, ಜ್ಞಾನದ ಅರಿವು ಅನನ್ಯವಾಗಿದೆ. ಪ್ರಸಿದ್ಧ ಇತಿಹಾಸ ಗ್ರಂಥಗಳಾದ ರಾಮಾಯಣ, ಮಹಾಭಾರತಗಳ ಅರ್ಥ ನಿರ್ಣಯದ ಮತ್ತು ವಿಮರ್ಶಾತ್ಮಕ ಅಧ್ಯಯನಕ್ಕಾಗಿ "ಮಹಾಭಾರತ ತಾತ್ಪರ್ಯ ನಿರ್ಣಯ" ಎಂಬ ಬೃಹತ್ ಗ್ರಂಥ ರಚಿಸಿದ್ದಾರೆ. ಜೊತೆಗೆ "ಮಹಾಭಾರತ ತಾತ್ಪರ್ಯ" ಎಂಬ ಇನ್ನೊಂದು ಪುಟ್ಟ ಯಮಕ ಗ್ರಂಥ ರಚನೆಯ ಮೂಲಕ ಮಹಾಭಾರತದ ನಾಯಕ ಶ್ರೀಕೃಷ್ಣ ಎನ್ನುವುದನ್ನು ಸಮರ್ಥಿಸಿದ್ದಾರೆ.

ಪ್ರಸ್ಥಾನತ್ರಯಗಳಲ್ಲಿ ಒಂದಾದ ಭಗವದ್ಗೀತೆಯ ಮೇಲೆ ಎರಡು ಗ್ರಂಥಗಳನ್ನು ರಚಿಸಿದ್ದಾರೆ. ಒಂದು ಗೀತಾಭಾಷ್ಯ ಮತ್ತೊಂದು ಗೀತಾ ತಾತ್ಪರ್ಯ. ಭಾಗವತದ ನೆಪದಲ್ಲಿ ಸಮಸ್ತ ಸಾತ್ತ್ವಿಕ ಪುರಾಣಗಳ ಅರ್ಥ ನಿರ್ಣಯಕ್ಕಾಗಿ "ಭಾಗವತ ತಾತ್ಪರ್ಯ ನಿರ್ಣಯ"ದ ರಚನಾ ಗ್ರಂಥ ಮಾಡಿದರು. ಮೊತ್ತ ಮೊದಲಿಗೆ ಪುರಾಣಗಳನ್ನು ವೈದಿಕ ಸಾಹಿತ್ಯದೊಡನೆ ಸಮನ್ವಯಿಸಿ ಭಾಗವತ ಮಹಾಪುರಾಣದ ಟೀಕೆಯ ರಚನೆ ಮಾಡಿದವರು



ಪಾಜಕದಲ್ಲಿರುವ ಮಧ್ವಾಚಾರ್ಯರ ಮನೆ

ಹಾಗೂ ಪುರಾಣಗಳಿಗೆ ಟೀಕೆ ರಚಿಸಿದ ಏಕಮೇವ ಆಚಾರ್ಯ ಪುರುಷರೆನ್ನಿಸಿಕೊಂಡವರು ಮಧ್ವಾಚಾರ್ಯರು.

ವೇದಕ್ಕೆ ಭಾಷ್ಯ ರಚಿಸಿದವರಲ್ಲಿ ಮಧ್ವಾಚಾರ್ಯರೇ ಮೊದಲಿಗರು. ಅದುವರೆಗಿನ ಭಾಷ್ಯಗಳು ವೇದದ ಯಾಜ್ಞಿಕ ಮುಖವನ್ನಷ್ಟೇ ವಿವರಿಸಿದ್ದರೆ, ಅದರ ಆಧ್ಯಾತ್ಮಿಕ ಅಂತರ್ಮುಖತೆಯನ್ನು ಬೆಳಕಿಗೆ ಮೊದಲು ತಂದವರು ಮಧ್ವಾಚಾರ್ಯರೇ. "ಕರ್ಮ ನಿರ್ಣಯ"ವೆಂಬ ಅವರ ಮತ್ತೊಂದು ಗ್ರಂಥದಲ್ಲಿ ಕರ್ಮಕಾಂಡವನ್ನು ಜ್ಞಾನಕಾಂಡದೊಡನೆ ಸಮನ್ವಯಿಸಿ ಪೂರ್ವ ಮಿಮಾಂಸ, ಉತ್ತರ ಮಿಮಾಂಸೆಗಳಿಗೆ ಇದರಲ್ಲಿ ಏಕಮುಖತೆಯನ್ನು ಸಾಧಿಸ ತೋರಲಾಗಿದೆ.

"ಕರ್ಮ ನಿರ್ಣಯ" ಗ್ರಂಥದಲ್ಲಿ ವೇದಾಂತ ನಿರ್ಣಯದಲ್ಲಿ ಮಧ್ವರು ಒಂದು ಮಹತ್ತ್ವದ ಸಿದ್ಧಾಂತವನ್ನೇ ಮಂಡಿಸಿದ್ದಾರೆ. "ವೇದದಲ್ಲಿ ಬಳಕೆಯ ರೂಢಾರ್ಥದ ಜೊತೆಗೆ ಯೌಗಿಕ ಅರ್ಥವನ್ನು ಬಳಸಬೇಕು. ಅದರಲ್ಲಿ ಯೌಗಿಕವಾದ ಅರ್ಥಕ್ಕೆಯೇ (Etymological Meaning) ವೇದದಲ್ಲಿ ಮಹತ್ತ್ವವೆಂದಿದ್ದಾರೆ. ಉದಾಹರಣೆಗೆ:

"ಅಗ್ನಿ ಎಂದರೆ ಬರಿಯ ಬೆಂಕಿ ಎಂದು ಮಾತ್ರ ಅರ್ಥವಲ್ಲ. ಅಗ+ನಿ, ಎಂದರೆ ಸ್ವತಃ ಚಲಿಸಲಾರದ ಪರತಂತ್ರವಾದ ವಿಶ್ವಕ್ಕೆ ಚಲನೆಯನ್ನು ಕೊಡುವ ಶಕ್ತಿ ಎನ್ನುವುದೇ ನಿಜವಾದ ಮೌಲಿಕ ಅರ್ಥ"–(ಬನ್ನಂಜೆ ಗೋವಿಂದಾಚಾರ್ಯ–ಆಚಾರ್ಯ ಮಧ್ವರ ಬದುಕು ಬರಹ).

ಒಟ್ಟು ಮಧ್ವಾಚಾರ್ಯರಿಂದ ವಿರಚಿತವಾಗಿರುವ ನಲವತ್ತು ಗ್ರಂಥಗಳು ನಮಗೆ ಉಪಲಬ್ಧವಿವೆ. ತಮ್ಮ ಸಾಧನೆ, ಬೋಧನೆಗಳ ಮೂಲಕ ಮಧ್ವಾಚಾರ್ಯರು ನೀಡಿರುವ ಅಧ್ಯಾತ್ಮ ದರ್ಶನದ ಸಾರ ಮತ್ತು ಸಂದೇಶಗಳನ್ನು ಈ ಕೆಳಗಿನಂತೆ ಸಂಗ್ರಹಿಸಿಕೊಳ್ಳಬಹುದು.


1) ಭಗವಂತನ ಹಿರಿಮೆ, ಮಹಿಮೆಗಳನ್ನರಿತು ಅವನನ್ನು ಅನನ್ಯವಾಗಿ ಪ್ರೀತಿಸಬೇಕು. ಈ ವಿಚಿತ್ರವಾದ ವಿಶ್ವ ಅವನ ಸೃಷ್ಟಿ ಎಂದು ಜಗತ್ತನ್ನೂ, ಜಗತ್ತಿನ ಸಕಲ ಚರಾಚರಗಳನ್ನೂ, ನಾವು ಪ್ರೀತಿಸಬೇಕು. ಇಲ್ಲಿಯ ಬದುಕನ್ನು ನಿರಾಕರಿಸಿದರೆ ಅವನನ್ನೇ ನಿರಾಕರಿಸಿದಂತೆ.

2) ಅನುಭವಕ್ಕೆ ಒದಗದ ಶಾಸ್ತ್ರ ಬರಿಯ ಶುಷ್ಕ ಪಾಂಡಿತ್ಯವಾಗಿಬಿಡುತ್ತದೆ. ಶಾಸ್ತ್ರ ಜ್ಞಾನವಿಲ್ಲದ ಅನುಭವವು ಬರಿಯ ಐಹಿಕದ ಕುರುಡು ಪ್ರಜ್ಞೆ. ಆದ್ದರಿಂದ ಎರಡನ್ನೂ ಮೇಳವಿಸಿಕೊಂಡು ಒಂದಕ್ಕೊಂದು ವಿರೋಧವಾಗದಂತೆ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು.

3) ಭಗವಂತನನ್ನು ನೆನಪಿಡಬೇಕು ಎಂಬುದೇ ಮಾನವನಿಗೆ ಮೂಲಧರ್ಮ. ಇದಕ್ಕೆ ಪೋಷಕವಾದುದೆಲ್ಲ ಧರ್ಮ. ಭಗವಂತನನ್ನು ಮರೆಯುವುದೇ ಮೂಲ ಅಧರ್ಮ. ಇದಕ್ಕೆ ಪೋಷಕವಾದುದೆಲ್ಲವೂ ಅಧರ್ಮವೇ.

4) ನಮ್ಮಿಂದ ಸಾಧ್ಯವಾಗದ ಯಾವ ಕರ್ಮಕಾಂಡವನ್ನು ಕೈ ಬಿಟ್ಟರೂ ಚಿಂತೆಯಿಲ್ಲ. ನಿರ್ವ್ಯಾಜವಾದ ಭಕ್ತಿಯಿಂದ ಭಗವಂತನನ್ನು ಭಜಿಸಿದರೆ ಸಾಕು. ಫಲಾಪೇಕ್ಷೆಯಿಂದ ನೂರಾರು ಕರ್ಮಕಾಂಡದ ಪ್ರಕ್ರಿಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡ ಕರ್ಮಕರಿಗಿಂತ ನಿಜಾಂತರಂಗ ಭಕ್ತರೇ ಅವನ ಅನುಗ್ರಹಕ್ಕೆ ಪಾತ್ರರಾಗುವವರು. ಕರ್ಮಕ್ಕಿಂತ ಭಾವ ಮುಖ್ಯ. ಭಾವವಿಲ್ಲದ ಕರ್ಮಕ್ಕಿಂತ ಕರ್ಮವಿಲ್ಲದ ಭಾವವಾದರೂ ಮೇಲು. ಇದರಲ್ಲಿ ಯಾವ ಸಂಶಯವೂ ಬೇಡ.

5) ಶರಣಾಗಿ ಭಗವಂತನನ್ನು ಅರಿಯಲೆತ್ನಿಸು. ಅರಿತು, ಅರಿಯುಕ್ತ, ಮತ್ತೆ ಶರಣಾಗುತ್ತಿರು. ಅವನನ್ನು ಪ್ರೀತಿಸು. ಈ ಅರಿವೇ ಆನಂದದ ಕೀಲಿ ಕೈ. ಇದನ್ನು ಪಡೆದುಕೋ.



### ಕಲೆಗಳ ಮೂಲಕ ಭಗವಂತ

ಈಗ ಹೆಸರಾಂತ ಕಲೆಯಾಗಿರುವ ಯಕ್ಷಗಾನ ಬಯಲಾಟದ ಕಲಾ ಮಾಧ್ಯಮವನ್ನು ಮೂಲತಃ ಆ ಕಾಲದಲ್ಲೇ ಬಳಕೆಗೆ ತಂದು ಅನಕ್ಷರಸ್ಥರಾದ ಹಳ್ಳಿಯ ಜನರನ್ನೂ ಭಗವಂತನ ಮಹಿಮೆ, ಪಾರಮ್ಯ ತಲಪುವಂತೆ ಮಾಡಿದವರು ಮಧ್ವಾಚಾರ್ಯರೇ!

ಅವರು ಹುಟ್ಟು ಹಾಕಿದ ಈ ಕಲೆಯೇ ಮುಂದೆ ಬೆಳೆದು ಕನ್ನಡದ ಯಕ್ಷಗಾನ, ಆಂಧ್ರದ ಕೂಚು ಪುಡಿ ನೃತ್ಯಗಳ ಬೆಳವಣಿಗೆಗೆ ಕಾರಣವಾಗಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ಇದಿಷ್ಟೂ ಸ್ಥೂಲವಾಗಿ ಮಧ್ವಾಚಾರ್ಯರ ಅಧ್ಯಾತ್ಮ ದರ್ಶನದ ಸಾರ. ಈ ಸಾರಸಂದೇಶಗಳೆಲ್ಲ ಮುಂದೆ 16ನೇ ಶತಮಾನದಲ್ಲಿ ವ್ಯಾಸ ಕೂಟ ಪ್ರಮುಖರ (ವ್ಯಾಸತೀರ್ಥರು, ವಾದಿರಾಜರು, ಶ್ರೀಪಾದರಾಜರು, ರಾಘವೇಂದ್ರ ಸ್ವಾಮಿಗಳು) ಮತ್ತು ದಾಸಕೂಟದವರ (ಪುರಂದರದಾಸ, ಕನಕದಾಸ, ವಿಜಯದಾಸ, ಜಗನ್ನಾಥದಾಸ, ಗೋಪಾಲದಾಸರೇ ಮೊದಲಾಗಿ ಅಸಂಖ್ಯ ಹರಿದಾಸರು) ಇವರ ಕೀರ್ತನೆ, ಕೃತಿಗಳಲ್ಲಿ ತಿಳಿಗನ್ನಡ ತೊರೆಯಾಗಿ ಹರಿದು ಬಂದು ಕನ್ನಡ ನಾಡು ನುಡಿ ಜನರ ಸಂಸ್ಕೃತಿಯನ್ನು ಪಾವನಗೊಳಿಸಿದ್ದನ್ನು ಕಾಣುತ್ತೇವೆ. ಈ ಎಲ್ಲ ಹರಿದಾಸರ, ಯತಿಗಳ ಹರಿ ಪ್ರೀತಿಗೆ ಹರಿಕಾರರಾಗಿ ನಿಂತು ಭಕ್ತಿಯ ದಾರಿ ನಿರ್ಮಾಣ ಮಾಡಿಕೊಟ್ಟವರು ಮಧ್ವಾಚಾರ್ಯರು. ಈ ನಾಡಲ್ಲಿ ಹರಿಭಕ್ತಿಯ ಬೀಜಾಂಕುರವಾದದ್ದು ಮಧ್ವಾಚಾರ್ಯರಿಂದಲೇ.

ಸ್ವತಃ ಹಿರಿಯ ಸಂಗೀತಕಾರರೂ ವಾಗ್ಗೇಯಕಾರರೂ ಆಗಿದ್ದು ಕೂಡ ಮಧ್ವಾಚಾರ್ಯರು ತಿಳಿಯಾದ ಸುಲಭ ಸಂಸ್ಕೃತದಲ್ಲಿ ಹಾಡುಗಬ್ಬಗಳನ್ನು ರಚಿಸಿ, ಶಿಷ್ಯರಿಂದ ಹಾಡಿಸಿ ಪ್ರಚುರಪಡಿಸಿದ್ದಾರೆ. ಅವರ ಜನಪ್ರಿಯ ಹಾಡುಗಬ್ಬವೊಂದರ ನುಡಿಯನ್ನು ಇಲ್ಲಿ ಅರ್ಥದ ಸಮೇತ ನೆನೆಯುತ್ತಾ ಈ ಬಾರಿಯ ಮಧ್ವನವಮಿಯಂದು "ಮಲ್ಲಾರ" ಪತ್ರಿಕೆಯ ಮೂಲಕ ನಮ್ಮ ಭಕ್ತಿಪೂರ್ಣ ನಮನಗಳನ್ನು ಅವರಿಗೆ ಸಲ್ಲಿಸೋಣ.

### ಮೂಲ ಸಂಸ್ಕೃತ

**ಕುರು ಭುಕ್ಷ್ವ ಚ ಕರ್ಮ ನಿಜಂ ನಿಯತಂ**
**ಹರಿ ಪಾದ ವಿನಮ್ರ ಧಿಯಾ ಸತತಂ ।**
**ಹರಿರೇವ ಪರೋ ಹರಿರೇವ ಗುರುಃ**
**ಹರಿರೇವ ಜಗತ್ ಪಿತೃಮಾತೃ ಗತಿಃ ॥**

**–ಮಧ್ವಾಚಾರ್ಯರು**

### ಕನ್ನಡಾನುವಾದ

**ನಿನ್ನ ಪಾಲಿನ ಕರ್ಮ ಮಾಡು**
**ಮಾಡಿದುದನುಣ್ಣು ।**
**ಹರಿ ಚರಣಗಳ ಅರಿವು ತಪ್ಪದಿರಲಿ ।**
**ಹರಿಯೆ ಗುರು ನಿನಗೆ ಹರಿಯೆ ಪರಬ್ರಹ್ಮ**
**ಈ ಜಗದ ತಾಯಿ ತಂದೆ ಹರಿ ಒಬ್ಬನೇ ॥**

**–ಬನ್ನಂಜೆ ಗೋವಿಂದಾಚಾರ್ಯ**

ನಂ. ಬಿ–೭೦೨, ೭ನೇ ಮಹಡಿ, ಪ್ರಿಮಸ್ ರಿಫ್ಲೆಕ್ಷನ್, ಕನಕಪುರ ಮುಖ್ಯರಸ್ತೆ, ಕಗ್ಗಲಿಪುರ, ಬೆಂಗಳೂರು–೫೬೦ ೦೮೨.



**ಶ್ರೀ ರಾಮಾನುಜ ವೈಭವ-46**

● ಡಾ. ಬಾಬು ಕೃಷ್ಣಮೂರ್ತಿ

# ರಾಮಪ್ರಿಯನನ್ನು ಅರಸಿ ಬಂದ ಬೀಬಿ ನಾಚ್ಚಿಯಾರ್

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ಅದಾದ ಮೂರು ನಾಲ್ಕು ದಿನಗಳ ಅನಂತರ ಸಹಜಾವಸ್ಥೆಗೆ ಮರಳಿದ ರಾಜಕುಮಾರಿಗೆ ರಾಮಪ್ರಿಯನ ಪ್ರೇಮದ ಸೆಳೆತ ಶುರುವಾಯಿತು. ಬಲವಾಯಿತು. ಅವಳು ಅಂತಃಪುರದಲ್ಲಿ ಇರದಾದಳು. ಮೊಂಡು ಬಿದ್ದು ತಂದೆಯನ್ನು ಒಪ್ಪಿಸಿ ರಾಮಪ್ರಿಯನನ್ನು ಹುಡುಕಿಕೊಂಡು ಹೋಗಲು ತೀರ್ಮಾನಿಸಿದಳು. ಅವಳ ಪ್ರಯಾಣಕ್ಕೆ ಬೇಕಾದ ಎಲ್ಲ ಅನುಕೂಲಗಳನ್ನು ಅವಳ ತಂದೆ ಕಲ್ಪಿಸಿದ್ದ. ಅವಳ ಹಿಂದೆಯೇ ಅವಳನ್ನು ಏಕಮುಖಿಯಾಗಿ ಪ್ರೀತಿಸುತ್ತಿದ್ದ ಕುಬೀರ ಸಹ ಅವಳನ್ನು ಬಿಟ್ಟಿರಲಾರದೆ ಹಿಂಬಾಲಿಸಿದ.

ರಾಮಾನುಜರು ಯಾದವಾದ್ರಿ ಅಥವಾ ಮೇಲುಕೋಟೆಯನ್ನು ತಲಪಿದ ನಾಲ್ಕಾರು ದಿನಗಳ ಅನಂತರ ಬೀಬಿ ನಾಚ್ಚಿಯಾರ್ ಸಹ ಮೇಲುಕೋಟೆ ಸೇರಿದಳು.

ಅವಳ ರಾಮಪ್ರಿಯ ಮಾನವ ದೇಹಿಯಾಗಿರಲಿಲ್ಲ. ಅವಳು ತಿಳಿದೋ ತಿಳಿಯದೆಯೋ ಪ್ರೇಮಪಾಶಕ್ಕೆ ಸಿಲುಕಿದ್ದು ದೈವದೊಡನೆ. ಶ್ರೀಮನ್ನಾರಾಯಣನ ರೂಪವಾದ ಚೆಲುವನಾರಾಯಣ ಮೂರ್ತಿಯೊಂದಿಗೆ! ಅವಳದು ಮಾನವರ ಕ್ಷಣಿಕ ಶರೀರದ ಸಂಬಂಧಿ ಪ್ರೇಮವಲ್ಲ. ರಾಮಪ್ರಿಯ ಅವಳ ಹೃದಯದಲ್ಲಿ ಪ್ರೇಮಸ್ವರೂಪಿಯಾಗಿ ನೆಲೆಸಿಬಿಟ್ಟಿದ್ದ. ಅದಕ್ಕಾಗಿಯೇ ಆ ಮೂರ್ತಿಯನ್ನು ಹಿಂಬಾಲಿಸಿ ಅವಳು ಬಂದಿದ್ದಳು.

ಅವಳು ಪಲ್ಲಕ್ಕಿಯಲ್ಲಿ ಕುಳಿತು, ಸೈನಿಕರ ಕಾವಲಿನಲ್ಲಿ, ಅಡ್ಡ ಬಂದ ಕಾಡುಮೇಡುಗಳನ್ನು, ಬೆಟ್ಟಗುಡ್ಡಗಳನ್ನು, ನದಿನಾಲೆಗಳನ್ನು ಕ್ರಮಿಸಿ ಕೊನೆಗೆ ಮೇಲುಕೋಟೆಯ ಕಿರುಬೆಟ್ಟವನ್ನು ಹತ್ತಿದಳು. ರಾಮಾನುಜರು ಆ ವೇಳೆಗೆ ರಾಮಪ್ರಿಯನಿಗೆ ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪನೆ ಮಾಡಿ ಉತ್ಸವ ಮೂರ್ತಿಯ ನಗರ ಪ್ರದಕ್ಷಿಣೆಗೂ ವ್ಯವಸ್ಥೆ ಮಾಡಿದ್ದರು.

ಆ ಒಂದು ಸುಂದರ ಸೂರ್ಯಾಸ್ತದ ವೇಳೆಗೆ ನಾಚ್ಚಿಯಾರ್ ಪಲ್ಲಕ್ಕಿಯಲ್ಲಿ ಕುಳಿತು ಯಾದವಾದ್ರಿಯ ಬೆಟ್ಟವನ್ನು ಹತ್ತಿದಳು. ಅವಳಿದ್ದ ಪಲ್ಲಕ್ಕಿಯನ್ನು ಸುಂದರವಾಗಿ ನಿರ್ಮಾಣಗೊಂಡಿದ್ದ ತಿರುನಾರಾಯಣನ ದೇವಾಲಯದ ಹತ್ತಿರಕ್ಕೆ ಬೋಯಿಗಳು ಹೊತ್ತು ಬರುವ ವೇಳೆಗೆ ಅವಳ ಕಿವಿಗೆ ಮಧುರವಾದ ನಾದಸ್ವರ ಕೇಳಿಬಂತು. ಪಲ್ಲಕ್ಕಿ ಇಳಿದು ನೋಡುತ್ತಾಳೆ...ತನ್ನ ರಾಮಪ್ರಿಯ ಪಲ್ಲಕ್ಕಿಯಲ್ಲಿ ಕುಳಿತು ಪುರದ ರಾಜಬೀದಿಗಳಲ್ಲಿ ಮೆರವಣಿಗೆ ಹೊರಟಿದ್ದಾನೆ. ಮೆರವಣಿಗೆಯ ಮುಂಚೂಣಿಯಲ್ಲೇ ತನ್ನಿಂದ ತನ್ನ ಪ್ರೀತಿಯ ಮೂರ್ತಿಯನ್ನು ಕಂಡು ಕಸಿದುಕೊಂಡು ಬಂದಿದ್ದ ವೃದ್ಧ ಸಂನ್ಯಾಸಿಯೂ ಕಾಣಿಸಿಕೊಂಡರು. ತಾನು ಸರಿಯಾದ ಜಾಗಕ್ಕೆ ಬಂದಿದ್ದೇನೆ ಎಂದ ಸಮಾಧಾನಪಟ್ಟುಕೊಂಡಳು. ಆದರೆ ಈಗ ಅವಳಿಗೂ ಅವಳ ಪ್ರೇಮ ಮೂರ್ತಿಗೂ ಎಷ್ಟು ದೂರ! ಎಷ್ಟು ಅಂತರ! ಅದನ್ನು ನೋಡಿ ಬೀಬಿಯ ಕಣ್ಣಿನಿಂದ ಆನಂದಬಾಷ್ಪಗಳು ತೊಟ್ಟಿಕ್ಕಿದ್ದವು. ಕಣ್ಣು ಮಂಜುಗಟ್ಟಿತು. ಕೈಗಳು ನಮಸ್ಕಾರ ಸ್ಥಿತಿಗೆ ಹೋದವು. ಆ ಕ್ಷಣವೇ ಅವಳ ರಾಮಪ್ರಿಯನ ಮೇಲಿನ ಪ್ರೇಮ ಶ್ರೀಮನ್ನಾರಾಯಣನ ಭಕ್ತಿಯಾಗಿ ಪರಿವರ್ತನೆಗೊಂಡಿತ್ತು. ಮೆರವಣಿಗೆ ಮುಂದುವರಿದು ಹೋಯಿತು. ರಾಮಾನುಜರು ಮಠದ ತಮ್ಮ ಕೋಣೆಯನ್ನು ಸೇರಿಕೊಂಡರು.

ನಾಚ್ಚಿಯಾರ್ ರಾಮಾನುಜರನ್ನು ಹುಡುಕಿಕೊಂಡು ತಿರುನಾರಾಯಣ ದೇವಾಲಯದ ಬಳಿಗೆ ಬಂದು ಅಲ್ಲಿದ್ದ ಶ್ರೀ ವೈಷ್ಣವ ಅರ್ಚಕರಿಗೆ ಗುರುಗಳನ್ನು ಕಾಣಬೇಕಾಗಿದೆ



ಎಂದು ತಿಳಿಸಿದಳು. ಅವಳ ಭಾಷೆ ಅರ್ಥವಾಗದ ಅರ್ಚಕರು ರಾಮಾನುಜರಿಗೆ ಅವರನ್ನು ಕೇಳಿಕೊಂಡು ಉತ್ತರ ದೇಶದಿಂದ ಯಾರೋ ಒಬ್ಬಳು ಹೆಣ್ಣುಮಗಳು ಬಂದಿರುವುದಾಗಿ ತಿಳಿಸಿದರು. ಸ್ವತಃ ರಾಮಾನುಜರು ತಮ್ಮ ಕೋಣೆಯಿಂದ ಎದ್ದು ಹೊರಕ್ಕೆ ಬಂದರು. ನಾಚ್ಚಿಯಾರ್‌ಳನ್ನು ನೋಡಿ ಒಂದು ಕ್ಷಣ ಅಚ್ಚರಿಗೊಂಡರೂ ಅವರಿಗೆ ಅದೇನೂ ಅನಿರೀಕ್ಷಿತವಾಗಿರಲಿಲ್ಲ. ಅವಳಿಗೆ ರಾಮಪ್ರಿಯನ ಸೆಳೆತ ಎಷ್ಟು ಬಲವಾಗಿತ್ತೆಂಬುದು ಅವರಿಗೆ ಚೆನ್ನಾಗಿ ತಿಳಿದಿತ್ತು. ಅವಳು ತಮ್ಮ ಸಮ್ಮೋಹನಾಸ್ತ್ರದಿಂದ ಹೊರಬಂದ ಮೇಲೆ ಅವಳ ರಾಮಪ್ರಿಯನ ಮೇಲಿನ ಪ್ರೇಮ ಮರುಕಳಿಸಿ ಒಂದರೆಕ್ಷಣವೂ ಅದು ತನ್ನ ಅರಮನೆಯಲ್ಲಿರಲು ಅವಳಿಗೆ ಬಿಡುವುದೂ ಇಲ್ಲವೆಂಬುದು ಅವರಿಗೆ ಗೊತ್ತಿತ್ತು.

"ಬಾ ತಾಯಿ...ಬಾ" ಎಂದು ಪ್ರೀತಿಯಿಂದ ಅವಳನ್ನು ಸ್ವಾಗತಿಸಿದರು. ಉತ್ತರ ದೇಶದ ತುರುಷ್ಕ ಹೆಣ್ಣಿನ ವೇಷಭೂಷಣದಲ್ಲಿದ್ದ ಅವಳನ್ನು 'ಬಾ ತಾಯೀ....ಬಾ' ಎಂದು ಸ್ವಾಗತಿಸಿದ್ದು ಅಕ್ಕಪಕ್ಕದಲ್ಲಿದ್ದವರಿಗೆ ಆಘಾತವನ್ನುಂಟುಮಾಡಿತ್ತು. ರಾಮಾನುಜರು ಆ ಶ್ರೀ ವೈಷ್ಣವ ಬ್ರಾಹ್ಮಣರ ಕಡೆ ತಿರುಗಿ,

"ಈಕೆ ಯಾರೆಂದುಕೊಂಡಿದ್ದೀರಿ ನೀವು?" ಎಂದರು.

"ನಮಗೆ ತಿಳಿಯದು ಮಹಾಸ್ವಾಮಿ."

"ಉತ್ತರದ ಯವನ ರಾಜನ ಪುತ್ರಿ!" ರಾಮಾನುಜರೆಂದರು.

"ಅಂದರೆ ತುರುಷ್ಕಳಲ್ಲವೇ ಮಹಾಸ್ವಾಮಿ?" ಶ್ರೀವೈಷ್ಣವ ಅರ್ಚಕರು ಹೇಳಿದರು.

"ಹೌದು. ಯವನ ಕುವರಿಯೇ?"

"ತುರುಷ್ಕ ಕನ್ಯೆಗೆ ಶ್ರೀಮನ್ನಾರಾಯಣನ ಸನ್ನಿಧಿಯಲ್ಲಿ ಈ ಸ್ವಾಗತವೇ?" ಇನ್ನೊಬ್ಬ ಪ್ರಶ್ನಿಸಿದ.

"ಯವನ ಪುತ್ರಿ ಇರಬಹುದು. ಆದರೆ ಆಕೆ ರಾಮಪ್ರಿಯನ ಆರಾಧಕಿ. ರಾಮಪ್ರಿಯನಿಗಾಗಿ ತನ್ನ ತಂದೆ, ತಾಯಿ, ಬಂಧು ಬಳಗ ಅರಮನೆಯ ಸಂಪತ್ತನ್ನು ತ್ಯಜಿಸಿ ಕಾಡುಮೇಡುಗಳಲ್ಲಿ ಪಯಣಿಸಿ ಇಲ್ಲಿಗೆ ಆಗಮಿಸಿದ್ದಾಳೆಂದರೆ ಆಕೆಯ ರಾಮಪ್ರಿಯ ಪ್ರೇಮ ಎಂಥದಿರಬಹುದೆಂದು ಆಲೋಚಿಸಿ."

"ಎಷ್ಟಿದ್ದರೂ ತುರುಷ್ಕ ಜಾತಿಗೆ ಹುಟ್ಟಿದವಳಲ್ಲವೇ? ಅವರು ವಿಗ್ರಹ ಭಂಜಕರು! ನಮ್ಮ ದೇವಾದಿದೇವತೆಗಳ ಪರಮ ಶತ್ರುಗಳಲ್ಲವೇ? ಅಂಥವರ ವಂಶದಲ್ಲಿ ಹುಟ್ಟಿದವಳಲ್ಲವೇ?"

"ಪ್ರಹ್ಲಾದರಾಜರು ಯಾರ ಮಗ? ನಾಸ್ತಿಕನೂ ವಿಷ್ಣು ದ್ವೇಷಿಯೂ ಆಗಿದ್ದ ಹಿರಣ್ಯಕಶಿಪುವಿನ ಮಗನಲ್ಲವೇ ಅರ್ಚಕರೇ? ಶ್ರೀಮನ್ನಾರಾಯಣನೇ ಪ್ರಹ್ಲಾದರ ಭಕ್ತಿಗೆ ಮೆಚ್ಚಿ ನರಸಿಂಹಾವತಾರ ತಾಳಿ ಪ್ರತ್ಯಕ್ಷನಾಗಲಿಲ್ಲವೇ? ಪ್ರಹ್ಲಾದರ ಭಕ್ತಿಯನ್ನು ಪುರಸ್ಕರಿಸಲಿಲ್ಲವೇ?"

"ಇರಬಹುದು. ತಿರುನಾರಾಯಣ ಸ್ವಾಮಿಯ ದೇವಾಲಯವನ್ನು ನಾಶಪಡಿಸಿ ಉತ್ಸವ ಮೂರ್ತಿಯನ್ನು ಕದ್ದೊಯ್ದು ರಾಕ್ಷಸರಂತೆ ವರ್ತಿಸಿದವರ ಕಡೆಯವಳಲ್ಲವೇ ಈ ಕನ್ಯೆ?"

"ಆದರೆ ಅವಳ ವಿಷ್ಣುಭಕ್ತಿಗೆ ಅರ್ಥವಿಲ್ಲವೇ ಅರ್ಚಕರೇ? ಅವಳು ಪ್ರೀತಿಸುತ್ತಿದ್ದ ರಾಮಪ್ರಿಯರ ಮೂರ್ತಿಯನ್ನು ನಾವು ಕಸಿದುಕೊಂಡು ಬಂದಿದ್ದೀವಿ. ಈ ಹೆಣ್ಣುಮಗಳು ತನ್ನ ರಾಮಪ್ರಿಯನನ್ನು ಸೇರಲು ಸಹಸ್ರಾರು ಹರಿದಾರಿಗಳಿಂದ ಬಂದಿದ್ದಾಳೆ. ಅದನ್ನು ಪುರಸ್ಕರಿಸುವುದು ನಮ್ಮ ಧರ್ಮ."

"ಅವಳ ಭಕ್ತಿ ಪ್ರಾಮಾಣಿಕವೆಂದು ಹೇಗೆ ಹೇಳಬಹುದು ಮಹಾಸ್ವಾಮಿ? ಈ ಜನರನ್ನು ನಂಬಲು ಸಾಧ್ಯವಿಲ್ಲ."

"ತಂದೆ ಯವನ ರಾಜ ಎಂಬುದು ನಿಜ. ಆದರೆ ಈ ಕನ್ಯೆಯ ವಿಷ್ಣುಭಕ್ತಿಯನ್ನು ನೋಡಿದರೆ ಈಕೆಯ ಪೂರ್ವಜರು ವಿಷ್ಣುಭಕ್ತರೇ ಇರಬೇಕು. ತುರುಷ್ಕರು ನಮ್ಮ ಹೆಣ್ಣುಮಕ್ಕಳನ್ನು ಅಪಹರಿಸಿ ವಿವಾಹವಾಗಿರುವ ಉದಾಹರಣೆಗಳು ಸಹಸ್ರಾರು. ಬಹುಶಃ ಈಕೆಯ ತಾಯಿ ನಮ್ಮವಳಾಗಿರಬಹುದು. ತಾಯಿ ಮತ್ತು ಅವಳ ತವರುಮನೆಯವರು ವಿಷ್ಣುಭಕ್ತರಿರಬಹುದು. ತುರುಷ್ಕ ದೊರೆ ಬಲವಂತದಿಂದ ಮತಾಂತರಿಸಿ ಮದುವೆಯಾಗಿರಬೇಕಷ್ಟೆ. ಆಕೆಯ ವಂಶವಾಹಿನಿಯಿಂದಾಗಿ ಈಕೆಗೆ ವಿಷ್ಣುಭಕ್ತಿ ಹರಿದು ಬಂದಿರಬಹುದು ಎಂದು ನನ್ನ ಮನಸ್ಸು ನುಡಿಯುತ್ತಿದೆ. ಇಲ್ಲವಾದರೂ ಈಕೆ ವಿಗ್ರಹ ಭಂಜಕರ ಮಗಳೇ ಆಗಿದ್ದರೆ ವಿಷ್ಣುಮೂರ್ತಿಯಲ್ಲಿ ಪ್ರೇಮ ಅಂಕುರಿಸಲು ಹೇಗೆ ಸಾಧ್ಯ?" ರಾಮಾನುಜರ ಮಾತುಗಳಿಗೆ ನಿರುತ್ತರರಾದ ಅರ್ಚಕರು,

"ಆದರೂ...."

"ಅನುಮಾನ ಬೇಡ ಅರ್ಚಕರೇ. ಈಕೆ ರಾಮಪ್ರಿಯನನ್ನೇ ತನ್ನ ಪತಿಯಾಗಿ ಭಾವಿಸಿ ಅವನನ್ನು ಅರಸಿ ಬಂದಿರುವ ನಾಚ್ಚಿಯಾರ್. ಮಹಾಭಕ್ತೆ ಗೋದಾದೇವಿಯಂತೆ. ಗೋದಾದೇವಿ ರಂಗನಾಥನೇ ತನ್ನ ಪತಿಯೆಂದು ಭಾವಿಸಿ ಅವನಲ್ಲಿ ಐಕ್ಯಳಾಗಲಿಲ್ಲವೇ? ಆಕೆಯನ್ನು ಕುರಿತು ಏನನ್ನುವಿರಿ?"

"ಗೋದಾದೇವಿ ಭಕ್ತಶ್ರೇಷ್ಠಳು. ನಮಗೆ ಮಹಾಪೂಜ್ಯಳು. ಆಕೆ ಆಳ್ವಾರುಗಳಲ್ಲಿ ಒಬ್ಬಳೆಂದು ನಾವು ಸ್ವೀಕರಿಸಿಯಾಗಿದೆ..."

"ಅಂತೆಯೇ ಬೀಬಿ ನಾಚ್ಚಿಯಾರ್ ಎಂಬ ಈ ಕನ್ಯೆಯೂ ಸಹ! ಇವಳದು ದೈಹಿಕ ಪ್ರೇಮವಲ್ಲ ದೈವಿಕ ಪ್ರೇಮ. ಕೃಷ್ಣರಾಧೆಯರ ಅಮರಪ್ರೇಮವಿದ್ದಂತೆ. ವಸುಧೈವ ಕುಟುಂಬಕಮ್ ಎನ್ನುವ ನಾವು ಈ ಶುದ್ಧ ಹೃದಯದ ವಿಷ್ಣುಭಕ್ತೆಯನ್ನು ಶ್ರೀವೈಷ್ಣವಳಾಗಿ ಪರಿಭಾವಿಸುವುದರಲ್ಲಿ ಯಾವುದೇ ತಪ್ಪಿಲ್ಲ. ನಾವು ಶ್ರೀಮತದ ವತಿಯಿಂದ ಈಕೆಯನ್ನು ಮಹಾನ್ ವಿಷ್ಣುಭಕ್ತೆಯಾಗಿ, ಗೋದಾದೇವಿಗೆ ಸಮನಾಗಿ ಸ್ವೀಕರಿಸುತ್ತೇವೆ."

ರಾಮಾನುಜರ ಈ ದೃಢ ಹಾಗೂ ನಿಸ್ಸಂದಿಗ್ಧ ಮಾತುಗಳಿಂದ ನೆರೆದಿದ್ದ ಶ್ರೀವೈಷ್ಣವ ಬ್ರಾಹ್ಮಣರ ಬಾಯಿ ಕಟ್ಟಿಹೋಯಿತು. ಅವರು ಮೌನ ವಹಿಸಿ ಗುರುಗಳ ಆದೇಶವನ್ನು ಶಿರಸಾ ಸ್ವೀಕರಿಸಿದರು. ಆ ಕೂಡಲೇ ರಾಮಾನುಜರ ಶಿಷ್ಯರು 'ಭಜ ಯತಿರಾಜಂ ಭಜ ಯತಿರಾಜಂ ಭಜ ಯತಿರಾಜಂ...ಭವ ಭೀರೋ..' ಎಂದು ಉಚ್ಚ ಕಂಠದಲ್ಲಿ ಒಕ್ಕೊರಲಿನಿಂದ ಭಜಿಸಿದರು. ಅವರೊಂದಿಗೆ ನಾಚ್ಚಿಯಾರ್‌ಳನ್ನು ವಿರೋಧಿಸಿದ್ದ ಬ್ರಾಹ್ಮಣರು ತಮ್ಮ ದನಿಗೂಡಿಸಿದರು. ಈಗ ನಾಚ್ಚಿಯಾರ್‌ಗೆ ಶ್ರೀವೈಷ್ಣವಳೆಂದು ಶ್ರೀಮತದ ಮುದ್ರೆಯೂ ಬಿದ್ದಿತ್ತು!

ಶ್ರೀಮದ್ರಾಮಾನುಜರು ಸಮಸ್ತ ಮನುಕುಲವನ್ನೇ ವಿಷ್ಣುಭಕ್ತಿಯ ಮಾರ್ಗಕ್ಕೆ ತರಲು ಕೃತನಿಶ್ಚಯರಾಗಿದ್ದಂತಹವರು. ಅವರಿಗೆ ನಿಜ ವಿಷ್ಣುಭಕ್ತಳಾದ ಯವನ ಪುತ್ರಿ ಒಬ್ಬಳನ್ನು ಶಿಷ್ಯಳನ್ನಾಗಿ ಸ್ವೀಕರಿಸುವುದು ದೊಡ್ಡ ವಿಷಯವೇನಾಗಿರಲಿಲ್ಲ. ಆದರೆ ಅವರ ಶಿಷ್ಯರನ್ನು ಮತ್ತು ಎಲ್ಲ ಶ್ರೀವೈಷ್ಣವ ಬ್ರಾಹ್ಮಣರನ್ನು ಒಪ್ಪಿಸುವುದು ಕಷ್ಟಕರವಾದ ಕೆಲಸವಾಗಿತ್ತು. ಅದನ್ನೂ ಅವರು ದೃಢಸಂಕಲ್ಪದಿಂದ ಸಾಧಿಸಿದ್ದರು.

ನಾಚ್ಚಿಯಾರ್ ಯಾದವಾದ್ರಿಯಲ್ಲಿಯೇ ಒಂದು ಕಡೆ ವಾಸಿಸಲಾರಂಭಿಸಿದಳು. ಬರಬರುತ್ತಾ ಅವಳ ವೇಷಭೂಷಣದಲ್ಲಿಯೂ ಬದಲಾವಣೆ ಬಂದಿತು. ಯಾದವಾದ್ರಿಗೆ ಪ್ರವೇಶ ಮಾಡಿದಾಗ ಅವಳ ಧರಿಸಿದ್ದ ತುರುಷ್ಕ ಜನರ ವೇಷಭೂಷಣಗಳೆಲ್ಲ ಒಮ್ಮೆಲೆ ಮಾಯವಾಗಿ ಶ್ರೀವೈಷ್ಣವ ಬ್ರಾಹ್ಮಣ ಸ್ತ್ರೀಯರಂತೆ ಕಚ್ಚೆ ಬಿಗಿದು ಸೀರೆ ಉಡುವುದರಿಂದ ಹಿಡಿದು ಕೇಶ ರಾಶಿಯನ್ನು ಹಿಂದುಗಡೆ ಗಂಟುಕಟ್ಟುವುದು, ಹಣೆಗೆ ಕುಂಕುಮವನ್ನು ಒಂದು ಗೆರೆಯಂತೆ ಎಳೆದುಕೊಳ್ಳುವುದು ತುರುಬಿಗೆ ಹೂ ಮುಡಿಯುವುದೇ ಮುಂತಾದ ಬದಲಾವಣೆ ಮಾಡಿಕೊಂಡಳು. ಆ ವೇಷಭೂಷಣದಲ್ಲಿ ನೋಡಿದವರಾರೂ ಅವಳನ್ನು ತುರುಷ್ಕ ಹೆಣ್ಣು ಎಂದು ತಿಳಿಯಲು ಸಾಧ್ಯವೇ ಇರಲಿಲ್ಲ. ಅವಳು ಕುತ್ತಿಗೆಯಲ್ಲಿ ಮಾಂಗಲ್ಯ ಧಾರಣೆಯನ್ನು ಮಾಡಿಕೊಂಡು ತನ್ನ ಮಾನಸ ಪತಿ ರಾಮಪ್ರಿಯನೇ ಎಂದು ಮನಸಾರೆ ನಂಬಿದಳು.

ಪ್ರತಿ ದಿವಸ ತಿರುನಾರಾಯಣನ ದೇವಸ್ಥಾನಕ್ಕೆ ಹೋಗಿ ಅಲ್ಲಿ ಕಂಬ ಒಂದರ ಕೆಳಗೆ ಕಣ್ಣು ಮುಚ್ಚಿ ಕುಳಿತು ರಾಮಪ್ರಿಯನ ಧ್ಯಾನದಲ್ಲಿ ಲೀನವಾಗುತ್ತಿದ್ದಳು. ಗುರುಗಳ ಬಳಿ ಹೋಗಿ ದೇವರ ವಿಷಯ ಚರ್ಚಿಸುತ್ತಿದ್ದಳು. ಗುರುಗಳ ಪ್ರವಚನವನ್ನು ಕೇಳುತ್ತಿದ್ದಳು. ಹೀಗೆ ಕೆಲವು ಸಂವತ್ಸರಗಳೇ ಉರುಳಿಹೋದವು.

ಅವಳನ್ನು ಏಕಮುಖವಾಗಿ ಪ್ರೀತಿಸುತ್ತಿದ್ದ ತುರುಷ್ಕ ಯುವಕ ಕುಬೀರ ಅವಳಲ್ಲಿ ಆವಿರ್ಭವಿಸಿದ್ದ ದೇವಿ ಕಳೆಯನ್ನು ನೋಡಿ ಅವಳ ಬಳಿಗೆ ಹೋಗಲು ಹೆದರಿ ಊರಾಚೆ ಒಂದು ಕಡೆ ಏಕಾಕಿಯಾಗಿ ವಾಸಿಸಲಾರಂಭಿಸಿದ.

ಹೀಗೆಯೇ ಕಾಲ ಸರಿಯಿತು. ಬೀಬಿ ನಾಚ್ಚಿಯಾರ್ ಸಾತ್ವಿಕ ಶ್ರೀವೈಷ್ಣವಳಂತೆ ಜೀವಿಸುತ್ತಾ, ಸದಾಕಾಲ ರಾಮಪ್ರಿಯನನ್ನೇ ಧ್ಯಾನಿಸುತ್ತಾ ದಿನಗಳನ್ನು ನೂಕಿ ಕೊನೆಗೊಂದು ದಿವಸ ವೈಕುಂಠವನ್ನು ಸೇರಿಕೊಂಡಳು. ರಾಮಾನುಜರು ಈ ಮಹಾಭಕ್ತೆಯ ಅಂತ್ಯಸಂಸ್ಕಾರವನ್ನು ಶ್ರೀವೈಷ್ಣವ ಪದ್ಧತಿಯಂತೆ ನಡೆಸಲು ಶಿಷ್ಯರಿಗೆ ಹೇಳಿ ಮೇಲುಕೋಟೆಯ ಬೆಟ್ಟದ ಕೆಳಗೆ ಒಂದು ಕಡೆ ಸಮಾಧಿಯನ್ನು ಮಾಡಲು ತಿಳಿಸಿದಳು. ರಾಮಾನುಜರು ನಾಚ್ಚಿಯಾರಳ ಚಿಕ್ಕ ಮೂರ್ತಿಯನ್ನು ನಿರ್ಮಿಸಿ ಅದನ್ನು ತಿರುನಾರಾಯಣನ ದೇವಸ್ಥಾನದಲ್ಲಿ ದೇವರ ವಿಗ್ರಹದ ಕೆಳಗೆ ಇರಿಸಿ 'ತುಲಕನಾಚ್ಚಿಯಾರ್' ಎಂದು ಕರೆದರು.

ತಾನು ಪ್ರೀತಿಸಿದ ಬೀಬಿ ನಾಚ್ಚಿಯಾರ್ ವಿಷ್ಣುಭಕ್ತೆಯಾಗಿ ಅಸುನೀಗಿದ ಅನಂತರ ಕುಬೀರ ಮೇಲುಕೋಟೆಯನ್ನು ತೊರೆದು ಶ್ರೀರಂಗಕ್ಕೆ ತೆರಳಿ ಅಲ್ಲಿ ರಂಗನಾಥ ಸ್ವಾಮಿಯ ದೇವಾಲಯದ ಎದುರಿನ ರಸ್ತೆಯಲ್ಲಿ ಶ್ರೀರಂಗನಾಥನ ಸ್ಮರಣೆ ಮಾಡುತ್ತಾ ಕಾಲ ಕಳೆದು ಒಂದು ದಿನ ಅಸುನೀಗಿದನಂತೆ.


ಉತ್ಸವ ಮೂರ್ತಿ ಚೆಲುವನಾರಾಯಣನ ಪ್ರತಿಷ್ಠಾಪನೆಯ ಅನಂತರ ರಾಮಾನುಜರು ದೇವಸ್ಥಾನದಲ್ಲಿ ನಿತ್ಯೋತ್ಸವ, ಮಾಸೋತ್ಸವ. ಸಂವತ್ಸರೋತ್ಸವ ಮುಂತಾದುವನ್ನು ಕ್ರಮಬದ್ಧವಾಗಿಯೂ ವಿಜೃಂಭಣೆಯಿಂದಲೂ ಆಚರಿಸುವಂತೆ ವ್ಯವಸ್ಥೆ ಮಾಡಿದರು. ತಿರುನಾರಾಯಣ ದೇವಸ್ಥಾನದ ಆಗ್ನೇಯ ದಿಕ್ಕಿನಲ್ಲಿ ಮಠ ಒಂದನ್ನು ಸ್ಥಾಪಿಸಿ ಅದಕ್ಕೆ ಯತಿರಾಜ ಮಠ ಎಂದು ಕರೆದರು.

ದೇವರ ಪೂಜಾ ಕೈಂಕರ್ಯಾದಿಗಳು ಸಮರ್ಪಕವಾಗಿ, ಶಿಸ್ತುಬದ್ಧವಾಗಿ ನಡೆದುಕೊಂಡು ಹೋಗಲು ಐವತ್ತೆರಡು ಶ್ರೀವೈಷ್ಣವ ಕುಟುಂಬಗಳನ್ನು ಆರಿಸಿ, ಅವರಿಗೆ ವಾಸ, ಅಶನ ಮುಂತಾದವುಗಳ ಎಲ್ಲ ಅನುಕೂಲಗಳನ್ನು ಕಲ್ಪಿಸಿದರು. ಐಂಬತ್ತಿರುವರ್ ಎಂಬ ಅಭಿಧಾನವನ್ನು ಅವರಿಗೆ ನೀಡಿ ಅವರ ಪೈಕಿ ಪ್ರತಿಯೊಬ್ಬರಿಗೂ ಅವರವರ ಪಾಲಿನ ಕೈಂಕರ್ಯಗಳನ್ನು ನಿಶ್ಚಯಿಸಿ ಕೆಲಸಗಳನ್ನು ಹಂಚಿದರು. ಅವರಲ್ಲಿ ಪ್ರತಿಯೊಬ್ಬರಿಗೂ ಒಂದು ದಾಸ್ಯನಾಮವನ್ನು ನೀಡಿದರು. ದೇವಸ್ಥಾನಕ್ಕೆ ಸಂಬಂಧಪಟ್ಟ ಸಮಸ್ತರ ಸಭೆ ಸೇರಿಸಿ ಅವರಿಗೆ ದೇವಸ್ಥಾನದ ನಿರ್ವಹಣೆಯನ್ನು ಹೇಗೆ ಮಾಡಬೇಕೆಂದು ವಿವರಿಸುತ್ತಿದ್ದರು. ಇಂಥ ಒಂದು ಸಭೆಯಲ್ಲಿ ಅವರು "ಈ ಪವಿತ್ರ ನಾರಾಯಣ ಕ್ಷೇತ್ರಕ್ಕೆ ತಿರುನಾರಾಯಣಪುರ ಎಂದು ನಾಮಕರಣ ಮಾಡಿದ್ದೀವಿ. ಈ ತಿರುನಾರಾಯಣಪುರ ಅತ್ಯಂತ ಪುನೀತವಾದ ಕ್ಷೇತ್ರ. ಇಲ್ಲಿ ನಿತ್ಯ ವಾಸ ಮಾಡುವವರಿಗೂ ಭಾಗವತರಿಗೂ ನಮಗೂ ಪರಮಪದ ಲಭಿಸುವುದು ನಿಶ್ಚಿತ" ಎಂದೂ ಘೋಷಿಸಿದರು.

ರಾಮಾನುಜರಿಗೆ ಪಂಚಮರೆಂದು ಕರೆಸಿಕೊಂಡು ಸಮಾಜದಿಂದ ತಿರಸ್ಕೃತಗೊಂಡು ಊರಾಚೆ ಜೀವಿಸುತ್ತಿದ್ದ ಬಡಜನರನ್ನು ಕಂಡರೆ ವಿಶೇಷ ಅಕ್ಕರೆ. ಅವರನ್ನು ಹೀಗೆ ಕೀಳಾಗಿ ಕಾಣಲು ಕಾರಣ ಏನು ಎಂಬುದು ಅವರು ಸಮಾಜದ ಪ್ರತಿಷ್ಠಿತರ ಬಳಿ ಕೇಳುತ್ತಿದ್ದ ಪ್ರಶ್ನೆ. ಈ ಜನರು ರಾಮಾನುಜರಿಗೆ ಬಲು ಪ್ರೀತಿಪಾತ್ರರು. ಅವರನ್ನು ಬಳಿ ಕರೆದು, "ನೀವೆಲ್ಲ ಶ್ರೀಮನ್ನಾರಾಯಣನ ಸೇವೆಯನ್ನು ಅವಿರತವಾಗಿ ಮಾಡಿಕೊಂಡು ಬಂದಿದ್ದೀರಿ. ನೀವು ದುಡಿಯದಿದ್ದರೆ ಈ ದೇವಸ್ಥಾನವನ್ನು ಕಟ್ಟಲಾಗುತ್ತಿತ್ತೆ? ನೀವೇ ಅಲ್ಲವೇ ನಮ್ಮನ್ನು ಮೇಲುಕೋಟೆಯಿಂದ ಬೀಬಿ ನಾಚ್ಚಿಯಾರ್‌ಳ ರಾಜ್ಯದವರೆಗೂ ಪಲ್ಲಕ್ಕಿಯಲ್ಲಿ ಸುರಕ್ಷಿತವಾಗಿ ಎತ್ತಿಕೊಂಡು ಹೋಗಿ ಬಂದವರು. ಸಮಾಜ ಹೇಗೇ ನೋಡಲಿ. ಏನೇ ಕರೆಯಲಿ! ನೀವು ಇನ್ನು ಮುಂದೆ ತಿರುಕ್ಕುಲತ್ತಾರ್‌ಗಳೆಂದೇ ನಮ್ಮಿಂದ ಗುರುತಿಸಲ್ಪಡುವಿರಿ."

ಈ ಬಡ ಅಸ್ಪೃಶ್ಯರು ಬಡವರಲ್ಲಿ ಬಡವರು.

ಸಮಾಜ ತಿರಸ್ಕೃತರಾದುದರಿಂದ ಅವರಿಗೆ ಸ್ವಚ್ಛತೆಯ ಪರಿಚಯವಿರಲಿಲ್ಲ. ಕೀಳು ಕೆಲಸಗಳನ್ನು ಮಾಡಿಕೊಂಡು ಮಲ ಹೊರುತ್ತಿದ್ದರು. ಸತ್ತ ಪ್ರಾಣಿಗಳ ಮಾಂಸ ತಿನ್ನುತ್ತಿದ್ದರು. ಎಂದಾದರೊಂದು ದಿನ ಸ್ನಾನ ಮಾಡಿದರೆ ಮಾಡಿದರು ಇಲ್ಲದಿದ್ದರಿಲ್ಲ. ಅವರನ್ನು ಜಾಂಬವರೆಂದು ಕರೆಯುತ್ತಿದ್ದರು. ಸ್ಥಳೀಯರು ಹೊಲೆಯರೆನ್ನುತ್ತಿದ್ದರು. ತಾವು ತ್ರೇತಾಯುಗದ ಜಾಂಬುವಂತನ ವಂಶಜರೆಂದು ನಂಬಿದ್ದರು.



ಅವರೆಲ್ಲರೂ ಸಾಲು ಸಾಲಾಗಿ ಬಂದು ಆನಂದಬಾಷ್ಪಗಳನ್ನು ಸುರಿಸುತ್ತಾ ರಾಮಾನುಜರ ಕಾಲಿಗೆ ಅಡ್ಡಬಿದ್ದರು. ಅವರಲ್ಲೊಬ್ಬ ವೃದ್ಧ "ಬುದ್ಧೀ. ನೀವು ನಮ್ಮ ಜೀವನವನ್ನು ಪಾವನ ಮಾಡಿದಿರಿ. ಇಷ್ಟು ವರ್ಷ ನಮಗೆ ಅಂಟಿದ್ದ ಕೊಳಕನ್ನು ಅಳಿಸಿದಿರಿ" ಎನ್ನುತ್ತಾ ಕಣ್ಣೀರಧಾರೆ ಹರಿಸುತ್ತಾ ಅವರ ಪಾದಗಳನ್ನು ಹಿಡಿದುಕೊಂಡ. ಮುಗುಳುನಗುತ್ತಾ ಅವನ ಮೈದಡವಿ ಅವನನ್ನು ಮೇಲಕ್ಕೆತ್ತಿದ ರಾಮಾನುಜರು, "ನಾವೆಲ್ಲರೂ ಆ ದೇವರ ಮಕ್ಕಳೇ. ಒಬ್ಬೊಬ್ಬರಿಗೆ ಒಂದೊಂದು ಕರ್ತವ್ಯವನ್ನು ಶ್ರೀಹರಿ ನೀಡಿದ್ದಾನೆ. ಅದನ್ನು ಮಾಡುತ್ತಾ ಹೋಗೋಣ" ಎನ್ನುತ್ತಾ ಮುಂದುವರಿದು, "ನೀವು ಶ್ರೀಮನ್ನಾರಾಯಣನಿಗೆ ಸಲ್ಲಿಸಿರುವ ಅನುಪಮ ಸೇವೆ ಹಾಗೂ ನಿಮಗೆ ಅವನಲ್ಲಿರುವ ಭಕ್ತಿಯನ್ನು ಪರಿಗಣಿಸಿ ನಮ್ಮ ಶ್ರೀ ವಿಷ್ಣು ದೇವಾಲಯಗಳಲ್ಲಿ ಬ್ರಹ್ಮೋತ್ಸವಗಳಂದು ನೀವು ಮೊದಲು ಬಂದು ಸ್ವಾಮಿಗೆ ಪೂಜೆ ಮಾಡಿದ ಅನಂತರವೇ ರಥೋತ್ಸವ ಆರಂಭಗೊಳ್ಳಬೇಕೆಂದೂ ಅದು ಆಚಂದ್ರಾರ್ಕವಾಗಿ ನಡೆದುಕೊಂಡು ಬರಬೇಕೆಂದೂ ದೇವಸ್ಥಾನದ ನಿಯಮಾವಳಿಯಲ್ಲಿ ಸೇರಿಸಿದ್ದೀನಿ" ಎಂದ ಕೂಡಲೇ ಅಲ್ಲಿ ನೆರೆದಿದ್ದ ಆ ಬಡ ದೀನ ಜನರೆಲ್ಲ ಗದ್ಗದಿತರಾಗಿ ಧಾರಾಕಾರವಾಗಿ ಕಣ್ಣೀರು ಸುರಿಸುತ್ತಾ ರಾಮಾನುಜರಿಗೆ ನಮಿಸಿದರು.

ಅನಂತರ ಆ ಜನರ ಗುಂಪಿನಿಂದಲೇ ಬಂದ ಇನ್ನು ಕೆಲವರು, "ಮಹಸ್ವಾಮೀ, ನೀವು ಶ್ರೀಮನ್ನಾರಾಯಣನನ್ನು ಪೂಜಿಸುವ ಅಧಿಕಾರವನ್ನು ಬ್ರಾಹ್ಮಣರಿಗೆ ನೀಡಿದ್ದೀರಿ. ಇತರ ಜನರು ಗರ್ಭಗುಡಿಯಲ್ಲಿ ನಿಂತು ಭಗವಂತನ ಪೂಜೆ ಮಾಡಬಾರದೆ? ಅವರಿಗೂ ಆ ಪುಣ್ಯದ ಕೆಲಸವನ್ನು ಏಕೆ ಒಪ್ಪಿಸಬಾರದು?" ಎಂದು ಪ್ರಶ್ನಿಸಿದರು. ಅವರನ್ನು ಬೋವಿ ಜನರೆನ್ನುತ್ತಿದ್ದರು.

ಒಂದು ನಿಮಿಷ ಮೌನವಹಿಸಿ ಅನಂತರ ಮುಗುಳುನಗುತ್ತಾ, "ಈ ರೀತಿ ನಮ್ಮನ್ನು ಕೇಳಿದವರು ನೀವು ಮಾತ್ರ. ಈವರೆಗೂ ಯಾರೂ ಇಂಥ ಪ್ರಶ್ನೆ ಎತ್ತಿರಲಿಲ್ಲ. ಹೌದು ಭಗವಂತನನ್ನು ಅರ್ಚಿಸುವ ಹಕ್ಕು ಎಲ್ಲರಿಗೂ ಉಂಟು. ಮೊದಲಿನಿಂದಲೂ ಆ ಕೆಲಸವನ್ನು ಬ್ರಾಹ್ಮಣ ವರ್ಣದವರು ಮಾಡುತ್ತಾ ಬಂದಿದ್ದಾರೆ. ಅವರಿಗೆ ಆ ಬಗೆಯ ಶಿಕ್ಷಣ ದೊರೆತಿರುತ್ತದೆ...."


"ನಾವೂ ಶಿಕ್ಷಣ ಪಡೆಯಬಹುದಲ್ಲ...."

"ಪಡೆಯಬಹುದು. ಆ ಯೋಗ್ಯತೆಯನ್ನು ಗಳಿಸಿಕೊಳ್ಳಿರಿ. ಭಕ್ತ ಶ್ರೇಷ್ಠನಾದ ಆಂಜನೇಯ ಸ್ವಾಮಿಯ ಪೂಜೆಯ ಕೈಂಕರ್ಯವನ್ನು ನಿಮ್ಮಗಳಿಗೆ ಒಪ್ಪಿಸುತ್ತಿದ್ದೀನಿ. ಮಹಾಭಾಗವತನಾದ ಅವನನ್ನು ಶ್ರದ್ಧಾಭಕ್ತಿಗಳಿಂದ, ಶುಚಿರ್ಭೂತರಾಗಿ ಆವಶ್ಯಕ ಮಂತ್ರ ತಂತ್ರಗಳನ್ನು ಆಗಮಗಳನ್ನು ಕಲಿತು, ಎಲ್ಲ ಗ್ರಾಮಗಳಲ್ಲೂ ಆಂಜನೇಯ ಸ್ವಾಮಿಯ ಗುಡಿಗಳಲ್ಲಿ ಅರ್ಚಕರಾಗಿ ಪೂಜಾ ಕೈಂಕರ್ಯವನ್ನು ನೀವು ಕೈಗೊಳ್ಳಿರಿ." ಆ ಗುಂಪಿನವರ ಆನಂದಕ್ಕೂ ಪಾರವೇ ಇರಲಿಲ್ಲ. ಭಾವ ತೀವ್ರತೆಯನ್ನು ತಡೆದುಕೊಳ್ಳಲಾರದೆ ಅಲ್ಲಿಯೇ ಕುಣಿದು ಕುಪ್ಪಳಿಸಲಾರಂಭಿಸಿದರು. ಅವರಿಗೆ ಸಮಾಜದಲ್ಲಿ ಒಂದು ಗೌರವ ಸ್ಥಾನ ದೊರೆತಂತಾಯಿತು.

ರಾಜಾ ವಿಷ್ಣುವರ್ಧನನ ಆಶ್ರಯ ರಾಮಾನುಜರ ಗತಿವಿಧಿಯನ್ನೇ ಬದಲಿಸಿತ್ತು. ಅವರು ಪೂರ್ಣ ಪ್ರಮಾಣದಲ್ಲಿ ತಮ್ಮ ವಿಷ್ಣು ಸೇವಾ ಕೈಂಕರ್ಯವನ್ನು ರಭಸದಿಂದ ಮುಂದುವರಿಸಿದರು. ಅವರ ಶಿಷ್ಯವೃಂದವೂ ಹೆಚ್ಚಿತು. ವಿವಿಧ ಮತ ಮತ್ತು ಗುಂಪುಗಳಿಂದ ಜನರು ವಿಷ್ಣುವಿನತ್ತ ಆಕರ್ಷಿತರಾಗಿ ಬಂದು ವೈಷ್ಣವ ದೀಕ್ಷೆ ಪಡೆಯಲಾರಂಭಿಸಿದರು.


ಯಾದವಾದ್ರಿಯ ತಿರುನಾರಾಯಣನ ಸನ್ನಿಧಿಯಲ್ಲೇ ಅವರ ಶ್ರೀಮಠ. ಅಲ್ಲಿಂದಲೇ ಎಲ್ಲ ಕಾರ್ಯಚಟುವಟಿಕೆಗಳ

▶▶ 31ನೇ ಪುಟಕ್ಕೆ



ಶ್ರೀ ವಿಷ್ಣು ಸಹಸ್ರನಾಮ ಮಹಾತ್ಮೆ

ಈವರೆಗೆ 'ದಾಸವಾಣಿ' ಎಂಬ ಅಂಕಣದಲ್ಲಿ ಪುರಂದರದಾಸರ ಕೀರ್ತನೆಗಳಿಗೆ ವ್ಯಾಖ್ಯಾನ ನೀಡಿರುವ ಯತಿರಾಜ್ ವೀರಾಂಬುಧಿಯವರು ಈ ಸಂಚಿಕೆಯಿಂದ ಶ್ರೀ ವಿಷ್ಣು ಸಹಸ್ರನಾಮದ ಕೆಲವು ಪದಗಳನ್ನು ಆಯ್ದುಕೊಂಡು ಅವನ್ನು ಅರ್ಥೈಸುತ್ತಾ ವಿಷ್ಣು ಸಹಸ್ರನಾಮವನ್ನು ಕುರಿತು ವ್ಯಾಖ್ಯಾನ ಮಾಡುತ್ತಾರೆ. ಸ್ವತಃ ಕಾದಂಬರಿಕಾರರಾಗಿರುವ ಯತಿರಾಜ ವೀರಾಂಬುಧಿಯವರು ಅಧ್ಯಾತ್ಮಜೀವಿಗಳೂ ಆಗಿದ್ದಾರೆ.



# ಅರ್ಥಃ

ಅರ್ಥಃ ಎಂದರೆ ಎಲ್ಲರೂ ಬಯಸುವಂತಹವನು. ಮನುಷ್ಯನು ಬಯಸುವ ಬಯಕೆಗಳಲ್ಲಿ ಶ್ರೇಷ್ಠವಾದ ಬಯಕೆ ಎಂದರೆ ಭಗವಂತನನ್ನು ಬಯಸುವುದು. ಬಯಕೆಗಳ ಬಗ್ಗೆ ಮಹಾಭಾರತದ ಘಟನೆ ಇಲ್ಲಿದೆ. ಧರ್ಮರಾಯನ ಸಮ್ಮುಖದಲ್ಲಿ ಧರ್ಮ, ಅರ್ಥ ಮತ್ತು ಕಾಮ ಈ ಮೂರು ಪುರುಷಾರ್ಥಗಳಲ್ಲಿ ಶ್ರೇಷ್ಠವಾದ ಪುರುಷಾರ್ಥ ಯಾವುದು ಎಂದಾಗ ಎಲ್ಲರೂ ಧರ್ಮವನ್ನು ಹೆಚ್ಚೆಂದಾಗ ಅರ್ಜುನನು ಅರ್ಥವೇ ಮೇಲು ಎನ್ನುತ್ತಾನೆ. ಬಡವನನ್ನು ಈ ಪ್ರಪಂಚದಲ್ಲಿ ಯಾರೂ ಗುರುತಿಸಲಾರರು. ಧರ್ಮವನ್ನು ಪಾಲಿಸಲು ಅರ್ಥ ಮುಖ್ಯ ಎಂದು ವಾದ ಮಾಡುತ್ತಾನೆ. ಭೀಮಸೇನನು ಕಾಮವು ಹೆಚ್ಚು ಶ್ರೇಷ್ಠ ಎನ್ನುತ್ತಾನೆ. ಕಾಮಕ್ಕೆ ಇನ್ನೂ ಅನೇಕ ಮುಖಗಳಿವೆ.  ಕಾಮ ಇಲ್ಲದಿದ್ದರೆ ಧರ್ಮ, ಅರ್ಥಗಳು ಇರುವುದಿಲ್ಲ. ಹಾಗೆಯೇ ಎಲ್ಲಕ್ಕೂ ಕಾಮ ಬೇಕು. ಜ್ಞಾನಿಗಳಿಗೆ ದೇವರನ್ನು ಕಾಣಬೇಕೆಂಬ ಬಯಕೆ.

ಸಮಸ್ತ ಜನರೂ ಬಯಸುವ ಭಗವಂತ ಅರ್ಥಃ. ಸಮಸ್ತ ವೇದಗಳ ಮುಖ್ಯಾರ್ಥ ಭಗವಂತನೊಬ್ಬನೇ. ವೇದದಲ್ಲಿ ಮೇಲ್ನೋಟಕ್ಕೆ ಕರ್ಮ, ವ್ಯವಹಾರ, ಪ್ರಪಂಚದ ಬಗ್ಗೆ ಹೇಳುತ್ತಿದೆ ಎನಿಸಿದರೂ, ವೇದದ ಮುಖ್ಯಾರ್ಥ ಭಗವಂತ. ಹೀಗೆ ಸರ್ವವೇದಗಳಿಂದ, ಸರ್ವಶಬ್ದಗಳಿಂದ ವಾಚ್ಯನಾದ, ಎಲ್ಲರೂ ಬಯಸುವ ಭಗವಂತ ಅರ್ಥಃ.

ಎಲ್ಲರಿಂದ ಹುಡುಕಾಡಲ್ಪಡುವವನು ಅರ್ಥ. ಅವನು ಪರಮಾನಂದ ನೀಡುವವನು.

ವಿಷಯ ವಾಸನೆ ಇಲ್ಲದ, ಯಾವುದೇ ಆಕರ್ಷಣೆಗೆ ಒಳಗಾಗದವರಿಗೆ ಭಗವಂತ ಕಾಣಿಸಿಕೊಳ್ಳುತ್ತಾನೆ.

ಎಲ್ಲರಿಂದಲೂ ಪೂಜಿಸಲ್ಪಡುವವನು; ಎಲ್ಲರಿಂದ ಆಹ್ವಾನಿಸಲ್ಪಡುವವನು.

ನಾವು ಯಾವುದನ್ನು ತೋರಿಕೆಗಾಗಿ ಅನ್ವೇಷಿಸುವೆವೋ ಅದರಲ್ಲಿ ಒಂದು ಎಂದೂ ಮುಗಿಯದ ಆನಂದವಿದೆ; ಸಂತೋಷವಿದೆ; ಪರಮಾನಂದವಿದೆ.

ಕೆಲವರು ವಸ್ತುಗಳನ್ನು ಬಯಸುತ್ತಾರೆ. ಕೆಲವರು ಸಂಬಂಧಗಳನ್ನು ಬಯಸುತ್ತಾರೆ; ಕೆಲವರು ಪದವಿ ಮತ್ತು ಯಶಸ್ಸನ್ನು ಬಯಸುತ್ತಾರೆ. ಇವೆಲ್ಲವೂ ಸಂತೋಷವನ್ನು ಅವರವರಿಗೆ ಕೊಡುವಂತಹದ್ದೇ. ನಮ್ಮ ಒಳಗಿನ ವಾಸನೆಗಳ ಮೇಲೆ ಇವು ಆಧಾರಗೊಂಡಿರುತ್ತವೆ.

ಮಾಸ್ಲೋ ಹೇಳಿದಂತೆ ನಮ್ಮಲ್ಲಿ ಆವಶ್ಯಕತೆಗಳ ಪಿರಮಿಡ್ ಇದೆ. (ಕೆಳಗಿನಿಂದ ಮೇಲಕ್ಕೆ, ಮೊದಲು ಮಾನಸಿಕವಾಗಿ ನಮಗೆ ಬೇಕಾಗಿರುವುದು ಆಹಾರ, ನೀರು, ನಿದ್ರೆ. ಅನಂತರ ಭದ್ರತೆಯ ಅಗತ್ಯಗಳು, ಅನಂತರ ನನ್ನವರು ತನ್ನವರು ಎಂಬ ಅಗತ್ಯಗಳು. ಸ್ನೇಹ, ಸಂಸಾರಬಂಧನ, ಅನಂತರ ಪ್ರೇಮ; ಆಮೇಲೆ ಗೌರವಕ್ಕೆ: ಸ್ವಗೌರವ, ಗೌರವ, ಸಾಧನೆ... ಮತ್ತು ಸ್ವಾಕ್ಷಾತ್ಕಾರದ ಆವಶ್ಯಕತೆಗಳು: ನಮ್ಮ ಸಂಪೂರ್ಣ ಶಕ್ತಿಯ ಅರಿವು.)

ಈ ಏಣಿಯಲ್ಲಿ ನಾವು ಮುಂದಿನ ಮೆಟ್ಟಿಲಿನತ್ತ ಚಲಿಸಲು ನಮಗೆ ಬೇಕಾಗಿರುವುದು ಹಿಂದಿನ ಮೆಟ್ಟಿಲಿನ ಎಲ್ಲವೂ ನೆರವೇರಿದ ಅನಂತರ, ನಮ್ಮ ಮುಂದಿನ  ಎತ್ತರದ ಬಯಕೆಗಳತ್ತ ಚಲಿಸುವೆವು. ನಮ್ಮ ಸಂತೋಷಗಳು ಕೂಡ ಹೊಸ ಮೆಟ್ಟಿಲು ಹತ್ತುತ್ತಿದ್ದಂತೆ ಹೊಸ ರೂಪವನ್ನು ಪಡೆಯುತ್ತವೆ.

ಪುರುಷಾರ್ಥದಲ್ಲಿಯೂ ಇದೇ ಹೇಳುತ್ತಾರೆ. ಆದರೆ ಅದರ ಸ್ತರ ಸ್ವಲ್ಪ ಮೇಲಿರುತ್ತದೆ. ಇಲ್ಲಿ ಸ್ವ-ಸಾಕ್ಷಾತ್ಕಾರವನ್ನು ಪರಬ್ರಹ್ಮದ ಸಾಕ್ಷಾತ್ಕಾರಕ್ಕೆ ಹೋಲಿಸಬಹುದು. ಇದನ್ನು ಪಡೆಯುವ ವರೆಗೆ ನಾವು ದುಃಖದಿಂದ, ಕೋರಿಕೆ ನೆರವೇರದ ಬೇಸರದಿಂದ, ವಿಶ್ರಾಂತಿ ಕಾಣದೇ, ಸದಾ ಅನ್ವೇಷಣೆಯಲ್ಲೇ ಕಾಲ ಕಳೆಯುತ್ತಾ..

ನಾವು ಸರಿಯಾಗಿ ಗಮನಿಸಿದರೆ ನಾವು ಭಗವಂತನೆಂಬ ಸುಖವನ್ನು ಪಡೆಯಲು ತಪಿಸುತ್ತಿದ್ದೇವೆ. ನಾವಿಡುವ ಪ್ರತಿ ಹೆಜ್ಜೆಯೂ ಅವನನ್ನು ಪಡೆಯುವ ಕಡೆಗೆ ಇರುತ್ತದೆ. ಆದರೆ ಯಾವಾಗ ಅವನನ್ನು ಪಡೆಯುವೆವೋ, ಅವನನ್ನು ಪಡೆಯುವೆವೋ ಇಲ್ಲವೋ ನಮಗೆ ತಿಳಿಯದು ಎನ್ನುವುದೇ ನಮಗೆ ಅಸೌಖ್ಯವನ್ನು ಉಂಟುಮಾಡುತ್ತದೆ. ಮೋಕ್ಷ ಎಂದರೆ ಏನು? ಆಸೆಗಳಿಲ್ಲದಿರುವುದೇ ಮೋಕ್ಷ ಎನ್ನುತ್ತಾರೆ ತತ್ತ್ವಜ್ಞಾನಿಗಳು. ನಮಗೆ ಇನ್ನೇನೂ ಬೇಡವೆನಿಸಿದಾಗ, ಯಾವುದೇ ಬಯಕೆ ಇಲ್ಲದಾಗ ನಾವೇನೂ ಮಂಕು ಹಿಡಿದವರಾಗುವುದಿಲ್ಲ. ಏಕೆಂದರೆ ನಾವು ಬಯಸುವುದೇನೂ ಇರುವುದಿಲ್ಲ, ಏಕೆಂದರೆ ಎಲ್ಲವೂ ನಮ್ಮದೇ.

ಇದರ ಅರ್ಥ ಹೀಗೆ ಇರಬಹುದು: ಈ ಸೃಷ್ಟಿಯ ಪ್ರತಿಯೊಂದೂ ನಮಗೆ ಸಂತೋಷ ಮತ್ತು ಸುಖವನ್ನು ನೀಡಲು ಪ್ರಯತ್ನಿಸುತ್ತದೆ. ನಮಗೆ ಆಹಾರ ಮತ್ತು ನೀರು ದೊರೆಯುವುದು ಖಾತ್ರಿಯಾದೊಡನೆ ಅವುಗಳನ್ನು ನಾವಿನ್ನು ಹುಡುಕುವುದಿಲ್ಲ. ಆಗ ನಮ್ಮ ಕಣ್ಣು ಮುಂದಿನ ಸುಖದ ಮೆಟ್ಟಿಲಿನತ್ತ ಇರುತ್ತದೆ. ಇಲ್ಲಿ ಕೂಡ ಮೂಲಭೂತ ಸಂತಸ ದೊರೆತೊಡನೆ ನಾವು ಅದನ್ನು ಅನುಭವಿಸಿ, ಆನಂದಿಸಿ,

ಅದರಲ್ಲಿ ಒದ್ದೆಯಾಗಿ ಈಗ ಮುಂದಿನ ಹಂತಕ್ಕೆ ಹೋಗಲು ಆಶಿಸುತ್ತೇವೆ. ಹಾಗೇ ಹೋಗುತ್ತಾ ಹೋಗುತ್ತಾ ನಾವು ಬಯಕೆಗಳಿಲ್ಲದವರಾಗುತ್ತೇವೆ. ಅದು ಸಂಬಂಧಗಳೂ ಇರಬಹುದು. (ನನ್ನ ಮಗು, ನನ್ನ ತಾಯಿ, ನನ್ನ ಜೀವನಸಂಗಾತಿ) ಆದರೆ ಈ ಸ್ಥಿತಿಯನ್ನು ಮುಟ್ಟುವುದು ಬಹಳ ಕಷ್ಟ. ಮಾಯೆಯು ನಮ್ಮನ್ನು ಅವಳ ಬಲೆಯೊಳಗೆ ಸೆಳೆದುಕೊಳ್ಳುತ್ತಾಳೆ. ಅವಳು ನಮ್ಮನ್ನು ಕೆಣಕುತ್ತಾಳೆ, ನಮ್ಮೊಂದಿಗೆ ಆಟವಾಡುತ್ತಾಳೆ. ಏಕೆಂದರೆ ನಮಗೆ ಒಂದು ಸಾಲದು. ಎಲ್ಲವೂ ಹೆಚ್ಚು ಹೆಚ್ಚಾಗಿ ಬೇಕು. ಅದಕ್ಕೇ ನಮ್ಮ ಬದುಕಿನಲ್ಲಿ ಅಭಿಲಾಷೆಗಳ ಕಾಟ ಹೆಚ್ಚು.



ಶ್ರೀ ಶಂಕರಾಚಾರ್ಯರು **ಕಾತೇ ಕಾಂತಾ ಕಸ್ತೇ ಪುತ್ರಃ** ಎನ್ನುವ ಅವರ ಭಜಗೋವಿಂದಂ ಶ್ಲೋಕದಲ್ಲಿ ನಿನ್ನ ಹೆಂಡತಿ ಯಾರು, ನಿನ್ನ ಮಗ ಯಾರು? ಈ ಸಂಸಾರವು ಮಹಾ ವಿಚಿತ್ರವಾದದ್ದು. ನೀನು ಯಾರಿಗೆ ಸೇರಿದವನು? ನೀನು ಎಲ್ಲಿಂದ ಬಂದಿರುವೆ? ಸಹೋದರಾ, ಈ ಸತ್ಯಗಳ ಬಗ್ಗೆ ಆಳವಾಗಿ ಆಲೋಚಿಸು ಎಂದಿದ್ದಾರೆ. ಯಾರಿಗೆ ಯಾರುಂಟು ಎರವಿನ ಸಂಸಾರ ಎಂದಿದ್ದಾರೆ ಪುರಂದರದಾಸರು.

ಅನೇಕ ಭಕ್ತರು ನಡುವೆ ಹಾದಿ ತಪ್ಪಿ, ಅನಂತರ ಪಶ್ಚಾತ್ತಾಪ ಪಟ್ಟು ಮತ್ತೆ ಭಗವಂತನೊಂದಿಗಿನ ಮಿಲನಕ್ಕೆ ಹೆಣಗಾಡುತ್ತಾರೆ. ಇಲ್ಲಿ ನಮಗೆ ಬೇಕಾಗಿರುವುದು ಅರ್ಥವೆಂಬ ಬಯಕೆ. ಏಕೆಂದರೆ ಅರ್ಥ ಎಂದರೆ ಭಗವಂತನೇ ಹೌದು. ಅವನನ್ನು ಅನ್ವೇಷಿಸುವವರು ಅವನನ್ನು ಪಡೆಯುವುದೇ ಅಂತಿಮ ಗುರಿ ಎಂದೆಣಿಸುತ್ತಾರೆ. ಅವರಿಗೆ ಬೇರೇನೂ ಬೇಕಿಲ್ಲ. ನಮ್ಮ ಅನ್ವೇಷಣೆಯ ಆರಂಭದಲ್ಲಿ ನಾವು ಎರಡು ದೋಣಿಗಳಲ್ಲಿ ಕಾಲಿಟ್ಟಿರುತ್ತೇವೆ. ಒಂದು: ಈ ಪ್ರಪಂಚದ ಭೌತಿಕ ವಸ್ತುಗಳು. ಎರಡನೆಯದು ಸಿಹಿಯಾದ ಸಂಗತಿ: ಭಗವಂತನಿಗಾಗಿ ಹುಡುಕಾಟ. ಎಲ್ಲವೂ ಚೆನ್ನಾಗಿದ್ದಾಗ ನಾವು ಪ್ರಾಪಂಚಿಕ ವಿಷಯಗಳಲ್ಲಿ ತೊಡಗಿಸಿಕೊಳ್ಳುತ್ತೇವೆ. ಪ್ರಪಂಚ ನಮಗೆ ಪೆಟ್ಟು ಕೊಟ್ಟಾಗ, ನಮಗೆ ನಿರಾಶೆ ಉಂಟುಮಾಡಿದಾಗ ದೇವರತ್ತ ತಿರುಗಿ ಅಳುತ್ತೇವೆ. "ಯಾಕೆ ನೀನು ನನ್ನನ್ನು ದೂರ ಮಾಡಿದ್ದೀ?" ಎಂದು.

ಪುಟ್ಟ ಹುಡುಗನೊಬ್ಬ ಬಲು ಮೃದುವಾದ ಮನಸ್ಸಿನವನು. ಯಾರೊಂದಿಗೂ ಜಗಳವಾಡಲು ಹೋಗುತ್ತಿರಲಿಲ್ಲ. ಪಾರ್ಕ್‌ಗೆ ಆಡಲು ಹೋದಾಗ ಎಲ್ಲರೂ ಅಲ್ಲಿ ಚೆಂಡಾಡುತ್ತಿರುತ್ತಾರೆ. ಆ ಹುಡುಗನೂ ಅವರೊಂದಿಗೆ ಸೇರಲು ಹೋದಾಗ ಅವನನ್ನು ಬಿಡುತ್ತಿರಲಿಲ್ಲ. ಅವನನ್ನು ರೇಗಿಸಿ, ಗೋಳು ಹುಯ್ದುಕೊಳ್ಳುತ್ತಾರೆ. ಆಗ ಅವನು ಏನು ಮಾಡುತ್ತಾನೆ? ಅಳುತ್ತಾ ಮನೆಗೆ ಬಂದು ಅವನ ಅಮ್ಮನ ಬಳಿ, 'ಅಮ್ಮಾ, ಎಲ್ಲರೂ ಕೆಟ್ಟವರು' ಎಂದು ಕಣ್ಣೀರು ಹಾಕುತ್ತಾನೆ. ಸಮಯ ಸರಿದಂತೆ ಅವನು ಹೊರಗಿನ ಪ್ರಪಂಚಕ್ಕೆ ಹೊಂದಿಕೊಳ್ಳುತ್ತಾನೆ. ಆಗ ಅವನ ತಾಯಿಯನ್ನು, "ನಾನು ಅವರೊಂದಿಗೆ ಆಡುವುದನ್ನು ನೋಡು ಬಾ ಅಮ್ಮಾ" ಎನ್ನುತ್ತಾನೆ. ಈಗ ಇತರ ಹುಡುಗರೊಂದಿಗೆ ಆಡುವಾಗ ಅಮ್ಮ ತಮ್ಮ ಮನೆಯ ಕಿಟಕಿಯಿಂದ ತನ್ನನ್ನು ನೋಡುತ್ತಿದ್ದಾಳಾ ಇಲ್ಲವಾ ಎಂದು ಹಿಂದೆ ತಿರುಗಿ ಆಗಾಗ ನೋಡುತ್ತಿರುತ್ತಾನೆ.

ನಾವೂ ಹಾಗೆಯೇ... ಈ ಘಟ್ಟವನ್ನು ಮುಟ್ಟಬೇಕು. ಏಕೆಂದರೆ ಭಗವಂತನನ್ನು ಹುಡುಕಿ ಅವನನ್ನು ಕಾಣುವುದೇ ನಮ್ಮೆಲ್ಲರ ಅಂತಿಮ ಗುರಿ. ಕೆಲವರು ಲೌಕಿಕ ವಿಷಯಗಳಲ್ಲಿ ಮುಳುಗಿ ಇದನ್ನು ಮರೆಯುತ್ತಾರೆ. ಕೆಲವರು ಮಾತ್ರವೇ ಅವರ ಅನ್ವೇಷಣೆಯನ್ನು ಮುಂದುವರಿಸುತ್ತಾರೆ. ಅವರಿಗೆ ಭಗವಂತನ ದರ್ಶನಕ್ಕಿಂತ ಅವನ ಅನುಭವವು ಮುಖ್ಯವಾಗುತ್ತದೆ.

ನಮ್ಮ ಅಗತ್ಯವೆಂದರೆ ಭಗವಂತ. ಅವನನ್ನು ನಾವು ಹುಡುಕಬೇಕು. ಅವನ ಬಗ್ಗೆ ನಮಗೆ ಏನೂ ಗೊತ್ತಿಲ್ಲದಿದ್ದಾಗ, ಅವನೊಂದಿಗೆ ನಮ್ಮ ಸಂಬಂಧ ಎಂತಹದ್ದೆಂದು ತಿಳಿಯದಿದ್ದಾಗ ಅವನು ನಮ್ಮನ್ನು ಕಾಣದ ಜಾಗದಿಂದ ಕೇವಲ ಸಾಂತ್ವನಗೊಳಿಸುತ್ತಾನೆ.

ಒಮ್ಮೆ ಅವನ ಒಂದು ದರ್ಶನ ಆಗಿಬಿಟ್ಟರೆ ಎಲ್ಲವೂ ನೆರವೇರಿದಂತೆ ಅನ್ನಿಸುತ್ತದೆ; ತೃಪ್ತಿಯಾದಂತೆ ತೋರುತ್ತದೆ; ನಮ್ಮೆಲ್ಲ ಪ್ರಶ್ನೆಗಳಿಗೆ ಉತ್ತರ ಸಿಕ್ಕಿದಂತಾಗುತ್ತದೆ. ಆಗ ನಮಗೆ ಬೇರಾರೂ ಬೇಡ. ಬೇರೇನೂ ಬೇಡ. ಕೇವಲ ಅವನು ಮಾತ್ರ.

ಸಮಸ್ತ ಜನರೂ ಬಯಸುವ ಭಗವಂತ ಅರ್ಥಃ.

**ನಂ. ೮೯, 'ಚಿರಸ್ಮಿತ' ಬಸಪ್ಪ ಬಡಾವಣೆ, ಪಟ್ಟಣಗೆರೆ, ವೇರ್‌ಹೌಸ್ ಹಿಂದೆ, ರಾಜರಾಜೇಶ್ವರಿನಗರ, ಬೆಂಗಳೂರು-೫೬೦ ೦೯೮.**



# ಅಮರನಾರೇಯಣ ಶತಕ

■ ನಿರೂಪಣೆ: ನಾರೇಯಣ ದಾಸ

## ಪದ್ಯ–೧೦೧

**ಕಾರುಣ್ಯಗುರುಡು ತನ ಕರಮು ಶಿರಮುನ ಚೇರ್ಚಿ**
**ಕದಲನಿಯ್ಯಕ ನಿಲಿಪಿ – ಕನುಲು ಮೂಶಿ ।**
**ಲೋಚೂಪು ಗುರಿ ಚೂಪಿ – ಲೋನು ಪದಿಲ ಪರಚಿ**
**ವೆರುವಕುಮನಿ ವಾನಿ – ವೆರಪು ತೀರ್ಚಿ ।**
**ಅಜುಡು ವ್ರಾಸಿನ ವ್ರಾತ ಅಟ್ಟೆ ತುಡಿಚಿವೇಶಿ**
**ಬದುಲು ಚಕ್ಕಗವ್ರಾಶಿ – ಭದ್ರಪರಚಿ ।**
**ಭಾಟ ಚಕ್ಕಗ ತೀಸಿ – ಭಾನುಚಂದ್ರುಲ ಜೂಪಿ**
**ಮನಸು ಸಹಸ್ರಕಮಲ ಮಂಡಲಮು ಚೇರ್ಚಿ ॥**
**ಗಗನ ಜ್ಯೋತಿನಿ ಚೂಪಿನ – ಘನುಡು ಗುರುಡು ।**
**ಇತರ ಗುರುವುಲನೇಕುಲು – ವುಂದುರಿಲನು ।**
**ಅಮರನಾರೇಯಣಾಚ್ಯುತ – ಹರಿ ಮುಕುಂದ ।**
**ಕಲುಷಸಂಹಾರ ಕೈವರಪುರವಿಹಾರಾ ॥101॥**

ಹಿಂದಿನ ಸಂಚಿಕೆಗೇ ಅಮರನಾರೇಯಣ ಶತಕದ 100 ಪದ್ಯಗಳು ಮುಗಿದವು. ಆದರೆ ತಾತಯ್ಯನವರು ಈ ಶತಕದಲ್ಲಿ 110 ಪದ್ಯಗಳನ್ನು ಬರೆದಿದ್ದಾರೆ. ಆದ್ದರಿಂದ ಈ ಶತಕದ ಪದ್ಯಗಳ ವ್ಯಾಖ್ಯಾನ ಇನ್ನೂ ಹತ್ತು ತಿಂಗಳು ಮುಂದುವರಿಯವುದು.


ಈ 101ನೆಯ ಪದ್ಯ ಅದ್ಭುತವಾದುದು. ಇದರಲ್ಲಿ ನಿಜವಾದ ಯೋಗ ಗುರುವಾದವನು ಹೇಗೆ ಯೋಗ ವಿದ್ಯೆಯನ್ನು ಅರಸಿ ಬಂದವನಿಗೆ ಹಂತ ಹಂತವಾಗಿ ಸಹಸ್ರಾರವನ್ನು ತಲಪುವ ದಾರಿಯನ್ನು ತೋರಿಸಿಕೊಡುತ್ತಾನೆ ಎಂಬುದನ್ನು ಚಿಕ್ಕದಾಗಿ, ಚೊಕ್ಕವಾಗಿ ಮತ್ತು ನಿಖರವಾಗಿ ವಿವರಿಸಿದ್ದಾರೆ. ಇಲ್ಲಿ ಈ ರೀತಿಯಲ್ಲಿ ಅವರು ವಿವರಿಸುವುದನ್ನು ನೋಡಿದಾಗ ಅವರು ಪರಿಪೂರ್ಣ ಯೋಗ ಸಿದ್ಧಿಯನ್ನು ಪಡೆದ ಗುರುವಾಗಿದ್ದರೆಂಬುದು ಮತ್ತೊಮ್ಮೆ ರುಜುವಾತಾಗುತ್ತದೆ.

**ಕಾರುಣ್ಯಗುರುಡು ತನ ಕರಮು ಶಿರಮುನ ಚೇರ್ಚಿ**
**ಕದಲನಿಯ್ಯಕ ನಿಲಿಪಿ – ಕನುಲು ಮೂಶಿ ।**
**ಲೋಚೂಪು ಗುರಿ ಚೂಪಿ – ಲೋನು ಪದಿಲ ಪರಚಿ**
**ವೆರುವಕುಮನಿ ವಾನಿ – ವೆರಪು ತೀರ್ಚಿ ।**

ಭಾರತೀಯ ಯೋಗ ಶಾಸ್ತ್ರದಲ್ಲಿ ಒಂದು ಮಹತ್ತ್ವದ ಅಂಗವಾಗಿರುವ ತಂತ್ರ ಶಾಸ್ತ್ರದ ಸಿದ್ಧಿ ಪುರುಷರಾದ ತಾಂತ್ರಿಕ ಗುರುಗಳ ನೆನಪನ್ನು ತರುವಂಥವು ಮೇಲಿನ ನಾಲ್ಕು ಸಾಲುಗಳು. ಅಷ್ಟೇ ಅಲ್ಲದೇ ಈ ಇಡೀ ಪದ್ಯವು ತಾಂತ್ರಿಕ ಗುರುಗಳ ಪದ್ಧತಿಯನ್ನು ವಿವರಿಸುವಂತಿದೆ. ತಂತ್ರ ಶಾಸ್ತ್ರದ ಗುರುವು ಅತ್ಯಂತ ಹೆಚ್ಚಿನ ಸಾಧನೆಯನ್ನು ಮಾಡಿ ಆ ಶಾಸ್ತ್ರದ ಸರ್ವಸ್ವವನ್ನೂ ಸಿದ್ಧಿಸಿಕೊಂಡಿರುವವನು. ಆ ಸಿದ್ಧಿಯ ಕಾರಣ ಯೋಗ ವಿದ್ಯೆಯನ್ನು ಅರಸಿ ಬಂದ ಶಿಷ್ಯನನ್ನು ಸ್ಪರ್ಶ ಮಾತ್ರದಿಂದಲೇ ಅದ್ಭುತ

### ತಾತಯ್ಯನವರ ದಾರಿದೀಪ

ಆರಂಭದಲ್ಲಿ ಶಿಷ್ಯನಿಗೆ ಧ್ಯಾನದಲ್ಲಿ ಏಕಾಗ್ರತೆ ಸಾಧನೆಯಾಗುವುದಿಲ್ಲ. ಹೊಸದಾಗಿ ಯೋಗ ಮಾರ್ಗ ಪಥಿಕನಾಗಿರುವುದರಿಂದ ಅವನ ಚಿತ್ತ ಚಂಚಲಮುಯವಾಗಿರುತ್ತದೆ. ಮನಸ್ಸು ಲಗಾಮಿಲ್ಲದ ಹುಚ್ಚು ಕುದುರೆಯಂತೆ, ರೆಂಬೆಯಿಂದ ರೆಂಬೆಗೆ ಹಾರುವ ಕಪಿಯಂತೆ ಅಸ್ಥಿರವಾಗಿರುತ್ತದೆ. ಅಂಥ ಶಿಷ್ಯನ ಶಿರದ ಮೇಲೆ ಗುರು  ತನ್ನ ಅಭಯ ಹಸ್ತವನ್ನಿರಿಸುತ್ತಾನೆ. ಆಗ ಶಿಷ್ಯನ ಶರೀರದಲ್ಲಿ ಅಲೌಕಿಕವಾದ ಅನುಭವವಾಗುತ್ತದೆ. ಗುರು ಹಸ್ತದಿಂದ ಶಿಷ್ಯನ ದೇಹದೊಳಕ್ಕೆ ಪ್ರವೇಶಿಸುವ ದಿವ್ಯಶಕ್ತಿಯ ಕಾರಣ ಅವನ ಮನಸ್ಸಿನ ಚಾಂಚಲ್ಯ ದೂರವಾಗಿ ಶರೀರವೂ ಶಾಂತಗೊಳ್ಳುತ್ತದೆ. ನಿಶ್ಚಲಗೊಳ್ಳುತ್ತದೆ. ಅವನು  ಈ ಸ್ಥಿತಿಯನ್ನು ಗುರುತಿಸಿ ಖಚಿತಪಡಿಸಿಕೊಂಡ ಗುರುದೇವನು ಮುಂದಿನ ಹಂತಕ್ಕೆ ಹೋಗುತ್ತಾನೆ.



ಅನುಭವವನ್ನು ನೀಡುವ ತಪಶ್ಶಕ್ತಿಯನ್ನು ಹೊಂದಿರುತ್ತಾನೆ. ದಕ್ಷಿಣೇಶ್ವರದ ಶ್ರಿ ರಾಮಕೃಷ್ಣ ಪರಮಹಂಸರು ಸಿದ್ಧಿಪುರುಷರು, ಅವಧೂತಾವಸ್ಥೆಯನ್ನು ತಲಪಿದ್ದ ಅನುಭಾವಿ. ನರೇಂದ್ರ, ಆನಂತರ ಸ್ವಾಮಿ ವಿವೇಕಾನಂದ, ಅವರ ಬಳಿಗೆ ಬಂದಾಗ ಅವರು ಅವನನ್ನು ಸ್ಪರ್ಶಿಸಿ ಅವನ ಮೊದಲ ಭೇಟಿಯಲ್ಲೇ ಅಪೂರ್ವ ಅಲೌಕಿಕ ಅನುಭೂತಿಯನ್ನು ಪಡೆಯುವಂತೆ ಮಾಡಿದ ಘಟನೆ ವಿವೇಕಾನಂದರ ಜೀವನ ಚರಿತ್ರೆಗಳಲ್ಲಿ ಉಲ್ಲೇಖವಾಗಿದೆ.

ಅಂತೆಯೇ ಶಿಷ್ಯನಾಗಿ ಬಂದವನ ಎಲ್ಲ ಹೊಣೆಗಾರಿಕೆಯನ್ನು ಹೊತ್ತವನು ನಿಜ ಗುರುವಾಗಿರುತ್ತಾನೆ. ನಿಜವಾದ ಗುರುವನ್ನು ಮತ್ತು ತೋರಿಕೆಯ ಗುರುಗಳನ್ನು ಕುರಿತು ತಾತಯ್ಯನವರು ತಮ್ಮ ಸಾಹಿತ್ಯದಲ್ಲಿ ಸಾಕಷ್ಟು ಸ್ಥಳಗಳಲ್ಲಿ ಯಥೇಚ್ಛವಾಗಿ ಉಲ್ಲೇಖ ಮಾಡಿರುವುದನ್ನು ಕಂಡರೆ ಭಾರತೀಯ ಸಂದರ್ಭದಲ್ಲಿ ಗುರುವಿನ ಮಹತ್ವಕ್ಕೆ ಬೆಲೆ ನೀಡಿರುವುದು ವೇದ್ಯವಾಗುತ್ತದೆ. ಈ ಪದ್ಯದಲ್ಲಿ ತಾತಯ್ಯನವರು ತಾನೇ ಶಿಷ್ಯನಿಗೆ 'ಸಹಸ್ರ ಕಮಲ ಮಂಡಲ'ಕ್ಕೆ ಸೇರಿಸುವ ದಾರಿಯನ್ನು ವಿವರಿಸುತ್ತಾನೆ.

ಇಲ್ಲಿ ಗುರುವನ್ನು ಕರುಣಾಮಯಿ ಎಂದು ಹೆಸರಿಸಿದ್ದಾರೆ. ಶಿಷ್ಯನ ಮೇಲೆ ಕರುಣೆ ಇದ್ದರೇನೇ ಅವನನ್ನು ಪ್ರೀತಿಯಿಂದ ಕಂಡು ಯೋಗ್ಯ ಸಾಧಕನನ್ನಾಗಿ ರೂಪುಗೊಳಿಸುವುದು ಸಾಧ್ಯ. ಶಿಷ್ಯನೂ ಗುರು ಕಾರುಣ್ಯವನ್ನು ಗಳಿಸಿಕೊಳ್ಳಬೇಕು. ಹೀಗೆ ಕರುಣಾಮಯಿ ಗುರುವಿನ ಒಲವನ್ನು ಗುರು ಕಾರುಣ್ಯವನ್ನು ಸಂಪಾದಿಸಲು ಶಿಷ್ಯನೂ ಸಹ ಪ್ರಯತ್ನಿಸಬೇಕು. ಗುರುವಿಗೆ ಅವನು ಸಂಪೂರ್ಣ ಶರಣಾಗತನಾದಾಗ ಮಾತ್ರ ಅದು ಸಾಧ್ಯ.

ಆರಂಭದಲ್ಲಿ ಶಿಷ್ಯನಿಗೆ ಧ್ಯಾನದಲ್ಲಿ ಏಕಾಗ್ರತೆ ಸಾಧನೆಯಾಗುವುದಿಲ್ಲ. ಹೊಸದಾಗಿ ಯೋಗ ಮಾರ್ಗ ಪಥಿಕನಾಗಿರುವುದರಿಂದ ಅವನ ಚಿತ್ತ ಚಂಚಲಮಯವಾಗಿರುತ್ತದೆ. ಮನಸ್ಸು ಲಗಾಮಿಲ್ಲದ ಹುಚ್ಚು ಕುದುರೆಯಂತೆ, ರೆಂಬೆಯಿಂದ ರೆಂಬೆಗೆ ಹಾರುವ ಕಪಿಯಂತೆ ಅಸ್ಥಿರವಾಗಿರುತ್ತದೆ. ಅಂಥ ಶಿಷ್ಯನ ಶಿರದ ಮೇಲೆ ಗುರು ತನ್ನ ಅಭಯ ಹಸ್ತವನ್ನಿರಿಸುತ್ತಾನೆ. ಆಗ ಶಿಷ್ಯನ ಶರೀರದಲ್ಲಿ ಅಲೌಕಿಕವಾದ ಅನುಭವವಾಗುತ್ತದೆ. ಗುರು ಹಸ್ತದಿಂದ ಶಿಷ್ಯನ ದೇಹದೊಳಕ್ಕೆ ಪ್ರವೇಶಿಸುವ ದಿವ್ಯಶಕ್ತಿಯ ಕಾರಣ ಅವನ ಮನಸ್ಸಿನ ಚಾಂಚಲ್ಯ ದೂರವಾಗಿ ಶರೀರವೂ ಶಾಂತಗೊಳ್ಳುತ್ತದೆ. ನಿಶ್ಚಲಗೊಳ್ಳುತ್ತದೆ. ಅವನು ಈ ಸ್ಥಿತಿಯನ್ನು ಗುರುತಿಸಿ ಖಚಿತಪಡಿಸಿಕೊಂಡ ಗುರುದೇವನು ಮುಂದಿನ ಹಂತಕ್ಕೆ ಹೋಗುತ್ತಾನೆ.

ಮುಂದಿನ ಹಂತ ಶಿಷ್ಯನಿಗೆ ಒಳನೋಟವನ್ನು ಕಲಿಸುವುದು. ಒಳನೋಟವೆಂದರೆ ಹೊರ ಪ್ರಪಂಚವನ್ನು ಮರೆತು ಅಂತರ್ಮುಖಿಯಾಗುವುದು. ಅದಕ್ಕೆ ಆವಶ್ಯಕವಾದ ಧ್ಯಾನ ಮಂತ್ರವನ್ನು ಮೊದಲೇ ಬೋಧಿಸಿರುವ ಗುರುವು ಹೊರನೋಟವನ್ನು ಅಂತ್ಯಗೊಳಿಸಿ ಒಳನೋಟದ ಬಾಗಿಲು ತೆರೆಯಲು ಕಣ್ಣು ಮುಚ್ಚಿ ನಿಶ್ಚಲನಾಗಿ ಕುಳಿತು ಧ್ಯಾನ ಮಾಡುವ ಯೋಗ ರಹಸ್ಯವನ್ನು ತಿಳಿಸಿ ಶಿಷ್ಯನು ಆ ನಿಟ್ಟಿನಲ್ಲಿ ಎಷ್ಟು ಪ್ರಗತಿ ಸಾಧಿಸಿದ್ದಾನೆಂಬುದನ್ನು ಅವನನ್ನು ಪ್ರಶ್ನಿಸಿ, ಪರೀಕ್ಷಿಸಿ ಅರಿತುಕೊಳ್ಳುತ್ತೇನೆ.

ಪ್ರಾಣಾಯಾಮ ಮುಂತಾದ ಹಲವು ಪ್ರಕ್ರಿಯೆಗಳಿಂದ ಧ್ಯಾನ ಮಾರ್ಗದ ಮೂಲಕ ಅಂತರ್ದೃಷ್ಟಿಯನ್ನು ಗಳಿಸಬಹುದು. ಆದರೆ ಅಂತರ್ಶುದ್ಧಿಯನ್ನು ಸಾಧಿಸುವುದು ಸವಾಲಿನ ಕೆಲಸ. ಈ ಶುದ್ಧೀಕರಣದ ಕೆಲಸ ಸುಲಭ ಸಾಧ್ಯವಲ್ಲ. ಕಾರಣ ಮನಸ್ಸಿನ ತುಂಬ ವಿಷಯ ವಾಸನೆ, ಲೋ ಕೈಷಣ, ವಿತ್ತೈಷಣ, ಸ್ತ್ರೀ ಏಷಣಗಳಾದ ಏಷಣತ್ರಯ ಪಾಶಗಳು, ಕಾಮ ಕ್ರೋಧಾದಿ ಅರಿಷಡ್ವರ್ಗಗಳಿಂದ ಕಲಷಿತಗೊಂಡಿರುತ್ತದೆ. ಮನಸ್ಸೇ ಇಹ ಬಂಧನಗಳಿಗೂ ಪಾರಲೌಕಿಕ ಮೋಕ್ಷ ಸಾಧನೆಗೂ ಕಾರಣ ಎಂಬ ಮಾತಿನಿಂದ ಇದು ಸ್ಪಷ್ಟಗೊಳ್ಳುತ್ತದೆ. ಆ ಸಂಸ್ಕೃತ ವಾಕ್ಯ ಹೀಗಿದೆ: 'ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ.'

ಶಿಷ್ಯನ ಅರ್ಹತೆಯನ್ನು ಪರೀಕ್ಷಿಸಿ ಅವನು ಮುಂದಿನ ಹೆಜ್ಜೆಗೆ ಯೋಗ್ಯನೆಂದು ತೀರ್ಮಾನಿಸಿದ ಬಳಿಕ ತನಗೆ ಮಾತ್ರ ತಿಳಿದಿರುವ ಶುದ್ಧೀಕರಣ ರಹಸ್ಯವನ್ನು ಬಳಸಿ ಶಿಷ್ಯನಿಗೆ ಶಿಕ್ಷಣ ನೀಡುತ್ತಾನೆ. ಆ ಹಂತದಲ್ಲಿ ಶಿಷ್ಯನು ನಿರಾಶನಾಗುವುದೂ ಭಯಪಡುವುದೂ ಸಾಧನೆಯನ್ನು ಕೈಬಿಡಲು ಯೋಚಿಸುವುದೂ ಬಹು ಸಹಜ. ಆಗ ತನ್ನ ವಿವೇಕದ ಮಾತುಗಳಿಂದ ಶಿಷ್ಯನ ಕೈಹಿಡಿದುಕೊಂಡು ಮುಂದಕ್ಕೆ ಕರೆದೊಯ್ಯುತ್ತಾನೆ. ಅಧೈರ್ಯದಿಂದ ಹಿಂಜರಿಯುತ್ತಿದ್ದ ಶಿಷ್ಯನಿಗೆ ಅವನು ಈ ಮಾರ್ಗದಲ್ಲಿಯೇ ಸಾಕ್ಷಾತ್ಕಾರ ಪಡೆಯುತ್ತಾನೆ ಎಂದು ಆತ್ಮವಿಶ್ವಾಸವನ್ನು ತುಂಬುತ್ತಾನೆ. ಹೆದರಿಕೆಯನ್ನು ನಿವಾರಿಸುತ್ತಾನೆ.

**ಅಜುಡು ವ್ರಾಸಿನ ವ್ರಾತ ಅಟ್ಟೆ ತುಡಿಚಿವೇಶಿ**
**ಬದುಲು ಚಕ್ಕಗವ್ರಾಶಿ – ಭದ್ರಪರಚಿ ।**
**ಬಾಟ ಚಕ್ಕಗ ತೀಸಿ – ಭಾನುಚಂದ್ರುಲ ಜೂಪಿ**
**ಮನಸು ಸಹಸ್ರಕಮಲ ಮಂಡಲಮು ಚೇರ್ಚೆ ॥**

ಇದೊಂದು ಗುರುವಿನ ಅದ್ಭುತ ಶಕ್ತಿಯ ಮಹಿಮೆಯನ್ನು ತಿಳಿಸುವ ವಿಚಾರವಿರುವ ಭಾಗ. ಜೀವಿಗಳು ಜನಿಸುವಾಗಲೇ ಬ್ರಹ್ಮನ ಬರಹವನ್ನು ಹೊತ್ತು ಬರುತ್ತಾರೆ ಎಂಬುದು ಸಾಮಾನ್ಯ ನಂಬಿಕೆ. ಯೋಗ ಸಿದ್ಧಿಯನ್ನು ಸಾಧಿಸಿರುವ ಗುರುವು ಬ್ರಹ್ಮನ ಬರೆಹವನ್ನೂ ಅಳಿಸಬಲ್ಲ ಸಾಮರ್ಥ್ಯಸಂಪನ್ನನೆಂದು

▶▶ 21ನೇ ಪುಟಕ್ಕೆ

**ಬ್ಯಾಂಕ್ ಮೂಲಕ ಚಂದಾ ಹಣ ಸಲ್ಲಿಸಲು ಇಚ್ಛಿಸುವವರು ಈ ಎಸ್‌ಬಿ ಅಕೌಂಟ್‌ಗೆ ಕಳುಹಿಸಬಹುದು**

For Subscription - Bank Transfer / RTGS
**Sri Yogi Nareyana Study Centre**
**SB A/c No. 141201011016824**
MSRIT Branch,
**VIJAYA BANK,** Bangalore 560 054
**IFSC Code: VIJB0001412**
**MICR Code: 560029070**
After Transfer please inform to below mentioned Mobile No. 94480 85975





**ಯೋಗ ವಾಸಿಷ್ಠ ಒಂದು ಮಹಾನ್ ಅಧ್ಯಾತ್ಮ ಗ್ರಂಥ. ಬೃಹತ್ತಾದುದು ಕೂಡ. ವಸಿಷ್ಠರು ಹಾಗೂ ಶ್ರೀರಾಮನ ನಡುವಿನ ಸಂಭಾಷಣೆಯ ರೂಪದಲ್ಲಿರುವ ಈ ಗ್ರಂಥ ಅಧ್ಯಾತ್ಮ ವಿದ್ಯೆಯ ಪಠ್ಯಪುಸ್ತಕದಂತಿದೆ. ಬಹು ಪ್ರಾಚೀನವಾದ ಈ ಗ್ರಂಥದ ವೈಶಿಷ್ಟ್ಯವಿರುವುದೇ ಗಹನವಾದ ವಿಚಾರವನ್ನು ತಿಳಿಸಲು ಉಪಕಥೆಗಳನ್ನು ಬಳಸಿಕೊಂಡಿರುವುದು. ವಿದುಷಿ ನಂ. ನಾಗಲಕ್ಷ್ಮಿಯವರು ಸರಳ ಭಾಷೆಯಲ್ಲಿ ಅದರಲ್ಲಿನ ಕಥೆಗಳನ್ನು 'ಮಲ್ಲಾರ' ಓದುಗರಿಗಾಗಿ ಪ್ರತಿ ಸಂಚಿಕೆಯಲ್ಲೂ ಪ್ರಸ್ತುತಪಡಿಸುತ್ತಾರೆ.**



# ಪಾವನ ಬೋಧನ


ಹಿಮಾಲಯ ಪರ್ವತ ಪ್ರದೇಶದಲ್ಲಿನ ಅನೇಕ ಪರ್ವತಗಳಲ್ಲಿ ಸುಂದರವಾದ ಮಹೇಂದ್ರ ಪರ್ವತವೂ ಒಂದು. ಅಲ್ಲಿ ಕಲ್ಪವೃಕ್ಷಗಳು ಅಪಾರ ಸಂಖ್ಯೆಯಲ್ಲಿ ಬೆಳೆದು ವನವನ್ನೇ ನಿರ್ಮಾಣ ಮಾಡಿದ್ದುವು. ಅವುಗಳ ನೆರಳಿನಲ್ಲಿ ಹಲವಾರು ಮುನಿಗಳು ನೆಲೆಸಿದ್ದು ಅವರು ನಡೆಸುತ್ತಿದ್ದ ತಪಸ್ಸಿನ ಚಟುವಟಿಕೆಗಳಿಂದ ಆ ಪ್ರದೇಶವು ಒಂದು ದೇವತಾ ಪ್ರದೇಶದಂತೆ ಪುಣ್ಯಭೂಮಿಯೆನಿಸಿಕೊಂಡಿತ್ತು. ಪರ್ವತದ ಎತ್ತರವಾದ ಶಿಖರಗಳು ಆಕಾಶವನ್ನೂ ಭೇದಿಸಿಕೊಂಡು ಹೋದಂತೆ ಭಾಸವಾಗುತ್ತಿತ್ತು. ಪರ್ವತದ ಶಿಖರಾಗ್ರಗಳಲ್ಲಿ ನೀರು ತುಂಬಿದ ಮೋಡಗಳು ಮಿಂಚುಗಳನ್ನು ಹೊಮ್ಮಿಸುತ್ತಿದ್ದರೆ, ಆ ಪರ್ವತವು ತನ್ನ ಮುಡಿಯ ತುಂಬ ಹೂಗಳನ್ನು ಮುಡಿದಿರುವಂತೆಯೇ ಕಾಣುತ್ತಿತ್ತು. ಆ ಪರ್ವತದ ಪ್ರದೇಶದಲ್ಲಿ ವಾಸಿಸುತ್ತಿದ್ದ ಮಹರ್ಷಿಗಳು ತಮ್ಮ ಸ್ನಾನ ಪಾನಾದಿಗಳಿಗಾಗಿ ಆಕಾಶ ಗಂಗೆಯನ್ನೇ ಬರಮಾಡಿಕೊಂಡಿದ್ದರು.

ಇಂತಹ ಪುಣ್ಯಭೂಮಿಯಲ್ಲಿ ತನ್ನ ತಪೋಬಲದಿಂದ ಪಡೆದ ಆತ್ಮಜ್ಞಾನದ ಫಲವಾಗಿ ವಿವೇಕ ಸಂಪನ್ನನೂ ಮಹಿಮಾವಂತನೂ ಆದ "ದೀರ್ಘತಪಾ" ಎಂಬ ಮುನೀಂದ್ರನಿದ್ದನು. ಆ ಮುನೀಂದ್ರನಿಗೆ ಇಬ್ಬರು ಮಕ್ಕಳಿದ್ದರು. ಪುಣ್ಯ ಮತ್ತು ಪಾವನ ಎಂಬ ಹೆಸರಿನ ಆ ಪುತ್ರರು ಮತ್ತು ಪತ್ನಿಯೊಂದಿಗೆ ಮುನಿಯು ಅಲ್ಲಿ ವಾಸ ಮಾಡಿಕೊಂಡಿದ್ದನು. ಕಾಲ ಸರಿಯುತ್ತಿದ್ದಂತೆ ಆ ಇಬ್ಬರು ಮಕ್ಕಳಲ್ಲಿ ಜ್ಯೇಷ್ಠ ಪುತ್ರನಾದ ಪುಣ್ಯನು ತಂದೆಯಂತೆ ಜ್ಞಾನಸಂಪನ್ನನಾಗಿ ಪ್ರಬುದ್ಧನೆನಿಸಿಕೊಂಡನು. ದ್ವಿತೀಯ ಪುತ್ರನಾದ ಪಾವನನು ಮಾತ್ರ ಅರ್ಧಪ್ರಬುದ್ಧನಾಗಿ ಹಾಗೂ ಹೀಗೂ ಅಲೆಯುತ್ತಿದ್ದನು.

ಇತ್ತ ಮುನೀಂದ್ರನಾದ ದೀರ್ಘತಪನಿಗೆ ನೂರು ವರ್ಷಗಳು ತುಂಬಿದುವು. ಅವನ ದೇಹವು ಜೀರ್ಣವಾಗತೊಡಗಿತು. ಹೀಗೆ ಮುಪ್ಪಿಗೆ ಬಲಿಯಾಗಿ, ಕ್ಷಣ ಕ್ಷಣವೂ ಲೌಕಿಕ ವ್ಯಾಪಾರಗಳಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತ ಒಂದು ದಿನ ಅಲ್ಲಿನ ಗುಹೆಯೊಂದರಲ್ಲಿ ತನ್ನ ದೇಹವನ್ನು ತ್ಯಜಿಸಿಬಿಟ್ಟನು. ಪುಷ್ಪದ ಪರಿಮಳವು ಆಕಾಶವನ್ನು ಸೇರುವಂತೆ ಅವನು ಪರಮಪದವನ್ನು ಹೊಂದಿದನು. ಆತನ ಪತ್ನಿಯು ಹಾಗೆ ನಾಳವಿಲ್ಲದ ಕಮಲದಂತೆ ಭೂಮಿಯಲ್ಲಿ ಬಿದ್ದುಹೋಗಿದ್ದ ಗಂಡನ ದೇಹವನ್ನು ನೋಡಿ, ತನ್ನ ಪತಿಯು ತನಗೆ ಉಪದೇಶಿಸಿದ್ದ, ದೀರ್ಘಕಾಲದಿಂದ ತನಗೆ ಅಭ್ಯಾಸವಾಗಿದ್ದ ಯೋಗ ಸಾಧನವನ್ನು ಆಶ್ರಯಿಸಿ ತನ್ನ ದೇಹವನ್ನೂ ತ್ಯಾಗ ಮಾಡಿದಳು.

ಹೀಗೆ ತಂದೆ ತಾಯಿ ಹೋದಮೇಲೆ ಅವರಿಗೆ ಮಾಡಬೇಕಾದ ಕರ್ಮಗಳಲ್ಲಿ ಜ್ಞಾನಸಂಪನ್ನನಾದ ಪುಣ್ಯನು ಯಾವ ಕ್ಷೋಭೆಯೂ ಇಲ್ಲದೆ ನಿರ್ವಿಕಾರಚಿತ್ತದಿಂದಿದ್ದನು. ಆದರೆ ಅರೆಪ್ರಬುದ್ಧನಾಗಿದ್ದ ಪಾವನನು ಮಾತ್ರ ಅಣ್ಣನಂತೆ ಸ್ಥಿರಚಿತ್ತನಾಗಿರಲು ಸಾಧ್ಯವಾಗದ್ದರಿಂದ ದುಃಖಪೀಡಿತನಾಗಿಯೇ ಇದ್ದನು. ಅರಣ್ಯ ಪ್ರದೇಶಗಳಲ್ಲಿ ದಿಕ್ಕು ತೋಚದವನಂತೆ ಅಲೆಯುತ್ತಾ ಅಣ್ಣನಾದ ಪುಣ್ಯನು ಹೇಗಿರುವನು ಎಂಬುದನ್ನೂ ಅರಿಯುವ ಪ್ರಯತ್ನ ಮಾಡದೆ ದುಃಖಿಸುತ್ತಿದ್ದನು.

ಧೀರಮನಸ್ಕನಾದ ಪುಣ್ಯನು ತಾಯಿ ತಂದೆಗೆ ಮಕ್ಕಳು ಮಾಡಬೇಕಾದ ಅಪರಕರ್ಮಗಳನ್ನೆಲ್ಲ ಮಾಡಿ ಮುಗಿಸಿ, ಅರಣ್ಯದಲ್ಲಿ ಅಲೆಯುತ್ತ, ಅತ್ತು ಗೋಳಾಡುತ್ತಿದ್ದ ತಮ್ಮನಾದ ಪಾವನನನ್ನು ನೋಡಲು ಹೊರಟನು. ಹಲವಾರು ಕಡೆಗಳಲ್ಲಿ ಅರಸುತ್ತ ಕಡೆಗೆ ತಮ್ಮನನ್ನು ಕಂಡು ಅವನ ದುಃಖವನ್ನು ಅರಿತು ತನ್ನ ವಿವೇಚನೆಯ ಮಾತುಗಳ ಮೂಲಕ ಸಾಂತ್ವನವನ್ನು ಹೇಳತೊಡಗಿದನು.



"ತಮ್ಮ ಇದೇನು? ಮೋಹಕ್ಕೆ ಕಾರಣವಾಗುವ ಶೋಕವನ್ನು ಇಷ್ಟು ಬೆಳೆಸುತ್ತಿರುವಿಯಲ್ಲ? ನೀನು ಚೆನ್ನಾಗಿ ತಿಳಿದವನಲ್ಲವೆ? ನಿನ್ನ ತಂದೆಯು ತಾಯಿಯೊಡನೆ ತನ್ನ ಸ್ಥಾನಮಾನ ಮೋಕ್ಷವೆಂಬ ಪರಮಪದವನ್ನು ಹೊಂದಿದ್ದಾನೆ. ಹೀಗೆ ಎಲ್ಲ ಆನಂದಕ್ಕೂ ಮೀರಿದ ಹಂತವನ್ನು ತಲಪಿದವರನ್ನು ಕುರಿತು ಅವರ ಬಂಧುಗಳು ಸಂತೋಷಪಡಬೇಕಲ್ಲದೆ ದುಃಖಪಡಬೇಕಾಗಿಲ್ಲ. ಆ ಮೋಕ್ಷಪದವು ಎಲ್ಲ ಜೀವಿಗಳಿಗೂ ಸ್ವಸ್ಥಾನವಾಗಿರುತ್ತದೆ. ಬ್ರಹ್ಮಜ್ಞಾನಿಗಳು ಪಡೆಯುವ ರೂಪವೇ ಅದು. ಹೀಗೆ ತಮ್ಮ ಮೂಲ ಭಾವವನ್ನು ಹೊಂದಿದ ತಂದೆಯನ್ನು ಕುರಿತು ನೀನು ಶೋಕಪಡುವುದೇ? ನಿನ್ನ ಈ ಭಾವನೆಯು ವ್ಯಾಮೋಹದಿಂದ ಹುಟ್ಟಿದ್ದಾಗಿದೆ. ನಿಜವಾಗಿ ನೋಡಿದರೆ ಕಾಲವಾದವರು ನಿನ್ನ ತಾಯಿಯೂ ಅಲ್ಲ, ತಂದೆಯೂ ಅಲ್ಲ. ನೀನೂ ಕೂಡ ಅವರ ಮಗನಲ್ಲ. ಏಕೆಂದರೆ, ಅವರಿಗೆ ಮಕ್ಕಳು ನಾವಿಬ್ಬರೇ ಅಲ್ಲ, ಎಷ್ಟೋ ಮಂದಿ ಲೆಕ್ಕವಿಲ್ಲದಷ್ಟು ಮಕ್ಕಳು,

**ಮಾತಾಪಿತೃಸಹಸ್ರಾಣಿ ಸಮತೀತಾನಿ ತೇ ಸುತ ।**
**ಬಹೂನ್ಯಂಬುಪ್ರವಾಹಸ್ಯ ನಿಮ್ನಾನೀವ ವನೇ ವನೇ**

॥

ವನದಲ್ಲಿ ಹರಿಯುವ ನೀರಿನಲ್ಲಿ ಎಷ್ಟೋ ಹಳ್ಳಗಳು ಇರುವಂತೆ, ನಿನಗೆ ಎಷ್ಟೋ ಸಾವಿರ ತಾಯಿ ತಂದೆಗಳಾಗಿರುವರು.

**ಅಸಂಖ್ಯಪುತ್ರಯೋರ್ನೈವ ಭವಾನೇವ ಸುತಸ್ತಯೋ ।**
**ಸರಿತ್ತರಂಗವತ್ಪುತ್ರ ಗತಾಃ ಪುತ್ರಗಣಾ ನೃಣಾಂ ॥**

ಹಾಗೆಯೇ ಅವರಿಗೂ ನೀನು ಒಬ್ಬನೇ ಮಗನಲ್ಲ. ಅವರಿಗೆ ಹರಿಯುವ ನೀರಿನಲ್ಲಿ ಹುಟ್ಟುವ ಅಲೆಗಳ ಹಾಗೆ ಲೆಕ್ಕವಿಲ್ಲದಷ್ಟು ಮಂದಿ ಮಕ್ಕಳಾಗಿರುವರು.

ಮಹಾವೃಕ್ಷದಲ್ಲಿ ಋತುಕಾಲವು ಬಂದಾಗಲೆಲ್ಲ ಫಲಗಳು ಆಗಿಹೋಗುವಂತೆ, ಜಂತು ಜಂತುವಿಗೂ ಜನ್ಮಜನ್ಮಕ್ಕೂ ಮಿತ್ರ, ಬಾಂಧವರ ಬಳಗಗಳು ಆಗುತ್ತಲೇ, ಹೋಗುತ್ತಲೇ ಇರುತ್ತವೆ; ತಾಯಿ, ತಂದೆ, ಮಕ್ಕಳು ಮೊದಲಾದವರನ್ನು ಕುರಿತು ವ್ಯಾಮೋಹ ಹೊಂದಿ ಅಳಲೇಬೇಕು ಎನ್ನುವುದಾದರೆ, ಜನ್ಮಜನ್ಮಾಂತರಗಳಲ್ಲಿ ಆಗಿ ಹೋದವರನ್ನೆಲ್ಲ ಕುರಿತು ಏಕೆ ಅಳುವುದಿಲ್ಲ? ಜಗತ್ತು ಸತ್ಯವೆಂಬ ಭ್ರಾಂತಿಯುಂಟಾದಾಗ ಮಾತ್ರ ಈ ಮಾತಾ ಪಿತೃ ಪ್ರಪಂಚವು ಕಾಣುತ್ತದೆ. ಪರಮಾರ್ಥಭಾವ ಹೊಂದಿದರೆ ಬಂಧುವಿಲ್ಲ, ಬಾಂಧವರಿಲ್ಲ, ಮಿತ್ರರೂ ಇರುವುದಿಲ್ಲ. ಅಂದರೆ ಆ ಪರಮಾರ್ಥ ದೃಷ್ಟಿಯಿಂದ ನಾಶವೆಂಬುದು ಇಲ್ಲವೇ ಇಲ್ಲ. ಮರುಭೂಮಿಗಳು ಎಷ್ಟು ಕಾಲ ಬಿಸಿಲಿನಲ್ಲಿ ಬೆಂದರೂ ಅಲ್ಲಿ ಕಿಂಚಿತ್ತಾದರೂ ನೀರು ಬರುತ್ತದೆಯೆ? ಅದರಿಂದ, ವಿಚಾರ ಮಾಡಿ ನೋಡಿದರೆ ಇದೆಲ್ಲವೂ ಮಿಥ್ಯೆ, ನೀನೂ ಇಲ್ಲ, ನಾನೂ ಇಲ್ಲ, ಹೃದಯದಲ್ಲಿ ಮೂಡಿರುವ ಈ ಭ್ರಾಂತಿಯನ್ನು ಕಳೆದುಬಿಡು.

ಈ ಪ್ರಪಂಚವು ಬಂಧು, ಮಿತ್ರ, ಸುತ ಇವರುಗಳ ಮೇಲಿನ ಸ್ನೇಹ, ದ್ವೇಷ, ಮೋಹ, ಇವುಗಳಿಂದ ತುಂಬಿಹೋಗಿದೆ. ಇಲ್ಲಿ ಸುಖ, ದುಃಖ ಮುಂತಾದ ಭಾವನೆಗಳೆಲ್ಲವೂ ನಮ್ಮ ನಮ್ಮ ಮನಸ್ಸಿನಿಂದಲೇ ಕಲ್ಪಿತವಾದವು. ಅದೇ ರೀತಿಯಲ್ಲಿ ಶತ್ರು-ಮಿತ್ರ ಭಾವವೂ ಕೂಡ ಅವರವರ ಭಾವನೆಗಳಿಗೆ ಅನುಸಾರವಾಗಿರುವುದು. ಆದರೆ, ಎಲ್ಲೆಲ್ಲಿಯೂ ತಾನೇ ತಾನಾಗಿ ತುಂಬಿಕೊಂಡಿರುವ ಆತ್ಮನಿಗೆ ಇವನು ಬಂಧು, ಇವನು ಬಂಧುವಲ್ಲ ಎಂಬ ಭೇದವೇ ಇರುವುದಿಲ್ಲ. ಬಂಧುವೆಂದು ಭಾವಿಸಿದರೆ ಬಂಧುವಾಗುವನು. ಬೇರೆಯವನು ಎಂದುಕೊಂಡರೆ ಬೇರೆಯವನೇ ಆಗುವನು. ರಕ್ತ, ಮಾಂಸ, ಅಸ್ಥಿಗಳ ಸಂಯುಕ್ತವಾಗಿರುವ ಈ ದೇಹಕ್ಕಿಂತ ಬೇರೆಯಾದ 'ನಾನು' ಎಂಬುದು ಯಾವುದಾದರೂ ಉಂಟೆ? ಎಂಬುದನ್ನು ನೀನೇ ನಿನ್ನ ಮನಸ್ಸಿನಲ್ಲಿ ವಿಚಾರ ಮಾಡು.

ನಿನ್ನ ಹಿಂದಿನ ಜನ್ಮಗಳನ್ನು ಕುರಿತು ಹೇಳುತ್ತೇನೆ, ಕೇಳು. ಫಲಪುಷ್ಪಗಳಿಂದ ಕೂಡಿದ್ದ ಅರಣ್ಯಗಳಲ್ಲಿ ನೀನು ಅದೆಷ್ಟೋ ಸಲ ಮೃಗವಾಗಿ ಜನಿಸಿದ್ದೆ. ಆಗ, ನಿನಗೆ ಎಷ್ಟೋ ಮಂದಿ ಬಂಧುಗಳಾಗಿದ್ದರಲ್ಲ! ಅವರನ್ನೆಲ್ಲ ಕುರಿತು ಏಕೆ ದುಃಖಿಸುವುದಿಲ್ಲ? ತಾವರೆಗಳು ತುಂಬಿದ್ದ ಸರೋವರಗಳಲ್ಲಿ ನಿನ್ನ ಹಂಸವಾಗಿದ್ದೆ. ಆಗ, ನಿನಗೆ ಎಷ್ಟೋ ಹಂಸಗಳು ಬಂಧುಗಳಾಗಿದ್ದರು. ಅವರನ್ನೆಲ್ಲ ಕುರಿತು ನೀನೇಕೆ ಅಳುವುದಿಲ್ಲ? ಚಿತ್ರ ವಿಚಿತ್ರ ಅರಣ್ಯಗಳಲ್ಲಿ ನೀನು ಮರವಾಗಿದ್ದಾಗ ನಿನಗೆ ಎಷ್ಟೋ ಮರಗಳು ಬಂಧುಗಳಾಗಿದ್ದರು. ಅವುಗಳನ್ನೆಲ್ಲ ಕುರಿತು ಏಕೆ ಅಳುವುದಿಲ್ಲ? ಭಯಂಕರವಾದ ಪರ್ವತ ಶಿಖರಗಳಲ್ಲಿ ಸಿಂಹವಾಗಿದ್ದ ನಿನಗೆ ಎಷ್ಟೋ ಸಿಂಹಗಳು ಬಂಧುಗಳಾಗಿದ್ದರು. ಅವರನ್ನು ಕುರಿತು ದುಃಖಿಸುವುದಿಲ್ಲವೇಕೆ? ಅದೇ ರೀತಿ ಮತ್ಸ್ಯವಾಗಿದ್ದಾಗ, ವಾನರನಾಗಿದ್ದಾಗ, ಕಾಡುಕಾಗೆಯಾಗಿದ್ದಾಗ, ರಾಜಪುತ್ರನಾಗಿದ್ದಾಗ ಹೀಗೆ ಹಲವಾರು ಜನ್ಮಗಳಲ್ಲಿ ಆಯಾ ವರ್ಗಗಳ ಬಂಧುವರ್ಗವನ್ನು ಹೊಂದಿದ್ದ ನೀನು ಅವೆಲ್ಲದರ ಬಗ್ಗೆ ಏಕೆ ದುಃಖಿಸುವುದಿಲ್ಲ?

> **ಬ್ರಾಹ್ಮೀ ಸ್ಥಿತಿ**
>
> **ಕಟ್ಟಿಗೆಗಳನ್ನು ಹಾಕುತ್ತಿದ್ದರೆ ಬೆಂಕಿಯು ವೃದ್ಧಿಸುತ್ತಲೇ ಹೋಗುತ್ತಾನೆ. ಅದೇ ರೀತಿ ವಿಷಯಗಳನ್ನು ಚಿಂತಿಸುವುದರಿಂದ ಚಿಂತೆಯೂ ಬೆಳೆಯುತ್ತಲೇ ಇರುತ್ತದೆ. ಕಟ್ಟಿಗೆಯಿಲ್ಲದಾಗ ಬೆಂಕಿಯು ಶಾಂತವಾಗುವಂತೆ ವಿಷಯ ಚಿಂತನವಿಲ್ಲದಾಗ ಚಿಂತೆಯು ತಾನೂ ಶಾಂತವಾಗುತ್ತದೆ. ಅಂದರೆ, ಇದನ್ನೇ ಬ್ರಾಹ್ಮೀ ಸ್ಥಿತಿಯೆನ್ನುತ್ತಾರೆ. ಇದು ಶುದ್ಧವಾದುದು, ಕಾಮರಹಿತವಾದುದು. ಯಾವುದೇ ಆತಂಕ, ಚಿಂತೆಯಿಂದ ಮುಕ್ತವಾದುದು. ಇದನ್ನು ಪಡೆದವನು ಯಾರೂ ಎಂತಹ ಸನ್ನಿವೇಶದಲ್ಲಿಯೂ ಮೋಹಗೊಳ್ಳುವುದಿಲ್ಲ. ಅದಕ್ಕಾಗಿ ವಿವೇಕ, ಬುದ್ಧಿ ಮತ್ತು ಧೈರ್ಯಗಳೊಂದಿಗೆ ವೈರಾಗ್ಯವನ್ನು ಹೊಂದಿ ತನ್ನ ಮನಸ್ಸಿನ ಉದ್ಧಾರವನ್ನು ತಂದುಕೊಳ್ಳಬೇಕು.**

ಹೀಗೆ ಎಷ್ಟೋ ಸಲ ಮನುಷ್ಯ ಜನ್ಮಗಳನ್ನೂ, ಇತರ ಜನ್ಮಗಳನ್ನೂ ಎತ್ತಿರುವೆ. ಅದೇ ರೀತಿ ನಾನು ಕೂಡ ಈ ಜನ್ಮಾಂತರಗಳ ಚಕ್ರದಲ್ಲಿ ಸುಳಿದು ಬಂದವನೇ ಆಗಿದ್ದೇನೆ. ಸಮ್ಯಗ್ದರ್ಶನದಿಂದ ಶುದ್ಧವಾಗಿರುವ ಬುದ್ಧಿಯಿಂದ ನನಗೆ ಇದೆಲ್ಲವೂ ತಿಳಿಯುತ್ತಿದೆ, ನಿನ್ನ ಹಾಗೆಯೇ ನನಗೂ ಕೂಡ ಪ್ರಾಪ್ತವಾದ ಅನೇಕ ಜನ್ಮಗಳಲ್ಲಿ ಕಪ್ಪೆ, ಗಿಣಿ, ಪುಳಿಂದ, ಮರ, ಒಂಟೆ, ರಾಜ, ಹುಲಿ, ಮೊಸಳೆ, ಸಿಂಹ, ಚಕೋರ ಪಕ್ಷಿ, ಆಚಾರ್ಯಪುತ್ರನಾಗಿ (ಈಗ) ಜನಿಸಿರುವೆ. ಹೀಗಿರುವುದರಿಂದ ಈ ಜಗತ್ತಿನಲ್ಲಿ ಎಷ್ಟೋ ಲೆಕ್ಕವಿಲ್ಲದಷ್ಟು ಮಂದಿ ಬಾಂಧವರು, ತಂದೆ ತಾಯಂದಿರು, ಒಡಹುಟ್ಟಿದವರು, ಸ್ನೇಹಿತರು ಆಗಿ ಹೋಗಿದ್ದಾರೆ. ಇವರೆಲ್ಲರಲ್ಲಿ ಯಾರನ್ನು ಕುರಿತು ಅಳುತ್ತೇವೆ? ಈಗ ಈ ಜನ್ಮದ ಬಂಧುಗಳನ್ನು ಮಾತ್ರ ಕುರಿತು ಅಳುತ್ತಿರುವೆಯಲ್ಲ? ಇದೆಲ್ಲವನ್ನು ಬಿಟ್ಟು ನಿರ್ಮಲ ಹೃದಯರಾಗಿರೋಣ. ಈ ಪ್ರಪಂಚದಲ್ಲಿ ಹೀಗೆ ನೀಚ-ಉಚ್ಚ ಭಾವ ಇದ್ದೇ ಇರುತ್ತದೆ. ಪ್ರಾಜ್ಞರಾದವರು ಶೋಕಪಡುವುದಿಲ್ಲ. ಜಗತ್ತಿನ ಸ್ವಭಾವವೇ ಹೀಗೆಂದು ಅರಿತು ಸ್ಥಿರ ಮನಸ್ಕರಾಗಿರುವರು. ಅದರಿಂದ ಜರಾ ಮರಣಗಳಿಗೆ ಸಿಕ್ಕದೆ ಇರುವ ಭಾವ-ಅಭಾವಗಳೆಂಬುದರ ಆಚೆಯಿರುವ ಆತ್ಮನನ್ನು ಕುರಿತು ಒಂದೇ ಮನಸ್ಸಿನಿಂದ ಧ್ಯಾನಿಸು. ಮನಸ್ಸನ್ನು ಮೋಹದಲ್ಲಿ ಕೆಡವಬೇಡ.


**ನತೇ ದುಃಖ ನತೇ ಜನ್ಮ ನ ತೇ ಮಾತಾ ನತೇ ಪಿತಾ ।**
**ಆತ್ಮೈವಾಸಿ ನ ಸದ್ಬುದ್ಧೇ ತ್ವಮನ್ಯಃ ಕಶ್ಚಿದೇವ ಹಿ**

ಎಲೈ, ನಿನಗೆ ದುಃಖವಿಲ್ಲ; ನಿನಗೆ ಜನ್ಮವಿಲ್ಲ, ನಿನಗೆ ತಂದೆಯಿಲ್ಲ, ತಾಯಿಯಿಲ್ಲ, ನೀನು ಆತ್ಮನು, ಆತ್ಮನಲ್ಲದ್ದು ಇನ್ನೇನೂ ಇಲ್ಲ. ಬೇಕು ಎನ್ನುವ ಆಶೆಯು ಯಾವ ರೀತಿಯಲ್ಲಿಯೂ ಸೋಂಕದೆ ನಿರ್ಮಲವಾಗಿರುವ ಆತ್ಮವು ಇನ್ನು ಯಾವ ಭಾವಗಳಿಗೂ ಒಳಪಡದೆ ಶುದ್ಧವಾಗಿ ಹೃದಯ ಮಧ್ಯದಲ್ಲಿ ಪ್ರತಿಷ್ಠಿತವಾಗಿರುತ್ತದೆ. ಅದು ಸದಾಕಾಲ ಮಹಾಮೌನದಲ್ಲಿರುತ್ತದೆ. ವತ್ಸ, ಇಂತಹ ಆತ್ಮನಿಂದಲೇ, ಆತ್ಮನಲ್ಲಿಯೇ ಸಂಸಾರ ಸಂಭ್ರಮವನ್ನೆಲ್ಲ ತ್ಯಾಗ ಮಾಡಿ ಶಾಶ್ವತವಾದ ಸಂತೋಷವನ್ನು ಪಡೆ."


ಹೀಗೆ, ಪುಣ್ಯನು ಉಪದೇಶವನ್ನು ಮಾಡಿದಾಗ ಪಾವನನು ತನ್ನ ಶೋಕವನ್ನು ಕಳೆದುಕೊಂಡು ಸಮಾಧಾನ ಸ್ಥಿತಿಯನ್ನು ಹೊಂದಿದನು. ಅನಂತರ ಸೋದರರಿಬ್ಬರೂ ಸಿದ್ಧಿ ಹೊಂದಿ, ಜ್ಞಾನ, ವಿಜ್ಞಾನ ಪಾರಂಗತರಾಗಿ ಕಾಲಾಂತರದಲ್ಲಿ ದೇಹ ತ್ಯಾಗ ಮಾಡಿ ಮುಕ್ತಿಯನ್ನು ಪಡೆದುಕೊಂಡರು.

(ಮುಂದುವರಿಯುವುದು)

ನಂ. ೨೫೮, ೧೨ನೇ 'ಬಿ' ಕ್ರಾಸ್, ೧ನೇ 'ಬಿ' ಮುಖ್ಯರಸ್ತೆ,
ಮಹಾಲಕ್ಷ್ಮಿಪುರಂ, ಬೆಂಗಳೂರು-೫೬೦ ೦೮೬.



# ಶೌನಕ



ಶೌನಕರು ನೈಮಿಷಾರಣ್ಯದಲ್ಲಿ ಕುಲಪತಿಗಳಾಗಿ, ಗುರುಕುಲವನ್ನು ನಡೆಸುತ್ತ ನೂರಾರು ಶಿಷ್ಯರಿಗೆ ವಿದ್ಯಾದಾನ ಮಾಡುತ್ತಿದ್ದವರು. ಒಮ್ಮೆ ಹನ್ನೆರಡು ವರ್ಷಗಳ ಸತ್ರಯಾಗವನ್ನು ಪ್ರಾರಂಭಿಸಿದರು. ಇಡೀ ಭರತಖಂಡದ ಋಷಿಮಹರ್ಷಿಗಳನ್ನೆಲ್ಲ ಅಲ್ಲಿಗೆ ಆಮಂತ್ರಿಸಿದ್ದರು. ಈ ಮಹರ್ಷಿಗಳೆಲ್ಲ ಬಿಡುವಿನ ವೇಳೆಯಲ್ಲಿ ಪೌರಾಣಿಕರಾದ ಉಗ್ರವಸ್ರೌತಿಗಳಿಂದ ಪುರಾಣಗಳನ್ನು ಕೇಳುತ್ತ, ಭಗವಚ್ಚಿಂತನೆಯಲ್ಲಿ ಕಾಲ ಕಳೆಯುತ್ತಿದ್ದವರು. ಈ ರೀತಿ ಹಲವಾರು ಪುರಾಣಗಳು ರಚನೆಗೊಂಡಿರುವುದು ಶೌನಕ ಮಹರ್ಷಿಗಳ ಆಶ್ರಮದಲ್ಲಿಯೇ. ಶೌನಕರೇ ದೇವಾಸುರ ಸಂಬಂಧವಾದ ಅನೇಕ ಕಥೆಗಳನ್ನು ತಿಳಿದಿದ್ದವರು. ವ್ರತನಿಷ್ಠರಾದ ಅವರು ಅಗ್ನಿಯ ಉಪಾಸಕರು ಮತ್ತು ಗುರುಕುಲವನ್ನು ಚೆನ್ನಾಗಿ ನಡೆಸಿಕೊಂಡು ಹೋಗುವುದರಲ್ಲಿ ದಕ್ಷರು. ಧೀಮಂತರಾದ ಅವರು ಶ್ರುತಿ-ಸ್ಮೃತಿ-ಇತಿಹಾಸ-ಪುರಾಣ-ಉಪನಿಷತ್ತು ಮುಂತಾದ ಎಲ್ಲ ಶಾಸ್ತ್ರಗಳಲ್ಲಿಯೂ ವಿಶೇಷ ಪರಿಣತಿಯನ್ನು ಹೊಂದಿ, ಅಂದಿನ ಕಾಲಕ್ಕೆ ಪ್ರಸಿದ್ಧರಾದ ಆಚಾರ್ಯರಾಗಿದ್ದರು. ಸತ್ಯವಾದಿಗಳೂ ಜಿತೇಂದ್ರಿಯರೂ ನಿಯತವ್ರತರೂ ತಪಸ್ವಿಗಳೂ ಆದ ಅವರು ತಪಸ್ವಿಗಳಲ್ಲೆಲ್ಲ ಮಾನ್ಯರೆನಿಸಿದ್ದರು. ಅವರ ಆಶ್ರಮದಲ್ಲಿ ದಿನವೂ ಅವರ ಅಧ್ಯಕ್ಷತೆಯಲ್ಲಿಯೇ ಕಥಾಶ್ರವಣ ನಡೆಯುತ್ತಿತ್ತು. ಅವರನ್ನು ಪ್ರತೀಕ್ಷಿಸಿ, ಗುರುಗಳಾದ ಅವರು ಸರ್ವಪೂಜ್ಯವಾದ ಪೀಠವನ್ನು ಅಲಂಕರಿಸಿದ ಮೇಲೆಯೆ ಕಥಾಶ್ರವಣವು ಪ್ರಾರಂಭವಾಗುತ್ತಿತ್ತು. ಅಂದಿನ ಕಥಾವಿಷಯವನ್ನು ಅವರೇ ಸೂಚಿಸಬೇಕಾಗಿತ್ತು.

ಶೌನಕರು ಭೃಗು ವಂಶದಲ್ಲಿ ಜನ್ಮ ತಾಳಿದವರು. ಈ ವಂಶವು ದೇವತೆಗಳಿಂದಲೂ ಋಷಿಗಳಿಂದಲೂ ಗೌರವಿಸಲ್ಪಡುತ್ತಿತ್ತು. ಭೃಗು ಮಹರ್ಷಿಗಳ ಪುತ್ರರು ಚ್ಯವನರು. ಚ್ಯವನರಿಗೆ ಪ್ರಮತಿಯೆಂಬ ಪುತ್ರನು ಜನಿಸಿದನು. ಪ್ರಮತಿಗೆ ಘೃತಾಚಿಯೆಂಬ ಅಪ್ಸರೆಯಲ್ಲಿ 'ರುರು' ಎಂಬ ಪುತ್ರನು ಹುಟ್ಟಿದನು. ರುರುವು ತನ್ನ ಪತ್ನಿಯಾದ ಪ್ರಮದ್ವರೆಗೆ ತನ್ನ ಅರ್ಧ ಆಯುಷ್ಯವನ್ನೇ ಕೊಟ್ಟು ಬದುಕಿಸಿಕೊಂಡ ಮಹಾಮಹಿಮನು. ಇವರ ಮಗನಾಗಿ ಶುನಕರು ಜನಿಸಿದರು. ಶುನಕರೂ ವೇದಪಾರಂಗತರು. ಈ ಶುನಕರ ಪುತ್ರರೇ ಶೌನಕರು. ಇವರನ್ನು ಇಂದ್ರನ ಅವತಾರವೆನ್ನುತ್ತಾರೆ.



ಡಾ. ಎಸ್. ಹೇಮಲತಾ.

ಶೌನಕರು ವೇದಕಾಲದ ಪ್ರಸಿದ್ಧ ಋಷಿಗಳಲ್ಲೊಬ್ಬರು. ಶತಪಥಬ್ರಾಹ್ಮಣದಲ್ಲಿ ಇವರಿಂದ ರಚಿಸಲ್ಪಟ್ಟ ಮಂತ್ರಗಳಿವೆ. ಕೌಶೀತಕೀ ಬ್ರಾಹ್ಮಣದಲ್ಲೂ ನಾಲ್ಕನೆಯ ಅಧ್ಯಾಯದಲ್ಲಿ ಇವರ ಉಲ್ಲೇಖವಿದೆ. ಇವರಿಗೆ 'ಗೃತ್ಸಮದ' ಎಂಬ ಹೆಸರೂ ಇತ್ತೆಂದೂ, ಅದೇ ಅವರ ಜನ್ಮನಾಮವೆಂದೂ ಶುನಕರ ಪುತ್ರರಾದ್ದರಿಂದ ಶೌನಕರೆಂದು ಪ್ರಖ್ಯಾತರಾದರೆಂದೂ ತಿಳಿದುಬರುತ್ತದೆ. ಇವರು ಅಶ್ವಲಾಯನರ ಶಿಷ್ಯರು. ಇವರ ಗುರುಕುಲದಲ್ಲಿ ಹತ್ತುಸಾವಿರದವರೆಗೂ ವಿದ್ಯಾರ್ಥಿಗಳಿದ್ದು, ಅವರೆಲ್ಲರಿಗೂ ಸೂಕ್ತವಾದ ವಿದ್ಯೆಯನ್ನು ಕಲಿಯಲು ಮುಕ್ತ ಅವಕಾಶವಿತ್ತು. ಜನಮೇಜಯ ಮಹಾರಾಜನಿಂದ ಬ್ರಹ್ಮಹತ್ಯಾದೋಷ ಪರಿಹಾರಕ್ಕಾಗಿ ಅಶ್ವಮೇಧಯಜ್ಞವನ್ನು ಇವರು ಮಾಡಿಸಿದರೆಂದು ತಿಳಿದುಬರುತ್ತದೆ.

ಶೌನಕರು ಜ್ಞಾನಕಾಂಡದಲ್ಲಿಯೂ ಹೆಸರುವಾಸಿಯಾಗಿದ್ದರು. ಛಾಂದೋಗ್ಯೋಪನಿಷತ್ತಿನಲ್ಲಿ ಉದ್ಗೀಥೋಪಾಸನೆಯ ಪ್ರಕರಣ ಬರುತ್ತದೆ. ಅಲ್ಲಿ ಶಾಲಾವತ್ಯ, ದಾಲ್ಭ್ಯ ಮತ್ತು ಜೈವಲಿಗಳೆಂಬ ಮೂವರು ವಿದ್ವಾಂಸರು ಈ ವಿಷಯವಾಗಿ ಚರ್ಚೆಯನ್ನು ಕೈಗೆತ್ತಿಕೊಳ್ಳುತ್ತಾರೆ. ಸ್ವರ್ಗವೇ ಉದ್ಗೀಥಕ್ಕೆ ಗತಿಯೆಂಬುದು ದಾಲ್ಭ್ಯನ ಸಿದ್ಧಾಂತವಾಗಿರುತ್ತದೆ; ಪೃಥ್ವಿಯೇ ಗತಿಯೆಂಬುದು ಶಾಲಾವತ್ಯನ ಸಿದ್ಧಾಂತ; ಆದರೆ ಜೈವಲಿಯು ಪರಮಾತ್ಮನೇ ಉದ್ಗೀಥಕ್ಕೆ ಆಶ್ರಯನೆಂದು ಸಮರ್ಥಿಸುತ್ತಾನೆ. ಈ ಸಂದರ್ಭದಲ್ಲಿ ಶೌನಕರು ಉದ್ಗೀಥವನ್ನು ಚೆನ್ನಾಗಿ

ಉಪಾಸನೆ ಮಾಡಿದ್ದರೆಂದೂ ಈ ದರ್ಶನವನ್ನು ತಮ್ಮ ಶಿಷ್ಯರಾದ ಉದರಶಾಂಡಿಲ್ಯರಿಗೆ ಉಪದೇಶಿಸಿ, ಎಷ್ಟು ಕಾಲದವರೆಗೆ ಈ ಉಪಾಸನೆಯನ್ನು ಮಾಡುವರೋ ಅಷ್ಟೂ ಕಾಲ ವಿಶಿಷ್ಟತರವಾದ ಲೌಕಿಕ ಜೀವನ ಮತ್ತು ಪಾರೋವರೀಯವಾದ ಲೋಕವು ಆಗುವುದೆಂದು ಹೇಳಿದರೆಂದೂ ಜೈವಲಿ ಹೇಳುತ್ತಾನೆ.

ಮುಂಡಕೋಪನಿಷತ್ತಿನಲ್ಲಿಯೂ ಬ್ರಹ್ಮವಿದ್ಯೆಯ ಪರಂಪರೆಯನ್ನು ಹೇಳುತ್ತ ಈ ವಿದ್ಯೆಯನ್ನು ಬ್ರಹ್ಮನು ಮೊದಲು ತನ್ನ ಪುತ್ರನಾದ ಅಥರ್ವನಿಗೆ ತಿಳಿಸಿದನೆಂದೂ ಅಲ್ಲಿಂದ ಅಂಗಿರ, ಭರದ್ವಾಜ, ಅಂಗಿರಸರಿಂದ ಮುಂದುವರಿಯುತ್ತ ಬಂದಿದೆಯೆಂದೂ ತಿಳಿಸಿದೆ. ಇಂತಹ ಶ್ರೇಷ್ಠ ವಿದ್ಯೆಯನ್ನು ಕಲಿಯಲು ಮಹಾಗೃಹಸ್ಥರಾದ ಶೌನಕರು ಅಂಗಿರಸ ಮಹಾಮುನಿಗಳನ್ನು ವಿಧಿಪೂರ್ವಕ ಸಮೀಪಿಸಿ, “ಯಾವುದನ್ನು ತಿಳಿದರೆ ಎಲ್ಲವನ್ನೂ ತಿಳಿದಂತೆ ಆಗುತ್ತದೆಯೋ ಅದನ್ನು ತಿಳಿಸಿಕೊಡಿ” ಎಂದು ಕೇಳಿದರು. ಆಗ ಅಂಗಿರಸರು ಶೌನಕರಿಗೆ ಉಪನಿಷದ್ವಿದ್ಯೆಯನ್ನು ವಿವರಿಸಿದರು. ಹೀಗೆ ಶೌನಕರು ಮಹಾಮಹಾಸಾಧಕರಿಂದ ವಿದ್ಯೆಯನ್ನು ಕಲಿತು, ಮುಂದೆ ಸಾವಿರಾರು ಶಿಷ್ಯರಿಗೆ ವೇದದ ಕರ್ಮಕಾಂಡ-ಜ್ಞಾನಕಾಂಡಗಳೆರಡರಲ್ಲಿಯೂ ವಿದ್ಯಾಭ್ಯಾಸ ಮಾಡಿಸಿ ಶ್ರೇಷ್ಠ ಆಚಾರ್ಯರೆನಿಸಿಕೊಂಡರು.

ಜನಮೇಜಯರಾಜನಿಂದ ಬ್ರಹ್ಮಹತ್ಯಾದೋಷ ಪರಿಹಾರಾರ್ಥವಾಗಿ ಅಶ್ವಮೇಧಯಾಗವನ್ನು ಮಾಡಿಸಿದ ಶೌನಕರ ವಿಷಯವೊಂದು ಪುರಾಣಗಳಲ್ಲಿ ಬರುತ್ತದೆ. ಆದರೆ ವಿದ್ವಾಂಸರು ಈ ಶೌನಕರು ಬೇರೆಯವರಿರಬಹುದೆಂದು ಭಾವಿಸುತ್ತಾರೆ. ಇವರ ಹೆಸರು ‘ಇಂದ್ರೋತ’ ಎಂದು ಉಲ್ಲೇಖವಾಗಿರುವುದು ಇದಕ್ಕೆ ಕಾರಣವಾಗಿದೆ. ಶೌನಕಗೋತ್ರೋತ್ಪನ್ನರಾದ ಮತ್ತೊಬ್ಬ ಮಹರ್ಷಿಯಿಂದ ಈ ಕಾರ್ಯ ನಡೆದಿರಬಹುದು.

ಶೌನಕರು ರಚಿಸಿರುವ ಕೃತಿಗಳೂ ಬಹಳ ಪ್ರಸಿದ್ಧವಾಗಿವೆ. ಋಗ್ವೇದವನ್ನು ಆಧರಿಸಿ ಅವರು ರಚಿಸಿರುವ ‘ಬೃಹದ್ದೇವತಾ’ ಎಂಬ ಗ್ರಂಥವು ಬಹಳ ಪ್ರಸಿದ್ಧವಾದುದು. ಇದು ಈ ವೇದದ ಮಂತ್ರಗಳ ಋಷಿ, ಛಂದಸ್ಸು ಮತ್ತು ದೇವತೆಗಳ ಅನುಕ್ರಮಣಿಕೆಯಾಗಿದೆ. ಋಗ್ವೇದದ ಅಷ್ಟಕಗಳಿಗೆ ಕ್ರಮವಾಗಿ ಇಲ್ಲಿ ಎಂಟು ಅಧ್ಯಾಯಗಳಿವೆ. ಮೊದಲ ಎರಡು ಅಧ್ಯಾಯಗಳಲ್ಲಿ ವೈದಿಕ ವ್ಯಾಕರಣ ಮತ್ತು ಪದಪರಿಚಯಗಳನ್ನು ಮಾಡಿಕೊಡಲಾಗಿದೆ. ಅನುಕ್ರಮವಾಗಿ ಮಂತ್ರಗಳ ಜೋಡಣೆ ಮತ್ತು ವಿಷಯಸಂಗ್ರಹ, ಈ ಕೃತಿಯನ್ನು ವೈದಿಕವಾಙ್ಮಯದಲ್ಲಿ ಪ್ರಸಿದ್ಧವಾಗಿಸಿದೆ. ದೇವತೆಗಳ ನಾಮಗಳು ಅವರ ಕೃತಿಯಿಂದಲೇ ನಿಷ್ಪನ್ನವಾಗಿದೆಯೆಂಬುದು ಶೌನಕರ ಅಭಿಪ್ರಾಯವಾಗಿದೆ.

ಇವರು ಸ್ಮೃತಿಗ್ರಂಥವೊಂದನ್ನು ಬರೆದಿದ್ದರೆಂಬುದು ಮನುಸ್ಮೃತಿಯ ಉಲ್ಲೇಖದಿಂದ ತಿಳಿದುಬರುತ್ತದೆ. ಆದರೆ ಆ ಕೃತಿ ಲಭ್ಯವಿಲ್ಲ. ಶೌನಕರು ಅರ್ಕವಿವಾಹಪದ್ಧತಿ, ಏಕದಂಡಿ ಸಂನ್ಯಾಸವಿಧಿ, ಅದ್ಭುತೋತ್ಪತ್ತಿಶಾಂತಿ, ಜೀವತ್‌ಶ್ರಾದ್ಧಪ್ರಯೋಗ, ಪ್ರಯೋಗಪಾರಿಜಾತ ಮತ್ತು ಪ್ರಣವಕಲ್ಪ ಎಂಬ ಕೃತಿಗಳನ್ನೂ ರಚಿಸಿರುತ್ತಾರೆ. ಕಡೆಯ ಕೃತಿಗೆ ಹೇಮಾದ್ರಿಯೆಂಬುದರ ವ್ಯಾಖ್ಯಾನವೂ ದೊರೆತಿದೆ.

ಶೌನಕರು ಗೋತ್ರಪ್ರವರ್ತಕರೂ ಆಗಿರುತ್ತಾರೆ. ಶುನಕ ಮತ್ತು ಶೌನಕ ಗೋತ್ರಗಳು ಈಗಲೂ ಪ್ರಚಲಿತವಾಗಿವೆ. ಹೀಗೆ ಶೌನಕರು ವೇದಕಾಲದ ಮಹರ್ಷಿಗಳ ಅಗ್ರಪಂಕ್ತಿಯಲ್ಲಿ ವಿಭೂಷಿತರಾಗಿದ್ದಾರೆ.

**ನಂ. ೧೧, ಎ.ಜಿ. ಲೇಔಟ್, ನ್ಯೂ ಬಿಇಎಲ್ ರಸ್ತೆ,**
**ಬೆಂಗಳೂರು-೫೬೦ ೦೫೪.**

**17ನೇ ಪುಟದಿಂದ**

ಘಂಟಾಘೋಷವಾಗಿ ಸಾರುವ ಸಾಲುಗಳ ಇವು. ಬ್ರಹ್ಮನ ಬರಹವನ್ನು ಚೆನ್ನಾಗಿ ಅಳಿಸಿ ಹಾಕಿ ಅದಕ್ಕೆ ಬದಲಾಗಿ ಇನ್ನೊಂದು ಬರಹ ಬರೆದು ಶಿಷ್ಯನ ಹಣೆಬರಹವನ್ನೇ ಪುನರ್ರಚಿಸಿ ಅದನ್ನು ಭದ್ರಪಡಿಸುವ ಕೆಲಸವನ್ನು ಇಲ್ಲಿ ಅವರು ಉಲ್ಲೇಖಿಸುತ್ತಾರೆ. ಇದರಿಂದ ಬ್ರಹ್ಮ ಲಿಖಿತವನ್ನು ಅಳಿಸಿ ಶಿಷ್ಯನ ಬಾಳಿಗೆ ಹೊಸ ಭವಿಷ್ಯವನ್ನು ಬರೆಯುವುದು ನಿಜವಾದ ಸದ್ಗುರು. ಬ್ರಹ್ಮನ ಬರಹದ ಪರಿಧಿಯೊಳಗೆ ಬದುಕಬೇಕೆಂಬ ಸಂಗತಿಯನ್ನು ಬದಲಾಯಿಸಿ, ಆ ನಿಯಮಗಳನ್ನು ಮೀರಿ ಉದಾತ್ತವಾದ ಮಾರ್ಗವನ್ನು ಶಿಷ್ಯನು ಕ್ರಮಿಸುವಂತೆ ಮಾಡಬಲ್ಲ ತಪಶ್ಶಕ್ತಿಯುಳ್ಳವನು ಸಹಜ ಗುರು.

ಈ ಚರಣದ ಉಳಿದೆರಡು ಸಾಲುಗಳು ಇನ್ನೂ ಹೆಚ್ಚಿನ ಮಹತ್ತ್ವ ಉಳ್ಳವು. ಯೋಗ ಮಾರ್ಗವೆಂದರೆ ಮೂಲಾಧಾರದಿಂದ ಸಹಸ್ರಾರದವರೆಗಿನ ಜೀವನ ಪಯಣ. ಇಡಾ ಮತ್ತು ಪಿಂಗಳ ಎಂಬ ಎರಡು ನಾಡಿಗಳು ಪ್ರಾಣಾಯಾಮದಲ್ಲಿ ಉಸಿರಾಟವನ್ನು ನಿಯಮಬದ್ಧಗೊಳಿಸಲು ಮಾರ್ಗವಾಗಿರುವ ನಾಡಿಗಳು. ಅವು ಸೂರ್ಯ ಮತ್ತು ಚಂದ್ರರು. ಯೋಗ ಮಾರ್ಗದಲ್ಲಿ ಮೂಲಾಧಾರದಿಂದ ಹೇಗೆ ಸಾಗಬೇಕೆಂದು ಸುಷುಮ್ನಾ ನಾಳದ ದಾರಿಯನ್ನು ಚೆನ್ನಾಗಿ ತೆರೆದು ತೋರಿಸಿ ಆ ಕುರಿತು ಬೋಧಿಸಿ ಅವನಿಗೆ ಅಂತರಂಗದಲ್ಲಿಯೇ ಆಕಾಶಕಾಯಗಳಾದ ಸೂರ್ಯಚಂದ್ರರ ದರ್ಶನ ಮಾಡಿಸಿ ಕೊನೆಗೆ ಸಹಸ್ರಾರವೆಂಬ ‘ಕಮಲ ಮಂಡಲ’ವನ್ನು ತಲಪುವಂತೆ ದಿಗ್ದರ್ಶನ ಮಾಡುವುದು ಶಿಷ್ಯನ ಹೊಣೆಗಾರಿಕೆಯನ್ನು ಹೊತ್ತ ಸದ್ಗುರುವಿನ ಕೆಲಸ. ಇದು ಗುರು-ಶಿಷ್ಯರ ಅನುಬಂಧ ಎಷ್ಟು ಗಾಢವಾದುದು ಎಂಬುದನ್ನು ತಿಳಿಸುವ ಚರಣ.

**ಗಗನ ಜ್ಯೋತಿನಿ ಚೂಪಿನ – ಘನುಡು ಗುರುಡು ।**
**ಇತರ ಗುರುವುಲನೇಕುಲು – ವುಂದುರಿಲನು ।**

ಗಗನ ಜ್ಯೋತಿ ಎಂದರೆ ಸಹಸ್ರಾರದಲ್ಲಿ ದೃಗ್ಗೋಚರವಾಗುವ ಪರಬ್ರಹ್ಮವೆಂಬ ಪರಂಜ್ಯೋತಿ. ಈ ಪರಬ್ರಹ್ಮನನ್ನು ತೋರಿಸುವವನೇ ನಿಜವಾದ ಗುರು. ಇದನ್ನು ಬಿಟ್ಟು ಬೇರೆ ಏನೇನನ್ನೊ ಬೋಧಿಸುವ, ಗುರುಗಳನೇಕರು ಇದ್ದಾರೆ. ಆದರೆ ಅಪಾರ ಸಂಖ್ಯೆಯಲ್ಲಿರುವ ಇಂಥ ಗುರಗುಳು ಯೋಗ ಮಾರ್ಗದರ್ಶಕರಲ್ಲ. ಆ ವಿಷಯದಲ್ಲಿ ಅವರು ನಿಷ್ಪ್ರಯೋಜಕರು. ಗುರುವಿನ ಕಾರುಣ್ಯ ಮತ್ತು ಶಿಷ್ಯನ ಶರಣಾಗತಿಯ ಮೂಲಕ ಮೂಲಾಧಾರದಿಂದ ಪರಬ್ರಹ್ಮನು ಇರುವ ಸಹಸ್ರಾರದವರೆಗೆ ಮಾಡಬೇಕಾದ ಪಯಣವನ್ನು ವಿವರಿಸುವ ಈ ಪದ್ಯ ಕೇವಲ ಒಬ್ಬ ಸಿದ್ಧಿ ಪುರುಷನು ಮಾತ್ರ ಮಾಡಬಲ್ಲ ಕೆಲಸ. ಅಂತಹ ಸಿದ್ಧಿ ಪುರುಷರಾದ ಕೈವಾರ ತಾತಯ್ಯನವರಿಂದ ಬಂದ ಈ ಪದ್ಯ ಒಬ್ಬ ಅನುಭಾವಿ ಮಾತ್ರ ರಚಿಸಬಲ್ಲಂಥದು.

**(ಮುಂದುವರಿಯುವುದು)**



ಗುರುವಾಯೂರು ಕೃಷ್ಣನ ಮಹಾಭಕ್ತರಾದ ಮಹಾಕವಿ **ಮೇಪ್ಪತ್ತೂರು ನಾರಾಯಣ ಭಟ್ಟತ್ತಿರಿ**ಯವರ ಮಹಾನ್ ಭಕ್ತಿಕಾವ್ಯ 'ನಾರಾಯಣೀಯಮ್' ಈ ಸಂಚಿಕೆಯಿಂದ ಆರಂಭಿಸಿದ್ದೇವೆ. ಸ್ವತಃ ಸನಾತನ ಧರ್ಮದ ಶ್ರದ್ಧಾವಂತ ಅನುಯಾಯಿಗಳಾದ **ಶ್ರೀ ಬಿಂಡಿಗನವಿಲೆ ನಾರಾಯಣಸ್ವಾಮಿ** ಇದರ ಅನುವಾದಕರು.



# ನಾರಾಯಣೀಯಮ್

### ಸರ್ಗ: 9

## ಸೃಷ್ಟಿಕರ್ತನಾಗಿ ಬ್ರಹ್ಮ

**ಸ್ಥಿತಃ ಸ ಕಮಲೋದ್ಭವಸ್ತವ ಹಿ ನಾಭಿ ಪಂಕೇರುಹೇ**
**ಕುತಃಸ್ವಿದಿದಮಂಬುಧಾವುದಿತ-ಮಿತ್ಯನಾಲೋಕಯನ್ ।**
**ತದೀಕ್ಷಣ ಕುತೂಹಲಾತ್ ಪ್ರತಿದಿಶಂ ವಿವೃತ್ತಾನನ-**
**ಶ್ಚತುರ್ವದನತಾಮಗಾದ್ ವಿಕಸದಷ್ಟದೃಷ್ಟ್ಯಂಬುಜಾಂ ॥ 1 ॥**

ಆ ಕಮಲೋದ್ಭವನಾದ ಬ್ರಹ್ಮನು ನಿನ್ನ ನಾಭಿಕಮಲದಲ್ಲೇ ಸ್ಥಿತನಾಗಿ 'ಈ ಅಂಬುಧಿಯಲ್ಲಿ ಈ ಕಮಲವು ಎಲ್ಲಿಂದ ಉದಯವಾಯಿತು?' ಎಂಬುದಾಗಿ ಚಿಂತಿಸಿ, ಅರ್ಥವಾಗದೇ, ಅದರ ಮೂಲವನ್ನು ಕಾಣುವ ಕುತೂಹಲದಿಂದ ಎಲ್ಲ ದಿಕ್ಕುಗಳಲ್ಲೂ ತನ್ನ ಮುಖವನ್ನು ತಿರುಗಿಸಲು, ಪೂರ್ಣವಾಗಿ ಅರಳಿದ ಎಂಟು ಕಣ್ಣುಗಳಿಂದ ಕೂಡಿದ ಚತುರ್ಮುಖನಾದನು. (1)



ಕನ್ನಡಾನುವಾದ:
ಬಿಂಡಿಗನವಿಲೆ ನಾರಾಯಣಸ್ವಾಮಿ

**ಮಹಾರ್ಣವವಿಘೂರ್ಣಿತಂ ಕಮಲಮೇವ ತತ್ಕೇವಲಂ**
**ವಿಲೋಕ್ಯ ತದುಪಾಶ್ರಯಂ ತವ ತನುಂ ತು ನಾಲೋಕಯನ್।**
**ಕ ಏಷ ಕಮಲೋದರೇ ಮಹತಿ ನಿಸ್ಸಹಾಯೋ ಹ್ಯಹಂ**
**ಕುತಸ್ವಿದಿದಮಂಬುಜಂ ಸಮಜನೀತಿ ಚಿಂತಾಮಗಾತ್ ॥ 2 ॥**

ಮಹಾಸಾಗರದಲ್ಲಿ ಕಂಪಿತವಾಗುತ್ತಿದ್ದ ಆ ಕಮಲವು ತಾನೇ ತಾನಾಗಿ ವಿರಾಜಿಸುತ್ತಿರಲು ಅದನ್ನು ಕಂಡು, ಅದರ ಆಶ್ರಯವಾದ ನಿನ್ನ ಶರೀರವನ್ನು ಕಾಣದೆ 'ಈ ಮಹತ್ತರವಾದ ಕಮಲದ ಉದರದಲ್ಲಿ ನಿಸ್ಸಹಾಯಕನಾಗಿರುವ ನಾನು ಯಾರು? ಈ ಕಮಲವು ಎಲ್ಲಿಂದ ಉದಯಿಸಿತು?' ಎನ್ನುತ್ತಾ ಬ್ರಹ್ಮನು ಚಿಂತಾಕ್ರಾಂತನಾದನು. (2)

**ಅಮುಷ್ಯ ಹಿ ಸರೋರುಹಃ ಕಿಮಪಿ ಕಾರಣಂ ಸಂಭವೇ-**
**ದಿತಿ ಸ್ಮ ಕೃತನಿಶ್ಚಯಃ ಸ ಖಲು ನಾಲರಂಧ್ರಾಧ್ವನಾ ।**
**ಸ್ವಯೋಗ ಬಲವಿದ್ಯಯಾ ಸಮವರೂಢವಾನ್ ಪ್ರೌಢಧೀ-**
**ಸ್ತ್ವದೀಯಮತಿಮೋಹನಂ ನ ತು ಕಲೇಬರಂ ದೃಷ್ಟವಾನ್ ॥3॥**

ಈ ಕಮಲಕ್ಕೆ ಯಾವುದಾದರೂ ಒಂದು ಆಶ್ರಯವಿರಲೇಬೇಕು ಎಂದು ನಿಶ್ಚಯಿಸಿದ ಬುದ್ಧಿಯಲ್ಲಿ ನಿಪುಣನಾದ ಬ್ರಹ್ಮನು ತನ್ನ ಯೋಗಬಲ ಹಾಗೂ ವಿದ್ಯೆಯ ಸಾಮರ್ಥ್ಯದಿಂದ ಕಮಲದ ನಾಳದ ರಂಧ್ರದ ಮೂಲಕ ಕೆಳಗಿಳಿದನು. ಆದರೆ ಅತಿ ಮೋಹಕವಾದ ನಿನ್ನ ಶರೀರ ಮಾತ್ರ ಅವನಿಗೆ ಕಾಣಲಿಲ್ಲ. (3)

**ತತಃ ಸಕಲನಾಲಿಕಾ ವಿವರ ಮಾರ್ಗಗೋ**
**ಮಾರ್ಗಯನ್**
**ಪ್ರಯಸ್ಯ ಶತವತ್ಸರಂ ಕಿಮಪಿ ನೈವ ಸಂದೃಷ್ಟವಾನ್ ।**
**ನಿವೃತ್ಯ ಕಮಲೋದರೇ ಸುಖನಿಷಣ್ಣ ಏಕಾಗ್ರಧೀಃ**
**ಸ’ ವ’ ುಾ ಧಿ ಬ ಲ ವ’ ುಾ ದ’ ಧ’ ೀ**
**ಭವದನುಗ್ರಹೈಕಾಗ್ರಹೀ ॥ 4 ॥**

ಅನಂತರ ಕಮಲದ ನಾಳದ ಎಲ್ಲ ರಂಧ್ರಗಳನ್ನೂ ಪ್ರವೇಶಿಸುತ್ತಾ ಮತ್ತು ಹುಡುಕುತ್ತಾ ನೂರು ವರ್ಷಗಳ ಕಾಲ ಪ್ರಯತ್ನಿಸಿದರೂ ಅವನಿಗೆ ಏನೂ ಗೋಚರಿಸದಿರಲು ಹಿಂದಿರುಗಿ ಕಮಲದ ಉದರದಲ್ಲಿ ಸುಖವಾಗಿ ಕುಳಿತು ಏಕಾಗ್ರ ಬುದ್ಧಿಯಿಂದ ನಿನ್ನ ಅನುಗ್ರಹವನ್ನು ಬಯಸುತ್ತಾ ಸ್ಥಿರ ಸಮಾಧಿಯನ್ನು ಅಭ್ಯಾಸ ಮಾಡಿದನು. (4)

**ಶತೇನ ಪರಿವತ್ಸರೈರ್ದೃಢ ಸಮಾಧಿ ಬಂಧೋಲ್ಲಸತ್**
**ಪ್ರಬೋಧ ವಿಶದೀಕೃತಃ ಸ ಖಲು ಪದ್ಮಿನೀ ಸಂಭವಃ ।**
**ಅದೃಷ್ಟಚರಮದ್ಭುತಂ ತವ ಹಿ ರೂಪಮಂತರ್ದೃಶಾ**
**ವ್ಯಚಷ್ಟ ಪರಿತುಷ್ಟಧೀ-ರ್ಭುಜಗಭೋಗ-ಭಾಗಾಶ್ರಯಂ ॥ 5 ॥**

ಆ ಕಮಲೋದ್ಭವನಾದ ಬ್ರಹ್ಮನು ನೂರು ದಿವ್ಯವರ್ಷಗಳ

ಕಾಲ ದೃಢ ಸಮಾಧಿಯಲ್ಲಿ ಮುಳುಗಿ ಅದರಿಂದುಂಟಾದ ಜ್ಞಾನದಿಂದ ಉಲ್ಲಸಿತಗೊಂಡು, ಪರಿಶುದ್ಧನಾಗಿ, ಆನಂದದಿಂದ ತುಂಬಿದವನಾಗಿ ಹಿಂದೆಂದೂ ನೋಡದಂತಹ ಅದ್ಭುತವಾದ, ಭವ್ಯವಾದ ಆದಿಶೇಷನ ಒಂದು ಭಾಗದಲ್ಲಿ ಪವಡಿಸಿರುವ ನಿನ್ನ ದಿವ್ಯ ಮಂಗಳ ವಿಗ್ರಹವನ್ನು ತನ್ನ ಒಳಗಣ್ಣಿನಿಂದ ಕಂಡನು. (5)

**ಕಿರೀಟ ಮುಕುಟೋಲ್ಲಸತ್ ಕಟಕ ಹಾರ ಕೇಯೂರಯುಜ್–**
**ಮಣಿಸ್ಫುರಿತಮೇಖಲಂ ಸುಪರಿವೀತ ಪೀತಾಂಬರಂ । ಕಲಾಯ**
**ಕುಸುಮಪ್ರಭಂ ಗಲ ತಲೋಲ್ಲಸತ್ ಕೌಸ್ತುಭಂ ವಪುಸ್ತದಯಿ**
**ಭಾವಯೇ ಕಮಲ ಜನ್ಮನೇ ದರ್ಶಿತಂ ॥ 6 ॥**

ಹೇ ಪ್ರಭು! ತಲೆಯಲ್ಲಿ ಧರಿಸಿರುವ ರತ್ನ ಖಚಿತವಾದ ಕಿರೀಟ, ಮುತ್ತಿನಹಾರ, ಕಂಕಣ ಹಾಗೂ ಕೇಯೂರಗಳಿಂದ ಕೂಡಿದ ಭುಜಗಳು, ಮಣಿಗಳಿಂದ ಶೋಭಿಸುತ್ತಿರುವ ಸೊಂಟದ ಪಟ್ಟಿ, ಸುಂದರವಾಗಿ ತೊಟ್ಟ ಪೀತಾಂಬರ, ನೀಲ ನೈದಿಲೆ ಹೂವಿನಂತೆ ಬೆಳಗುತ್ತಿರುವ, ಕಂಠದಲ್ಲಿ ಕೌಸ್ತುಭಮಣಿಯ ದಿವ್ಯ ಪ್ರಭೆಯಿಂದ ಕಂಗೊಳಿಸುತ್ತಿರುವ, ಕಮಲಜನಾದ ಬ್ರಹ್ಮನಿಗೆ ತೋರಿದ ಆ ನಿನ್ನ ದಿವ್ಯ ಸುಂದರ ವಿಗ್ರಹವನ್ನು ನಾನು ಧ್ಯಾನಿಸುತ್ತೇನೆ. (6)

**ಶ್ರುತಿ ಪ್ರಕರ ದರ್ಶಿತ ಪ್ರಚುರ ವೈಭವ ಶ್ರೀಪತೇ**
**ಹರೇ ಜಯ ಜಯ ಪ್ರಭೋ ಪದಮುಪೈಷಿ ದಿಷ್ಟ್ಯಾದೃಶೋಃ ।**
**ಕುರುಷ್ವ ಧಿಯಮಾಶು ಮೇ ಭುವನನಿರ್ಮಿತೌ ಕರ್ಮಠಾ–**
**ಮಿತಿ ದ್ರುಹಿಣವರ್ಣಿತ–ಸ್ವಗುಣ ಬಂಹಿಮಾ ಪಾಹಿಮಾಂ ॥7॥**

ಶ್ರುತಿ ವಾಕ್ಯ ಸಮೂಹಗಳಿಂದ ದರ್ಶಿತನಾದ ಪ್ರಚುರ ವೈಭವನೇ । ಹೇ ಲಕ್ಷ್ಮಿಯೊಡೆಯ! ದುಃಖ ನಿವಾರಕನೇ! ನಿನಗೆ ಜಯವಾಗಲಿ. ಪ್ರಭುವೇ! ನನ್ನ ಸೌಭಾಗ್ಯದಿಂದ ನನ್ನ ಮುಂದೆ ನೀನು ಗೋಚರಿಸಿದೆ. ಲೋಕ ನಿರ್ಮಾಣಕಾರ್ಯದಲ್ಲಿ ಸಮರ್ಥನಾಗಿ ತೊಡಗುವಂತೆ ಕೂಡಲೇ ನನ್ನ ಬುದ್ಧಿಯನ್ನು ಪ್ರಚೋದಿಸು–ಎಂಬುದಾಗಿ ಬ್ರಹ್ಮನಿಂದ ಅಮಿತವಾಗಿ ವರ್ಣಿತನಾದ ಗುಣಮಹಿಮನೇ! ನನ್ನನ್ನು ಕಾಪಾಡು.

**ಲಭಸ್ವ ಭುವನತ್ರಯೀ ರಚನದಕ್ಷತಾಮಕ್ಷತಾಂ**
**ಗೃಹಾಣಮದನುಗ್ರಹಂ ಕುರು ತಪಶ್ಚ ಭೂಯೋ ವಿಧೇ ।**
**ಭವತ್ವಖಿಲಸಾಧನೀ ಮಯಿ ಚ ಭಕ್ತಿ ರತ್ಯುತ್ಕಟೇ–**
**ತ್ಯುದೀರ್ಯ ಗಿರಮಾದಧಾ ಮುದಿತ ಚೇತಸಂ ವೇಧಸಂ ॥ 8 ॥**

ಓ ಬ್ರಹ್ಮಾ! ತ್ರಿಭುವನಗಳನ್ನು ರಚಿಸಲು ಬೇಕಾದ ದಕ್ಷತೆ ನಿನಗೆ ಅಕ್ಷಯವಾಗಿ ಲಭಿಸಲಿ. ನನ್ನ ಅನುಗ್ರಹವನ್ನು ಸ್ವೀಕರಿಸು. ಮತ್ತೊಮ್ಮೆ ತಪಸ್ಸನ್ನು ಮಾಡು ಎಲ್ಲವನ್ನೂ ಸಾಧಿಸಬಲ್ಲಂತಹ ನನ್ನ ಮೇಲಿನ ಭಕ್ತಿಯೂ ನಿನ್ನಲ್ಲಿ ಅತ್ಯುತ್ಕಟವಾಗಿ ತುಂಬಲಿ ಎಂಬುದಾಗಿ ಹೇಳುತ್ತಾ ಬ್ರಹ್ಮನ ಮನಸ್ಸನ್ನು ಆನಂದಗೊಳಿಸಿದೆ. (8)

**ಶತಂ ಕೃತತಪಾಸ್ತತಃ ಸ ಖಲು ದಿವ್ಯಸಂವತ್ಸರಾ–**
**ನವಾಪ್ಯ ಚ ತಪೋಬಲಂ ಮತಿಬಲಂ ಚ ಪೂರ್ವಾಧಿಕಂ**
**ಉದೀಕ್ಷ್ಯ ಕಿಲ ಕಂಪಿತಂ ಪಯಸಿ ಪಂಕಜಂ ವಾಯುನಾ**
**ಭವದ್ಬಲ ವಿಜೃಂಭಿತಃ ಪವನಪಾಥಸೀ ಪೀತವಾನ್ ॥ 9 ॥**

ಅನಂತರ ಬ್ರಹ್ಮನು ನೂರು ದಿವ್ಯ ಸಂವತ್ಸರಗಳ ಕಾಲ ತಪಸ್ಸು ಮಾಡಲು ಹಿಂದಿಗಿಂತಲೂ ಅಧಿಕವಾಗಿ ತಪೋಬಲವನ್ನು ಮನೋಬಲವನ್ನು ಹೊಂದಿ ಕಮಲವು ನೀರಿನಲ್ಲಿ ಗಾಳಿಯಿಂದ ಕಂಪಿಸಲು ಅದನ್ನು ಕಂಡು, ನಿನ್ನ ಬಲದಿಂದ ವಿಜೃಂಭಿತನಾದ ಅವನು ಗಾಳಿ ಮತ್ತು ನೀರನ್ನು ಹೀರಿಬಿಟ್ಟನು. (9)

**ತವೈವ ಕೃಪಯಾ ಪುನಃ ಸರಸಿಜೇನ ತೇನೈವ ಸಃ**
**ಪ್ರಕಲ್ಪ್ಯ ಭುವನತ್ರಯೀಂ ಪ್ರವವೃತೇ ಪ್ರಜಾನಿರ್ಮಿತೌ ।**
**ತಥಾವಿಧ ಕೃಪಾಭರೋ ಗುರುಮರುತ್ಪುರಾಧೀಶ್ವರ**
**ತ್ವಮಾಶು ಪರಿಪಾಹಿ ಮಾಂ ಗುರುದಯೋಕ್ಷಿತೈರೀಕ್ಷಿತೈಃ ॥10 ॥**



ಮತ್ತೆ ಆ ಬ್ರಹ್ಮನು ನಿನ್ನ ಕೃಪೆಯಿಂದಲೇ, ಆ ಕಮಲದಿಂದಲೇ ಮೂರು ಲೋಕಗಳನ್ನು ರಚಿಸಿ, ಪ್ರಜೆಗಳ ಸೃಷ್ಟಿಕಾರ್ಯದಲ್ಲಿಯೂ ತೊಡಗಿದನು. ಹೇ ಗುರುವಾಯೂರಪ್ಪ! ಕೃಪೆಯಿಂದ ತುಂಬಿರುವ ನೀನು ಅತ್ಯಂತ ದಯೆಯಿಂದ ಕೂಡಿದ ಆರ್ದ್ರವಾದ ನಿನ್ನ ಕಟಾಕ್ಷವನ್ನು ಬೀರಿ ಕೂಡಲೇ ನನ್ನನ್ನು ಕಾಪಾಡು. (10)

**(ಮುಂದುವರಿಯುವುದು)**

# ೧೦೭, **"ಕೇಶವ ಕೃಪ" ೧೭ನೇ ಕ್ರಾಸ್, ೧ನೇ ಬ್ಲಾಕ್,**
**ರಾಜಾಜಿನಗರ, ಬೆಂಗಳೂರು–೫೬೦ ೦೧೦**



**ಆಧುನಿಕ ಕಾಲದಲ್ಲಿ ಶ್ರೀರಾಮನ ಸಾಕ್ಷಾತ್ಕಾರ ಪಡೆದವರಲ್ಲಿ ಅಗ್ರಗಣ್ಯರು ಭದ್ರಾಚಲದ ಶ್ರೀರಾಮದಾಸರು. ಈ ಕುರಿತು ತಿಳಿಸಿಕೊಟ್ಟಿದ್ದಾರೆ**

**ಶ್ರೀ ಕೆ. ಭೀಮರಾವ್.**

# ಭದ್ರಾಚಲದ ಭಕ್ತ ರಾಮದಾಸ

**ಇಕ್ಷ್ವಾಕು ಕುಲ ತಿಲಕ ಇಕನೈನ ಪಲುಕವೆ ರಾಮಚಂದ್ರಾ**
**ನನ್ನು ರಕ್ಷಿಂಪ ಕುನ್ನನು ರಕ್ಷಕುಲವೆವರಯ್ಯ ರಾಮಚಂದ್ರಾ**

"ಇಕ್ಷ್ವಾಕು ವಂಶದ ಶಿರೋಮಣಿಯಾದ ಹೇ ಶ್ರೀರಾಮಚಂದ್ರ, ಈಗಲಾದರೂ ನೀನು ಮಾತನಾಡು. ಈಗಲೂ ನೀನು ನನ್ನನ್ನು ರಕ್ಷಿಸದೇ ಹೋದರೆ ಮತ್ತಿನ್ಯಾರು ರಕ್ಷಿಸುವರು?"

ಗೋಲ್ಕೊಂಡದ ಸೆರೆಮನೆಯಲ್ಲಿ ಭದ್ರಾಚಲದ ದಂಡಾಧಿಕಾರಿಯಾಗಿದ್ದ ಖೈದಿ ಗೋಪಣ್ಣ ಶ್ರೀರಾಮನನ್ನು ಸ್ತುತಿಸಿದ ಪರಿ ಇದು. ಕಳ್ಳತನದ ಅಪಾದನೆ ಹೊತ್ತು ಹನ್ನೆರಡು ವರ್ಷ ಕಾರಾಗೃಹ ವಾಸದ ಶಿಕ್ಷೆ ಅನುಭವಿಸುತ್ತಿರುವ ಈ ರಾಮಭಕ್ತ ಮುಂದುವರಿದು ತನ್ನ ಸ್ವಾಮಿಯನ್ನು ನಿಂದಿಸುವುದು, ಪ್ರಶ್ನಿಸುವುದು ಹೀಗೆ:



"ಹೇ ರಾಮಚಂದ್ರ, ನಿನ್ನ ತಮ್ಮಂದಿರಾದ ಲಕ್ಷ್ಮಣ, ಭರತ, ಶತ್ರುಘ್ನ-ಇವರುಗಳು ಧರಿಸಿರುವ ಆಭರಣಗಳ ಬೆಲೆ ಎಷ್ಟು ಗೊತ್ತಾ? ತಲಾ ಹತ್ತು ಸಾವಿರ ವರಹಗಳು. ಇನ್ನು ನಿನ್ನ ಪತ್ನಿ ಸೀತೆಯ ಒಡವೆಗಳ ಲೆಕ್ಕ ಹತ್ತು ಸಾವಿರ. ಅಷ್ಟೇಕೆ ನೀನು ಧರಿಸಿರುವ ವಜ್ರ-ವೈಡೂರ್ಯಗಳೂ ನನ್ನ ಕೊಡುಗೆಯೆ? ಅವುಗಳನ್ನೇನೂ ನಿನ್ನಪ್ಪ ದಶರಥ ನಿನಗೆ ಮಾಡಿಕೊಟ್ಟಿದ್ದಲ್ಲ. ನಿನ್ನನ್ನು, ನಿನ್ನ ಸತೀಮಣಿಯನ್ನು, ಸೋದರರನ್ನೂ ಹೀಗೆ ಆಭರಣಗಳಿಂದ ಮೆರೆಸಿದ್ದಕ್ಕೆ ನೀನು ನನಗೆ ಕೊಟ್ಟ ಬಳುವಳಿ ಈ ಸೆರೆಮನೆ ವಾಸ. ಕಾವಲುಗಾರರ ಛಡಿ ಏಟು?

ಈ ಏಟಿನ ನೋವನ್ನು ತಾಳಲಾರದೆ ನಿನ್ನನ್ನು ನಿಂದಿಸುತ್ತಿದ್ದೇನೆ. ನಿನಗಾಗಿ, ನಿನ್ನ ವೈಭವವನ್ನು ಮೆರೆಸುವುದಕ್ಕಾಗಿ ಧನ ವ್ಯಯದ ದುರುಪಯೋಗದ ಅಪಾದನೆ ಹೊತ್ತ ಈ ಭಕ್ತನನ್ನು ಸಂರಕ್ಷಿಸು. ನೀನೆ ನನ್ನನ್ನು ರಕ್ಷಿಸದೆ ಹೋದರೆ ಮತ್ತೆ ಯಾರು ತಾನೆ ನನ್ನನ್ನು ಸಂರಕ್ಷಿಸಿಯಾರು? ಹೇ ರಾಮ, ಅನೇಕ ಭಕ್ತರನ್ನು ಅವರ ವಿಪತ್ತಿನ ಕಾಲದಲ್ಲಿ ಕಾಪಾಡಿದ ನೀನು ನನ್ನನ್ನು ಕಾಪಾಡಲಾರೆಯಾ? ನಿನ್ನನ್ನೇ ನಂಬಿದ್ದೇನೆ ರಾಮಚಂದ್ರಾ."

ಇಂತಹ ಆರ್ತನಾದ ಶ್ರೀರಾಮನನ್ನು ಮುಟ್ಟದೇ ಹೋದೀತೆ? ಅವನ ಅನುಜ ಲಕ್ಷ್ಮಣನನ್ನು ತಟ್ಟದೆ ಹೋಗುವುದೆ? ಮಾತೆ ಸೀತೆಯ ಕಂಗಳಲ್ಲಿ ಅಶ್ರು ಸುರಿಯದೇ ಹೋದೀತೆ? ಜನಕ ಪುತ್ರಿ ಲಕ್ಷ್ಮಣನೆಡೆಗೆ ನೋಡುತ್ತಾಳೆ. ಆ ರಾಮಾನುಜ ಅಣ್ಣನ ಅನುಮತಿಗಾಗಿ ಕಾಯುತ್ತಾನೆ.

ರಾಮ-ಲಕ್ಷ್ಮಣರಿಬ್ಬರೂ ತತ್‌ಕ್ಷಣ ಧರೆಗಿಳಿಯುವ ನಿರ್ಧಾರ ಮಾಡುತ್ತಾರೆ. ಗೋಪಣ್ಣನ ವ್ಯಥೆ ದೂರ ಮಾಡುವುದು ಹೇಗೆ? ಅವನ ಮೇಲಿರುವ ಆಪಾದನೆಯಾದರೂ ಏನು? ಭಗವಂತನಿಗೆ ತಿಳಿಯದ ಭಕ್ತನ ಸಂಕಟವಾದರೂ ಏನು?

ಹಾಗೆ ನೋಡಿದರೆ ಗೋಪಣ್ಣ ಬಡವನೇನೂ ಅಲ್ಲ. ಸಿರಿವಂತ ಕುಟುಂಬದಿಂದ ಬಂದವನೆ. ತಂದೆ ಲಿಂಗಣ್ಣ ಮಂತ್ರಿ, ತಾಯಿ ಕದಂಬ. ಮಂತ್ರಿ ಎಂಬುದು ಲಿಂಗಣ್ಣನ ಅಡ್ಡ ಹೆಸರೇ ಹೊರತು ಅವನೇನೂ ಮಂತ್ರಿಯಾಗಿರಲಿಲ್ಲ. ಆದರೆ ಅವನ ಹಿರಿಯರು ಅಂದಿನ ಅರಸರಲ್ಲಿ ಅಮಾತ್ಯರಾಗಿದ್ದರಿಂದ ಆ ಉಪನಾಮ. ಅವನ ಹೆಂಡತಿಯೂ ಶ್ರೀಮಂತ ಮನೆತನದವಳೆ. ಆಕೆಯ ಸೋದರ ಮದಣ್ಣ ಅಂದಿನ ಗೋಲ್ಕೊಂಡದ ನವಾಬರಲ್ಲಿ ಅಮಾತ್ಯನಾಗಿದ್ದವನೆ. ದಂಪತಿಯ ವಾಸ ಕಮ್ಮಂ ಜಿಲ್ಲೆಯ ಸಣ್ಣ ಹಳ್ಳಿ ನೆಲಕೊಂಡಪಲ್ಲಿ. ನಿಯೋಗಿ ಬ್ರಾಹ್ಮಣ ಗೋಪಣ್ಣನದು, ಆತ್ರೇಯಸ ಗೋತ್ರ. ಕಂಚೆರ್ಲ ಕುಲಕ್ಕೆ ಸೇರಿದ ಗೋಪ ರಾಜನಿಗೆ ಬಾಲ್ಯದಿಂದಲೇ ಅಧ್ಯಾತ್ಮದ ಒಲವು. ಅವನ ಇಷ್ಟ ದೈವ ಶ್ರೀರಾಮ. ರಾಮಾಯಣ ಅವನ ಮೆಚ್ಚಿನ ಕಾವ್ಯ. ಅವನ ಆಧ್ಯಾತ್ಮಿಕ ಸಿರಿಯನ್ನು ಹೆಚ್ಚಿಸಲು ಅವನಿಗೆ ರಘುನಾಥ ಭಟ್ಟಾಚಾರ್ಯರೆಂಬ ವಿದ್ವಾಂಸರು ಗುರುಗಳಾಗಿ ದೊರೆಯುತ್ತಾರೆ.

ಸಾಹಿತ್ಯ ಪ್ರೀತಿಯ ಜೊತೆ ಜೊತೆಗೆ ಅವನ ಒಲವು ಕರ್ನಾಟಕ ಸಂಗೀತದತ್ತ ತಿರುಗುತ್ತದೆ. ಈ ಪ್ರೀತಿಯ ಆಳ ಅಗಲಗಳೆಷ್ಟೆಂದರೆ ಅವನು ಕೇವಲ ಕೀರ್ತನಕಾರನಲ್ಲದೆ ವಾಗ್ಗೇಯಕಾರನೂ ಆಗಿಬಿಡುತ್ತಾನೆ.

ಅವನು ಯೌವನಕ್ಕೆ ಬರುತ್ತಿದ್ದಂತೆ ಮಾವ ಮದಣ್ಣ ಅಕ್ಕನ ಮಗನಿಗೆ ನವಾಬರ ಭೇಟಿ ಮಾಡಿಸುತ್ತಾನೆ. ಸಾಹಿತ್ಯ-ಸಂಗೀತ ಕಲಾವಿದನಾದ ಗೋಪ ರಾಜನಿಗೆ ಅವರಾದರೂ ಏನು ಕೆಲಸ ಕೊಟ್ಟಾರು? ದೈವಭಕ್ತನಾದ ಅವನಿಗೆ ಸಮೀಪದ ಗೋದಾವರಿ ಉತ್ತರ ದಡದ ಗ್ರಾಮ ಭದ್ರಾಚಲಂನ ತಹಸೀಲ್ದಾರ್‌ನಾಗಿ ನೇಮಿಸಿಕೊಳ್ಳುತ್ತಾರೆ. ಅವನ ಕೆಲಸವೆಂದರೆ ಅಲ್ಲಿಯ ಜನರ ಜಮೀನಿನ ವಿಸ್ತೀರ್ಣ, ಬೆಳೆಯುವ ಬೆಳೆಗಳಿಗಾಗಿ ಸೂಕ್ತ ಕಂದಾಯ ನಿಗದಿ ಮಾಡಿ, ಅದನ್ನು ವಾರ್ಷಿಕವಾಗಿ ರೈತರಿಂದ ವಸೂಲಿ ಮಾಡಿ ನವಾಬನಿಗೆ ಸಲ್ಲಿಸುವುದು. ಇದು ನಿಜಕ್ಕೂ ಗುರುತರ ಜವಾಬ್ದಾರಿ. ಇದನ್ನು ನಂಬಿಕಸ್ಥರೆ ಮಾಡಬೇಕು. ಈ ಕೆಲಸದಲ್ಲಿ ಆದಾಯದೊಂದಿಗೆ ಅಧಿಕಾರವೂ ಹೆಚ್ಚು. ಹೀಗಾಗಿ ಈ ಹುದ್ದೆಗಾಗಿ ಪೈಪೋಟಿ ನಡೆದಿದ್ದು ಸ್ವತಃ ತಾನೀಷನ ರಾಣಿ ತನ್ನ ಮೈದುನ ಸಂಬಂಧಿಯೊಬ್ಬನಿಗೆ ಈ ಕೆಲಸ ಕೊಡಿಸಬೇಕೆಂದಿದ್ದಳು. ಆದರೆ ಮಂತ್ರಿಯ ಮಾತಿಗೆ ಬೆಲೆ ಕೊಟ್ಟು ನವಾಬ ಈ ಹುದ್ದೆಯನ್ನು



ಗೋಪಣ್ಣನಿಗೆ ನೀಡಿದ್ದ. ಈ ವಿಷಯದಲ್ಲಿ ರಾಣಿ ಸಿತಾರಳಿಗೆ ಗೋಪಣ್ಣನ ಬಗ್ಗೆ ಒಂದು ಬಗೆಯ ಅಸಹನೆ ಅಸಮಾಧಾನ ಮೂಡಿದ್ದು, ಹೇಗಾದರೂ ಮಾಡಿ ಅವನ ತಪ್ಪನ್ನು ಕಂಡುಹಿಡಿದು ಅವನನ್ನು ಆ ಹುದ್ದೆಯಿಂದ ವಜಾ ಮಾಡಿಸಿ, ತನ್ನ ಆಪ್ತರಿಗೆ ಅದನ್ನು ಕೊಡಿಸಬೇಕೆಂಬ ಇರಾದೆ ಅವಳದಾಗಿತ್ತು. ಅದಕ್ಕಾಗಿ ಸಿತಾರಾ ಸಮಯ ಕಾಯುತ್ತಿದ್ದಳು.

ಕಂಚೆರ್ಲ ಗೋಪಣ್ಣ ಪತ್ನಿ ಕಮಲೆಯೊಂದಿಗೆ ಹೊಸ ಹುದ್ದೆಯ ಅಧಿಕಾರ ಸ್ವೀಕರಿಸಿದ. ಭದ್ರಾಚಲ ನಿಸರ್ಗ ರಮಣೀಯ ಸ್ಥಳ. ಶ್ರೀರಾಮ ಭಕ್ತನಾದ ಅವನಿಗೆ ಆ ಪ್ರದೇಶ ಬಹಳವಾಗಿ ಹಿಡಿಸಿತು. ಭದ್ರಾಚಲದ ಗೋದಾವರಿ ದಂಡೆಯಲ್ಲಿ ಸಣ್ಣ ಮಂಟಪದಲ್ಲಿ ವಿರಾಜಮಾನನಾಗಿದ್ದ ವೈಕುಂಠ ರಾಮ ಅವನ ಆರಾಧ್ಯ ದೈವವಾದ. ಪ್ರತಿ ದಿನವೂ ಬ್ರಾಹ್ಮೀ ಮುಹೂರ್ತದಲ್ಲೆದ್ದು, ಪವಿತ್ರ ಗೋದಾವರಿ ನದಿಯಲ್ಲಿ ಮಿಂದು, ವೈಕುಂಠ ರಾಮನಿಗೆ ಶಿರ ಸಾಷ್ಟಾಂಗ ನಮಸ್ಕಾರ ಮಾಡಿ ಪದಗಳಿಂದ ಅವನ ಸ್ತುತಿ ಮಾಡುವುದು ಅವನ ದಿನಚರಿಯಾಯಿತು. ಹೀಗೆ ಕೀರ್ತನೆ ಮಾಡುತ್ತಿದ್ದ ಗೋಪಣ್ಣ ಆ ಸ್ಥಳದ ಪುರಾಣ ತಿಳಿಯಲು ಬಯಸಿದ. ಅವನ ಇಚ್ಛೆಯಂತೆ ಊರ ಹಿರಿಯರು ಅಚಲವಾಗಿ ಅಲ್ಲಿ ನೆಲೆಸಿರುವ ಭದ್ರ ಮಹರ್ಷಿಯ ಕಥೆಯನ್ನು ಅವನಿಗೆ ಹೀಗೆ ವಿವರಿಸಿದರು:

ತ್ರೇತಾಯುಗದಲ್ಲಿ ದಶರಥ ಪುತ್ರ ರಾಮ ಪಿತೃ ವಾಕ್ಯ ಪರಿಪಾಲನೆಗಾಗಿ ಹದಿನಾಲ್ಕು ವರ್ಷ ವನವಾಸ ಯಾತ್ರೆ ಮಾಡಿದನಷ್ಟೆ. ಆ ದಂಡಕಾರಣ್ಯವೇ ಗೋದಾವರಿ ನದಿ ತೀರ ಪ್ರದೇಶ. ರಾಮ, ಅನುಜ ಲಕ್ಷ್ಮಣ ಮತ್ತು ಪತ್ನಿ ಸೀತೆಯೊಂದಿಗೆ ಪರ್ಣ ಕುಟೀರವೊಂದನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾಗ ಆ ಪ್ರದೇಶದಲ್ಲಿ ತಪೋವನದಲ್ಲಿ ಅನವರತ ತಪೋನಿರತನಾಗಿದ್ದವನು ಭದ್ರ ಮಹರ್ಷಿ. ಮಹಾವಿಷ್ಣುವಿನ ಆರಾಧಕನಾದ ಅವನ ಸೂಕ್ಷ್ಮ ದೃಷ್ಟಿಗೆ ಗೋಚರಿಸಿದ್ದು ರಾಮ ಅವನ ಆದರ್ಶ ಮಾನವ ಅವತಾರವೆಂದು. ಶ್ರೀರಾಮನಲ್ಲಿ ಅವನಿಗೆ ಅತೀವ ಭಕ್ತಿ. ಸದಾ ಅವನು ತನ್ನ ಬಳಿಯೇ ಇರಬೇಕೆಂಬ ಬಯಕೆ. ಆದರೆ ರಾಮಾವತಾರದ ಗುರಿಯಾದರೂ ಏನು? ರಕ್ಕಸ ರಾವಣ ಸಂಹಾರವಷ್ಟೆ. ಅದಕ್ಕಾಗಿ ತಾನೆ ರಾವಣನ ಮಾಯಾಮೃಗ ಹರಿಣಿಯ ರೂಪಿನಲ್ಲಿ ಬಂದು ವೈದೇಹಿಯನ್ನು ಅಪಹರಿಸಿದ್ದು. ವೈದೇಹಿಯನ್ನು ಅರಸಿ ಹೊರಟ ರಾಮನಲ್ಲಿ ಭದ್ರ ಮಹರ್ಷಿಯ ಪ್ರಾರ್ಥನೆ ರಾಮ ಸೀತೆಯೊಂದಿಗೆ ತನ್ನ ಶಿರದ ಮೇಲೆ ನೆಲೆಸಬೇಕೆಂದು. ಶ್ರೀರಾಮಾವತಾರ ಮುಗಿದು ಮತ್ತೊಂದು ಯುಗ ಮೂಡಿದರೂ ಭದ್ರ ಮಹರ್ಷಿಯ ಕೋರಿಕೆ ಈಡೇರದು. ಆಗ ಶ್ರೀಮನ್ನಾರಾಯಣನಿಗೆ ಮೊರೆ ಹೊಕ್ಕು ಅವನನ್ನು ಮತ್ತೆ ರಾಮನ ರೂಪಿನಲ್ಲಿ ಧರೆಗೆ ಕರೆ ತಂದವರು ಮಹರ್ಷಿಗಳು. ಶಂಖ ಚಕ್ರ ಧಾರಿಯಾಗಿ ಚತುರ್ಭುಜ ನಾರಾಯಣ 'ವೈಕುಂಠ' ರಾಮನಾಗಿ, ಪತ್ನಿ ಸೀತೆ ಹಾಗೂ ಸೋದರ ಲಕ್ಷ್ಮಣನೊಂದಿಗೆ ಭದ್ರ ಮಹರ್ಷಿಯ ಶಿರದ ಮೇಲೆ ಅಚಲನಾಗಿ ನೆಲೆಸಿ ಅವರಿಗೆ ಮುಕ್ತಿಪದವನ್ನು ನೀಡುತ್ತಾನೆ. ಆ ಅಚಲ ಗಿರಿಯೇ ಭದ್ರರ ನೆನಪಿನಲ್ಲಿ ಭದ್ರಾಚಲವಾಯಿತು.

ಪುರಾಣದ ಕಥೆಯಿದಾದರೆ, ಕಲಿಯುಗದಲ್ಲಿ ಆ ರಾಮನಿಗೆ ನೆಲೆಯೊಂದನ್ನು ನೀಡಿದ ಭಾಗ್ಯ ಪೋಕಾಲ ಧಮ್ಮಕ್ಕನದು.



ಭದ್ರಾಚಲ ಶ್ರೀರಾಮ ದೇವಸ್ಥಾನ

ಕಲಿಯುಗದ ಹದಿನೇಳನೆಯ ಶತಮಾನದ ಧರ್ಮಕ್ಕ ಸಾಧಾರಣ ಮಹಿಳೆ. ಭದ್ರಿರೆಡ್ಡಿಪಾಳ್ಯ ಎಂಬ ಹಳ್ಳಿಯ ನಿವಾಸಿ. ದೈವಭಕ್ತೆಯಾದ ಆಕೆಗೆ ಒಂದು ದಿನ ಕನಸಿನಲ್ಲಿ ರಾಮ ದರ್ಶನವಿತ್ತು, ತಮ್ಮ ಶಿಲಾ ವಿಗ್ರಹಗಳು ಸಮೀಪದ ಭದ್ರಗಿರಿಯ ಮೇಲಿನ ಹುತ್ತದಲ್ಲಿರುವಂತೆಯೂ ಅವುಗಳನ್ನು ತಂದು ದೇಗುಲ ನಿರ್ಮಿಸಬೇಕೆಂದು ಆದೇಶವಿತ್ತನಂತೆ. ಅದರಂತೆ ಆ ಸ್ತ್ರೀ ಭದ್ರಗಿರಿಗೆ ತೆರಳಿ ಹುತ್ತವನ್ನು ಕೆದಕಿದಾಗ ಅಲ್ಲಿ ವೈಕುಂಠ ರಾಮ, ಲಕ್ಷ್ಮಣ ಮತ್ತು ಸೀತೆಯರ ವಿಗ್ರಹಗಳು ದೊರೆತುವಂತೆ. ಆಕೆ ಅದನ್ನು ತಂದು ಈಗ ಭದ್ರಾಚಲ ಎಂದು ಕರೆಯುವ ಜಾಗದಲ್ಲಿ ಪ್ರತಿಷ್ಠಾಪಿಸಿ, ಅದಕ್ಕೆ ಕಲ್ಲು-ಮಣ್ಣಿನ ಮಂಟಪವನ್ನು ಕಟ್ಟಿಸಿದಳಂತೆ. ಆ ವಿಗ್ರಹಗಳಿಗೆ ಪ್ರತಿನಿತ್ಯವೂ ಪೂಜೆ, ನೈವೇದ್ಯ ಮಾಡತೊಡಗಿದಳಂತೆ.



ಊರ ಹಿರಿಯರಿಂದ ವೈಕುಂಠ ರಾಮನ ಕಥೆ ಕೇಳಿದ ತಹಸೀಲ್ದಾರ್ ಗೋಪಣ್ಣನ ರಾಮ ನಿಷ್ಠೆ ಬಲವಾಗಿ ಆ ಮುರುಕು ಮಂಟಪವನ್ನು ಅಭಿವೃದ್ಧಿಪಡಿಸುವ ಆಲೋಚನೆ ಮೂಡಿತು. ದೇವರಿಗೆ ಗರ್ಭಗುಡಿಯನ್ನು ಸಭಾಂಗಣವನ್ನು ನಿರ್ಮಿಸುವ ಅವನಿಗೆ ಊರ ಜನರ ಸಹಕಾರವೂ ದೊರೆಯಿತು. ಜನ ತಮ್ಮ ತಮ್ಮ ಕಾಣಿಕೆಯನ್ನು ನೀಡಿದರೂ ದೇಗುಲದ ನಿರ್ಮಾಣ ಅರ್ಧದಲ್ಲಿ ನಿಲ್ಲುವಂತಾಯಿತು. ಕಾರಣ ಹಣದ ಕೊರತೆ. ದೇಗುಲವನ್ನು ಸಂಪೂರ್ಣಗೊಳಿಸಲು ಆರು ಲಕ್ಷ ಬೆಳ್ಳಿಯ ವರಹ ಕಡಮೆಯಾಗಲು ಊರ ಜನರು ಆತನಿಗೆ ಒಂದು ಸಲಹೆಯನ್ನು ನೀಡಿದರು. ತಾವು ಆ ವರ್ಷ ಸರ್ಕಾರದ ಕಂದಾಯಕ್ಕಾಗಿ ನೀಡಿರುವ ಹಣ ಇನ್ನೂ ಗೋಪಣ್ಣನ ಬಳಿಯೆ ಇರುವುದರಿಂದ ತಾತ್ಕಾಲಿಕವಾಗಿ ಅದನ್ನು ದೇಗುಲ ಪೂರ್ಣಗೊಳಿಸಲು ಉಪಯೋಗಿಸಬಹುದೆಂದು, ಮುಂದಿನ ವರ್ಷ ತಾವು ಹೆಚ್ಚು ಕಂದಾಯ ನೀಡಿ ಬಾಕಿಯನ್ನು ಸರಿಪಡಿಸಬಹುದೆಂದೂ ವಿನಂತಿಸಿದರು. ತನಗೆ ಕಂದಾಯ ಹಣವನ್ನು ನೀಡಲು ಒಂದು ವರ್ಷ ಹೆಚ್ಚಿನ ಅವಧಿ ನೀಡಬೇಕೆಂದು ಸದ್ಯ ಜನರಿಂದ ಸಂದಾಯವಾಗಿರುವ ಆರು ಲಕ್ಷ ವರಹಗಳ ಮೊತ್ತವನ್ನು ದೇಗುಲ ನಿರ್ಮಾಣಕ್ಕೆ ಉಪಯೋಗಿಸಲು ಅನುಮತಿ ನೀಡಬೇಕೆಂದು ಗೋಪಣ್ಣ ಪತ್ರವೊಂದನ್ನು ಲಿಖಿತ ಮಾಡಿ ಅದನ್ನು ದೂತನ ಮೂಲಕ ಗೋಲ್ಕೊಂಡದ ನವಾಬನಿಗೆ ಕಳುಹಿಸುತ್ತಾನೆ.

ವಿಧಿಯ ಆಟವನ್ನು ಏನೆಂದು ಹೇಳುವುದು? ಗೋಪಣ್ಣನ ಹಣೆಯಲ್ಲಿ ಬ್ರಹ್ಮ ಬರಹವೇನಿತ್ತೋ? ಬಲ್ಲವರ್ಯಾರು? ಗೋಪಣ್ಣನ ಪತ್ರವನ್ನು ಅವನ ದೂತರು ನವಾಬನಿಗೆ ನೇರವಾಗಿ ನೀಡದೆ ತಮಗೆ ಎದುರಾದ ಅವನ ಪತ್ನಿ ಸಿತಾರಳಿಗೆ ನೀಡುತ್ತಾರೆ. ಪತ್ರ ಸ್ವೀಕರಿಸಿದ ಆ ಅರಸಿ ತಾನು ನವಾಬರ ಅನುಮತಿ ದೊರಕಿಸಿ ಕೊಡುವುದಾಗಿ ಅವರನ್ನು ಹಿಂದಕ್ಕೆ ಕಳುಹಿಸುತ್ತಾಳೆ. ಹಿಂದಿರುಗಿ ಬಂದ ದೂತರು ಗೋಪಣ್ಣನ ಪ್ರಸ್ತಾವನೆಗೆ ನವಾಬರ ಸಮ್ಮತಿಯಿದೆಯೆಂದು ವರ್ತಮಾನ ತರುತ್ತಾರೆ.

ಇದರಿಂದ ಸಂತುಷ್ಟನಾದ ಗೋಪಣ್ಣ ಆ ಹಣವನ್ನು ಉಪಯೋಗಿಸಿ ದೇಗುಲವನ್ನು ಸಂಪೂರ್ಣಗೊಳಿಸುತ್ತಾನೆ. ದೇಗುಲದ ಶಿರೋಭಾಗದಲ್ಲಿ ಸುದರ್ಶನ ಚಕ್ರ ಕೆತ್ತಿಸಲು ಅವನಿಗೆ ಸೂಕ್ತ ಶಿಲ್ಪಗಾರರ ನೆರವು ದೊರೆಯದಾಗುತ್ತದೆ. ಆ ಆಲೋಚನೆಯಲ್ಲಿ ನಿದ್ರಿಸುತ್ತಿರಲು ವೈಕುಂಠರಾಮ ಸ್ವಪ್ನದಲ್ಲಿ ದರ್ಶನವಿತ್ತು ಗೋಪಣ್ಣ ಗೋದಾವರಿಯಲ್ಲಿ ಪೀಯುವ ತಟದಲ್ಲಿ ಆ ಚಕ್ರವಿರುವುದಾಗಿ ಸೂಚಿಸುತ್ತಾನೆ. ಅಂತೆಯೇ ಗೋಪಣ್ಣ ಗೋದಾವರಿಯಲ್ಲಿ ಹುದುಗಿದ್ದ ಸುದರ್ಶನ ಚಕ್ರವನ್ನು ತೆಗೆದು ದೇಗುಲದ ಮುಂಭಾಗದ ಮೇಲ್ಗಡೆ ಪ್ರತಿಷ್ಠಾಪಿಸುತ್ತಾನೆ.

ದೇಗುಲ ಸಂಪೂರ್ಣವಾಗುತ್ತಿದ್ದಂತೆ ಅದರ ಪ್ರತಿಷ್ಠಾಪನ ಮಹೋತ್ಸವ ವಿಜೃಂಭಣೆಯಿಂದ ನಡೆಯುತ್ತದೆ. ಅಂದಿನ ತೆಲುಗು ರಾಜ್ಯದಲ್ಲಿ ಗೋಪಣ್ಣನ ಕೀರ್ತಿ ಹಬ್ಬುತ್ತದೆ. ಶ್ರೀರಾಮನಿಗಾಗಿ ಹಗಲಿರುಳೂ ಕಾಯಾ ವಾಚಾ ಮನಸಾ ದುಡಿದು ಜನರ ಆದರಕ್ಕೆ ಪಾತ್ರನಾಗಿ ರಾಮದಾಸು ಎಂದೇ ಖ್ಯಾತಿ ಪಡೆಯುತ್ತಾನೆ. ಕೀರ್ತಿ ಪತಾಕೆ ಭದ್ರಾಚಲದಿಂದ ಗೋಲ್ಕೊಂಡವರೆವಿಗೂ ಹಾರಾಡುತ್ತದೆ.

ಅತ್ತ ಸಿತಾರ ರಾಣಿ ಮಾಡಿದುದಾದರೂ ಏನು? ಗೋಪಣ್ಣನ ಮೇಲಿನ ಹಗೆಯನ್ನು ತೀರಿಸಿಕೊಳ್ಳಲು ಅವಳು ಅವನ ಪತ್ರವನ್ನು ಸುಟ್ಟು ಬೂದಿ ಮಾಡಿರುತ್ತಾಳೆ. ನವಾಬರಿಗೆ ಅದರ ಸುಳಿವನ್ನು ನೀಡುವುದಿಲ್ಲ.

ರಾಮದಾಸು ಸರ್ಕಾರದ ಬೊಕ್ಕಸಕ್ಕೆ ಸೇರಬೇಕಾದ ಹಣದಿಂದ ದೇಗುಲ ನಿರ್ಮಾಣ ಮಾಡಿದ ಸುದ್ದಿ ನವಾಬನನ್ನು ಕಂಗೆಡಿಸುತ್ತದೆ. ತನ್ನ ರಾಜ್ಯದಲ್ಲಿ ತನ್ನ ಅನುಮತಿಯಿಲ್ಲದೆ ಹಿಂದೂ ದೇವಾಲಯವೆ? ಅದೂ ತನ್ನ ಬೊಕ್ಕಸಕ್ಕೆ ಸೇರಬೇಕಾದ ಕಂದಾಯದ ಹಣದಿಂದ. ಅವನ ಕಿಚ್ಚಿಗೆ ತುಪ್ಪ ಸುರಿಯುತ್ತಾಳೆ ಅವನ ಸುಲ್ತಾನಿ ಸಿತಾರಾ. ನವಾಬನ ಸಿಟ್ಟು ತಾರಕಕ್ಕೇರಿ ತತ್‌ಕ್ಷಣ ರಾಮದಾಸುವನ್ನು ಬಂಧಿಸಿ ಹನ್ನೆರಡು ವರ್ಷ ಕಾರಾಗೃಹ ವಾಸದ ಶಿಕ್ಷೆ ವಿಧಿಸುತ್ತಾನೆ.

ಆ ಸೆರೆಮನೆ ವಾಸದಲ್ಲಿಯೇ ರಾಮದಾಸು ಉಲಿದದ್ದು "ಇಕ್ಷ್ವಾಕು ಕುಲ ತಿಲಕ.' ಆ ಹಾಡನ್ನು ಕೇಳಿಯೇ ರಾಮ-ಲಕ್ಷ್ಮಣರು ಧರೆಗಿಳಿಯುವ ನಿರ್ಧಾರ ಮಾಡಿದ್ದು. ರಾಮೋಜಿ ಮತ್ತು ಲಕ್ಷೋಜಿ ಎಂಬ ನಾಮಧೇಯ ಧರಿಸಿದ ಅವರು ನಡುರಾತ್ರಿಯಲ್ಲಿ ತಾನೀಷಾನ ಮಲಗುವ ಮನೆಯನ್ನು ಸೇರುತ್ತಾರೆ. ನಿದ್ರೆ ಮಾಡುತ್ತಿದ್ದ ಅವನನ್ನೆಬ್ಬಿಸಿ ರಾಮದಾಸು ಕೊಡಬೇಕಾಗಿದ್ದ ಆರು ಲಕ್ಷ ಬೆಳ್ಳಿಯ ವರಹಗಳ ಬದಲಾಗಿ ಆರು ಲಕ್ಷ ಚಿನ್ನದ 'ರಾಮ ಟಂಕಿ' ವರಹಗಳನ್ನು ನೀಡುತ್ತಾರೆ. ಅದಕ್ಕೆ ರಶೀತಿ ನೀಡಬೇಕೆಂದು ವಿನಂತಿಸಿ ರಾಮದಾಸುವಿನ ಬಿಡುಗಡೆಗೆ ಆಗ್ರಹಿಸುತ್ತಾರೆ. ರಾಮ ಟಂಕಿ ವರಹಗಳೆಂದರೆ ಶ್ರೀರಾಮನ ರಾಜ್ಯಭಾರದ ಕಾಲದಲ್ಲಿ ಪ್ರಚಲಿತವಿದ್ದ ನಾಣ್ಯಗಳೆಂದೆ ಪ್ರತೀತಿ. ಅದರ ಒಂದು ಮುಖದಲ್ಲಿ ಶ್ರೀರಾಮ ಪಟ್ಟಾಭಿಷೇಕದ ಚಿತ್ರವಿದ್ದರೆ ಮತ್ತೊಂದೆಡೆ ಹನುಮಂತನ ಚಿತ್ರವಿದೆ. ಅದರಿಂದ ವಿಸ್ಮಿತನಾದ ಸುಲ್ತಾಣ ರಶೀತಿ ನೀಡುತ್ತಾನೆ. ಈ ಯುವಕರು ಅದನ್ನು ಸೆರೆಮನೆಯ ಅಧಿಕಾರಿಗೆ ನೀಡಿದಾಗ ರಾಮದಾಸು

ಕಾರಾಗೃಹದಿಂದ ಬಿಡುಗಡೆಯಾಗುತ್ತಾನೆ. ಅನಿರೀಕ್ಷಿತವಾಗಿ ತನ್ನ ಬಿಡುಗಡೆಯಾದುದನ್ನು ಕಂಡು ಅವನಿಗೆ ಅಚ್ಚರಿಯಾದಾಗ ಸೆರೆಮನೆಯ ಅಧಿಕಾರಿ ಸರಕಾರದ ಬೊಕ್ಕಸಕ್ಕೆ ಅವನು ನೀಡಬೇಕಾಗಿದ್ದ ಹಣ ಬಡ್ಡಿ ಸಮೇತ ಸಂದಾಯವಾಗಿದೆಯೆಂದೂ ಮಾಹಿತಿ ನೀಡಿದಾಗ, ರಶೀತಿ ತಂದ ಯುವಕರನ್ನು ಕಾಣಬೇಕೆಂದಾಗ ಅವರು ಮಾಯವಾಗಿರುತ್ತಾರೆ.

ರಾಮದಾಸು ಕೃತಜ್ಞತಾಪೂರ್ವಕವಾಗಿ ನವಾಬನಿಗೆ ಭೇಟಿಯಾದಾಗ ತಾನೀಷಾನ ಕಣ್ಣು ತೆರೆಯುತ್ತದೆ. ತನಗೆ ಹಣ ನೀಡಿದವರು ಸ್ವತಃ ರಾಮ-ಲಕ್ಷ್ಮಣರೆಂದು ಅವರಿಗೆ ಮನವರಿಕೆಯಾಗುತ್ತದೆ. ರಾಮದಾಸುವಿನ ಭಕ್ತಿಯ ಉತ್ಕಟತೆಯನ್ನು ಕಂಡು ಅವನು ಭದ್ರಗಿರಿ ಪ್ರದೇಶವನ್ನು ರಾಮದಾಸುವಿಗೆ ಬಳುವಳಿಯಾಗಿ ನೀಡಿ ಅವನ ಧಾರ್ಮಿಕ ಕಾರ್ಯ ಅವಿಚ್ಛಿನ್ನವಾಗಿ ನಡೆಯಲು ಸಹಕರಿಸುತ್ತಾನೆ.

ಹಗಲಿರುಳು ರಾಮ ಧ್ಯಾನ ಮಾಡುವ ತನಗೆ ದರ್ಶನವೀಯದೆ ತನ್ನಂತಹ ರಾಮಭಕ್ತನನ್ನು ಬಂಧಿಸಿದ ಯವನ ನವಾಬನಿಗೆ ರಾಮ ದರ್ಶನದ ಭಾಗ್ಯ ದೊರೆತುದುದನ್ನು ಕಂಡು ಅವನು ಅಚ್ಚರಿಯಾದುದಕ್ಕೆ ಅಂದಿನ ರಾತ್ರಿ ರಾಮ ಕನಸಿನಲ್ಲಿ ಬಂದು ರಾಮದಾಸುವಿನ ಪೂರ್ವ ಜನ್ಮದ ಕಥೆ ನೆನಪು ಮಾಡುತ್ತಾನೆ. ಪೂರ್ವ ಜನ್ಮದಲ್ಲಿ ರಾಮದಾಸು ಬಾಲಕನಾಗಿದ್ದಾಗ ರಾಮ ನಾಮ ಉಲಿಯುತ್ತಿದ್ದ ಪಕ್ಷಿಯೊಂದನ್ನು ಪಂಜರದೊಳಿರಿಸಿ ಹಿಂಸಿಸಿದ್ದನಂತೆ. ಪಂಜರವಾಸ ಪಕ್ಷಿಗೆ ತಂದಿರಬಹುದಾದ ನೋವನ್ನು ರಾಮದಾಸು ಅನುಭವಿಸಲೆಂದು ಈ ಶಿಕ್ಷೆ. ಅದೇ ರೀತಿಯಲ್ಲಿ ತಾನೀಷಾನ ಪೂರ್ವ ಜನ್ಮದ ಪುಣ್ಯಫಲವೇ ಈ ಜನ್ಮದಲ್ಲಿ ರಾಮ ದರ್ಶನ. ಕರ್ಮಫಲವನ್ನು ಎಲ್ಲರೂ ಅನುಭವಿಸಬೇಕಷ್ಟೆ.

ಅಂದಿನಿಂದ ತಮ್ಮ ಜೀವಿತವನ್ನೇ ಭದ್ರಾಚಲದ ದೇಗುಲದ ಅಭಿವೃದ್ಧಿಗಾಗಿ ಮೀಸಲಿಟ್ಟರು ರಾಮದಾಸರು. ತೆಲುಗಿನಲ್ಲಿ ಸುಮಾರು ಇನ್ನೂರಕ್ಕೂ ಹೆಚ್ಚು ಕೀರ್ತನೆಗಳನ್ನು ಬರೆದಿದ್ದಾರೆ. ಅವರ ಜನನ ಕ್ರಿ.ಶ. 1620. ಜೀವಿತಾವಧಿ 60 ವರ್ಷಗಳು ಎಂದು ವಿದ್ವಾಂಸರು ತೀರ್ಮಾನಿಸಿದ್ದಾರೆ. ಅವರ ಬಹುತೇಕ ಕೀರ್ತನೆಗಳು ಸೆರೆಮನೆ ವಾಸದಲ್ಲಿಯೇ ಬರೆದುದಾಗಿದೆ. ದೇಗುಲದಲ್ಲಿ ದೊರೆತಿರುವ ಶಾಸನಗಳಿಂದ ಅಲ್ಲಿಯ ಪೂಜಾ ವಿಧಾನಗಳ ಬಗ್ಗೆ ಭಕ್ತ ರಾಮದಾಸರು ಸೂಚನೆಗಳನ್ನು ನೀಡಿರುವುದು ಗಮನಕ್ಕೆ ಬರುತ್ತದೆ.

ಭದ್ರಾಚಲ ಇಂದು ಪವಿತ್ರ ಯಾತ್ರಾಸ್ಥಳವಾಗಿದ್ದು ಅಲ್ಲಿ ವೈಕುಂಠ ಏಕಾದಶಿ, ಶ್ರೀರಾಮನವಮಿ, ವಾಗ್ಗೇಯಕಾರರ ಮಹೋತ್ಸವಗಳನ್ನು ಬಹಳ ವಿಜೃಂಭಣೆಯಿಂದ ನಡೆಸಲಾಗುತ್ತಿದೆ. ರಾಮದಾಸರಿಂದ ಸ್ಫೂರ್ತಿ ಪಡೆದ ವಾಗ್ಗೇಯಕಾರರಲ್ಲಿ ಪ್ರಮುಖರು ಶ್ರೀ ತ್ಯಾಗರಾಜರು, ಕರ್ನಾಟಕ ಸಂಗೀತಕ್ಕೆ ಪ್ರಮುಖ ಕೊಡುಗೆ ನೀಡಿದವರಲ್ಲಿ ಪುರಂದರದಾಸರ ಅನಂತರ ಕೇಳಿ ಬರುವ ಹೆಸರು ಇವರದು. ಶ್ರೀರಾಮ ನವಮಿ ಉತ್ಸವಕ್ಕೆ ಇಂದಿಗೂ ಜಿಲ್ಲಾ ಆಡಳಿತದಿಂದ ಸಾಕಷ್ಟು ಧನ ಸಹಾಯ, ಬಳುವಳಿಗಳು ಬರುತ್ತಿದ್ದು, ಅದು ನವಾಬನ ಕಾಲದ ಪದ್ಧತಿಯೆಂದು ಹೇಳುತ್ತಾರೆ. ಕಲಿಯುಗದಲ್ಲಿ ಶ್ರೀರಾಮನ ಸಾಕ್ಷಾತ್ಕಾರವನ್ನು ಪಡೆದ ಪ್ರಮುಖರಲ್ಲಿ ಹೆಸರಿಸಬಹುದಾದವರು ಭದ್ರಾಚಲದ ಭಕ್ತ ರಾಮದಾಸರು. ರಾಮಾಯಣವನ್ನು ಸಂಕ್ಷಿಪ್ತವಾಗಿ 'ದಾಶರಥಿ ಶತಕಮ್'ನಲ್ಲಿ ರೂಪಿಸಿರುವ ಅವರು ಪ್ರತಿ ಪದ್ಯದ ಕೊನೆಯಲ್ಲಿ ಬರೆಯುವುದು 'ಭದ್ರಗಿರಿ ದಾಶರಥಿ ಕರುಣಾ ಪಯೋನಿಧಿ' ಎಂದು. ಈ ಭಕ್ತರ 'ನವರತ್ನ ಕೀರ್ತನೆ'ಗಳೆಂದರೆ 'ಅದಿಗೋ ಭದ್ರಾದ್ರಿ', 'ಶ್ರೀರಾಮ ನಾಮಮೆ' 'ಪಲುಕೆ ಬಂಗಾರ ಮಯಿನ' 'ಶ್ರೀರಾಮುಲ ದಿವ್ಯ ನಾಮ' 'ರಾಮ ಜೋಗಿ ಮಂದ' 'ತಾರಕ ಮಂತ್ರಮು' 'ಹರಿ ಹರಿ ರಾಮ' 'ತಕ್ಕುವೇಮಿ ಮನಕು' 'ಕಂತಿ ನೆಡು ಮಾ ರಾಮುಲ'ಗಳು.

ಭದ್ರಾಚಲದ ಭಕ್ತ ರಾಮದಾಸರು ಹೇಳುವಂತೆ ಸೀತಾರಾಮರ ಸ್ಮರಣೆ ಮಾಡಿದ ದಿವಸವೇ ಸುದಿನ. ಅದೇ ಹಬ್ಬದ ದಿನ.

**ಈ ದಿನಮೇ ಸುದಿನಮು-ಸೀತಾರಾಮ**
**ಸ್ಮರಣಮೇ ಪಾವನಮು**

---

**೪೨೨, 'ಚಂದ್ರಿಕ' ೫ನೇ ರಸ್ತೆ, ಹೆಚ್.ಬಿ.ಆರ್. ಲೇಔಟ್,**
**ಬೆಂಗಳೂರು-೫೬೦ ೦೪೩.**



ಶ್ರೀರಾಮ ದಾಸರನ್ನು ಬಂಧಿಸಿಟ್ಟಿದ್ದ ಗೋಲ್ಕಂಡ ಕೋಟೆ

ಭಾರತ ದೇಶದಲ್ಲಿ ಕಥೆ ಹೇಳಲು ಕೇಳಲು ಎಲ್ಲರಿಗೂ ಬಲು ಇಷ್ಟ. ಮಕ್ಕಳು ನಿದ್ದೆ ಮಾಡಬೇಕಾದರೆ ಕಥೆ ಹೇಳಬೇಕು. ದೊಡ್ಡವರು ಆಕಳಿಸದೆ ಎದ್ದಿರಬೇಕಾದರೆ ಕಥೆ ಬೇಕು. ಪ್ರಾಚೀನ ಸಾಹಿತ್ಯದಲ್ಲಿ ಕಥೆ ಹೇಳಿಸಿಕೊಳ್ಳದ, ಆಸಕ್ತಿಯಿಂದ ಕೇಳಿಸಿಕೊಳ್ಳದ ಪಾತ್ರಗಳೆ ಇಲ್ಲ. ಬಾಲಕರಾದ ರಾಮ, ಲಕ್ಷ್ಮಣರನ್ನು ತಾಟಕಾಸುರ ವಧೆಗೆಂದು ಕರೆದೊಯ್ದ ವಿಶ್ವಾಮಿತ್ರ ಮಹರ್ಷಿ ಅದೆಷ್ಟು ಕಥೆಗಳನ್ನು ಹೇಳಿ ಅವರಿಗೆ ಇತಿಹಾಸ, ಭೂಗೋಳ, ಪುರಾಣಗಳ ಜ್ಞಾನವನ್ನು ನೀಡಿ, ಋಷಿ–ಮಹರ್ಷಿಗಳ ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟರು. ಜೂಜಿನಲ್ಲಿ ಸೋತು ಕಾಡಿನಲ್ಲಿ ಕಾಲ ಹಾಕಬೇಕಾದ ಕಷ್ಟ ಒದಗಿದಾಗ ಧರ್ಮರಾಯನಿಗೆ ಅದೆಷ್ಟು ಜನ ಕಥೆಗಳನ್ನು ಹೇಳಿ ಜೀವನ ದರ್ಶನ ಮಾಡಿಸಿದರು. ಋಷಿಮುನಿಗಳಿಂದ ನಳ ದಮಯಂತಿ, ಸತ್ಯವಾನ ಸಾವಿತ್ರಿ, ಮುಂತಾದ ಕಥೆಗಳನ್ನು ಕೇಳಿ ಯುಧಿಷ್ಠಿರ ಸಮಾಧಾನಚಿತ್ತನಾದನಂತೆ. ಈ ಕಥೆಗಳನ್ನು ಜಗತ್ತಿನ ಶ್ರೇಷ್ಠ ಕಥಾನಕಗಳೆಂದು ಪರಿಗಣಿಸಿದ್ದಾರೆ ಸಾಹಿತ್ಯಲೋಕದ ದಿಗ್ಗಜರು.

ಪ್ರಾಚೀನ ಕಥಾಸಾಹಿತ್ಯದಲ್ಲಿ, ತಮ್ಮ ವಿಚಿತ್ರ ಪ್ರಶ್ನೆಗಳಿಗೆ ಕಥೆಗಳ ಮೂಲಕ ಸಮಾಧಾನ ಹೇಳಿದರೆ ಎಂಥೆಂಥ ಭೂತಪ್ರೇತಪಿಶಾಚಿಗಳೂ, ಬ್ರಹ್ಮರಾಕ್ಷಸರೂ ಬಿಟ್ಟು ಹೋಗುತ್ತಾರೆ! ಕಥೆಯ ಮಹಿಮೆ ಅಪಾರ! ಭಾರತದಲ್ಲಿ ಮನುಷ್ಯ ಮನುಷ್ಯರಿಗೆ ಕಥೆ ಹೇಳುವುದಿರಲಿ. ಪಶು, ಪಕ್ಷಿ, ಪ್ರಾಣಿಗಳೆಲ್ಲ ಆಸಕ್ತಿಯಿಂದ ಕಥೆ ಹೇಳುತ್ತವೆ. ಕುತೂಹಲದಿಂದ ಕೇಳುತ್ತವೆ. ವೇದೋಪನಿಷತ್ ಸಾಹಿತ್ಯ, ರಾಮಾಯಣ, ಮಹಾಭಾರತ, ಪುರಾಣಗಳು ಎಲ್ಲದರಲ್ಲೂ ಹೇರಳವಾದ ವೈವಿಧ್ಯಮಯವಾದ ಕಥೆಗಳಿವೆ. ಒಟ್ಟಿನಲ್ಲಿ ಕಥಾಸಾಹಿತ್ಯ ಪರಂಪರೆ ಈ ದೇಶದಲ್ಲಿ ಬಹುಹಿಂದಿನಿಂದ ತನ್ನ ಪದಚಿಹ್ನೆಯನ್ನು ಸ್ಪಷ್ಟವಾಗಿ ಮೂಡಿಸಿದೆ.

# ಕಥಾಸರಿತ್ಸಾಗರ–ಪ್ರಸ್ತಾವನೆ

ಬೃಹತ್‌ಕಥೆ ಎಂಬುದು ಬಹು ಪ್ರಾಚೀನವಾದ ಕಥಾಸಂಗ್ರಹ. ಬಹು ವಿಚಿತ್ರವಾದ, ಲೋಕಲೋಕಾಂತರಗಳ ಕಥೆಗಳೆಲ್ಲ ಇದರಲ್ಲಿವೆ. ಇದು ಪೈಶಾಚಿ ಭಾಷೆಯಲ್ಲಿದ್ದ ಕಥೆಗಳ ದೊಡ್ಡಕಟ್ಟು. ಕಾಲಕ್ರಮದಲ್ಲಿ ಪೈಶಾಚಿ ನುಡಿ ಕಣ್ಮರೆಯಾಯಿತು. ನಮ್ಮ ದೇಶದಲ್ಲಿ ಕಥೆಗೆ ಮಾರುಹೋದವರ ಸಂಖ್ಯೆ ಅಸಂಖ್ಯ, ಹಾಗಾಗಿ ಹೊದಿಕೆ ಹೋದರೂ ಹೂರಣ ಉಳಿಯಿತು. ಬೃಹತ್ಕಥೆಯ ಸಂಸ್ಕೃತಾನುವಾದಗಳು, ತಮಿಳು ರೂಪಗಳು ಬಹು ಹಿಂದೆಯೇ ಪ್ರಚಾರಕ್ಕೆ ಬಂದವು. 'ರಾಮಾಯಣ, ಭಾರತ, ಭಾಗವತಗಳನ್ನು ಬಿಟ್ಟರೆ, ನೇರವಾಗಿಯೋ, ದೂರವಾಗಿಯೋ, ಬೃಹತ್ಕಥೆಯೇ ಪ್ರಾಚೀನ ಸಂಸ್ಕೃತ ಗದ್ಯ–ಪದ್ಯ–ಕಾವ್ಯ–ನಾಟಕಗಳೆಲ್ಲಕ್ಕೂ ಆಕರವಾಗಿದೆ. ಅದರ ಕಥೆಗಳು ದೇಶವಿದೇಶಗಳಿಗೆ ಹೋಗಿ ಅರೇಬಿಯನ್ ನೈಟ್ಸ್, ಬೋಕಾಚಿಯೋ ಕಥೆಗಳು, ಚಾಸರನ ಕಥೆಗಳು, ಕೊನೆಗೆ ಶೇಕ್ಸ್‌ಪೀಯರನ ನಾಟಕಗಳು ಹೀಗೆ ಎಲ್ಲವುಗಳಿಗೂ ಸಾಮಗ್ರಿಗಳನ್ನು ಒದಗಿಸಿವೆ. ಕನ್ನಡಿಗರು ಅಸಡ್ಡೆ ಮಾಡಿದರೂ ಅದೆಷ್ಟೋ ಕಥೆಗಳನ್ನು ತಮಿಳರು ಉಪಯೋಗಿಸಿಕೊಂಡು ಚಲನಚಿತ್ರಗಳನ್ನು ರಚಿಸಿದ್ದಾರೆ. ಹೀಗೆ ಮೂಲ ದೇವನ ಕಥೆ 'ಮಂಗಮ್ಮ ಶಪಥಂ' ಚಿತ್ರವಾಗಿದೆ'. ಎನ್ನುತ್ತಾರೆ ಸೋಮದೇವನ ಕೃತಿಯನ್ನು 'ಕಥಾಮೃತ'ವಾಗಿ ಕನ್ನಡಕ್ಕೆ ತಂದವರು ಡಾ. ಎ.ಆರ್. ಕೃಷ್ಣಶಾಸ್ತ್ರೀ.

ಕಾಲ ಕಳೆದಂತೆ ತಮಿಳಿನ ಪೆರುಂಗತೈ ಕೂಡ ಕಾಣದಾಯಿತು. ಆದರೆ ಇಡೀ ಬೃಹತ್ ಕಥೆಗಳನ್ನು ಕಾಪಿಟ್ಟುಕೊಟ್ಟವರು ಕಾಶ್ಮೀರದ ಮೇರು ಸಾಹಿತಿಗಳಾದ ಸೋಮದೇವ ಭಟ್ಟ (ಕಥಾಸರಿತ್ಸಾಗರ) ಮತ್ತು ಕ್ಷೇಮೇಂದ್ರ (ಬೃಹತ್‌ಕಥಾಮಂಜರಿ). ಕಾಶ್ಮೀರದ ವಾಙ್ಮಯ ವರಿಷ್ಠರಿಂದ ಭಾರತೀಯ ಸಾಹಿತ್ಯಕ್ಕೆ ದೊರೆತ ದೊಡ್ಡ ಬಹುಮಾನವಿದು. 'ಕಾಶ್ಮೀರ' ಈ ಪದ ಕೇಳಿದೊಡನೆ ಭಾರತೀಯರಿಗೆಲ್ಲ ಏನೋ ಒಂದು ಚೆಲುವಾದ ಚಿತ್ರ ಮನದಲ್ಲಿ ಮೂಡುತ್ತದೆ. ಭೂಪಟ ನೋಡಿದರೆ ಕಾಶ್ಮೀರ ದೇಶ ಭಾರತಭೂಮಿದೇವಿಯ ಶಿರೋಭಾಗದಲ್ಲಿರುವುದನ್ನು ಗಮನಿಸಬಹುದು. ಸಂಸ್ಕೃತ ನುಡಿಯಲ್ಲಿ ತಲೆಗೆ ಅನೇಕ ಪರ್ಯಾಯ ಪದಗಳಿವೆ. ಅದರಲ್ಲಿ 'ಉತ್ತಮಾಂಗ' ಎಂಬುವುದೂ ಒಂದು. ದೇಹದಲ್ಲಿ ಅನೇಕ ಅಂಗಗಳು, ಉಪಾಂಗಗಳು ಇವೆ. ಇವುಗಳೆಲ್ಲೆಲ್ಲ ತಲೆಯೇ ಉತ್ತಮವಾದದ್ದು ಎಂಬರ್ಥದಲ್ಲಿ ಈ ಶಬ್ದ ಪ್ರಯುಕ್ತವಾಗಿದೆ.



**ಈ ಸಂಚಿಕೆಯಿಂದ ಸಂಸ್ಕೃತ ವಿದುಷಿ, ಪ್ರಾಧ್ಯಾಪಕಿ, ಮಾಜಿ ವಿಧಾನ ಪರಿಷತ್ ಸದಸ್ಯೆ, ಲೇಖಕಿ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿರುವ ಡಾ. ಎಸ್.ಆರ್. ಲೀಲಾ ಅವರು ಸಂಸ್ಕೃತದ ಮಹತ್‌ಗ್ರಂಥ ಕಥಾಸರಿತ್ಸಾಗರದಿಂದ ಕೆಲವು ಉತ್ತಮ ಕಥೆಗಳನ್ನು ಆಯ್ದು ಮಲ್ಲಾರ ಓದುಗರಿಗೆ ನೀಡಲಿದ್ದಾರೆ.**

**–ಸಂ.**

ಬುದ್ಧಿಪ್ರಚೋದಕವಾದ ಮೆದುಳು ಶಿರಸ್ಸನ್ನಾಶ್ರಯಿಸಿದೆ ಅಷ್ಟೆ! ಬುದ್ಧಿಶಕ್ತಿ ಮಾನವನ ವಿಶೇಷವಾಗಿರುವಂತೆ ಬುದ್ಧಿಗಮ್ಯವಾದ, ಪ್ರತಿಭಾವಿಲಾಸಮಾತ್ರ–ಸಾಧ್ಯವಾದ ಭಾರತೀಯ ಶಾಸ್ತ್ರಗಳು, ಕಾವ್ಯಗಳು, ಕಾವ್ಯಶಾಸ್ತ್ರಗಳು ಕಾಶ್ಮೀರ ದೇಶದಿಂದ ಬಂದಿರುವುದೂ ವಿಶೇಷ. ಆದ್ದರಿಂದಲೇ ವಿದ್ಯಾಧಿದೇವತೆಯಾದ ಶಾರದೆಯನ್ನು ಕಾಶ್ಮೀರಪುರವಾಸಿನಿಯೆಂದು ಭಾರತೀಯರು ಆರಾಧಿಸುತ್ತಾ ಬಂದಿರುವುದು.

ಕಥಾಸರಿತ್ಸಾಗರದ ಕರ್ತೃವನ್ನು ಸೋಮದೇವ ಸೂರಿ ಎಂದೂ ಹೇಳುವುದುಂಟು. ಸೂರಿ, ಭಟ್ಟ ಎರಡೂ ಒಂದೇ, ವಿದ್ವನ್ಮಣಿ ಎಂದರ್ಥ. ಸೋಮದೇವ ಸೂರಿಯು ಕಥನಕಲಾನಿಪುಣ, ಸಂಸ್ಕೃತಭಾಷಾಪ್ರಯೋಗ ಪ್ರವೀಣ. ಮಹಾಕವಿಶಿರೋಮಣಿ. ಈತನ ಶೈಲಿ ಶ್ರವಣರಮಣೀಯ, ಸುರಮ್ಯ, ಕಥೆ ಹೇಳಲು ಪದ್ಯಶೈಲಿಯನ್ನು ಬಳಸಿರುವುದು ಭಾರತೀಯ ಕಥಾಸಾಹಿತ್ಯದ ವೈಶಿಷ್ಟ್ಯ. ರಾಮಾಯಣ, ಮಹಾಭಾರತ, ಭಾಗವತ, ಪುರಾಣಸಾಹಿತ್ಯ, ಕಥಾಸರಿತ್ಸಾಗರ, ಬೃಹತ್ಕಥಾಮಂಜರಿ ಹೀಗೆ ಎಲ್ಲ ಕಥಾಸಾಹಿತ್ಯದಲ್ಲೂ ಪದ್ಯಗಳದ್ದೇ ಸಾಮ್ರಾಜ್ಯ. ಗದ್ಯಪದ್ಯಗಳೆರಡನ್ನೂ ಹೊಂದಿರುವುದು ಪಂಚತಂತ್ರ ಮತ್ತು ಅದನ್ನಾಧರಿಸಿದ ಹಿತೋಪದೇಶ ಮುಂತಾದ ಕೆಲವೇ ಕೆಲವು ಕಥಾಗುಚ್ಛಗಳು ಮಾತ್ರ.

ಪ್ರಪಂಚದ ಕಥಾವಸ್ತುಗಳನ್ನೆಲ್ಲ ಒಂದು ನೂರು ವಿಧಗಳಲ್ಲಿ ಅಡಗಿಸಬಹುದುದಂತೆ. ಆ ನೂರರ ಬಹುಪಾಲು ಕಥಾಸರಿತ್ಸಾಗರದಲ್ಲಿವೆ ಎಂದರೆ ಇದರ ಕಥಾಸಂಪತ್ತು ಎಂಥದ್ದೆಂಬುದರ ಅರಿವು ಆಗುತ್ತದೆ. ಬೃಹತ್ ಕಥೆ ಆರಂಭವಾಗುವುದೇ ಪಾರ್ವತೀದೇವಿ, 'ಯಾರೂ ಇದುವರೆಗೆ ಕೇಳದ ಅಪೂರ್ವ ಕಥೆಯನ್ನು ನನಗೆ ಹೇಳು' ಎಂದು ಪರಮೇಶ್ವರನನ್ನು ಕೇಳುವುದರ ಮೂಲಕ, ಅಂದರೆ ಇದು ಶಿವನು ಗಿರಿಜೆಯ ಚಿತ್ತವಿನೋದಕ್ಕಾಗಿ ಹೇಳಿದ ಕಥೆ!

ಸೋಮದೇವಭಟ್ಟನು ಸೂರ್ಯಮತಿ ಎಂಬ ರಾಣಿಯ ಮನೋರಂಜನೆಗಾಗಿ ಕಥಾಸರಿತ್ಸಾಗರವನ್ನು ಬರೆದನಂತೆ. 11ನೇ ಶತಮಾನದ ಮಧ್ಯಭಾಗದಲ್ಲಿ ಕಾಶ್ಮೀರವನ್ನು ಆಳಿದ ಅನಂತರಾಜನ ಪತ್ನಿ ಸೂರ್ಯಮತಿ.

ಕಥಾಸರಿತ್ಸಾಗರ! ಆಹಾ! ಎಷ್ಟು ಸೂಕ್ತವಾದ, ಚೆಲುವಾದ ಹೆಸರು! ಕಥೆಗಳೇ ನದಿಗಳು. ಅವೆಲ್ಲ ಬಂದು ಸೇರುವ ಸಾಗರವೇ ಕಥಾಸರಿತ್ಸಾಗರ. ಶ್ರೀಮದ್ರಾಮಾಯಣದಲ್ಲಿ ಕಾಂಡಗಳಿರುವಂತೆ, ಮಹಾಭಾರತದಲ್ಲಿ ಪರ್ವಗಳಿರುವಂತೆ, ಕಥಾಸರಿತ್ಸಾಗರದಲ್ಲಿ ಲಂಬಕಗಳೆಂಬ ವಿಭಾಗಗಳಿವೆ. 19,000 ಶ್ಲೋಕಗಳುಳ್ಳ ಇದರ ಮಹಾಕಥಾಶರೀರವನ್ನು 18 ಲಂಬಕಗಳಲ್ಲಿ ಅಡಕಗೊಳಿಸಲಾಗಿದೆ.

ಕಥಾಸರಿತ್ಸಾಗರ ಬರೆದು ಸರಿಸುಮಾರು ಸಾವಿರದ ನೂರು ವರ್ಷಗಳೇ ಕಳೆದಿವೆ. ಸರಿದ ಕಾಲ ಸಣ್ಣದಲ್ಲದಿದ್ದರೂ ಭಾರತೀಯ ಸಮಾಜದ ದಿಕ್ಕುದೆಸೆಗಳು, ಗೊತ್ತುಗುರಿಗಳು, ಕುಟುಂಬವ್ಯವಸ್ಥೆ, ಮೌಲ್ಯಗಳು, ವ್ಯಕ್ತಿಗತ ಗುಣದೋಷಗಣನೆಗಳು ಹೆಚ್ಚೇನೂ ಬದಲಾಗಿಲ್ಲದಿರುವುದು ಆಶ್ಚರ್ಯ!

ಹಾಗೆಯೇ ಶಿರೋಭಾಗವಾದ ಉತ್ತರದ ಕಾಶ್ಮೀರದಲ್ಲಿದ್ದಂತೆಯೆ ಭಾರತದ ದಕ್ಷಿಣದ ತುದಿಯಲ್ಲೂ ಅದೇ ಸಾಮಾಜಿಕ ಸ್ಥಿತಿಗತಿಗಳು ಬಹುಮಟ್ಟಿಗೆ ಇದ್ದುವು. ವೇಷ, ಭೂಷ, ಭಾಷೆ, ಆಚಾರವಿಚಾರಗಳಲ್ಲಿ ಎಷ್ಟೇ ವ್ಯತ್ಯಾಸಗಳಿದ್ದರೂ, ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕವಾದ ಏಕಸೂತ್ರತೆ ಭಾರತದಲ್ಲಿ ಅಂತರ್ಗತವಾಗಿತ್ತು. ಇದೇ ಕಾರಣಕ್ಕಾಗಿ ಇಲ್ಲಿಗೆ ಆಶ್ರಯ ಅರಸಿ ಬಂದವರಿಗೂ, ಆಕ್ರಮಣ ಮಾಡಿದ ಹೊರಗಿನವರಿಗೂ ಭಾರತ ಒಂದೇ ತೆರನಾದ ದೇಶವಾಗಿ, ಒಂದೇ ಭೂಖಂಡವಾಗಿ ಗೋಚರಿಸಿದ್ದು.


ವಿಶಾಲ ಭಾರತದ ಪ್ರಾಚೀನ ಅರ್ವಾಚೀನಗಳ ಏಕಸೂತ್ರತೆಯನ್ನು ಎತ್ತಿಹಿಡಿಯುವ ಕಥಾಸರಿತ್ಸಾಗರದ ಹಲವು ಕಥೆಗಳನ್ನು ಮುಂದೆ ನೋಡೋಣ.●

# ಉಪಕೋಶಾ

ಪಾಟಲೀಪುತ್ರ ತುಂಬ ಪ್ರಸಿದ್ಧವಾದ ನಗರ. ಅಲ್ಲಿ ವರ್ಷ ಎಂಬ ಮಹಾವಿದ್ವಾಂಸನಿದ್ದ. ವೇದವಿದ್ಯಾ ಪರಿಣತನಾಗಿ ಮಂತ್ರಮಹೋದಧಿಯಂತೆ ಶೋಭಿಸುತ್ತಿದ್ದ ಈತನಿಗೆ ಮೂವರು ಶಿಷ್ಯರು. ವರರುಚಿ, ವ್ಯಾಡಿ ಮತ್ತು ಇಂದ್ರದತ್ತ. ಇವರು ಅಸಾಮಾನ್ಯರು. ವರರುಚಿ ಒಮ್ಮೆ ಕೇಳಿದರೆ ಸಾಕು ಗ್ರಹಿಸುವ ಏಕಶ್ರುತಧರನಾಗಿದ್ದ. ವ್ಯಾಡಿ ಎರಡು ಸಲ, ಇಂದ್ರದತ್ತ ಮೂರು ಸಲ ಕೇಳಿದರೆ ಗ್ರಹಿಸುವ ಕುಶಾಗ್ರಬುದ್ಧಿಗಳು. ವಿದ್ಯಾರ್ಜನೆ ಮಾಡಿದ ಅನಂತರ ಇವರು ಒಮ್ಮೆ ನಗರದಲ್ಲಿ ನಡೆಯುತ್ತಿದ್ದ ಇಂದ್ರೋತ್ಸವವನ್ನು ನೋಡಲು ಹೋದರು. ನಗರದ ಉತ್ಸವಪ್ರಿಯ ನಾಗರಿಕರೆಲ್ಲ ಅಲ್ಲಿ ನೆರೆದಿದ್ದರು. ಯುವಕಯುವತಿಯರೂ ಗುಂಪುಗುಂಪಾಗಿ ಸೇರಿ ಉಲ್ಲಾಸದಿಂದ ಹರಟುತ್ತಿದ್ದರು. ಅವರಲ್ಲಿ ಕಮನೀಯ ರೂಪಿನ ಕನ್ಯೆಯರದೂ ಒಂದು ಗಣ. ಈ ಗಣದಲ್ಲಿದ್ದ ಒಬ್ಬಳು ವರರುಚಿಯ ಸಂಪೂರ್ಣ ಗಮನವನ್ನು ಸೆಳೆದಳು.

ನವಯೌವನ ತಂದ ಸುಕುಮಾರ ಸೌಂದರ್ಯದಿಂದ ಮನ್ಮಥನ ವಿಲಾಸಭವನದಂತೆ ಆಕೆ ಕಂಗೊಳಿಸುತ್ತಿದ್ದಳು. ಯುವತಿಯ ಕಣ್ಣು ವರರುಚಿಯ ಕಡೆಗೆ ಹರಿಯಿತು. ವೇದವಿದ್ಯಾಪಾರಂಗತನಾದ ಅವನ ತಾರುಣ್ಯಪೂರ್ಣ ಮೊಗದಲ್ಲಿ ತೇಜಸ್ಸು ಮುಕ್ಕಳಿಸುತ್ತಿತ್ತು. ಅವನನ್ನು ಕಾಣುತ್ತಲೆ, ಆ ರಮಣಿಯ ಮನದಲ್ಲಿ ಮಥನ ಆರಂಭಿಸಿತ್ತು. “ಅಬ್ಬ! ಏನು ಕಾಂತಿ! ಎಂಥ ತೇಜಸ್ವಿ ವ್ಯಕ್ತಿತ್ವ! ನನ್ನ ಮನಸ್ಸು ಕುಡಿನೋಟವನ್ನು ಅವನ ಮೊಗದಲ್ಲೆ ನಿಲ್ಲಲು ಹೇಳುತ್ತಿದೆ. ಒಳದನಿಯೊಂದು, ಛೆ! ಇದೇನಿದು, ಲಜ್ಜೆಗೆಟ್ಟೆಯಾ! ಒಂದೇ ನೋಟಕ್ಕೆ ಬಂದಿಯಾದೆಯಾ! ತೆಗೆ ನಿನ್ನ ಕಣ್ಣನ್ನು ಅಲ್ಲಿಂದ ಎಂದು ಛೇಡಿಸುತ್ತಿದೆ. ಇಂಥ ಹೊಯ್ದಾಟ ಹಿಂದೆಂದೂ ಆಗಿರಲಿಲ್ಲ. ಯಾತನೆಯಿಂದಲೆ ಅವನಿಂದ ಕಣ್ಣುಕಿತ್ತು ಪಕ್ಕದಲ್ಲಿದ್ದ ಸಖಿಯನ್ನು ನೋಡಿದೆ. ಅವಳಾದರೋ ನನ್ನನ್ನೇ ದಿಟ್ಟಿಸುತ್ತ, ನನ್ನ ಹೃದಯಭಾವವನ್ನು ಗ್ರಹಿಸಿಬಿಟ್ಟಿದ್ದಳು. ಆದರೂ ನಾನು ಮತ್ತೆ ಮತ್ತೆ ಆ ತರುಣನನ್ನೇ ಕಾಣಲು ಸಜ್ಜಾದೆ. ಮನ ಮುನ್ನುಗ್ಗುತ್ತಿತ್ತು. ನನ್ನ ಭಾವತೀವ್ರತೆಯ ಕಳವಳ ಕಂಡ ಗೆಳತಿ ಸುಪರ್ಣ, ‘ಬಾ ಹೋಗೋಣ! ಇನ್ನು ಇಲ್ಲಿದ್ದರೆ ಅಪಾಯ’ ಎಂದಳು.

ಅ ವ ಳ



ದನಿಯಷ್ಟೆ ನನ್ನ ಕಿವಿಗೆ ಬಿತ್ತು. ಅರ್ಥ ಆಗಲಿಲ್ಲ. ಮತ್ತೆ ಮತ್ತೆ ಅವನನ್ನೇ ಹುಡುಕಾಡಲು ನನ್ನಂತರಂಗ ಕಣ್ಣಿನ ಸಹಾಯ ಬಯಸಿತು.

ಅಷ್ಟರಲ್ಲಿ ಅವನೂ ಎರಡು ಹೆಜ್ಜೆ ಹಿಂದೆ ಹೋಗಿ ತಾನೊಬ್ಬನೆ ನನಗೆ ಚೆನ್ನಾಗಿ ಕಾಣುವಂತೆ ನಿಂತಿದ್ದ. ‘ನನ್ನದೇ ಸ್ಥಿತಿ ಅವನದೂ ಇರಬೇಕೇನೋ! ಅವನ ದೃಷ್ಟಿ ನನ್ನತ್ತಲೆ! ಕಣ್ಣಲ್ಲಿ ಕಾತರ, ತವಕ, ಮಾರ್ದವತೆಗಳ ಮೇಳನ!’

ಸುಪರ್ಣೆ ನನ್ನ ತೋಳು ಹಿಡಿದು ಎಳೆದುಕೊಂಡು ಮುನ್ನಡೆದಳು. ನನ್ನ ಶರೀರ ಅವಳೊಡನೆ ಮುಂದಕ್ಕೆ ಸಾಗುತ್ತಿದ್ದರೂ ಮನಸ್ಸು ಮಾತ್ರ ಹಿಂದಕ್ಕೆ ಓಡುತ್ತಿತ್ತು...”

***

ಇತ್ತ ಮನೆಗೆ ಮರಳಿದ ವರರುಚಿಗೆ ಏನೋ ಕಳೆದುಕೊಂಡ ಭಾವ. ಎಷ್ಟು ತಡಕಾಡಿದರೂ ಕಳೆದಿದ್ದು ಏನೆಂದು ತಿಳಿಯದ ಮಬ್ಬು. ಮಲಗಲು ಹೋದ. ನಿದ್ದೆ ಎಲ್ಲಿ ಹೋಗಿತ್ತೋ, ಇವನ ಬಳಿ ಸುಳಿಯಲೆ ಇಲ್ಲ. ಹೊರಳಾಡಿ ಸಾಕಾಗಿ ಮೆಲ್ಲನೆ ಎದ್ದು ವ್ಯಾಡಿಯ ಬಳಿಗೆ ಹೋದ. ಇವನ ಆವಸ್ಥೆಯನ್ನು ಗಮನಿಸಿದ್ದ ಅವನು, “ಏನಾಯಿತು? ನಿದ್ದೆ ಬರಲಿಲ್ಲವೆ? ಉತ್ಸವಕ್ಕೆ ಹೋಗಿ ಉತ್ಸಾಹ ಕಳೆದುಕೊಂಡಂತೆ ಕಾಣುತ್ತದಲ್ಲ” ಎಂದು ನಕ್ಕ. ಇವನು ಸಂಕೋಚದಿಂದಲೆ, ಉತ್ಸವದಲ್ಲಿ ನಡೆದಿದ್ದನ್ನು ಹೇಳಿದ. ವರರುಚಿಗಿಂತ ದೊಡ್ಡವನಾದ ವ್ಯಾಡಿ ನಡೆದದ್ದನ್ನು ಸರಿಯಾಗಿ ಊಹಿಸಿದ. “ಆಯಿತು ಬಿಡು! ಅವಳನ್ನು ಯಾರೆಂದು ತಿಳಿದಿದ್ದೀಯಾ, ಉಪವರ್ಷ ಆಚಾರ್ಯರ ಮುದ್ದಿನ ಮಗಳು, ಉಪಕೋಶಾ” ಎಂದ. ಮರುದಿನ ಪ್ರಾತರ್ವಿಧಿಗಳ ಅನಂತರ ಆಚಾರ್ಯ ವರ್ಷನ ಬಳಿ ಬಂದು ನಮಸ್ಕರಿಸಿ ನಿವೇದಿಸಿಕೊಂಡ,

“ಗುರುಗಳೇ ವರರುಚಿಗೆ ಗೃಹಸ್ಥಾಶ್ರಮ ರುಚಿಸುತ್ತಿರುವಂತಿದೆ. ತಾವು ದಾರಿ ತೋರಿ ಶಿಷ್ಯನನ್ನು ಉದ್ಧರಿಸಬೇಕು.”

ಇತ್ತ ಸುಪರ್ಣೆ ಉಪಕೋಶೆಯ ತಾಯಿಗೆ ಅವಳ ಪ್ರೇಮ ಪ್ರಕರಣವನ್ನರುಹಿದಳು. ಹೆಂಡತಿಯಿಂದ ಮಗಳ ವೃತ್ತಾಂತವನ್ನು ಕೇಳಿದ ಉಪವರ್ಷನು ಅಣ್ಣನಾದ ವರ್ಷನ ಬಳಿಗೆ ಬಂದು ವಿಷಯ ತಿಳಿಸಿದ. “ವರರುಚಿ ಬಹುಬುದ್ಧಿಶಾಲಿ. ನಿನ್ನ ಅಳಿಯನಾಗಲು ನನ್ನ ಶಿಷ್ಯ ತುಂಬ ಅರ್ಹನಾಗಿದ್ದಾನೆ” ಎಂದು ಅಣ್ಣನನ್ನು ಅಭಿನಂದಿಸಿದ. ಇನ್ನೇನು ಬೇಕು? ತರುಣ–ತರುಣಿಯರ ಅಂತರಂಗದ ಬಯಕೆಗೆ ಗುರು–ಹಿರಿಯರ ಆಶೀರ್ವಾದ ತರಂಗಗಳು ತಂಪೆರೆದವು. ಬಲುಬೇಗನೆ ಸಪ್ತಪದಿ ತುಳಿದು ವರರುಚಿ ಉಪಕೋಶೆಯರು ಸತಿಪತಿಗಳಾದರು. ಬದುಕಿನ ರಸಕ್ಷಣಗಳನ್ನು ಯಥೇಚ್ಛವಾಗಿ ಸವಿದರು. ವರರುಚಿ ಉಪಕೋಶೆಯ ಮಧ್ಯೆ ಪರಸ್ಪರ ಪ್ರೀತಿಗೌರವಗಳು ದಿನೇದಿನೇ ವೃದ್ಧಿಯಾಯಿತು. ಆತ್ಮೀಯತೆ, ಆಪ್ಯಾಯತೆಯ ಭಾವದಲ್ಲಿ ಮಿಂದು ಬಹುಸುಂದರ ದಿನಗಳನ್ನು ಕಳೆದರು.

* * *

ವರ್ಷಾಚಾರ್ಯನ ಬಳಿ ಅನೇಕ ಶಿಷ್ಯರಿದ್ದರು. ಅವರಲ್ಲಿ ಪಾಣಿನಿಯೂ ಒಬ್ಬ. ಒಮ್ಮೆ ವ್ಯಾಕರಣ ಪರೀಕ್ಷೆಯಲ್ಲಿ ವರರುಚಿ ಅವನಿಗೆ ಸೋತು ಹೋದ. ಅದರಿಂದ ಬೇಸರವಾಗಿ ತಪಸ್ಸಿಗೆ ಹೊರಟ, ಪ್ರಿಯ ಪತ್ನಿ ಉಪಕೋಶಳ ಅನುಮತಿಯನ್ನು ಪಡೆಯಲು ಮರೆಯಲಿಲ್ಲ. ಹೋಗುವ ಮೊದಲು ತನ್ನ ಅನುಪಸ್ಥಿತಿಯಲ್ಲಿ ಮನೆಗೆ ಬೇಕಾಗಬಹುದಾದಷ್ಟು ಹಣವನ್ನು ಪರಿಚಿತ ವ್ಯಾಪಾರಿ ಹಿರಣ್ಯಗುಪ್ತನಲ್ಲಿ ಕೊಟ್ಟು ಹೆಂಡತಿ ಕೇಳಿದಾಗ

ಕೊಡಬೇಕು ಎಂದು ಅವನಿಂದ ಮಾತು ಪಡೆದುಕೊಂಡ.

ಉಪಕೋಶಳ ಗುಣ ಅವಳ ದೇಹಸೌಂದರ್ಯಕ್ಕೆ ಸಾಟಿಯಾದದ್ದು. ಪತಿ ಇಲ್ಲದಿರುವಾಗ ಸ್ನಾನ, ವ್ರತ, ತಪಗಳಲ್ಲಿ ತೊಡಗಿದಳು. ಅವನ ಶ್ರೇಯಸ್ಸನ್ನೇ ಬಯಸುತ್ತ ಕಾಲಕಳೆಯುತ್ತಲಿದ್ದಳು. ಒಮ್ಮೆ ಗಂಗಾ ನದಿಗೆ ಸ್ನಾನಕ್ಕೆಂದು ಹೊರಟಾಗ ರಾಜನಿಗೆ ಹತ್ತಿರದವರಾದ ರಾಜಪುರೋಹಿತ, ಸೇನಾಧಿಪತಿ ಮತ್ತು ಕುಮಾರಸಚಿವರು ಆಕೆಯನ್ನು ನೋಡಿದರು. ಜಪತಪಗಳಿಂದ ಕೃಶೆಯಾಗಿದ್ದರೂ ಅವಳ ಸೌಂದರ್ಯ ಅವರನ್ನು ಮರುಳು ಮಾಡಿತು. ಸ್ನಾನ ಮಾಡಿ ಹಿಂದಿರುಗುವಾಗ,

ಸಚಿವನು, ಅವಳನ್ನು ಅಡ್ಡಗಟ್ಟಿ ಪ್ರೇಮಭಿಕ್ಷೆಯನ್ನು ಬೇಡಿದನು. ಆಗ ಅವಳು, "ಗಂಡ ಪ್ರವಾಸದಲ್ಲಿದ್ದಾನೆ. ಹೀಗೆ ಬೀದಿಯಲ್ಲಿ ನಿಲ್ಲಬೇಡ. ನಾನು ಉತ್ತಮಳಾದ ಕುಲಸ್ತ್ರೀ. ಯಾರಾದರೂ ನೋಡಿಯಾರು. ನಿನ್ನ ಪ್ರೇಮ ನನಗೂ ಇಷ್ಟವೆ. ರಾತ್ರಿ ಮೊದಲನೆಯ ಯಾಮದಲ್ಲಿ ಮನೆಗೆ ಬಾ" ಎಂದಳು. ಅವನು ಸ್ವರ್ಗಕ್ಕೆ ಮೂರೇ ಗೇಣು ಎಂದು ಹೊರಟ. ಸ್ವಲ್ಪ ದೂರ ಬಂದ ಅನಂತರ ರಾಜಪುರೋಹಿತನು ಆಕೆಯಲ್ಲಿ ತನ್ನ ಪ್ರೇಮ ಹೇಳಿಕೊಂಡ. ಅವನಿಗೆ, "ನೀನು ಎರಡನೆಯ ಯಾಮದಲ್ಲಿ ಮನೆಗೆ ಬಾ, ಈಗ ಹೋಗು" ಎಂದು ಹೇಳಿ ಬಿಡಿಸಿಕೊಂಡು ಮುಂದೆ ಸಾಗಿದಳು. ಸಂತೋಷದಿಂದ ಅವನು ಹೊರಟ. ಬಳಿಕ ಸೇನಾಧಿಪತಿ ಅವಳನ್ನು ತಡೆದಾಗ, "ನೀನು ಮೂರನೆಯ ಯಾಮದಲ್ಲಿ ಬಾ" ಎಂದಳು. ಅವನ ಆನಂದಕ್ಕೆ ಪಾರವೇ ಇಲ್ಲ!

ಭಯದಿಂದ ಅವಳ ದೇಹ ನಡುಗುತ್ತಿತ್ತು. ಈ ಧೂರ್ತರ ಮಾತಿನಿಂದ ಮನ ಮುದುಡುತ್ತಿತ್ತು. ಆದರೂ ಮನೆಗೆ ಬಂದೊಡನೆ, ದಾಸಿಯನ್ನು ಹಣ ತರಲು ಹಿರಣ್ಯಗುಪ್ತನ ಮನೆಗೆ ಕಳಿಸಿದಳು. ಅವನೋ ಅವಳು ತನ್ನವಳಾದರೆ ಮಾತ್ರ ಹಣ ಕೊಡುವೆನೆಂದು ಕಠೋರವಾಗಿ ಹೇಳಿದನು. ಹಣ ಕೊಟ್ಟಿದ್ದಕ್ಕೆ ಸಾಕ್ಷಿ ಇಲ್ಲವೆಂಬ ಧೈರ್ಯ ಅವನದು. ಅವನಿಗೆ, "ಆಗಲಿ, ರಾತ್ರಿಯ ಕೊನೆಯ ಯಾಮದಲ್ಲಿ ಬಾ" ಎಂದು ಸಂಕೇತ ಕೊಟ್ಟಳು.

ಇತ್ತ ತೈಲಮಿಶ್ರಿತವಾದ ಕಾಡಿಗೆಯನ್ನು ದೊಡ್ಡ ಬಾಣಲೆಯಲ್ಲಿ ತಯಾರಿಸಲು ದಾಸಿಯರಿಗೆ ಹೇಳಿದಳು. ಅದಕ್ಕೆ ಕಸ್ತೂರಿ ಮುಂತಾದ ಪರಿಮಳ ದ್ರವ್ಯಗಳನ್ನು ಸೇರಿಸಲು ಮರೆಯಲಿಲ್ಲ. ಮೊದಲನೆಯ ಯಾಮದಲ್ಲಿ ಕುಮಾರಸಚಿವನು ಅಲಂಕಾರಭೂಷಿತನಾಗಿ ಠೀವಿಯಿಂದ ಬಂದನು. ಮರೆಯಲ್ಲೆ ಇದ್ದುಕೊಂಡು ಉಪಕೋಶೆ ಅವನಿಗೆ ಹೇಳಿದಳು, "ಸ್ನಾನ ಮಾಡಿದರೇನೇ ನಿನ್ನನ್ನು ನಾನು ಮುಟ್ಟುವುದು. ನಡಿ ಒಳಗೆ ಸ್ನಾನ ಮಾಡು." ದಾಸಿಯರು ಬಂದು ಅವನನ್ನು ಒಳಕೋಣೆಗೆ ಕರೆದೊಯ್ದು, ಬಟ್ಟೆಗಳನ್ನೂ ಆಭರಣಗಳನ್ನೂ ತೆಗೆಸಿ, ಮಾನಮುಚ್ಚಿಕೊಳ್ಳಲು ಚೂರು ಬಟ್ಟೆ ಕೊಟ್ಟರು. ಬಳಿಕ ಅವನ ದೇಹವೇ ಕಾಣದಂತೆ ಕಾಡಿಗೆ ಬಳಿದರು. ಮುಖಕ್ಕೂ ಕಾಡಿಗೆಯ ಸೇವೆಯಾಯಿತು. ಸಚಿವ ಮಹಾಶಯನಿಗೆ ಕಣ್ಣೇ ಕಾಣದಂತಾಯಿತು. ಅಷ್ಟರಲ್ಲಿ ಎರಡನೆಯ ಯಾಮವಾಗಿ ರಾಜಪುರೋಹಿತನು ಪ್ರತ್ಯಕ್ಷನಾದನು. ಸಚಿವನನ್ನು, "ಪೆಟ್ಟಿಗೆಯಲ್ಲಿ ಸೇರಿಕೊ" ಎಂದು ಹೇಳಿ ಬಾಗಿಲು ಮುಚ್ಚಿದರು. ಪುರೋಹಿತನಿಗೂ ಇದೇ ರೀತಿಯ ಸೇವೆಯನ್ನು ಸಲ್ಲಿಸುತ್ತಿರುವಾಗ ಮೂರನೆಯ ಯಾಮವಾಯಿತು. ಸೇನಾಪತಿ ಬಂದನು. ನೋಡು ಯಾರೋ ವರರುಚಿಯ ಮಿತ್ರ ಬಂದಿದ್ದಾನೆ. ಎಂದು ಭಯಗೊಂಡಂತೆ ನಟಿಸಿದ ದಾಸಿಯರು, "ನೀನಿಲ್ಲೆ ಅವಿತಿಟ್ಟುಕೊ" ಎಂದು ಹೇಳಿ ಪುರೋಹಿತನನ್ನೂ ಅದೇ ದೊಡ್ಡ ಪೆಟ್ಟಿಗೆಯಲ್ಲಿ ಕೂಡಿದರು. ಅನಂತರ ಸೇನಾಧಿಪತಿಗೂ ಇದೇ ಗತಿಯನ್ನು ಕಾಣಿಸಿ, ಹೊರಗಿನಿಂದ ಬೀಗ ಜಡಿದರು. ಬೆತ್ತಲಾದ ಮೂರು ಜನ ಕತ್ತಲೆಯ ಕೂಪದಲ್ಲಿ ಬಿದ್ದು ಮಿಸುಕಾಡದೆ ಇದ್ದರು. ಕಡೆಯಲ್ಲಿ ಆಸೆಹೊತ್ತು ಬಂದವನು ವ್ಯಾಪಾರಿ. ಅವನನ್ನು ದೀಪ ತೋರಿಸಿ ಬರಮಾಡಿಕೊಂಡ ಉಪಕೋಶೆ, "ನನ್ನ ಪತಿ ನೀಡಿದ ಹಣವನ್ನು ಹಿಂತಿರುಗಿಸು" ಎಂದಳು. ಸುತ್ತು ನೋಡಿದ ಹಿರಣ್ಯಗುಪ್ತ, ಯಾರೂ ಇಲ್ಲದ್ದನ್ನು ಗಮನಿಸಿ, "ಹೇಳಿದ್ದೆನಲ್ಲ, ಮೊದಲು ನನ್ನ ಬಳಿ ಬಾ, ಆಮೇಲೆ ಹಣ" ಎಂದ. ಆಗ ಉಪಕೋಶೆಯು ಪೆಟ್ಟಿಗೆಯಲ್ಲಿದ್ದವರಿಗೆ ಕೇಳಿಸುವಂತೆ, "ದೇವತೆಗಳೆ, ಹಿರಣ್ಯಗುಪ್ತನ ಮಾತನ್ನು ಕೇಳಿಸಿಕೊಂಡಿರಾ" ಎನ್ನುತ್ತಾ ದೀಪವನ್ನಾರಿಸಿ ಬಿಟ್ಟಳು. ದಾಸಿಯರು ಅವನಿಗೂ ಬಟ್ಟೆ ತೆಗೆಸಿ ಕಾಡಿಗೆ ಎಣ್ಣೆಯನ್ನು ಲೇಪಿಸಿ ಹೊರಗೆ ದಬ್ಬಿದರು. ಅವನು ಕೊಸರಾಡುತ್ತ ಬೀದಿಗೆ ಬಂದ. ಬೊಗಳುತ್ತ ಅಟ್ಟಿಸಿಕೊಂಡು ಬರುತ್ತಿದ್ದ ನಾಯಿಗಳ ಕಾಟವನ್ನು ಹೇಗೋ ತಪ್ಪಿಸಿಕೊಂಡು ನಾಚಿಕೆಯಿಂದ ಮುದುಡಿ ಮನೆ ತಲಪಿದ. ಸಹಾಯಕ್ಕೆ ಬಂದ ಸೇವಕರ ಮುಂದೆ ನಿಲ್ಲಲೂ ಅವನಿಗೆ ಸಹ್ಯವಾಗಲಿಲ್ಲ. ಪತಿವ್ರತೆಯ ಮೇಲೆ ಕಣ್ಣು ಹಾಕಿದ್ದಕ್ಕೆ ತಕ್ಕ ಶಿಕ್ಷೆ ಆಗಿತ್ತು!

ಬೆಳಗಾದ ಅನಂತರ ಉಪಕೋಶಾ ದಾಸಿಯರನ್ನು ಜೊತೆಗಿಟ್ಟುಕೊಂಡು ನಂದರಾಜನ ಅರಮನೆಗೆ ಹೋದಳು. "ನನ್ನ ಗಂಡನು ಇಟ್ಟಿದ್ದ ಹಣವನ್ನು ವ್ಯಾಪಾರಿ ಅಪಹಾರ ಮಾಡಲು ಹೊಂಚುಹಾಕಿದ್ದಾನೆ" ಎಂದು ರಾಜನ ಮುಂದೆ ದೂರಿತ್ತಳು. ವ್ಯಾಪಾರಿಯನ್ನು ಅರಮನೆಯ ನ್ಯಾಯಾಧಿಕರಣಕ್ಕೆ ಕರೆಸಿ ಕೇಳಿದಾಗ, "ಇವಳಿಗೆ ಕೊಡಬೇಕಾದ ಹಣ ಯಾವುದೂ ನನ್ನ ಕೈಯಲ್ಲಿಲ್ಲ" ಎಂದ ಹಿರಣ್ಯಗುಪ್ತ. ಅವನ ಹೊಟ್ಟೆಯಲ್ಲಿ ಬೆಂಕಿ ಬಿದ್ದಿತ್ತು. ಅಪಮಾನದಿಂದ ಕುದಿಯುತ್ತಿದ್ದ. ಉಪಕೋಶಾ, "ದೇವ, ಸಾಕ್ಷಿಗಳನ್ನು ಕರೆಸಲೆ" ಎಂದು ಪೆಟ್ಟಿಗೆಯನ್ನು ತರಿಸಿದಳು. "ಸತ್ಯ ಹೇಳುವ ದೇವತೆಗಳೆ, ನೆನ್ನೆ ಈ ವ್ಯಾಪಾರಿ ಏನು ಹೇಳಿದ, ಅದನ್ನು ಹೇಳಿ ನೀವು ನಿಮ್ಮ ನಿವಾಸಕ್ಕೆ ತೆರಳಬಹುದು. ಇಲ್ಲದಿದ್ದರೆ ಸಭೆಯಲ್ಲಿ ನೀವಾರೆಂಬುದನ್ನು ತೋರಿಸಿಬಿಡುತ್ತೇನೆ" ಎಂದು ಗುಡುಗಿದಳು. ಪೆಟ್ಟಿಗೆಯೊಳಗೆ ನಡುಗುತ್ತಿದ್ದ ಮೂವರು ಕಾಮಿಗಳು, 'ಹಣ ಕೊಡಲು ನಮ್ಮೆದುರೇ ಒಪ್ಪಿದ್ದನಿವನು" ಎಂದರು. ಹಣ ಹಿಂದಿರುಗಿಸದಿರಲು ಹಿರಣ್ಯಗುಪ್ತನಿಗೆ ಬೇರೆ ದಾರಿಯೇ ಕಾಣಲಿಲ್ಲ. ಹಣ ತರಿಸಿ ರಾಜನೆದುರೆ ಉಪಕೋಶಳ ಕೈಗಿತ್ತನು. ರಾಜನಿಗೆ ಕುತೂಹಲ ತಡೆಯದಾಯಿತು. ಪೆಟ್ಟಿಗೆಯ ಬೀಗ ತೆಗೆಸಿದ. ನೋಡಿದರೆ ದೇಹವಾಂತ ಮೂರು ಅಮಾವಾಸ್ಯೆಗಳೇ ಕಂಡವು! ರಾಜನಿಗೂ ಇತರರಿಗೂ ಬಹು ಪ್ರಯತ್ನದಿಂದ ಈ ಮಹಾನುಭಾವರ ಗುರುತು ಹತ್ತಿತು. ಎಲ್ಲರೂ ಹೊಟ್ಟೆತುಂಬ ನಕ್ಕರು. ಇವರ ಹೊಟ್ಟೆಯಲ್ಲಿ ಮಾತ್ರ ಮೆಣಸು ಅರೆದಂತಾಗಿತ್ತು. ಉಪಕೋಶಳ ನಡೆದದ್ದನ್ನೆಲ್ಲ ಯಥಾವತ್ತಾಗಿ ರಾಜನಿಗೆ ಹೇಳಿಬಿಟ್ಟಳು. ರಾಜನು ಶೀಲವತಿಯಾದ ಉಪಕೋಶಳ ಬುದ್ಧಿಮತ್ತೆಯನ್ನು ಮೆಚ್ಚಿಕೊಂಡು ಬೇಕಾದಷ್ಟು ಧನಕನಕಗಳನ್ನು ಬಳುವಳಿಯಾಗಿ ನೀಡಿದ. ಅನಂತರ, "ಉಪಕೋಶಾ, ನೀನು ನನ್ನ ತಂಗಿಯಂತೆ, ನಿನ್ನ ಪತಿ ಹಿಂತಿರುಗುವವರೆಗೆ ನಿನ್ನ ರಕ್ಷಣೆ ನನ್ನ ಹೊಣೆ, ಧೈರ್ಯದಿಂದಿರು" ಎಂದು ನುಡಿದ. ಉಪಕೋಶಾ ರಾಜನಿಗೆ ಕೃತಜ್ಞತೆಯನ್ನು ಸಲ್ಲಿಸಿದಳು. ಸಭಾಸದರೆಲ್ಲ ಉಪಕೋಶಳನ್ನು ಮನಸಾ ಮೆಚ್ಚಿಕೊಂಡರು, ಅಭಿನಂದಿಸಿದರು. ವಿಷಯ ತಿಳಿದ ವರ್ಷ ಮತ್ತು ಉಪವರ್ಷ ಆಚಾರ್ಯರು ತಮ್ಮ ಮಗಳ ಮತಿವಿಶೇಷವನ್ನು ಕಂಡು ಮೂಕವಿಸ್ಮಿತರಾದರು.

ಈ ಪ್ರಕರಣ ಮುಗಿಯುವ ಹೊತ್ತಿಗೆ ವರರುಚಿಯ ತಪಸ್ಸೂ ಮುಗಿದು ಅದರ ಫಲವನ್ನೂ ಪಡೆದಿದ್ದ. ಪಾಟಲೀಪುತ್ರಕ್ಕೆ ಹಿಂತಿರುಗಿದ ಅವನಿಗೆ ಊರತುಂಬ ತನ್ನ ಪ್ರಿಯಪತ್ನಿಯ ಗುಣಗಾನ ಮಾಡುವವರೆ ದೊರೆತರು. ಗುರುಗಳೂ ಉಪಕೋಶಳ ಪಾತಿವ್ರತ್ಯವನ್ನೂ ಪ್ರಸಂಗಾವಧಾನವನ್ನೂ ಕೊಂಡಾಡಿದರು. ನಡೆದದ್ದೆಲ್ಲವನ್ನೂ ವಿಶದವಾಗಿ ತಿಳಿದ ವರರುಚಿಗೆ ಅವಳಲ್ಲಿ ಗೌರವ ಹೆಚ್ಚಾಯಿತು. ಪ್ರೇಮವಂತೂ ಉಕ್ಕಿಹರಿಯಿತು.●

▶▶ 13ನೇ ಪುಟದಿಂದ

ನಿಯಂತ್ರಣ. ಎಲ್ಲಿಗೆ ಪ್ರಯಾಣ ಮಾಡಿದರೂ ಅವರು ಕೆಲಸ ಮುಗಿಸಿ ಯತಿರಾಜ ಮಠಕ್ಕೆ ಬಂದು ತಲಪುತ್ತಿದ್ದರು.

ಹೀಗೆ ಹೊಯ್ಸಳ ರಾಜ್ಯದಲ್ಲಿ ನೆಲೆಸಿದ ಮೇಲೆ ಅವರಿಗೆ ಶ್ರೀರಂಗಂ ನೆನಪೇ ಮಾಯವಾಯಿತು. ಶ್ರೀಮನ್ನಾರಾಯಣನ ಸೇವೆಯಲ್ಲಿ ಯಾವ ಸ್ಥಳವಾದರೇ ಏನು? ಎಲ್ಲೆಡೆ ಇರುವುದು ಆ ಸರ್ವಾಂತರ್ಯಾಮಿಯೇ ಅಲ್ಲವೇ. ಪ್ರಪಂಚದಲ್ಲಿ ಎಲ್ಲಿದ್ದರೂ ಒಂದೇ. ವಿಷ್ಣುವಿನ ಕೈಂಕರ್ಯ ನಿರ್ವಿರಾಮವಾಗಿ ಸಾಗುತ್ತಿದ್ದರೆ ಸಾಕು. ಆಗಿನ ಕಾಲಕ್ಕೆ ಅವರ ಸಾಧನೆ 'ನ ಭೂತೋ ನ ಭವಿಷ್ಯತಿ' ಎಂಬಂತ್ತಿತ್ತು. ಅವರ ಅದೃಷ್ಟದ ಬಾಗಿಲು ತೆರೆದುಕೊಂಡಿದ್ದೇ ಹೊಯ್ಸಳ ರಾಜ್ಯ ಪ್ರವೇಶದ ಅನಂತರ.

ಆರಂಭದಲ್ಲಿ ನಲ್ಲಾನ್ ಚಕ್ರವರ್ತಿಯಿಂದ ವೈಷ್ಣವರಾಗಿದ್ದ ಕಾಡಿನ ಜನರು ರಾಮಾನುಜರನ್ನು ದಿಕ್ಕುಗಾಣದ ಓಡಾಟದಿಂದ ಪಾರುಮಾಡಿ ಸರಿಯಾದ ದಾರಿಯಲ್ಲಿ ತೊಣ್ಣೂರಿನ ಕಡೆ ನಡೆಸಿದರು. ವಹ್ನಿ ಪುಷ್ಕರಿಣಿ ಸಾಲಿಗ್ರಾಮದಲ್ಲಿ ಆಂಧ್ರಪೂರ್ಣರೆಂಬ ಅವಿಚ್ಛಿನ್ನ ಭಕ್ತರೊಬ್ಬರು ರಾಮಾನುಜರ ಅಡಿದಾವರೆಗಳಿಗೆ ಎರಗಿ ಅಂದಿನಿಂದ ಇಡೀ ತಮ್ಮ ಬಾಳನ್ನು ರಾಮಾನುಜರಿಗೆ ಸಮರ್ಪಿಸಿದರು. ರಾಮಾನುಜರ ಪ್ರತಿ ಹೆಜ್ಜೆಯನ್ನೂ ದಾಖಲಿಸಿಕೊಂಡು 'ಯತಿರಾಜ ವೈಭವಮ್' ಎಂಬ ಅವರ ಜೀವನ ಚರಿತ್ರೆಯನ್ನು ರಚಿಸಿದ ಶ್ರೇಯಸ್ಸು ಈ ಭಕ್ತನದಾಗಿತ್ತು.

ಅನಂತರ ತೊಣ್ಣೂರಿನಲ್ಲಿ ತೊಂಡನೂರು ನಂಬಿ ರಾಮಾನುಜರ ಭಕ್ತಾಗ್ರೇಸರರ ಗುಂಪನ್ನು ಸೇರಿಕೊಂಡರು. ಅಹನ್ಯಹನಿ ಭಿಕ್ಷೆ ಬೇಡಿ ಜೀವಿಸುತ್ತಿದ್ದ ಈ ಬಡ ಬ್ರಾಹ್ಮಣನ ಮೂಲಕ ಮಹಾರಾಜ ಬಿಟ್ಟಿದೇವ ಮತ್ತು ಪಟ್ಟಮಹಿಷಿ ಶಾಂತಲಾದೇವಿಯರ ಪರಿಚಯವಾಗಿ ಅವರ ಮಗಳು ಹರಿಯಾಲದೇವಿಯ ತೀವ್ರ ಕಾಯಿಲೆ ವಾಸಿಯಾದ ಮೇಲಂತೂ ರಾಮಾನುಜರ ಶುಕ್ರದೆಶೆ ಹಠಾತ್ತನೆ ಆರಂಭಗೊಂಡಿತು. ತಮ್ಮ ಕಾರ್ಯದಲ್ಲಿ ಅವರು ಊರ್ಧ್ವಮುಖಿ ಪಯಣ ಆರಂಭಿಸಿದರು. ವಿಷ್ಣುವರ್ಧನನ ಸಂಪೂರ್ಣ ಬೆಂಬಲ ದೊರೆತು ವೈಷ್ಣವ ಮತ ಪ್ರಸಾರ ಅದ್ಭುತ ವೇಗ ಪಡೆಯಿತು. ಜೈನರು, ಶೈವರು ಹಾಗೂ ಸಮಾಜ ತಿರಸ್ಕೃತ ಪಂಚಮರೂ ಸೇರಿದಂತೆ ಎಲ್ಲ ಜಾತಿ, ಮತ, ವರ್ಗಗಳ ಜನರೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ರಾಮಾನುಜ ಪಥಕ್ಕೆ ಬಂದರು.

ವಿಶಾಲ, ಸುಂದರ ತೊಣ್ಣೂರಿನ ನಂಬಿ ನಾರಾಯಣ, ಮೇಲುಕೋಟೆಯ ತಿರುನಾರಾಯಣ ದೇವಾಲಯಗಳು ಮೇಲೆದ್ದವು. ಮೇಲುಕೋಟೆಯಲ್ಲಿ ಯತಿರಾಜ ಮಠ ಸ್ಥಾಪನೆಯಾಯಿತು.

ವಿಷ್ಣುವರ್ಧನ ಮಹಾರಾಜ ಮಾಂಡಲಿಕನಾಗಿದ್ದನಷ್ಟೆ. ಅವನು ತೊಣ್ಣೂರನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದ. ಅವನ ತಂದೆ ಎರೆಯಂಗದೇವ ದ್ವಾರಸಮುದ್ರವನ್ನು ರಾಜಧಾನಿ ಮಾಡಿಕೊಂಡು ಇಡೀ ಹೊಯ್ಸಳ ರಾಜ್ಯದ ಅಧಿಪತಿಯಾಗಿ ಆಡಳಿತ ನಡೆಸುತ್ತಿದ್ದ. ದ್ವಾರಸಮುದ್ರಕ್ಕೆ ವೇಲಾಪುರಿ ಮತ್ತು ಬೇಲೂರು ಎಂಬ ಹೆಸರುಗಳೂ ಇದ್ದವು.

ರಾಮಾನುಜರು ವಿಷ್ಣುವರ್ಧನನಿಗೆ ಪಂಚ ವಿಷ್ಣು ದೇವಾಲಯಗಳನ್ನು ನಿರ್ಮಿಸುವಂತೆ ತಿಳಿಸಿದ್ದರು. ಅದರಲ್ಲಿ ಬೇಲೂರು ಚೆನ್ನಕೇಶವ ದೇವಾಲಯವೂ ಒಂದು. ಅದರ ನಿರ್ಮಾಣವನ್ನು ರಾಮಾನುಜರ ಕಾಲದಲ್ಲಿಯೇ ಆರಂಭಿಸಲಾಗಿತ್ತು. ಬೇಲೂರು ಚೆನ್ನಕೇಶವ ದೇವಾಲಯ ಪ್ರತಿಷ್ಠಾಪನೆಗೆ ತಮ್ಮ ಪ್ರಥಮ ಪ್ರಮುಖ ಶಿಷ್ಯನಾದ ದಾಶರಥಿಯನ್ನು ತಮ್ಮ ಪರವಾಗಿ ಕಳುಹಿಸಿ ಮಾರ್ಗದರ್ಶನ ಮಾಡಿಸಿದರು.

ರಾಮಾನುಜರು ಮೇಲುಕೋಟೆಯನ್ನು ತೊರೆದ ಅನಂತರವೂ ಅವರು ವಿಷ್ಣುವರ್ಧನನ ಮೇಲೆ ಎಷ್ಟು ಆಳವಾದ ಪ್ರಭಾವ ಬೀರಿದ್ದರೆಂದರೆ, ಅತ್ಯುತ್ತಮ ವಾಸ್ತುಶಿಲ್ಪಿಗಳನ್ನೂ ಸೂಕ್ಷ್ಮ ಕೆಲಸದ ಶಿಲ್ಪಿಗಳನ್ನು ಕೆಲಸಕ್ಕೆ ಹಚ್ಚಿ ವಿಶ್ವವಿಖ್ಯಾತವಾಗುವಂತಹ ಸುಂದರ ವಾಸ್ತುಶಿಲ್ಪದ ದೇವಾಲಯಗಳ ನಿರ್ಮಾಣವನ್ನು ಮುಂದುವರಿಸಿದ. ಗದಗಿನಲ್ಲಿ ವೀರನಾರಾಯಣ ಹಾಗೂ ತಲಕಾಡಿನಲ್ಲಿ ಕೀರ್ತಿನಾರಾಯಣ ದೇವಾಲಯಗಳನ್ನೂ ನಿರ್ಮಿಸಿ ರಾಮಾನುಜರಿಗೆ ತನ್ನಲ್ಲಿದ್ದ ಭಕ್ತಿ ಪ್ರಪತ್ತಿಗಳನ್ನು ಮೆರೆದು ತಾನೂ ಕೀರ್ತಿಶಾಲಿಯಾದ.


ತೊಂಡನೂರಿನಿಂದ ಮೇಲುಕೋಟೆಗೆ ತಮ್ಮ ನೆಲೆಯನ್ನು ಬದಲಾಯಿಸಿದ ಅನಂತರ ರಾಮಾನುಜರು ಇನ್ನೂ ಹೆಚ್ಚು ಪ್ರಜ್ವಲಿಸಲಾರಂಭಿಸಿದರು.

ಹೊಯ್ಸಳ ರಾಜ್ಯ ಅವರನ್ನು ಕಟ್ಟಿಹಾಕಿಬಿಟ್ಟಿತು. ಅಲ್ಲಿಯ ಕೆಲಸ ಕಾರ್ಯಗಳು, ಕಾರ್ಯಕ್ರಮಗಳು ಎಷ್ಟರಮಟ್ಟಿಗೆ ಹೆಚ್ಚಿದ್ದವೆಂದರೆ ಅವರಿಗೆ ಅವು ಅಷ್ಟ ದಿಗ್ಬಂಧನ ಹಾಕಿದ್ದವು. ಹೀಗಿರುವಾಗ ಅವರಿಗೆ ಶ್ರೀರಂಗಂ ಕುರಿತು ಯೋಚಿಸಲು ಸಮಯವೇ ದೊರಕಲಿಲ್ಲ. ಅದಕ್ಕೂ ಮಿಗಿಲಾಗಿ ಶ್ರೀರಂಗಂನಲ್ಲಾಗಲೀ ಚೋಳ ರಾಜ್ಯದಲ್ಲಾಗಲೀ ಅವರಿಗೆ ಆಸಕ್ತಿ ಇರಲು ಕಾರಣವೇ ಇರಲಿಲ್ಲ. ಅಲ್ಲಿ ಶ್ರೀ ವಿಷ್ಣುವಿನ ಸೇವೆ ಮಾಡಲು ಎಷ್ಟು ಅಡ್ಡಿ ಆತಂಕಗಳು! ಮಠದ ನಿತ್ಯ ನೈಮಿತ್ತಿಕ ಕೈಂಕರ್ಯಗಳನ್ನು ಬಹಳ ಕಷ್ಟದಿಂದ ಮಾಡಬೇಕಾಗಿ ಬಂದಿತ್ತು. ರಂಗನಾಥ ಸ್ವಾಮಿಯ ದೇವಸ್ಥಾನದಲ್ಲಿ ವ್ಯವಸ್ಥೆ ಮಾಡಲು ಹೋದರೆ ಅರ್ಚಕರಿಂದಲೇ ವಿಷಪ್ರಾಶನ! ಕೊನೆಗೆ ದುಷ್ಟ ಮಂತ್ರಿಗಳಿಂದ ಚೋಳ ರಾಜ್ಯವನ್ನೇ ತೊರೆದು ಓಡಿ ಬರಬೇಕಾದ ದುಃಸ್ಥಿತಿ! ಚೋಳ ರಾಜ್ಯದ ದುರಾಡಳಿತಗಾರರು ತಮ್ಮನ್ನು ತಿರಸ್ಕರಿಸಿದರೂ ಶ್ರೀಮನ್ನಾರಾಯಣ ಹೊಯ್ಸಳ ರಾಜ ದಂಪತಿ ತಮ್ಮನ್ನು ಪುರಸ್ಕರಿಸುವಂತೆ ವ್ಯವಸ್ಥೆ ಮಾಡಿದ. ಹೊಯ್ಸಳ ರಾಜ್ಯದಲ್ಲೇ ಅಹರ್ನಿಶಿ ವಿಷ್ಣು ಸೇವಾ ಕೈಂಕರ್ಯದಲ್ಲಿ ಮುಳುಗಿ ಹೋದ ರಾಮಾನುಜರಿಗೆ ಶ್ರೀರಂಗಂನಲ್ಲಿ ಏನಾಗುತ್ತಿದೆ ಎಂಬುದರತ್ತ ಗಮನವೇ ಹರಿಯಲಿಲ್ಲ. ಅದು ಎಷ್ಟೆಂದರೆ ಕೂರತ್ತಾಳ್ವಾರ್, ಮಹಾಪೂರ್ಣ ಮತ್ತು ತಮ್ಮ ಇತರ ಶಿಷ್ಯರ ಸ್ಥಿತಿಗತಿಗಳು ಏನಾಯಿತೆಂಬುದರ ಮಾಹಿತಿಯೂ ದೊರೆತಿರಲಿಲ್ಲ.

ಅದಕ್ಕೆ ಒಂದು ಕಾರಣ ಹೊಯ್ಸಳ ರಾಜ್ಯದಲ್ಲಿನ ಸರ್ವಾನುಕೂಲ ಪರಿಸ್ಥಿತಿ. ಇನ್ನೊಂದು ಚೋಳ ರಾಜ್ಯ ಕುರಿತು ಅವರಿಗೆ ಉಂಟಾಗಿದ್ದ ಭೀತಿ. ಅದನ್ನು ನೆನೆಯ ಹೋದರೆ ಅವರಿಗೆ ಭಯಕಂಪನ! ಆಹಾರ ನಿದ್ರೆಗಳೂ ದೂರವಾಗುತ್ತಿದ್ದವು. ಎಲ್ಲಿ ತನ್ನ ಆರಾಧ್ಯ ದೈವ ವಿಷ್ಣುವಿನ ಸೇವೆಗೆ ಭಯಂಕರ ಅಡ್ಡಿ ಆತಂಕಗಳಿದ್ದವೋ ಅಲ್ಲಿದ್ದು ಏನು ಪ್ರಯೋಜನ? ಅಲ್ಲಿ ತಮ್ಮ ಪ್ರಾಣಕ್ಕೇ ಕುತ್ತು ಇರುವಾಗ ಅದನ್ನು ಮರೆತು ದೂರವಿರುವುದೇ ಲೇಸಲ್ಲವೇ.

ಹೀಗೆ ಶ್ರೀಮನ್ನಾರಾಯಣ ಎರಡು ದಶಕಗಳ ಕಾಲ ಮೇಲುಕೋಟೆಯಲ್ಲಿ ರಾಮಾನುಜರಿಂದ ತನ್ನ ಸೇವೆಯನ್ನು ಚೆನ್ನಾಗಿ ಮಾಡಿಸಿಕೊಂಡ. ತಿರುನಾರಾಯಣಪುರದಲ್ಲಿ ಚೆಲುವನಾರಾಯಣನ ದೇವಾಲಯ ಪ್ರತಿಷ್ಠಾಪನೆಯಾದ ಮೇಲೆ ಕೆಲಕಾಲ ಅವರೇ ದೇವತಾರ್ಚನೆ ಮಾಡಿದರು. ಆವೇಳೆಗಾಗಲೇ ಅವರಿಗೆ ಸಹಸ್ರ ಚಂದ್ರ ದರ್ಶನವಾಗಿ ಹನ್ನೆರಡು ವರ್ಷಗಳು ಕಳೆದುಹೋಗಿದ್ದವು. ಅಧ್ಯಯನ, ಪ್ರವಚನ, ಉಪದೇಶ ಹಾಗೂ ಅಧ್ಯಾಪನಗಳಿಗೆ ತೊಂದರೆಯುಂಟಾಗದಿರಲಿಲ್ಲವಾದರೂ ದೇವತಾರ್ಚಾನೆಯ ದೈಹಿಕ ಶ್ರಮ ಅವರಿಗೆ ಅಡ್ಡಿಯುಂಟುಮಾಡುತ್ತಿತ್ತು. ಆದ್ದರಿಂದ ಮೇಲುಕೋಟೆಯ ಚೆಲುವನಾರಾಯಣನ ದೇವಸ್ಥಾನಕ್ಕೆ ಒಬ್ಬ ಮಂತ್ರ ತಂತ್ರ ಆಗಮಗಳಲ್ಲಿ ಪರಿಪೂರ್ಣ ಪಾಂಡಿತ್ಯ ಉಳ್ಳವನೂ ಅತ್ಯಂತ ಸಮರ್ಥನೂ ಆದ ಅರ್ಚಕನನ್ನು ನೇಮ ಮಾಡುವುದಕ್ಕೆ ಸಮಯ ಸನ್ನಿಹಿತವಾಗಿದೆ ಎನ್ನಿಸಿತು. ಅವರು ಮನಸ್ಸಿನಲ್ಲಿಯೇ ಅಂಥ ಒಬ್ಬ ವ್ಯಕ್ತಿಯನ್ನು ಅರಸಲಾರಂಭಿಸಿದರು.

**(ಮುಂದುವರಿಯುವುದು)**



# ಗೀತಾ ಪ್ರವಚನ

■ ಸಂತ ವಿನೋಬಾ ಭಾವೆ.

■ ಕನ್ನಡ ಅನುವಾದ: ಸಿದ್ದವನಹಳ್ಳಿ ಕೃಷ್ಣಶರ್ಮಾ

# ಭಕ್ತಿಯಿಂದ ವಿಶುದ್ಧ ಆನಂದದ ಲಾಭ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

5. ಇಂಥ ಭಕ್ತಿಯಿದ್ದರೆ ಆ ಮಹಾ ಚಿತ್ರಕಾರನ ಕಲೆ ಕಂಡೀತು. ಅವನ ಕೈಯಲ್ಲಿನ ಆ ಕುಂಚವೂ ಕಾಣಿಸೀತು. ಆ ಉಗಮದ ಝರಿಯನ್ನು, ಅದರ ಅಪೂರ್ವ ಸವಿಯನ್ನು, ಒಮ್ಮೆ ರುಚಿ ನೋಡಿದರೆ ಸಾಕು–ಅದರ ಮುಂದೆ ಇನ್ನುಳಿದ ಎಲ್ಲ ರಸಗಳೂ ತುಚ್ಛವಾಗಿಯೂ ನೀರಸವಾಗಿಯೂ ಕಂಡಾವು. ನಿಜವಾದ ಬಾಳೆಯ ಹಣ್ಣು ತಿಂದವನು ಬಣ್ಣದ ಕಟ್ಟಿಗೆ ಬಾಳೆಯನ್ನು ಅರೆಕ್ಷಣ ಕೈಗೆತ್ತಿಕೊಂಡು, ಅಂದವಾಗಿದೆಯೆಂದು ಹೇಳಿ ಕೆಳಗಿಡುತ್ತಾನೆ. ನಿಜವಾದ ಬಾಳೆಹಣ್ಣು ತಿಂದಿರುವುದರಿಂದ ಅವನಿಗೆ ಕಟ್ಟಿಗೆಯ ಹಣ್ಣಿನ ಬಗ್ಗೆ ಅಷ್ಟು ಉತ್ಸಾಹ ಇರದು. ಹಾಗೇ ಮೂಲ ಝರಿಯ ಸವಿ ಬಲ್ಲವನು ಹೊರಗಣ ಕೊಬ್ಬರಿ ಬೆಲ್ಲವನ್ನು ಚಪ್ಪರಿಸಲಾರ.

6. 'ನಗರದಲ್ಲಿ ಇವೊತ್ತು ಭಾರೀ ದೀಪೋತ್ಸವವಿದೆ, ಬನ್ನಿ' ಎಂದು ಒಬ್ಬ ತತ್ತ್ವಜ್ಞಾನಿಗೆ ಜನ ಹೇಳಿದರು. ಆತ 'ದೀಪೋತ್ಸವ ಎಂದರೇನು? ಒಂದು ದೀಪ, ಅದರ ಮುಂದೆ ಇನ್ನೊಂದು, ಅದರ ಮುಂದೆ ಮೂರನೆಯದು, ಹೀಗೆ ಲಕ್ಷ, ಹತ್ತು ಲಕ್ಷ, ಕೋಟಿ, ಎಷ್ಟಾದರೂ ದೀಪ ಇವೆ ಅನ್ನಿ. ಅದೇ ತಾನೇ ದೀಪೋತ್ಸವ?' ಎಂದ. ಗಣಿತದಲ್ಲಿ 1+2+3 ಹೀಗೆ ಅನಂತದವರೆಗೂ ಇದೆ ಲೆಕ್ಕ. ಸಂಖ್ಯೆಗಳಲ್ಲಿರುವ ಅಂತರ ತಿಳಿದ ಮೇಲೆ ಎಲ್ಲ ಸಂಖ್ಯೆಗಳನ್ನೂ ಚಪ್ಪಾಳೆ ತಟ್ಟುತ್ತಾರೆ, ಇದೊಂದೂ ನನಗರ್ಥವಾಗಲಿಲ್ಲ.

7. ಮನುಷ್ಯ ಇಷ್ಟೇಕೆ ನಿರಾನಂದ? ಆ ನಿರ್ಜೀವ ಬೊಂಬೆಗಳನ್ನು ನೋಡಿ ಕೊನೆಗೆ ಒಂದು ಕ್ಷಣ ಈ ಬಡಪಾಯಿ ಆನಂದ ಪಡಬೇಕು. ಬಾಳಿನಲ್ಲಿ ಆನಂದವಿಲ್ಲದಾಗಲೆ ಈ ಕೃತ್ರಿಮ ಆನಂದದ ಶೋಧನೆ. ನಮ್ಮ ನೆರೆಯಲ್ಲಿ ಒಮ್ಮೆ ವಾದ್ಯಕ್ಕಾರಂಭವಾಯಿತು. 'ವಾದ್ಯ ಏಕೆ?' ಎಂದು ನಾ ಕೇಳಿದರೆ 'ಗಂಡುಮಗು ಹುಟ್ಟಿತು' ಎಂದು ಉತ್ತರ ಬಂತು. ಜಗತ್ತಿನಲ್ಲೆಲ್ಲ ನಿನಗೊಬ್ಬನಿಗೇ ಮಗ ಹುಟ್ಟಿದನೇ? ಟಂಟಂ ಬಾರಿಸುತ್ತಾ ಮಗ ಹುಟ್ಟಿದ, ಮಗ ಹುಟ್ಟಿದ ಎಂದು ಜಗತ್ತಿಗೆಲ್ಲ ಸಾರುತ್ತೀಯಲ್ಲ? ಮಗ ಹುಟ್ಟಿದ ಎಂದು ಜಿಗಿಯುತ್ತೀ ಕುಣಿಯುತ್ತೀ ಹಾಡುತ್ತೀ– ಎಂಥ ಮಕ್ಕಳಾಟ ಇದು! ಏನೋ ಆನಂದದ ಬರಗಾಲ ಬಂದಿದೆ. ಬರಗಾಲದಲ್ಲಿ ಅನ್ನದಗಳು ಕಾಣಿಸಿದರೆ ನೆಗೆದಾಡುವ ಜನರ ಹಾಗೆ ಮಗ ಹುಟ್ಟಿದ, ಸರ್ಕಸ್ ಬಂತು. ಸಿನಿಮಾ ಬಂತು ಎನ್ನುತ್ತಲೂ ಆನಂದಕ್ಕಾಗಿ ಹಸಿದ ಇವರಿಗೆ ನೆಗೆತವೋ ನೆಗೆತ!

ಇದೇಯೆ ನಿಜವಾದ ಆನಂದ? ಗಾನ ಕಿವಿಯಲ್ಲಿ ಸೇರಿ, ಅದರ ಲಹರಿ ಮೆದುಳಿಗೆ ಏಟು ಹಾಕುತ್ತವೆ. ಕಣ್ಣಿಗೆ ರೂಪ ಕಾಣಿಸಿ ಮೆದುಳಿಗೆ ಏಟು ಬೀಳುತ್ತದೆ. ಈ ಏಟುಗಳಿಂದಲೇ ಆನಂದ ಈ ಬಡಪಾಯಿಗಳಿಗೆ! ಹೊಗೆ ಸೊಪ್ಪನ್ನು ತೀಡಿ ಮೂಗಿಗೆ ಮಂಡಿಸುವ ಅಗತ್ಯವಿಲ್ಲ. ಹಾಗೇ ಆ ದೀಪಗಳನ್ನು ಒಂದರ ಮುಂದೆ ಇನ್ನೊಂದು ಇಟ್ಟಿದೆ. ಅದರಲ್ಲಿ ಅರಿಯುವಂಥ ವೈಶಿಷ್ಟ್ಯ ಏನು ಬಂತು? ಆದರೆ ಇಂಥ ಆನಂದಗಳೆಂದರೆ ಮನುಷ್ಯನಿಗೆ ಪ್ರೀತಿ. ನಿಂಬೆಯಹಣ್ಣ ತಂದು, ಸಕ್ಕರೆ ತಂದು ನೀರಿನಲ್ಲಿ ಬೆರೆಸಿ, 'ಎಷ್ಟು ಚೆನ್ನಾಗಿದೆ ಪಾನಕ!' ಎನ್ನುತ್ತಾನೆ. ರುಚಿ ನೋಡುವುದರ ಹೊರತು ಬೇರೆ ಕೆಲಸವಿಲ್ಲ ನಾಲಗೆಗೆ. ಅದರಲ್ಲಿ ಇದನ್ನು ಕಲಸು. ಇದರಲ್ಲಿ ಅದನ್ನು ಕಲಸು. ಇಂಥ ಕಲಸುಮೇಲೋಗರ ತಿನ್ನುವುದರಲ್ಲೇ ಎಲ್ಲ ಸುಖ. ಒಂದು ಸಲ ಚಿಕ್ಕಂದಿನಲ್ಲಿ ನಾನು ಸಿನಿಮಾ ನೋಡಲು ಹೋಗಿದ್ದೆ. ಜೊತೆಗೆ ಒಂದು ತಟ್ಟು ತೆಗೆದುಕೊಂಡಿದ್ದೆ. ನಿದ್ದೆ ಬಂದರೆ ಅದರ ಮೇಲೆ ಮಲಗಿದರಾಯಿತು ಎಂದು. ಪರದೆಯ ಮೇಲಿನ ಆ ಕಣ್ಣು ಕುಕ್ಕಿಸುವ ಉರಿಯನ್ನು ನೋಡತೊಡಗಿದೆ. ಎರಡು ಮೂರು ನಿಮಿಷಗಳಲ್ಲಿಯೇ ಕಣ್ಣು ದಣಿದುಹೋಯಿತು. ನಾನು ತಟ್ಟಿನ ಮೇಲೆ ಒರಗಿಕೊಂಡು ಚಿತ್ರ ಮುಗಿದಾಗ ಎಬ್ಬಿಸಿ ಎಂದೆ. ರಾತ್ರಿಯ ಹೊತ್ತು ಹೊರಗಡೆ ಬಯಲೊಳಗೆ ಗಗನದಲ್ಲಿನ ಚಂದ್ರತಾರೆಗಳನ್ನು ನೋಡುವುದು ಬಿಟ್ಟು, ಶಾಂತ ಸೃಷ್ಟಿಯಲ್ಲಿನ ಆ ಪವಿತ್ರ ಆನಂದವನ್ನು ಬಿಟ್ಟು, ಇಕ್ಕಟ್ಟಾದ ಚಿತ್ರಮಂದಿರದಲ್ಲಿ ಬೆಂಕಿಯ ಗೊಂಬೆ ಕುಣಿಯುವಾಗ ಏರಿಸುವವನೊಬ್ಬ, ಸುತ್ತಿ ಬೀಡಿಯಾಗಿ ಸೇದುವವನೊಬ್ಬ. ನಸ್ಯ ಬೀಡಿಗಳ ಛಾಟು ಬಂದಾಗ ಅವರಿಗೆ ಆನಂದದ ಭಂಡಾರವೇ ಸಿಕ್ಕಂತಾಗುವುದೇನೋ. ಬೀಡಿಯ ತುಂಡು ಸಿಕ್ಕಿದರೂ ಸಾಕು. ಅವರ ಆನಂದಕ್ಕೆ ಮಿತಿಯೇ ಇಲ್ಲ. 'ಆ ಬೀಡಿಯ ಮತ್ತಿನಲ್ಲಿ ಆ ಮನುಷ್ಯ ಸಹಜವಾಗಿಯೇ ಯಾರನ್ನಾದರೂ ಕೊಂದು ಬಿಟ್ಟಾನು' ಎನ್ನುತ್ತಾನೆ ಟಾಲ್‌ಸ್ಟಾಯ್. ಆದರೂ ಒಂದೇ ಬಗೆಯ ಅಮಲೇ.

ಮನುಷ್ಯ ಇಂಥ ಆನಂದದಲ್ಲಿ ತಲ್ಲೀನನಾಗುವುದೇಕೆ? ನಿಜವಾದ ಆನಂದದ ಸುಳಿವು ಸುಳಿಯದಿರುವುದೇ ಇದಕ್ಕೆ ಕಾರಣ. ನೆರಳನ್ನು ನಂಬಿ ಮನುಷ್ಯ ಮೋಸ ಹೋಗಿದ್ದಾನೆ. ಇಂದು ಆತ ಉಪಯೋಗಿಸುತ್ತಿರುವುದು ಬರೀ ಪಂಚ ಜ್ಞಾನೇಂದ್ರಿಯಗಳ ಆನಂದ. ಕಣ್ಣು ಇಲ್ಲದೆ ಹೋಗಿದ್ದಲ್ಲಿ ಜಗತ್ತಿನಲ್ಲಿ ನಾಲ್ಕೇ ಇಂದ್ರಿಯಗಳ ಆನಂದವಿದೆಯೆಂದು ಆತ ಭಾವಿಸಿಕೊಳ್ಳುತ್ತಿದ್ದ. ಆರು ಇಂದ್ರಿಯಗಳ ಮನುಷ್ಯನೊಬ್ಬ ಮಂಗಳಗ್ರಹದಿಂದ ನಾಳೆ ಇಳಿದುಬಂದರೆ, ಆ ಪಂಚ ಜ್ಞಾನೇಂದ್ರಿಯದವ ಖಿನ್ನನಾಗಿ 'ಆತನ ಎದುರಿಗೆ ನಾನೆಷ್ಟು ದುರ್ಬಲ' ಎಂದು ಅತ್ತಾನು.

ಸೃಷ್ಟಿಯ ಪೂರ್ಣ ಅರ್ಥ ಪಂಚ ಜ್ಞಾನೇಂದ್ರಿಯಗಳಿಗೆ

ತಿಳಿಯುವುದು ಹೇಗೆ? ಈ ಐದು ವಿಷಯಗಳಲ್ಲೇ ಆರಿಸಿಕೊಂಡು ಈ ಹುಚ್ಚ ರಮಿಸುತ್ತಾನೆ. ಕತ್ತೆಯ ಕೂಗು ಕಿವಿಗೆ ಬಿದ್ದರೆ ಅಶುಭ ಎನ್ನುತ್ತಾನೆ. ಈ ಮನುಷ್ಯನ ದರ್ಶನದಿಂದ ಆ ಕತ್ತೆಗೂ ಅಶುಭವಲ್ಲವೆ? ನಿನಗೆ ಮಾತ್ರವೆ ಕೆಡುಕು; ಬೇರೆಯವರಿಗೆ ನಿನ್ನಿಂದ ಕೆಡುಕಿಲ್ಲವೊ? ಕತ್ತೆಯ ಕೂಗೂ ಅಶುಭ ಎಂದು ತಿಳಿದು ಕೂಡುತ್ತಾನೆ.

ನಾನು ಬರೋಡಾದ ಕಾಲೇಜಿನಲ್ಲಿದ್ದಾಗ ಒಮ್ಮೆ ಐರೋಪ್ಯ ಗಾಯಕರು ಬಂದರು. ಅವರು ಚೆನ್ನಾಗಿ ಹಾಡುತ್ತಿದ್ದರು. ಚೆನ್ನಾಗಿ ಹಾಡಲು ಪ್ರಯತ್ನಿಸುತ್ತಿದ್ದರು. ಆದರೆ ಯಾವಾಗ ಅಲ್ಲಿಂದ ಕಾಲು ಕಿತ್ತೇನೋ ಎನಿಸುತ್ತಿತ್ತು ನನಗೆ. ಅಂಥ ಹಾಡು ಕೇಳುವ ಅಭ್ಯಾಸ ನನಗಿರಲಿಲ್ಲ. ಚೆನ್ನಾಗಿಲ್ಲ ಎಂದುಕೊಂಡೆ. ನಮ್ಮ ಸಂಗೀತಗಾರ ಅಲ್ಲಿಗೆ ಹೋದರೆ ಅವನಿಗೂ ಅಷ್ಟೇ ಆದೀತು. ಸಂಗೀತದಿಂದ ಒಬ್ಬನಿಗೆ ಆನಂದವಾದೀತು. ಇನ್ನೊಬ್ಬನಿಗೆ ಆಗದಿದ್ದೀತು. ಅದು ನಿಜವಾದ ಆನಂದವಲ್ಲ. ಸುಳ್ಳು ಆನಂದ. ನಿಜವಾದ ಆನಂದದ ದರ್ಶನವಾಗುವತನಕ ಈ ಭ್ರಾಮಕ ಆನಂದವೇ ನಮ್ಮನ್ನು ಕುಣಿಸೀತು. ನಿಜವಾದ ಹಾಲು ಸಿಗುವವರೆಗೂ ನೀರಿನಲ್ಲಿ ಕಲಸಿದ ಹಿಟ್ಟನ್ನೇ ಅಶ್ವತ್ಥಾಮ ಹಾಲೆಂದು ಕುಡಿಯುತ್ತಿದ್ದ. ಹಾಗೆ ನಿಜಸ್ವರೂಪ ನನಗೆ ತಿಳಿದಾಗ, ಅದರ ಆನಂದದ ರುಚಿ ಗೊತ್ತಾದಾಗ ಇನ್ನೆಲ್ಲವೂ ನೀರಸ ಎನಿಸೀತು.



8. ಅಂಥ ಆನಂದವನ್ನು ಹುಡುಕಿ ತೆಗೆಯಲು ಭಕ್ತಿ ಉತ್ಕೃಷ್ಟ ದಾರಿ. ಈ ದಾರಿಗುಂಟ ಪರಮಾತ್ಮನ ಕುಶಲತೆ ಕಂಡುಬಂದೀತು. ಆ ದಿವ್ಯ ಕಲ್ಪನೆ ಬಂದಾಗ ಇನ್ನುಳಿದವೆಲ್ಲ ತಾವಾಗಿಯೇ ನುಸುಳಿಹೋದಾವು. ಆಗ ಕ್ಷುದ್ರ ಆಕರ್ಷಣೆ ಉಳಿಯದು. ಆಮೇಲೆ ಜಗತ್ತಿನಲ್ಲಿ ಒಂದೇ ಆನಂದ ತುಂಬಿದೆಯೆಂದು ಕಂಡೀತು. ಮಿಠಾಯಿಯ ಅಂಗಡಿಗಳೇನೊ ಸಾವಿರಾರು ಇದ್ದರೂ ಮಿಠಾಯಿಯ ಬಗೆ ಮಾತ್ರ ಒಂದೇ. ನಿಜವಾದ ವಸ್ತು ದೊರೆಯುವವರೆಗೂ ಚಂಚಲವಾದ ಗುಬ್ಬಚ್ಚಿಯಂತೆ ಇಲ್ಲಿ ಒಂದು ಕಣ. ಅಲ್ಲಿ ಒಂದು ಕಣ ತಿನ್ನುವುದು. ಬೆಳಗ್ಗೆ ನಾನು ತುಳಸೀ ರಾಮಾಯಣ ಓದುತ್ತಿದ್ದೆ. ದೀಪದ ಬಳಿ ಹುಳು ಸೇರಿದ್ದವು. ಆಗ ಹಲ್ಲಿಯೊಂದು ಬಂತು. ನನ್ನ ರಾಮಾಯಣ ಗೊಡವೆಯೇನು ಅದಕ್ಕೆ? ಹುಳುಗಳನ್ನು ಕಂಡು ಅದಕ್ಕೆಷ್ಟು ಆನಂದ! ಇನ್ನು ಹುಳುಗಳನ್ನು ಅದು ಹಿಡಿಯಬೇಕು. ಅಷ್ಟರಲ್ಲಿ ನಾನು ಕೊಂಚ ಕೈ ಅಲ್ಲಾಡಿಸಿದೆ. ಹಲ್ಲಿ ಓಡಿಹೋಯಿತು. ಆದರೂ ಅದರ ಲಕ್ಷ್ಯವೆಲ್ಲ ಆ ಹುಳುಗಳ ಕಡೆಗೇ ಇತ್ತು. ನನ್ನ ಮನಸ್ಸಿನಲ್ಲಿ ಅಂದುಕೊಂಡೆ. "ತಿನ್ನುತ್ತೀಯಾ ಆ ಹುಳುವನ್ನು, ನಿನ್ನ ನಾಲಗೆಯಲ್ಲಿ ಲಾಲಾರಸ ಸುರಿಯುತ್ತಿದೆಯೇನು?" ನನ್ನ ನಾಲಗೆಯಲ್ಲಿ ಲಾಲಾರಸ ಹುಟ್ಟಲಿಲ್ಲ. ನನಗೆ ದೊರೆತ ಆನಂದ ರಸದ ಸುಳಿವು ಆ ಹಲ್ಲಿಗೆ ತಿಳಿಯುವ ಬಗೆ ಹೇಗೆ? ರಾಮಾಯಣದ ರಸವನ್ನು ಅದು ಸವಿಯಲಾರದು. ಆ ಹಲ್ಲಿಯ ಹಾಗಿದೆ ನಮ್ಮ ಸ್ಥಿತಿ. ಎಷ್ಟೋ ರಸಗಳಲ್ಲಿ ತಲ್ಲೀನರಾಗಿದ್ದೇವೆ. ನಿಜವಾದ ರಸ ದೊರೆತಲ್ಲಿ ಎಷ್ಟು ಚೆನ್ನಾದೀತು! ಆ ನಿಜವಾದ ರಸದ ಸವಿಯನ್ನುಣ್ಣಲು ಭಗವಂತ ಭಕ್ತಿಯ ಸಾಧನವನ್ನು ತೋರಿಸುತ್ತಿದ್ದಾನೆ.

## ೩೪. ಸಕಾಮ ಭಕ್ತಿಯಲ್ಲೂ ಬೆಲೆಯುಂಟು

6. ಭಕ್ತರಲ್ಲಿ ಮೂರು ಬಗೆ ಎಂದಿದ್ದಾನೆ ಭಗವಂತ. 1. ಸಕಾಮ ಭಕ್ತಿಯುಳ್ಳವ 2. ನಿಷ್ಕಾಮವಾದರೂ ಏಕಾಂಗಿಯಾದ ಭಕ್ತಿಯುಳ್ಳವ 3. ಜ್ಞಾನಿ ಅಥವಾ ಸಂಪೂರ್ಣ ಭಕ್ತಿಯುಳ್ಳವ. ನಿಷ್ಕಾಮವಾದರೂ ಏಕಾಂಗಿ ಭಕ್ತಿಯುಳ್ಳವರಲ್ಲೇ ಮೂರು ಭೇದ. 1. ಆರ್ತ 2. ಜಿಜ್ಞಾಸು 3. ಅರ್ಥಾರ್ಥಿ. ಹೀಗೆ ಭಕ್ತಿವೃಕ್ಷದ ಬೇರೆ ಬೇರೆ ಶಾಖೆ ಇವು.

ಸಕಾಮ ಭಕ್ತ ಎಂದರೇನು? ಯಾವುದೋ ಅಪೇಕ್ಷೆಗಳನ್ನಿಟ್ಟುಕೊಂಡು ದೇವನೆಡೆಗೆ ಧಾವಿಸುವಾತ. ಈ ಭಕ್ತಿ ನಿಕೃಷ್ಟವಾದುದೆಂದು ನಾನು ಅದನ್ನು ನಿಂದಿಸುವುದಿಲ್ಲ. ಮಾನಮರ್ಯಾದೆ ದೊರೆಯಬೇಕೆಂದು ಅನೇಕರು ಸಾರ್ವಜನಿಕ ಸೇವೆಯಲ್ಲಿ ತೊಡಗುವುದುಂಟು. ಅದರಲ್ಲೇನು ತಪ್ಪು? ಅವರಿಗೆ ಮರ್ಯಾದೆ ಮಾಡಿ; ಚೆನ್ನಾಗಿಯೇ ಮಾಡಿ. ಅದರಿಂದ ಏನೂ ಕೆಡುಕಿಲ್ಲ. ಹೀಗೆ ಮರ್ಯಾದೆ ಸಿಕ್ಕುತ್ತ ಬಂದರೆ ಅವರು ಸಾರ್ವಜನಿಕ ಕಾರ್ಯಗಳಲ್ಲಿ ಸ್ಥಿರವಾದಾರು. ಆಮೇಲೆ ಆ ಕಾರ್ಯಗಳಲ್ಲಿಯೆ ಅವರಿಗೆ ಆನಂದವುಂಟಾದೀತು. ಮರ್ಯಾದೆ ಬೇಕೆನಿಸುವುದಕ್ಕೆ ಅರ್ಥವೇನು? ನಾವು ಮಾಡುತ್ತಿರುವ ಕೆಲಸ ಒಳ್ಳೆಯದು ಎನ್ನುವ ನಂಬಿಕೆ ಬರುವುದು ಮರ್ಯಾದೆ ದೊರೆತಾಗ. ತನ್ನ ಸೇವೆ ಸರಿಯೋ ತಪ್ಪೋ ತಿಳಿಯಲು ಮನುಷ್ಯರಲ್ಲಿ ಆಂತರಿಕ ಸಾಧನವೇನೂ ಇಲ್ಲ. ಈ ಬಾಹ್ಯ ಸಾಧನಗಳನ್ನು ಅವಲಂಬಿಸುತ್ತಾನೆ. ತಾಯಿಯಿಂದ ಶಾಬಾಸ್ ಎನಿಸಿಕೊಂಡ ಹುಡುಗನಿಗೆ ಆಕೆ ಹೇಳಿದ ಕೆಲಸವನ್ನು ಇನ್ನಷ್ಟು ಮಾಡೋಣವೆನಿಸುತ್ತದೆ. ಸಕಾಮ ಭಕ್ತಿಯದೂ ಹೀಗೇ. ನೇರವಾಗಿ ದೇವರ ಕಡೆ ಹೋಗಿ 'ಕೊಡು' ಎನ್ನುವವ ಸಕಾಮ ಭಕ್ತ. ದೇವರ ಹತ್ತಿರ ಹೋಗಿ ಎಲ್ಲವನ್ನೂ ಕೇಳುವುದೇನೂ ಸಾಮಾನ್ಯ ವಿಚಾರವಲ್ಲ. ಅದೊಂದು ಅಸಾಮಾನ್ಯ ವಸ್ತು. 'ಯಾತ್ರೆಗೆ ಬರುತ್ತೀಯಾ? ಎಂದು ನಾಮದೇವನನ್ನು ಜ್ಞಾನದೇವರು ಕೇಳಿದರು. 'ಯಾತ್ರೆ, ಏತಕ್ಕೆ?' ನಾಮದೇವ, 'ಸಾಧು ಶರಣರ ಭೇಟಿ ಗೀಟಿ ಆದೀತು' ಎಂದು ಹೇಳಿದ ಜ್ಞಾನದೇವ, 'ದೇವರನ್ನು ಕೇಳಿ ಬರುತ್ತೇನೆ' ಎಂದು ನಾಮದೇವ ಗುಡಿಯೊಳಗೆ ಹೋಗಿ ದೇವರೆದುರಿಗೆ ನಿಂತ. ಆತನ ಕಣ್ಣಿನಿಂದ ನೀರು ಸುರಿಯತೊಡಗಿತು. ಆತನ ದೃಷ್ಟಿಯೆಲ್ಲ ದೇವರ ಚರಣಗಳ ಕಡೆಗಿತ್ತು. ಕೊನೆಗೆ ಅಳುತ್ತ ಅಳುತ್ತ, 'ದೇವರೇ, ನಾನು ಹೋಗಲೇನಯ್ಯಾ?' ಎಂದ. ಹತ್ತಿರವೇ ಇದ್ದ ಜ್ಞಾನದೇವ. ಈ ನಾಮದೇವನನ್ನು ನೀವು ಹುಚ್ಚನೆಂದೀರಾ? ಹೆಂಡತಿ ಮನೆಯಲ್ಲಿಲ್ಲವೆಂದು ಅಳುವವರು ಬಹಳ ಮಂದಿ. ಆದರೆ ದೇವರ ಇದಿರಿಗೆ ಅಳುವ ಭಕ್ತ ಸಕಾಮನಾದರೂ ಅಸಾಮಾನ್ಯ. ನಿಜವಾಗಿ ಬೇಡಬೇಕಾದ ವಸ್ತುವನ್ನಾತ ಬೇಡದಿರುವುದು ಆತನ ಅಜ್ಞಾನವೆಂಬುದೇನೋ ನಿಜ. ಆದರೆ ಅದರಿಂದ ಆತನ ಸಕಾಮಭಕ್ತಿ ತ್ಯಾಜ್ಯವಾಗದು.

10. ಬೆಳಗ್ಗೆ ಎದ್ದು ಹೆಂಗಸರು ಎಷ್ಟೋ ವ್ರತ ಮಾಡುತ್ತಾರೆ,



38ನೇ ಪುಟಕ್ಕೆ



**ಸ್ವಾಮಿ ನಿಮಿಷಾನಂದಜೀಯವರ ಲೇಖನ ಮಾಲೆ ನಮ್ಮ ದೈನಂದಿನ ಜೀವನಗಳನ್ನು, ನಮ್ಮ ಪ್ರಾಚೀನ ಶಾಸ್ತ್ರಗಳನ್ನು ಆಧರಿಸಿ, ಹೇಗೆ ಉತ್ತಮಪಡಿಸಿಕೊಳ್ಳಬಹುದು ಎಂಬುದನ್ನು ತಿಳಿಯಪಡಿಸುವಂತಹವು. ಮರೀಚಿ ಮಹರ್ಷಿಗಳ ಮಕ್ಕಳಾದ ಕಶ್ಯಪರು ಮಾನವ ಧರ್ಮದ ಮೂಲಭೂತ ರಹಸ್ಯ ತತ್ತ್ವಗಳನ್ನು ಕಶ್ಯಪ ಸೂತ್ರಗಳಲ್ಲಿ ವಿವರಿಸಿದ್ದಾರೆ.**

# ಜ್ಞಾನಾಜ್ಞಾನ ದ್ವಂದ್ವಜಂ ಕೋಲಾಹಲಂ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ಇದನ್ನು ಕೇಳಿದ ಗುರು ಬೃಹಸ್ಪತಿಗಳು–"ಸರಿ. ಹಾಗಾದರೆ ನಿಮ್ಮಿಬ್ಬರಿಗೂ ಹದಿನೈದು ದಿವಸಗಳ ಅನಂತರ ಈ ಪ್ರಶ್ನೆಗೆ ನಾನು ಉತ್ತರ ನೀಡುತ್ತೇನೆ. ಈ ಉತ್ತರವನ್ನು ಸ್ವೀಕರಿಸಲು ಮೊದಲು ನಿಮ್ಮ ಮನಸ್ಸು, ಬುದ್ಧಿಗಳು ಪಳಗಬೇಕು. ಅದುವರೆಗೂ ನೀವಿಬ್ಬರೂ ಇಲ್ಲಿಯೇ ಕುಳಿತು ನೀವು ಯಾರು, ನಿಮ್ಮ ನಿಜ ಸ್ವರೂಪವೇನೆಂಬುದರ ಬಗ್ಗೆ ಚಿಂತಿಸಿ," ಎಂದು ನುಡಿದರು. ದೇವೇಂದ್ರನಿಗೆ ಒಂದು ಕಡೆ ಅಸುರನ ಭಯ, ಮತ್ತೊಂದು ಕಡೆ ತನ್ನ ಸಾಮ್ರಾಜ್ಯದ ಸುರಕ್ಷತೆಯ ಬಗ್ಗೆ ಚಿಂತೆ. ಹೇಗೋ ಕಷ್ಟಪಟ್ಟು ಹದಿನೈದು ದಿನಗಳನ್ನು ಕಳೆದನು.

ಅಸುರನು ನಿರಾಳವಾಗಿಯೇ, ತನ್ನ ಸಾಧನೆಯನ್ನು ಕೈಗೊಂಡನು. ಹದಿನೈದು ದಿನಗಳು ಕಳೆದನಂತರ ಗುರು ಬೃಹಸ್ಪತಿಗಳು ಬಂದು–"ಆಶ್ರಮದ ಹೊರಗೆ ಒಂದು ದೊಡ್ಡ ಸರೋವರವಿದೆ. ಆ ಸರೋವರದ ನೀರಿನಲ್ಲಿ ನಿಮ್ಮ ಛಾಯೆಯನ್ನು ನೋಡುತ್ತ "ನಾನು ಯಾರು?" ಎಂದು ಪ್ರಶ್ನಿಸಿ. ನಿಮಗೆ ನಿಮ್ಮ ಅಂತರಂಗದಿಂದ ಉತ್ತರ ದೊರೆಯುತ್ತದೆ," ಎಂದು ಹೇಳಿದರು.

ಮೊದಲು ಅಸುರನು ಸರೋವರದ ಬಳಿ ಹೋಗಿ ನೀರನ್ನು ವೀಕ್ಷಿಸಿದಾಗ ತನ್ನ ವಿಕಾರವಾದ ತಲೆ, ಕೊಂಬು, ಕೋರೆಯ ಹಲ್ಲುಗಳುಳ್ಳ ದೇಹದ ಪ್ರತಿಬಿಂಬವನ್ನು ಕಂಡನು. "ನಾನು ಎಷ್ಟೊಂದು ಸುಂದರವಾಗಿದ್ದೇನೆ. ದಷ್ಟ ಪುಷ್ಟವಾಗಿರುವ ಈ ನನ್ನ ದೇಹವೇ ನನ್ನ ನಿಜ ಸ್ವರೂಪ. ಇದೇ ನನ್ನ ಆತ್ಮ. ನನಗೆ ಆತ್ಮ ಸಾಕ್ಷಾತ್ಕಾರವಾಯಿತು," ಎಂಬ ಭ್ರಮೆಗೆ ಒಳಗಾಗಿ ಕುಣಿಯುತ್ತಾ ಕುಪ್ಪಳಿಸುತ್ತಾ ಗುರುಗಳ ಬಳಿ ಮತ್ತೆ ಹೋಗಿ ವಿಚಾರಿಸದೇ ನೇರವಾಗಿ ತನ್ನ ಅಸುರ ಲೋಕಕ್ಕೆ ಹೊರಟು ಹೋದ. ಅಸುರನು ತೆರಳಿದ ಮೇಲೆ ದೇವೇಂದ್ರನು ಸರೋವರಕ್ಕೆ ಹೋಗಿ ನೀರನ್ನು ದಿಟ್ಟಿಸಿ ನೋಡಿದಾಗ ಅವನಿಗೂ ಸಹ ತನ್ನ ದೇಹದ ಛಾಯೆಯೇ ಕಾಣಿಸಿತು. ಆಗ ಆ ತಿಳಿಯಾದ ನೀರನ್ನು ನೋಡುತ್ತಿದ್ದಂತೆ ಅವನ ಮನಸ್ಸು ಕದಡಿ ಹೋಯಿತು–"ಇದು ನನ್ನ ದೇಹದ ಪ್ರತಿಬಿಂಬ ಮಾತ್ರ. ಇದನ್ನೇ ಆತ್ಮವೆಂದು ತೋರಿಸಿ ಈ ಗುರುಗಳು ನನಗೆ ಮೋಸಮಾಡಲು ಯತ್ನಿಸುತ್ತಿದ್ದಾರೆ. ಇಂತಹವರನ್ನು ನಾವು ದೇವಲೋಕಕ್ಕೆ ಗುರುಗಳನ್ನಾಗಿ ನೇಮಿಸಿದ್ದೇವಲ್ಲ. ಇವರನ್ನು ಮೊದಲು ವಿಚಾರಿಸಿಕೊಂಡು, ಅನಂತರ ನನ್ನ ಆಸ್ಥಾನಕ್ಕೆ ಹೋಗಿ ಬೇರೆ ಗುರುಗಳನ್ನು ಆರಿಸಬೇಕು," ಎಂದು ಗುರು ಬೃಹಸ್ಪತಿಗಳ ಬಳಿ ಮತ್ತೆ ಧಾವಿಸಿದ. ಹೀಗೆ ಧಾವಿಸಿ ಬಂದಂತಹ ದೇವೇಂದ್ರನನ್ನು ಕಂಡು ನಗುತ್ತಾ ಗುರುಗಳು ಕೇಳಿದರು–"ಇಂದ್ರಾ, ನೀನು ನಿಜವೋ ಅಥವಾ ನೀನು ಕಂಡಂತಹ ಬಿಂಬ ನಿಜವೋ? ಸರಿಯಾಗಿ ಯೋಚಿಸಿ ಹೇಳು." ಕೂಡಲೆ ದೇವೇಂದ್ರನ ಮನಸ್ಸಿನಲ್ಲಿ ದ್ವಂದ್ವ ಪ್ರಾರಂಭವಾಯಿತು. ಸ್ವಲ್ಪ ಚಿಂತಿಸಿದನಂತರ ದೇವೇಂದ್ರನು ಹೇಳಿದ–"ನಾನೂ ಸತ್ಯ, ನನ್ನ ಬಿಂಬವೂ ಸತ್ಯ" ಎಂದು. ಆಗ ಗುರು ಬೃಹಸ್ಪತಿಗಳು, "ಇಲ್ಲ, ನಿನ್ನ ತಿಳಿವಳಿಕೆ ಸರಿಯಾಗಿಲ್ಲ. ಆ ಬಿಂಬವು ನಿನ್ನಿಂದಲೇ ಬಂದದ್ದು. ನೀನು ಅದನ್ನು ವೀಕ್ಷಿಸುತ್ತಿದ್ದೀಯೆ. ಅದು ನಿನ್ನನ್ನು ವೀಕ್ಷಿಸುತ್ತಿಲ್ಲ. ನೀನು ಸಾಕ್ಷಿ, ಅದು ಕೇವಲ ನಿನ್ನ ಛಾಯೆ ಮಾತ್ರ. ಸರೋವರದ ನೀರು ತಿಳಿಯಾಗಿ ಸ್ತಬ್ಧವಾಗಿದ್ದಾಗ ಮಾತ್ರ ಅದನ್ನು ನೋಡಲು ಸಾಧ್ಯ. ಒಂದು ಕಲ್ಲನ್ನು ಆ ನೀರಿಗೆ ಎಸೆದರೆ ಉಂಟಾಗುವ ಅಲೆಗಳು ನಿನ್ನ ಛಾಯೆಯನ್ನು ಛಿದ್ರ ಮಾಡುವುದು. ಆದರೆ ನಿನ್ನ ಬಿಂಬ ಮಾಯವಾದರೂ ನಿನ್ನ ದೇಹ ಮಾತ್ರ ಬದಲಾಗದೆ ಹಾಗೆಯೇ ಉಳಿಯುತ್ತದೆ. ಆದ್ದರಿಂದ ನೀನು ನಿಜ, ನಿನ್ನ ಬಿಂಬ ಸುಳ್ಳು. ಹಾಗೆಯೇ ನಿನ್ನ ದೇಹ ಹೊರಗಿನ ಪ್ರಪಂಚದ ಅನುಭವಗಳನ್ನು ಅನುಭವಿಸುತ್ತ ಬದಲಾಗುತ್ತಾ ಹೋಗುತ್ತದೆ. ಕ್ರಮೇಣ ಮುಪ್ಪಿಗೆ ಒಳಗಾಗಿ ಮರಣ ಹೊಂದುತ್ತದೆ. ಆದರೆ ನಿನ್ನ ಆತ್ಮ ನಿಷ್ಕಳಂಕವಾಗಿ ಯಾವುದಕ್ಕೂ ಅಲುಗದೆ ಸ್ಥಿರವಾಗಿ, ಚಿರವಾಗಿ ಉಳಿಯುತ್ತದೆ. ಹೀಗಾಗಿ ನಿನ್ನ ದೇಹ ನಿನ್ನ ಆತ್ಮದ ಪ್ರತಿಬಿಂಬ, ನಿನ್ನ ಆತ್ಮ ಶಾಶ್ವತ ಹಾಗೂ ಸತ್ಯ, ನಿನ್ನ ದೇಹ ತಾತ್ಕಾಲಿಕ ಹಾಗೂ ಮಿಥ್ಯ," ಎಂದು ಆತ್ಮಜ್ಞಾನದ ಬೋಧನೆಯನ್ನು ದೇವೇಂದ್ರನಿಗೆ ಮಾಡಿದರು.

ಇದನ್ನು ತಿಳಿದ ಮೇಲೆ ನಾವೂ ಕೂಡ ದೇವಸ್ಥಾನಕ್ಕೆ ಹೋದಾಗ–"ನನ್ನ ಕಣ್ಣಿಗೆ ಗೋಚರವಾಗುತ್ತಿರುವ ಮೂರ್ತಿ ನನ್ನ ದೇಹದ ಪ್ರತಿಬಿಂಬ ಹಾಗೂ ಅದರಲ್ಲಿ ಅಡಗಿರುವ ದಿವ್ಯ ಚೈತನ್ಯ ನನ್ನ ಅಂತರಾತ್ಮದ ಪ್ರತಿರೂಪ", ಎಂದು ಭಾವಿಸಬೇಕು. ಹೀಗೆ ನಾವು ದೇವರ ಪ್ರತಿಮೆಯನ್ನು ವೀಕ್ಷಿಸಿದಾಗ ಜ್ಞಾನ ಯಾವುದು, ಅಜ್ಞಾನ ಯಾವುದು ಎಂದು ನಮಗೇ ಅರಿವಾಗುತ್ತದೆ. ಹೊರ

ಪ್ರಪಂಚದಲ್ಲಿ ಕಾಣುವುದೆಲ್ಲ, ಇಂದ್ರಿಯಗಳಿಗೆ ಗೋಚರವಾಗುವುದೆಲ್ಲ ನಮ್ಮ ಆತ್ಮದ ಪ್ರತಿಬಿಂಬ ಮಾತ್ರ. ಅದೇ ಆತ್ಮವಲ್ಲ ಎಂದು ನಾವು ಅರ್ಥಮಾಡಿಕೊಳ್ಳಬೇಕೆಂದು, ಕಶ್ಯಪರು ನಮಗೆ ಇಲ್ಲಿ ಹೇಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಸದಾ ಯೋಚಿಸಿ, ನಾನು ನನ್ನ ಆತ್ಮ ಮಾತ್ರ ಎಂದುಕೊಂಡು ನಮ್ಮ ಜೀವನವನ್ನು ನಡೆಸಿದಾಗ ನಮ್ಮನ್ನು ಆವರಿಸಿಕೊಂಡಿರುವ ಅಜ್ಞಾನದ ತೆರೆ ಸರಿಯುತ್ತದೆ. ಜ್ಞಾನ ಅಜ್ಞಾನಗಳ ನಡುವೆ ಸಿಲುಕಿ ಇದುವರೆಗೂ ದ್ವಂದ್ವದಲ್ಲಿ ಬಂಧಿತವಾದ ಮನಸ್ಸು–"ನಾನು ಆತ್ಮವೆಂಬ ಪರಾತತ್ತ್ವ, ನಾನು ಪರಾಚೈತನ್ಯದ ಒಂದು ಅಂಶ, ನನಗೆ ಹುಟ್ಟೂ ಇಲ್ಲ, ಸಾವೂ ಇಲ್ಲ" ಎಂದು ಅರಿತು ವಿಮುಕ್ತಿಯನ್ನು ಹೊಂದುತ್ತದೆ.

"ಜ್ಞಾನಾಜ್ಞಾನ ದ್ವಂದ್ವಜಂ ಕೋಲಾಹಲಂ" ಎಂಬ ಸೂತ್ರದ ಮೂಲಕ ಮಹಾಮುನಿ ಕಶ್ಯಪರು ನಮ್ಮ ಮನಸ್ಸು ಬುದ್ಧಿಗಳನ್ನು ಕರೆದೊಯ್ಯಬೇಕಾದ ದಿಕ್ಕನ್ನು ನಮಗೆ ಅತಿ ಸ್ಪಷ್ಟವಾಗಿ ಬಿಡಿಸಿ ಹೇಳಿದ್ದಾರೆ. ಮಾನವನಲ್ಲಿ ಎಲ್ಲವನ್ನೂ ತಿಳಿದುಕೊಳ್ಳಬೇಕು ಎಂಬ ತವಕ ಹಾಗೂ ಕುತೂಹಲ ಅತಿಯಾಗಿದೆ. ಇದನ್ನು ಸಾಧಿಸಿಕೊಳ್ಳುವುದಕ್ಕಾಗಿ ನಾವು ನಮ್ಮ ಇಂದ್ರಿಯಗಳು, ಮನಸ್ಸು ಮತ್ತು ಬುದ್ಧಿಗಳನ್ನು ಬಳಸಿ ನಮ್ಮ ಇಡೀ ಜೀವನವನ್ನು ಈ ಪ್ರಯತ್ನದಲ್ಲೇ ಕಳೆಯುತ್ತೇವೆ. ಹೊರಗಿನ ಪ್ರಪಂಚದ ಜ್ಞಾನವನ್ನು ಪಡೆಯುವ ಕಾತರತೆ ನಮ್ಮಲ್ಲಿ ಎಷ್ಟು ತೀವ್ರವಾಗಿರುವುದೋ ಅಷ್ಟೇ ನಮ್ಮಲ್ಲಿ ಸಂತೃಪ್ತಿ ಇರುವುದಿಲ್ಲ. ಎಷ್ಟು ಕಲಿತರೂ ಇದು ಮುಗಿಯದ ಸಾಗರವೇ ಆಗಿದೆ. ಕುತೂಹಲದ ಆಸಕ್ತಿಯಿಂದ ಕಲಿಕೆಯ ಬೆನ್ನನ್ನೇರಿ ನಾವು ಸವಾರಿ ಮಾಡಿದಲ್ಲಿ ನಮ್ಮ ಮನಶ್ಶಾಂತಿಯನ್ನೇ ಬಲಿಕೊಡಬೇಕಾಗುತ್ತದೆ. ಇದರ ಬದಲು ಆತ್ಮಜ್ಞಾನವನ್ನು ಅರಸಿದರೆ ಆತ್ಮ ಸಾಕ್ಷಾತ್ಕಾರ ದೊರೆತಾಗ ಇಡೀ ಬ್ರಹ್ಮಾಂಡದ ಜ್ಞಾನವೇ ನಮ್ಮದಾಗುವುದು. ನಮ್ಮ ಆತ್ಮದಲ್ಲೇ ಸರ್ವವೂ ಅಡಗಿದೆ. ಆದ್ದರಿಂದ ಅಂತರ್ಮುಖಿಯಾಗಿ–"ನಾನು ಯಾರು? ನನ್ನ ಜೀವನದ ಉದ್ದೇಶ ಏನು? ಮಾನವನಾಗಿ ಏಕೆ ಹುಟ್ಟಿದ್ದೇನೆ? ಈ ಜೀವನದಲ್ಲಿ ನಾನು ಸಾಧಿಸಬೇಕಾದ ಕಾರ್ಯವೇನು?" ಎಂಬ ಆತ್ಮ ಚಿಂತನೆಯಲ್ಲಿ ತೊಡಗಲು ಕಶ್ಯಪರು ನಮ್ಮನ್ನು ಪ್ರೋತ್ಸಾಹಿಸುತ್ತಿದ್ದಾರೆ. ಬಾಹ್ಯ ಪ್ರಪಂಚದ ಜ್ಞಾನವೇ ಸರ್ವವೂ ಎಂದು ಕೊಂಡು ಬಾಳಿದರೆ, ನಾವು ಆ ಅಸುರನ ರೀತಿಯೇ ಮೋಸ ಹೋಗುತ್ತೇವೆ.

ಅಸುರ ತನ್ನ ಬಿಂಬವನ್ನು ಸರೋವರದಲ್ಲಿ ಕಂಡಾಗ, ತನ್ನ ದೇಹದ ಬಿಂಬವೇ ತನ್ನ ಆತ್ಮ ಎಂದು ನಂಬಿದ. ಆ ಬಿಂಬಕ್ಕೆ ವ್ಯಾಮೋಹವನ್ನು ಬೆಳೆಸಿಕೊಂಡ. ಅನಂತರ ಅವನು ಅಸುರ ಲೋಕಕ್ಕೆ ಹಿಂದಿರುಗಿ ಅಸುರರಿಗೆಲ್ಲ ಈ ರೀತಿ ಹೇಳಿದ, "ನಿಮಗೆ ಕಾಣಿಸುವ ಛಾಯೆಯೇ ನಿಮ್ಮ ಆತ್ಮ. ನಾವು ಆ ಛಾಯೆಯ ಮೇಲೆ ಬೆಳೆಸಿಕೊಳ್ಳುವ ಹಲವಾರು ರೀತಿಯ ಮೋಹ ವ್ಯಾಮೋಹವೇ ಆತ್ಮಜ್ಞಾನ. ಇದೇ ಆತ್ಮದ ಬೆಳಕು," ಎಂದು ತನ್ನ ತಪ್ಪು ತಿಳಿವಳಿಕೆಯನ್ನು ಇತರರಿಗೂ ಬೋಧಿಸಿದ. ಅಸುರನಿಗೆ ಹೇಗೆ ತನ್ನ ನಿಜ ಸ್ವರೂಪ ಗುರುತಿಸಲಾಗಲಿಲ್ಲವೊ ಅದೇ ರೀತಿ ಮಾಯೆಯ ಕಾರಣ ನಮಗೂ ಸಹ ನಮ್ಮ ಜೀವನದ ನಿಜಾಂಶವನ್ನು ಗುರುತಿಸಲಾಗುತ್ತಿಲ್ಲವೆಂದು ಈ ಕಥೆಯ ಮೂಲಕ ನಾವು ಅರ್ಥಮಾಡಿಕೊಳ್ಳಬಹುದು. ಎಷ್ಟೋ ವಸ್ತುಗಳಿಗೆ, ವ್ಯಕ್ತಿಗಳಿಗೆ, ಹಾಗೂ ಸಂಬಂಧಗಳಿಗೆ ನಾವು ಮೋಹ, ವ್ಯಾಮೋಹವನ್ನು ಬೆಳೆಸಿಕೊಂಡು ಇದೇ ನಮ್ಮ ಸರ್ವಸ್ವವೆಂದು ಭಾವಿಸುತ್ತೇವೆ. ನಾವು ಈ ಜಗತ್ತಿಗೆ ಬರಿಗೈಯಲ್ಲಿ ಹೋಗುತ್ತೇವೆ ಎಂಬುದನ್ನು ಮರೆತು ಬಿಡುತ್ತೇವೆ. ಇಲ್ಲಿ ಎಷ್ಟೇ ಐಶ್ವರ್ಯ, ಅಂತಸ್ತು, ಆಸ್ತಿ, ಹೆಸರು ಕೀರ್ತಿಗಳನ್ನು ನಾವು ಗಳಿಸಿದರೂ ಅಂತ್ಯ ಸಮಯದಲ್ಲಿ ಎಲ್ಲವನ್ನೂ ಇಲ್ಲೇ ಬಿಟ್ಟು ಹೋಗಬೇಕು. ರಾಜನೇ ಆಗಲಿ ಭಿಕ್ಷುಕನೇ ಆಗಲೀ ಯಾರೂ ಈ ನಿಯಮಕ್ಕೆ ಹೊರತಲ್ಲ. ಈ ರೀತಿ ಮೋಹ ವ್ಯಾಮೋಹಗಳನ್ನು ಬೆಳೆಸಿಕೊಂಡು, ನಮ್ಮ ಲೌಕಿಕ ಪ್ರಪಂಚವೇ ಸರ್ವವೂ ಎಂದು ಭಾವಿಸಿದಾಗ ಮಾಯೆಗೆ ಒಳಗಾಗಿ ನಾವೂ ಕೂಡ ಆ ಅಸುರನ ರೀತಿಯಲ್ಲಿ ಹೊರಗಿನ ಛಾಯೆಯೇ ಸತ್ಯವೆಂದು ತಪ್ಪಾಗಿ ತಿಳಿಯುತ್ತೇವೆ. ಕಶ್ಯಪರು ಈ ವಿಷಯದಲ್ಲಿ ನಮ್ಮನ್ನು ಎಚ್ಚರಿಸುತ್ತಿದ್ದಾರೆ.


ಅಧ್ಯಾತ್ಮದಲ್ಲೂ ಕೂಡ ಅನೇಕರು ಇದೆ ತಪ್ಪನ್ನು ಮಾಡುತ್ತಾರೆ. ಸಾಧನೆಯ ಮಾರ್ಗದಲ್ಲಿ ಸಾಧಕರಿಗೆ ಹಲವಾರು ದಿವ್ಯ ಅನುಭವಗಳು ಆಗುವುದು ಅತಿ ಸಹಜ. ಉದಾಹರಣೆಗೆ ನಾವು ದೇವಸ್ಥಾನಕ್ಕೆ ಹೋಗಿ ಪ್ರಾರ್ಥಿಸಿದಾಗ ದೇವರ ವಿಗ್ರಹದಿಂದ ಹೂವು ಪ್ರಸಾದವಾಗಿ ಕೆಳಗೆ ಬೀಳಬಹುದು. ನಾವು ಧ್ಯಾನಕ್ಕೆ ಕುಳಿತಾಗ ಘಂಟಾನಾದ, ಓಂಕಾರ, ವೇದ ಘೋಷ, ಗೆಜ್ಜೆನಾದ, ಕೊಳಲುನಾದ ಇತ್ಯಾದಿಗಳು ಆಂತರ್ಯದಿಂದ ಕೇಳಿಸಬಹುದು. ವಿವಿಧ ರೀತಿಯ ಬೆಳಕು ಹಾಗೂ ದಿವ್ಯ ದೃಶ್ಯಗಳು ನಮಗೆ ಧ್ಯಾನದ ಸಮಯದಲ್ಲಿ ಕಾಣಿಸಬಹುದು. ನಮ್ಮ ಸಾಧನೆಯ ರೀತಿ ಸರಿಯಾಗಿದೆ ಎಂದು ತೋರಿಸಲು ಭಗವಂತನು ಈ ಸಣ್ಣ ದಿವ್ಯ ಅನುಭವಗಳನ್ನು ನಮಗೆ ನೀಡುತ್ತಾನೆ. ನಾವು ಈ ಅನುಭವಗಳನ್ನೇ ಸಾಕ್ಷಾತ್ಕಾರ ಎಂದು ನಂಬಿ, "ನಾವು ಇನ್ನೇನು ಸಾಧನೆಯನ್ನು ಮಾಡಬೇಕಾಗಿಲ್ಲ. ನಾವು ಆತ್ಮ ಸಾಕ್ಷಾತ್ಕಾರವನ್ನು ಪಡೆದಾಯಿತು" ಎಂದು ಭಾವಿಸಬಹುದು. ಈ ಅನುಭವಗಳೂ ಕೂಡ ನಮ್ಮ ಆತ್ಮ ಚೈತನ್ಯದ ಬಾಹ್ಯ ಛಾಯೆ ಮಾತ್ರ. ಇದು ಖಂಡಿತ ಆತ್ಮ ಸಾಕ್ಷಾತ್ಕಾರವಲ್ಲ. ನಮ್ಮ ಸಾಧನಾ ಪಥದಲ್ಲಿ ಮೊದಲನೆಯ ಹೆಜ್ಜೆಗಳನ್ನು ಇಟ್ಟಾಗ ಇಂತಹ ಅನುಭವಗಳು ನಮಗೆ ಆಗುತ್ತದೆ. ಉದಾಹರಣೆಗೆ ಶಾಲೆಯಲ್ಲಿ ಒಬ್ಬ ವಿದ್ಯಾರ್ಥಿ 35 ಅಂಕಗಳನ್ನು ಪ್ರತಿಬಾರಿ ತೆಗೆಯುತ್ತಿದ್ದರೆ ಅವನಿಗೆ 40 ಅಂಕಗಳು ಬಂದಾಗ ಪ್ರಥಮ ದರ್ಜೆ ಪಡೆದಷ್ಟು ಪರಮಾನಂದ ಪಡುತ್ತಾನೆ. ನಾವು ಕೂಡ ದೇವರ ಪ್ರಸಾದವಾದಾಗ, ಸಾಧನೆಯಲ್ಲಿ ಮೆಚ್ಚಿ 'ಭಗವಂತ ಪ್ರಸಾದವನ್ನು ಕರುಣಿಸಿದ್ದಾನೆ. ಅಥವಾ ನನ್ನ ಸಾಧನೆಯಿಂದ ನನ್ನ ಗುರುಗಳು ಸಂಪೂರ್ಣ ಪ್ರಸನ್ನರಾಗಿದ್ದಾರೆ ಇನ್ನು ನನ್ನ ಸಾಧನೆ ಪರಿಪೂರ್ಣವಾಯಿತು' ಎಂಬ ಭ್ರಮೆ ನಮ್ಮಲ್ಲಿ ಬೇರೂರಬಹುದು. ಇಲ್ಲಿ ಕಶ್ಯಪರು ನಾವು ಜ್ಞಾನ ಹಾಗೂ ಅಜ್ಞಾನಗಳ ನಡುವೆ ದ್ವಂದ್ವಕ್ಕೆ ಸಿಲುಕಿಕೊಳ್ಳುತ್ತೇವೆ; ಈ ದ್ವಂದ್ವವು ಮನಸ್ಸಿನಲ್ಲಿ ಕೋಲಾಹಲವನ್ನೇ ಎಬ್ಬಿಸುತ್ತದೆ ಎಂದು ನಿರೂಪಿಸುತ್ತಿದ್ದಾರೆ. ನಾವು ಯಾವುದೋ ಒಂದು ಗುರಿಯನ್ನಿಟ್ಟುಕೊಂಡು ಯೋಜನೆಗಳನ್ನು ಹಾಕಿ ಕಾರ್ಯಗಳನ್ನು ಕೈಗೊಳ್ಳುತ್ತೇವೆ. ಈ ಕಾರ್ಯಗಳಲ್ಲಿ ಏನಾದರೂ ಅಡೆ ತಡೆ ಬಂದಾಗ ನಮ್ಮ ಮನಃಶ್ಶಾಂತಿಯನ್ನೇ ಕಳೆದುಕೊಳ್ಳುತ್ತೇವೆ. ವಿನಾಕಾರಣ ದ್ವಂದ್ವ, ಚಿಂತೆ ಹಾಗೂ ಒತ್ತಡಗಳಿಗೆ ಒಳಗಾಗಿ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ. ಇಲ್ಲಿ ನಮ್ಮ ಗಮನ ಗುರಿಯ ಮೇಲೆ ಇರುವ ಬದಲು ನಮ್ಮ ಮನಸ್ಸಿನಲ್ಲಾಗುತ್ತಿರುವ ಕೋಲಾಹಲವನ್ನು ಶಮನ ಮಾಡುವ ಕಡೆ ಹರಿಯುತ್ತದೆ. ಆದ್ದರಿಂದ ನಮ್ಮಿಂದ ತಪ್ಪು ನಿರ್ಧಾರಗಳು ಹೊರಟು ಕೊನೆಗೆ ನಮ್ಮ ಗುರಿಯನ್ನೇ ಸಾಧಿಸಲಾಗುವುದಿಲ್ಲ. ಇಲ್ಲಿ ನಮಗಾದ ದ್ವಂದ್ವದ ಕಾರಣದಿಂದ ನಮ್ಮ ಹತೋಟಿಯಲ್ಲೇ ಇದ್ದಂತಹ ಸಂದರ್ಭವು ಕೈಜಾರಿ ಹೋಗುವುದಕ್ಕೆ ನಾವು ಕಾರಣವಾಗುತ್ತೇವೆ.

**(ಮುಂದುವರಿಯುವುದು)**

**ಶ್ರೀ ನಿಮಿಷಾಂಬಾ ಆಶ್ರಮ, ನಂ. ೭೫, ೯ನೇ ಕ್ರಾಸ್, ಕಾನ್‌ಕಾರ್ಡ್ ಗಾರ್ಡನ್ ಸಿಟಿ ಲೇಔಟ್, ಆರ್.ವಿ. ಕಾಲೇಜು ಅಂಚೆ, ಬೆಂಗಳೂರು–೫೬೦ ೦೫೯.**

ಶ್ರೀಕೃಷ್ಣ ಕರ್ಣಾಮೃತ





ಭಕ್ತಕವಿ ವಿದ್ವಾನ್ ಕೆ.ವಿ. ವರದರಾಜಯ್ಯಂಗಾರ್

# ಶ್ರೀಕೃಷ್ಣನಲ್ಲಿ ಬ್ರಹ್ಮಾಂಡ



### ಶ್ಲೋಕ–17

ಕೃಷ್ಣೇನಾಂಬ ಗತೇನ ರಂತುಮಧುನಾ ಮೃದ್ಭಕ್ಷಿತಾ ಸ್ವೇಚ್ಛಯಾಂ
ತಥ್ಯಂ ಕೃಷ್ಣ ಕ ಏವಮಾಹ ಮುಸಲೀ ಮಿಥ್ಯಾಂಬ ಪಶ್ಯಾನನಂ
ವ್ಯಾದೇಹೀತಿ ವಿದಾರಿತೇ ಚ ವದನೇ ದೃಷ್ಟ್ವಾ ಸಮಸ್ತಂ ಜಗತ್
ಮಾತಾ ಯಸ್ಯ ಜಗಾಮ ವಿಸ್ಮಯಪದಂ ಪಾಯಾತ್ಸ ನಃ ಕೇಶವಃ
(II-65)

**ಕೃಷ್ಣನು ಆಟ ಆಡಲು ಹೋಗಿ ಮುಕ್ಕಿದ ಮಣ್ಣಮ್ಮಾ**
**ಹೌದೇನೋ ಹರಿ? ಹೇಳಿದರಾರು? ಮುಸಲಿಯು, ಸುಳ್ಳಮ್ಮಾ**
**ತೆಗೆ ಬಾಯಿ ಎನೆ ವದನವ ತೋರಲು ಜಗವೆಲ್ಲ ಅದಲಿ**
**ವಿಸ್ಮಿತಳಾಗೆ ಕಂಡು ಯಶೋದೆ ಪೊರೆಯಲೆಮ್ಮ ಕೃಷ್ಣ**

ಆಗಾಗ ಬರುತ್ತಿದ್ದ–ಕೃಷ್ಣನು ಮಣ್ಣನ್ನು ತಿನ್ನುವನು ಎಂಬ –ದೂರುಗಳನ್ನು ತಾಯಿ ಯಶೋದೆ ನಂಬುತ್ತಿರಲಿಲ್ಲ. ಏಕೆಂದರೆ ಬೇರೆಯ ಮನೆಯ ಬಾಲಕರು ಸುಳ್ಳು ಹೇಳಿರಬಹುದು. ಹೊಟ್ಟೆಕಿಚ್ಚಿನಿಂದ ಕಥೆ ಕಟ್ಟಿರಬಹುದು ಎಂಬುದು ಅವಳ ಅನಿಸಿಕೆ. ಆದರೆ ಒಮ್ಮೆ ಬಲರಾಮನೇ ಬಂದು ಯಶೋದೆಗೆ ಹೇಳಿದ, “ಅಮ್ಮ! ಆಟ ಆಡಲು ನಾನೂ, ಕೃಷ್ಣನೂ ಹೋಗಿದ್ದೆವು. ಆಟ ಆಡುವಾಗ ಕೃಷ್ಣನು ಮಣ್ಣನ್ನು ಚೆನ್ನಾಗಿ ಮುಕ್ಕಿದನು. ನನ್ನ ಮಾತನ್ನೂ ಕೇಳಲಿಲ್ಲ” ಎಂದು. ಯಶೋದೆಯು ದಾರಿಕಾಯುತ್ತಿದ್ದು, ಕೃಷ್ಣನು ಮನೆಗೆ ಬಂದಾಗ ಕೇಳಿದಳು, “ಕೃಷ್ಣ! ನೀನು ಇಂದು ಮಣ್ಣನ್ನು ಮುಕ್ಕಿದೆಯಾ? ಅದು ನಿಜವೇ?”

ಕೃಷ್ಣ ಹೇಳಿದ: ಅಮ್ಮ ನಿನಗೆ ಯಾರು ಹೇಳಿದರು ನಾನು ಮಣ್ಣು ತಿಂದೆನೆಂದು. ಯಾರದೋ ಮಾತನ್ನು ಕೇಳಿ ನಂಬಬೇಡ.

ಯಶೋದೆ: ಬಲರಾಮನೇ ನನಗೆ ಹೇಳಿದನು. ಅದಕ್ಕೇ ಕೇಳಿದೆ.

ಕೃಷ್ಣ: ಅಮ್ಮ! **ಬಲರಾಮನು** ಸುಳ್ಳು ಹೇಳಿರುವನಮ್ಮಾ; ನಾನಂತೂ ಮಣ್ಣನ್ನು ತಿಂದಿಲ್ಲ.

ಯಶೋದೆಗೆ ಇರಬಹುದು ಅನಿಸಿತು. ಆದರೂ ನೋಡಿಯೇ ಬಿಡುವಾ ಎಂದು, “ಕೃಷ್ಣ! ನಿನ್ನ ಬಾಯಿ ತೆಗೆದು ತೋರಿಸು, ಮಣ್ಣು ತಿಂದಿರುವಿಯೋ ಇಲ್ಲವೋ ತಿಳಿದು ಬಿಡುತ್ತದೆ.”

ಇದನ್ನು ಕೇಳಿ ಕೃಷ್ಣನು ಏನೂ ಅರಿಯದ ಮುಗ್ಧ ಶಿಶುವಿನಂತೆ ತನ್ನ ಬಾಯನ್ನು ಅಗಲವಾಗಿ ತೆಗೆದು ತಾಯಿಗೆ ತೋರಿಸಿದ.

ಯಶೋದೆ ಕೃಷ್ಣನ ತೆರೆದ ಬಾಯನ್ನು ದಿಟ್ಟಿಸಿ ನೋಡಿದಳು. ದಿಙ್ಮೂಢಳಾದಳು. ಆ ಬಾಲಕನ ಕಿರು ಬಾಯಿಯಲ್ಲಿ ಮೂರು ಲೋಕಗಳನ್ನೂ, ಸಕಲ ವಿಶ್ವವ್ಯಾಪಾರಗಳನ್ನೂ ಕಂಡಳಾಮಾತೆ. ತಾನು ಕಾಣುತ್ತಿರುವುದು ನಿಜವೋ ಸುಳ್ಳೋ ತಿಳಿಯದೆ ಆಶ್ಚರ್ಯ, ವಿಸ್ಮಯಗಳಿಂದ ನಿಶ್ಚೇಷ್ಟಿತಳಾದಳು. ಈ ರೀತಿ ತಾಯಿಗೆ ಬಾಯಲ್ಲಿ ಮೂಜಗವನ್ನೂ ತೋರಿದ ಕಂದ ಮುಕುಂದನು ನಮ್ಮನ್ನೆಲ್ಲ ಸಲಹಲಿ.

ಇಲ್ಲಿ ಕೃಷ್ಣನು ಅಮ್ಮನಿಗೆ ತಾನು ಮಣ್ಣೇ ತಿನ್ನಲಿಲ್ಲ ಎಂದಿದ್ದು ಸುಳ್ಳಲ್ಲವೇ? ಎಂಬ ಪ್ರಶ್ನೆ ಏಳುತ್ತದೆ. ಬಲರಾಮನು ಸುಮ್ಮನೆ ಸುಳ್ಳು ಹೇಳುವನೆ? ಎಂದೂ ಅನಿಸುತ್ತದೆ.

ಇಲ್ಲಿ ಬಲರಾಮನ ಹೇಳಿಕೆ ಬಹುಮುಖ್ಯ ಆಧಾರ. ಬೇರೆ ಯಾರೋ ಹೇಳಿದ್ದರೆ, ಅವರಿಗೆ ಮಣ್ಣಿನ ವಾಸನೆ, ಗುಣಗಳು ಗೊತ್ತಿದೆಯೋ ಇಲ್ಲವೋ ಎಂಬ ಸಂಶಯ ಬರಬಹುದು. ಆದರೆ ಬಲರಾಮನ ಆಯುಧವೇ ನೇಗಿಲು–ಹಲ. ನೇಗಿಲಿನ ಮುಖ್ಯ ಕೆಲಸವೇ ಭೂಮಿಯನ್ನು ಉಳುವುದು, ಮಣ್ಣನ್ನು ಅಗೆದು ಪಾತಿ ಮಾಡುವುದು. ಹೀಗಿರುವಾಗ ಬಲರಾಮನಿಗೆ ಮಣ್ಣಿನ ಗುಣ, ವಾಸನೆ, ಕುರುಹುಗಳನ್ನು ಹಿಡಿಯುವುದು ಸಹಜ ಮತ್ತು ಸುಲಭ. ಆದ್ದರಿಂದ ಬಲರಾಮನು ನೋಡಿದ್ದು, ಹೇಳಿದ್ದು ಎರಡೂ ನೂರಕ್ಕೆ ನೂರು ನಿಜವೇ! ಶ್ರೀಕೃಷ್ಣನು ಮಣ್ಣನ್ನು ತಿಂದಿದ್ದ. ಆದರೆ ಅದನ್ನು “ಮಣ್ಣು” ಎಂದು ತಿಂದಿರಲಿಲ್ಲ. ಶ್ರೀಮನ್ನಾರಾಯಣನಿಗೆ ಭೂದೇವಿಯ ಮೇಲೆ ಮಹಾದಾಸೆ. ಪ್ರಲಯಜಲದಲ್ಲಿ ಭೂದೇವಿಯು ಮುಳುಗಿಹೋಗಿದ್ದಾಗ, ನಾರಾಯಣನೇ ವರಾಹಾವತಾರವನ್ನು ತಾಳಿ, ಅವಳನ್ನು ರಕ್ಷಿಸಿ ಮೇಲಕ್ಕೆ ತಂದಿದ್ದ. ಆಗ ಅವನು ಭೂಮಿಯನ್ನು ಭದ್ರವಾಗಿ ಹಿಡಿದಿದ್ದು ಅದು ಸಹಜವಾಗಿಯೇ ಅವನಿಗೆ ದಿನ ನಿತ್ಯದ ಕಾರ್ಯವಾಗಿದೆ. ಆದ್ದರಿಂದ ದಿನಂಪ್ರತಿ ಅವನು ಮಣ್ಣನ್ನು ಹಿಡಿಯದಿರಲು ಸಾಧ್ಯವೇ? ಅಂತೆಯೇ ಅದು ಸುಳ್ಳಾಗಿರಲಿಲ್ಲ.

ಅಲ್ಲದೆ ಇಂದಲ್ಲ ನಾಳೆ ಎಲ್ಲವೂ ಮುಗಿದಾಗ, ಭಗವಂತನ ಲಯಕಾರಕ ಶಕ್ತಿ ಆವಿರ್ಭವಿಸಿ ಕೆಲಸ ಮಾಡಿದಾಗ, ಮಹಾಪ್ರಲಯವಾಗಿಯೇ ತೀರುತ್ತದೆ. ಆಗ ಸೃಷ್ಟಿಯಲ್ಲಿರುವ ಚರಾಚರಗಳೊಂದಿಗೆ ಈ ಭೂಮಿಯನ್ನೂ ಭಗವಂತನಾದ ನಾರಾಯಣನು ನುಂಗಿ ತನ್ನ ದಾಮೋದರದಲ್ಲಿ ಧರಿಸಿರುತ್ತಾನೆ. ಭರಿಸಿರುತ್ತಾನೆ. ಆದ್ದರಿಂದ ಮಣ್ಣ ತಿನ್ನುವುದು ಅವನೊಬ್ಬನಿಗೆ ಮಾತ್ರ ಬಹು ಸಹಜವಾದ ಕಾರ್ಯವೇ ಆಗಿದೆ, ತಪ್ಪೇನಿಲ್ಲ. ಇಂತಹ ಕೃಷ್ಣನು ನಮ್ಮನ್ನು ಕಾಪಾಡಲಿ.

**(ಮುಂದುವರಿಯುವುದು)**



# KALAJNANA

*(Written in 1813 A.D.)*

## Sri Yogi Nareyana Tataiah

### ಮೂಲಮು–26

ಅಟು ಮೀದ ವೃತ್ತಾಂತ ಮದಿ ಯೆಟ್ಲನಂಟೇನು
ಭೂಮಂಡಲಾಧಿಪುಡು ಬುದ್ಧಿಲೋನ ।
ಚಾಲು ಯೀ ಸೌಖ್ಯಂಬು – ಚಾಲು ಯೀ ಸತಿಸುತುಲು
ಚಾಲು ಯೀ ರಾಜ್ಯಂಬು – ಚಾಲು ಧನಮು ।
ಮುಪ್ಪದಿ ಆರೇಂಡ್ಲು – ಮೂಡು ಪಟ್ಟಮುಲಾಯ
ಮರಚಿಯುಂಟಿನಿ ರಾಜ ಮದಮುಜಾತ ।
ಇಚ್ಛ ಮರಣಂಬಯ್ಯೆ – ಯುಕ್ತಿ ಚೆಪ್ಪಿನ ಗುರುನಿ
ಚೇರಿ ವುಂಡುಟ ಮಹಾ – ಯೋಗ್ಯ ಮನುಚು ॥
ಘಟಮು ವಿಡಚೆನು ಅಂತಲೋ – ಗರುಡ ಪಕ್ಷಿ ।
ಘಟಮುಲೋ ಚೇರಿ ವೆಗಸೆ ವೈಕುಂಠಮುನುಕು ।
ಅಮರನಾರೇಯಣುನಿ ಸಖ, ಹರ, ಮಹಾತ್ಮ ।
ಅಧಿಕ ಭವಭಂಗ, ಕೈವರಮು ಭೀಮಲಿಂಗ ॥ 26 ॥

**Atu meeda vriththantha madi yetla nantaenu**
**Bhoomandaladhipudu buddhi lona |**
**Chalu yee soukhyambu, chalu yee sathisuthulu,**
**Chalu yee rajyambu, chalu dhanamu |**
**Muppadi araendlu moodu pattamulaya**
**Marachiyuntini raiya madamuchatha |**
**Inchaha maranambai yukthi jeppina guruni**
**Chaeri vunduth maha yogya manuchu |**
**Ghatamu vidachenu anthalo garuda paksi |**
**Ghatamulo chaeri, vegase Vaikuntamunaku |**

*Amara Naraeyanuni Sakha, Hara, mahatma |*
*Adhika BhavaBhanga, Kaiwaramu Bheemalinga*
*| 26 |*

## Meaning:

The renowned, ideal emperor ruled in an exemplary manner the prosperous, pious and progressive state for a sufficiently long period. Both he and the state reached unprecedented heights of economic wellbeing and spiritual bliss. The time comes for Introspection and analysis. The illustrious emperor contemplates the future course of action. He tells himself after introspection "Enough of this pleasure and comfort! Enough of this life with wife and children! Enough of this royal paraphernalia administrative worries! Enough of this wealth and treasure! For full thirty-six years, I have administered this vast empire; that is, three times the unit of twelve years. Engrossed in administrative responsibilities and Enmeshed in the pleasures of proud power, I have totally forgotten the sublime aim and object of my life. I should immediately recall and implement my blessed guru's manthropadesha regarding ichcha marana (death at one's own sweet will). It is high time I returned to the state of bliss divine whence I came." Having resolved to seek emancipation from earthly life the emperor gives up his body. Right at that blessed moment of departure the sacred bird Garuda (the white-breasted eagle which is the unfailing mount or vehicle of Maha Vishnu) appears on the scene. By the yogic means of parakaya pravaesha the blessed emperor enters the body of Garuda pakshi and wings his way up into the far reaches of the sky, towards vaikunta, the most holy abode of Maha Vishnu.

### ಮೂಲಮು – 27

ಸಕಲ ರಹಸ್ಯಾಮೃತ – ಸಾರಮುಲ್ ಚವಿ ಚೂಚಿ
ಆತ್ಮಾರ್ಥ ಸೌಖ್ಯಮುಲ್ – ಅನುಭವಿಂಚಿ ।
ನಿರ್ಮಲ ಹೃದಯುಲ್ಶೈ – ನಿಜತತ್ತ್ವಮುನ ನಿಲಚಿ
ಪಗತುಲ ನಂದರಿ – ಪಾರದೋಲಿ ।
ಓಂಕಾರ ಪ್ರಣವಂಬು – ವೈಪುಗಾ ವೇರ್ವೇರ

ವರ್ಣಿಂಚಿ ದಶವಿಧ – ಧ್ವನುಲು ತೆಲಸಿ ।
ಕೋಮಲಂಬೈನ ಕೊಡಿ – ಕೊಂಡಮೀದು (ನ–ವು)ನ್ನ
ಬ್ರಹ್ಮಮು ಕನುಗೊನ್ನ – ಯೋಗುಲಕುನು ॥
ವಂದನಮು ಸೇತು ವರಕವಿ – ನಂದನುಲನು ।
ಶರಣು ಶರಣಂಟಿ ಸಂಬಂಧ – ಜನುಲಕೆಲ್ಲ ।
ಅಮರನಾರೇಯಣುನಿ ಸಖ, – ಹರ, ಮಹಾತ್ಮ ।
ಅಧಿಕ ಭವಭಂಗ, ಕೈವರಮು –ಭೀಮಲಿಂಗ ॥27॥

**Sakala rahasyamritha saramul chavi choochi,**
**Atmartha soukhyamul anubhavinchi |**
**Nirmala hridayulai nijathathwamuna nilachi**
**Pagathulanadari paradoli |**
**Omkara pranavamdu vaipuga vaevaera**
**Varninchi dasha vidha dhwanulu thelisi |**
**Komalambaina koodi kondameedu (na-vu)nna |**
**Brahmamu kanugonna yogulakunu ||**
**Vandanmu saethu Varakavi nandanulanu**
**Sharanu Sharanathi sambandha janulakella |**
**Amara Naraeyanuni Sakha, Hara, mahatma |**
**Adhika BhavaBhanga, Kaiwaramu Bheemalinga | 27 |**

## Meaning:

I offer my grateful salutations to all those enlightened savants who have attained the bliss of atmathathwa, which is as relishable as the sweetness of the immortal ambrosia; to all those pure-hearted seers who have fully conquered or vanquished all the enemies of true atma-jnana; to all those maha yogis who have enabled themselves to clearly hear the ten different manifestations of the primordial sound, OMKARA; to those mahatapaswis who have experienced the joy of swaswaroopajnana; and, finally, to those blessed people who have realized ParaBrahman.

In the same breath I proffer my obeisance to those great poets who are past masters in adhyatma Vidya. Likewise, I tender my Grateful thanks to all the great spiritual thinkers. To crown it all, I Prostrate myself at the sacred feet of the presiding deity of Kaiwara, Namely, Amara Naraeyana Swami, who is a close associate and friend of sri Bheemalingaeshwara Swami. It is in the holy name of the latter that I have indited this shathaka and he is Sarvadosha pariharaka Ishta siddi pradayaka and the bhagnakaraka of all Bhava worries and obstacles. I very humbly dedicate this work at His gracious feet. Do accept this and bless me and shower sanmangala on the whole world.

**(To be continued...)**

33ನೇ ಪುಟದಿಂದ

ಪಂಚಾರತಿ ಬೆಳಗುತ್ತಾರೆ, ತುಳಸಿಯ ಪ್ರದಕ್ಷಿಣೆ ಮಾಡುತ್ತಾರೆ. ಸತ್ತ ಬಳಿಕ ದೇವರು ಕೃಪೆ ಮಾಡಲೆಂಬುದೇ ಇದಕ್ಕೆಲ್ಲ ಕಾರಣ. ಅವಳ ತಿಳಿವಳಿಕೆ ಹಾಗಿದ್ದೀತು. ಅದಕ್ಕಾಗಿ ವ್ರತವೈಕಲ್ಯ, ಉಪವಾಸ. ಇಂಥ ವ್ರತಶೀಲ ಕುಟುಂಬಗಳಲ್ಲಿಯೇ ಮಹಾಪುರುಷರು ಹುಟ್ಟುವುದು. ತುಲಸೀದಾಸರ ಮನೆತನದಲ್ಲಿ ರಾಮತೀರ್ಥರು ಹುಟ್ಟಿದರು. ಪಾರಸೀ ಭಾಷೆಯಲ್ಲಿ ಅವರಿಗೆ ಪೂರಾ ಪಾಂಡಿತ್ಯ. 'ತುಲಸೀದಾಸರ ಮನೆತನದವರಾಗಿ ನಿಮಗೆ ಸಂಸ್ಕೃತ ಬಾರದೆ?' ಎಂದು ಯಾರೋ ಕೇಳಿದರು. ಅದರಿಂದ ರಾಮತೀರ್ಥರ ಮನಸ್ಸಿನ ಮೇಲೆ ತುಂಬ ಪರಿಣಾಮವಾಯಿತು. ಮನೆತನದ ನೆನಪಿನ ಶಕ್ತಿ ಅಂಥದು. ಆ ಸ್ಫೂರ್ತಿಯ ಬಲದಿಂದ ರಾಮತೀರ್ಥರು ವೇದೋಪನಿಷತ್ತುಗಳನ್ನು ಆಳವಾಗಿ ಅಭ್ಯಸಿಸಿದರು. ಹೆಂಗಸರ ಭಕ್ತಿಯನ್ನು ಕಂಡು ಚೇಷ್ಟೆ ಮಾಡಬಾರದು. ಭಕ್ತಿಯ ಕಣಕಣವನ್ನು ಹೀಗೆ ಸಂಚಯ ಮಾಡಿದ ಕಡೆ ತೇಜಸ್ವಿ ಸಂತಾನ ಹುಟ್ಟುತ್ತದೆ. ಎಂತಲೇ ಭಗವಂತ ಹೇಳುವುದು–"ನನ್ನ ಭಕ್ತ ಸಕಾಮನಾಗಿದ್ದರೂ ಸಹ ನಾನು ಅವನ ಭಕ್ತಿಯನ್ನು ದೃಢಗೊಳಿಸುತ್ತೇನೆ. ಅವನ ಮನಸ್ಸಿನಲ್ಲಿ ಗೊಂದಲವುಂಟುಮಾಡಲಾರೆ; 'ನನ್ನ ರೋಗವನ್ನು ಗುಣಪಡಿಸು ದೇವಾ' ಎಂದು ಆತ ಕಳಕಳಿಯಿಂದ ಕೇಳಿಕೊಂಡರೆ ಅವನ ಆರೋಗ್ಯದ ದೃಷ್ಟಿಯಿಂದ ಆ ರೋಗವನ್ನು ದೂರಮಾಡಿಯೇನು. ನನ್ನ ಹತ್ತಿರ ಬರುವುದರಲ್ಲಿ ಆತನ ನಿಮಿತ್ತ ಏನಿದ್ದರೂ ಸರಿ. ನಾನು ಆತನ ಬೆನ್ನಿನ ಮೇಲೆ ಕೈ ಆಡಿಸಿಯೇನು." ಧ್ರುವನ ಕಥೆಯನ್ನು ತೆಗೆದುಕೊಳ್ಳಿ. ತಂದೆಯ ತೊಡೆಯ ಮೇಲೆ ಸ್ಥಳ ದೊರೆಯಲಿಲ್ಲ. ದೇವರನ್ನು ಕೇಳೆಂದು ತಾಯಿ ಹೇಳಿದಳು. ಆತ ಉಪಾಸನೆಗೆ ತೊಡಗಿದ. ದೇವರು ಅಚಲ ಸ್ಥಾನವನ್ನೇ ಕೊಟ್ಟ. ಮನಸ್ಸು ನಿಷ್ಕಾಮವಾಗಿಲ್ಲದಿದ್ದರೂ ಏನಂತೆ? ಮನುಷ್ಯ ಹೋಗುವುದು ಯಾರ ಬಳಿಗೆ, ಬೇಡುವುದು ಯಾರಲ್ಲಿ–ಎನ್ನುವುದೇ ಮಹತ್ತ್ವದ್ದು. ಜಗತ್ತಿನೆದುರಿಗೆ ಬಾಯಿ ತೆರೆಯದೇ ದೇವನನ್ನು ಯಾಚಿಸುವ ವೃತ್ತಿ ಮಹತ್ತ್ವದ್ದು.


11. ಯಾವ ನಿಮಿತ್ತವಾದರೇನು, ಭಕ್ತಿಯ ಮಂದಿರದಲ್ಲಿ ಕಾಲಿಟ್ಟರೆ ಸರಿ. ಮೊದಲು ಕಾಮನೆಯಿಂದ ಬಂದಿದ್ದರೂ ಮುಂದೆ ನಿಷ್ಕಾಮರಾಗುವಿರಿ. ಪ್ರದರ್ಶನ ತೆರೆದಿರುತ್ತದೆ. ಸಂಚಾಲಕನೆನ್ನುತ್ತಾನೆ. : 'ಬಂದಾದರೂ ನೋಡಿ ಒಮ್ಮೆ, ಎಂಥ ಚೆಂದ ಖಾದಿ! ನೋಡಿ ಬೇರೆ ಬೇರೆ ಮಾದರಿ', ಮನುಷ್ಯ ಹೋಗುತ್ತಾನೆ. ಅವನ ಮನಸ್ಸಿನ ಮೇಲೆ ಪರಿಣಾಮವಾಗುತ್ತದೆ. ಭಕ್ತಿಯದೂ ಹಾಗೇ. ಭಕ್ತಿಯ ಮಂದಿರದಲ್ಲಿ ಒಮ್ಮೆ ಪ್ರವೇಶಿಸಿದರೆ ಅಲ್ಲಿನ ಸೌಂದರ್ಯ, ಸಾಮರ್ಥ್ಯ ತಿಳಿದೀತು. ಧರ್ಮರಾಜನ ಜೊತೆಗೆ ಸ್ವರ್ಗಕ್ಕೆ ಹೋಗುವಾಗ ಕೊನೆಗೆ ಉಳಿದುದು ನಾಯಿಯೊಂದೇ. ಭೀಮ ಅರ್ಜುನರೆಲ್ಲ ದಾರಿಯಲ್ಲಿ ಬಿದ್ದುಬಿಟ್ಟರು. ಸ್ವರ್ಗದ ಬಾಗಿಲಿಗೆ ಬಂದಾಗ 'ನಿನಗೆ ಪ್ರವೇಶವುಂಟು ನಾಯಿಗಿಲ್ಲ' ಎಂದು ಧರ್ಮರಾಜನಿಗೆ ಹೇಳಿದರು. 'ನನ್ನ ನಾಯಿಗೆ ಪ್ರವೇಶವಿಲ್ಲವಾದರೆ ನನಗೂ ಬೇಡ' ಎಂದ ಧರ್ಮರಾಜ. ಅನನ್ಯ ಸೇವೆ ಮಾಡುವುದು ನಾಯಿಯಾದರೇನಂತೆ. ನಾನು, ನಾನು ಎಂಬ ಮಿಕ್ಕವರಿಗೆಲ್ಲರಿಗೂ ಅದು ಹೆಚ್ಚಿನದು. ಭೀಮಾರ್ಜುನರಿಗಿಂತ ಅದು ಶ್ರೇಷ್ಠವಾಯಿತು. ಪರಮಾತ್ಮನ ಕಡೆ ಹೋಗದಿರುವ ಮಹಾ ಮಹಾ ವ್ಯಕ್ತಿಗಳಿಗಿಂತ ಆತನ ಕಡೆ ಹೋಗುವ ಕೀಟವೇ ಹೆಚ್ಚಿನದು. ದೇವಾಲಯದಲ್ಲಿ ಮೂರ್ತಿಯ ಮುಂದೆ ಬಸವನಿರುತ್ತದೆ. ಆ ನಂದಿಗೆ ಎಲ್ಲರೂ ನಮಸ್ಕರಿಸುತ್ತಾರೆ. ಸಾಮಾನ್ಯ ಬಸವನಲ್ಲ ಅದು. ದೇವರೆದುರಿಗೆ ಇರುವ ಬಸವ, ದೇವರ ಬಸವ ಎಂಬುದನ್ನು ಮರೆವುದುಂಟೆ? ಬೇರೆ ಬುದ್ಧಿವಂತರಿಗಿಂತ ಅದು ಶ್ರೇಷ್ಠ. ದೇವರನ್ನು ಸ್ಮರಿಸುವ ಸಕಲ ಜೀವವೂ ವಿಶ್ವವಂದ್ಯ.

**(ಮುಂದುವರಿಯುವುದು)**

# ಶ್ರೀ ಯೋಗಿ ನಾರೇಯಣ ಮಠ, ಶ್ರೀಕ್ಷೇತ್ರ ಕೈವಾರ



**ದೂರವಾಣಿ: 08154-239525 / ಮೊಬೈಲ್ : 9945337398**
klnarayankaiwara53@gmail.com



**ಫೆಬ್ರವರಿ 2020ನೇ ಮಾಹೆಯ ಸಾಪ್ತಾಹಿಕ ಸೇವೆಗಳ ವಿವರ**

## ನಾದಸುಧಾರಸ

ವಿನೂತನ ಯೋಜನೆಯಲ್ಲಿ ಅಮೋಘ ಸಂಕೀರ್ತನ ಸಂಗೀತ ಕಚೇರಿಗಳು

| ದಿನಾಂಕ | ಸಮಯ | ವಿದ್ವಾಂಸರ ಹೆಸರುಗಳು | ಕಾರ್ಯಕ್ರಮ |
|---|---|---|---|
| 01.02.2020 ಶನಿವಾರ | ಸಂಜೆ 5.00 ಗಂಟೆಗೆ | ಸ್ವರ್ಣಗೌರಿ ಅವರ ನೇತೃತ್ವದಲ್ಲಿ ಸದ್ಗುರು ಶ್ರೀ ಯೋಗಿನಾರೇಯಣರ ನಾದಾಮೃತ ಕಾರ್ಯಕ್ರಮ | ಗಾಯನ |
| 08.02.2020 ಶನಿವಾರ | ಸಂಜೆ 5.00 ಗಂಟೆಗೆ | ನಾದಸುಧಾರ ತಂಡದವರಿಂದ | ಗಾಯನ |
| 09.02.2020 ಭಾನುವಾರ | ಬೆಳಗ್ಗೆ 11.00 ರಿಂದ 12.00 ಗಂಟೆವರೆಗೆ | ಶ್ರೀ ವಾನರಾಶಿ ಬಾಲಕೃಷ್ಣ ಭಾಗವತ ಅವರಿಂದ ಪೋತನ ಭಾಗವತ ಪ್ರವಚನ | ಹುಣ್ಣಿಮೆ |
| | ಸಂಜೆ 4.00 ಗಂಟೆಗೆ | ವಿಶೇಷ ಪೂಜೆ ಮತ್ತು ಆಲಂಬಗಿರಿಯಲ್ಲಿ ಗಿರಿ ಪ್ರದಕ್ಷಿಣೋತ್ಸವ ಡಾ. ಎಂ.ಆರ್. ಜಯರಾಮ್ ಅವರ ನೇತೃತ್ವ | |
| 15.02.2020 ಶನಿವಾರ | ಸಂಜೆ 5.00 ಗಂಟೆಗೆ | ಅವಗಾನಪಲ್ಲಿ ಶ್ರೀ ನಾಗರಾಜು ಮತ್ತು ತಂಡ | ಬುರ್ರಕಥೆ |
| 21.02.2020 ಶುಕ್ರವಾರ | ರಾತ್ರಿ 8.30 ಗಂಟೆಗೆ | ಮಹಾಶಿವರಾತ್ರಿ ಜಾಗರಣೆ ಪ್ರಯುಕ್ತ ಶ್ರೀ ವಾನರಾಶಿ ಬಾಲಕೃಷ್ಣ ಭಾಗವತರ್ ಮತ್ತು ತಂಡದಿಂದ | ವಿಶೇಷ ಕಾರ್ಯಕ್ರಮ |
| 22.02.2020 ಶನಿವಾರ | ಸಂಜೆ 5.00 ಗಂಟೆಗೆ | ಶ್ರೀ ಎಂ. ಕೋದಂಡರಾಮ್ ನೇತೃತ್ವದಲ್ಲಿ ಶ್ರೀರಾಮ ಸಂಗೀತಶಾಲೆ, ಅಮೃತಹಳ್ಳಿ | ಸಂಕೀರ್ತನೆ |
| 29.02.2020 ಶನಿವಾರ | ಸಂಜೆ 5.00 ಗಂಟೆಗೆ | ತಿರುಪತಿ ಬಿ. ರಘುನಾಥ್ ಮತ್ತು ಶಿಷ್ಯವೃಂದದಿಂದ | ಸಂಕೀರ್ತನೆ |



**ಬಾಲಕೃಷ್ಣ ಭಾಗವತರ್**
ಸಂಯೋಜಕರು:
ಶ್ರೀ ಯೋಗಿನಾರೇಯಣ ಸಂಕೀರ್ತನಾ ಯೋಜನೆ

**ಡಾ|| ಎಂ.ಆರ್. ಜಯರಾಮ್**
ಧರ್ಮಾಧಿಕಾರಿಗಳು

## ಮಲ್ಲಾರ ಚಂದಾದಾರರಲ್ಲಿ ವಿನಂತಿ

ಮಲ್ಲಾರ ಕಛೇರಿಯಲ್ಲಿ ಹಂಚಿಕೆಯ ವಿಭಾಗದಿಂದ ಚಂದಾದಾರ/ಓದುಗರಿಗೆ 3ನೇ ದಿನಾಂಕದೊಳಗಾಗಿ ತಲುಪುವಂತೆ ಪತ್ರಿಕೆ ಕಳುಹಿಸಲಾಗುತ್ತಿದೆ. ಯಾವುದೇ ಕಾರಣದಿಂದ 10ನೇ ದಿನಾಂಕದೊಳಗಾಗಿ ತಲುಪದಿದ್ದರೆ ಸ್ಥಳೀಯ ಅಂಚೆ ಕಚೇರಿಯಲ್ಲಿ ವಿಚಾರಿಸಿ ಖಚಿತಪಡಿಸಿಕೊಳ್ಳಬೇಕು. ತಲುಪದ ಬಗ್ಗೆ ನಮ್ಮ ಕಛೇರಿಯ ಹಂಚಿಕೆ ವಿಭಾಗಕ್ಕೆ ಪೋಸ್ಟ್ ಕಾರ್ಡ್ ಮೂಲಕ 20ನೇ ದಿನಾಂಕದೊಳಗಾಗಿ ಲಿಖಿತವಾಗಿ ದೂರು ಸಲ್ಲಿಸಬೇಕು. ಪೋಸ್ಟ್ ಕಾರ್ಡ್‌ನಲ್ಲಿ ನಿಮ್ಮ ಗ್ರಾಹಕ ಸಂಖ್ಯೆ, ಸದಸ್ಯತ್ವ (ವಾರ್ಷಿಕ, ಪೋಷಕ ಇತ್ಯಾದಿ) ವಿಳಾಸವನ್ನು ಸ್ಪಷ್ಟವಾಗಿ ಬರೆದಿರಬೇಕು. ದೂರು ಬಂದ ನಂತರ ಆ ತಿಂಗಳ ಸಂಚಿಕೆಯನ್ನು ಮಾತ್ರ ನಂತರದ ತಿಂಗಳಿನ ಸಂಚಿಕೆಯೊಂದಿಗೆ ಪ್ರತ್ಯೇಕವಾಗಿ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತದೆ. ಇತರ ಹಳೆಯ ಸಂಚಿಕೆಗಳು ಲಭ್ಯವಿಲ್ಲ. ಅಂಚೆ ಅಧಿಕಾರಿಗಳನ್ನು ಸಂಪರ್ಕಿಸಲು ಅನುಕೂಲ ವಾಗುವಂತೆ ದೂರನ್ನು ಲಿಖಿತವಾಗಿ ಮಾತ್ರ ನೀಡಬೇಕಾಗಿ ವಿನಂತಿ: ಫೋನ್ ಕರೆ ಸಾಕಾಗುವುದಿಲ್ಲ. ಡಿ.ಡಿ./ಚೆಕ್‌ಗಳು 'Sri Yogi Nareyana Study Centre' ಹೆಸರಿನಲ್ಲಿ ಮಾತ್ರ ಕಳಿಸಬೇಕು; ಅಲ್ಲಿ ಬೇರೇನೂ ಇರಬಾರದು; ಕಾರ್ಯಾಲಯ ವಿಳಾಸಕ್ಕೆ ಕಳಿಸಬೇಕು.

ಸಂಪಾದಕರು.



**ಶ್ರೀ ಕಂಚಿ ಕಾಮಕೋಟಿ ಪೀಠದ ಪರಮಾಚಾರ್ಯ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳವರು** ಇತ್ತೀಚಿನ ವರೆಗೂ ಜೀವಿಸಿದ್ದು ಪಾದಚಾರಿಗಳಾಗಿಯೇ ದೇಶ ಸಂಚಾರ ಮಾಡುತ್ತಾ **ಕರತಲ ಭಿಕ್ಷಾ ತರುತಲ ವಾಸಃ** ಎಂಬಂತೆ ಪರಿಶುದ್ಧ ಸಂನ್ಯಾಸ ಜೀವನ ನಡೆಸಿ ಶತಾಯುಷಿಗಳಾಗಿ ಬ್ರಹ್ಮೈಕ್ಯರಾದರು. ಅವರು ಸನಾತನ ಧರ್ಮದ ಸಾರಸರ್ವಸ್ವವನ್ನೂ ಆಧುನಿಕ ಪರಿಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ ತಿಳಿ ಭಾಷೆಯಲ್ಲಿ ವಿವರಿಸಿದ್ದಾರೆ. ಅವರ ಮುಂಬಯಿ ಭಕ್ತರು ಒಂದೂಗೂಡಿ **'ಶ್ರೀ ಕಂಚಿ ಮಹಾಸ್ವಾಮಿ ಪೀಠಾರೋಹಣ ಶತಾಬ್ದಿ ಮಹೋತ್ಸವ ಟ್ರಸ್ಟ್' (ಮುಂಬೈ–400 002)** ರಚಿಸಿಕೊಂಡು ಪರಮಾಚಾರ್ಯರ ಅತ್ಯಂತ ಅಮೂಲ್ಯವಾದ ವಿಚಾರಗಳನ್ನೆಲ್ಲ 'ದೈವವಾಣಿ' ಎಂಬ ಹೆಸರಿನಲ್ಲಿ 7 ಬೃಹತ್ ಸಂಪುಟಗಳಲ್ಲಿ ಹೊರತಂದಿದ್ದಾರೆ. ಈ ಬರಹವನ್ನು ಎರಡನೆ ಸಂಪುಟದಿಂದ ಆಯ್ಕೆ ಮಾಡಿ ಕೃತಜ್ಞತಾಪೂರ್ವಕವಾಗಿ ಪ್ರಕಟಿಸುತ್ತಿದ್ದೇವೆ.

# ಪರಮಾತ್ಮ ನಿತ್ಯವಾದವನು

ವೇದಗಳು ಹುಟ್ಟಿದ ಕಾಲವನ್ನು ಹೇಳುವುದು ಆಗದು. ಏನಾದರೊಂದನ್ನು 'ಅನಾದಿ' ಎಂದು ಹೇಳುವಾಗ ಅದಕ್ಕಿಂತ ಮೊದಲು ಏನೂ ಇರಲಿಲ್ಲ ಎಂದು ಅರ್ಥವಾಗುತ್ತದೆ. ಯಾವುದೇ ಪುಸ್ತಕವು ಒಬ್ಬ ಅಥವಾ ಅನೇಕ ಕರ್ತೃಗಳಿಂದ ಆದುದು ಎಂದು ಎಣಿಸುವುದು ಸಕಾರಣವಾದುದು. 'ಹಳೆಯ ಒಡಂಬಡಿಕೆ'ಯಲ್ಲಿ ಅನೇಕ ಪ್ರವಾದಿಗಳ ವಾಣಿಗಳು ಇವೆ. 'ಹೊಸ ಒಡಂಬಡಿಕೆ'ಯಲ್ಲಿ ಏಸು ಕ್ರಿಸ್ತನ ಕಥೆಯೂ ಅವನ ಉಪದೇಶಗಳೂ ಇವೆ. ಕುರಾನ್‌ನಲ್ಲಿ ಪ್ರವಾದಿ ಮೊಹಮ್ಮದರ ಬೋಧನೆಗಳಿವೆ. ಅಂಥ ಧರ್ಮಗಳ ಪ್ರವರ್ತಕರು ಚಾರಿತ್ರಿಕ ವ್ಯಕ್ತಿಗಳು; ಅವರಿಗಿಂತ ಮೊದಲು ಅವರ ಬೋಧನೆಗಳಿರಲಿಲ್ಲ. ವೇದಗಳೂ ಹೀಗೆ ಒಬ್ಬರೋ ಹಲವರೋ ಋಷಿಗಳ ಕೃತಿಗಳೆ? ಮತ್ತು ಈ ದ್ರಷ್ಟಾರರು ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ ಜೀವಿಸಿದ್ದರು ಎಂದು ತೆಗೆದುಕೊಳ್ಳಬಹುದೆ? ಹತ್ತುಸಾವಿರ ವರ್ಷ ಅಥವಾ ನೂರುಸಾವಿರ ಅಥವಾ 10 ಲಕ್ಷ ವರ್ಷಗಳ ಹಿಂದೆ? ಈ ಯಾವುದೇ ಅವಧಿಯಲ್ಲಿ ವೇದಗಳು ಹುಟ್ಟಿದ್ದರೂ ಅವನ್ನು 'ಅನಾದಿ' ಎಂದು ಸಾಧಿಸುವುದು ಸಾಧ್ಯವಿಲ್ಲ. ಅದು ಹತ್ತು ಲಕ್ಷ ವರ್ಷಗಳ ಹಿಂದೆ ಹುಟ್ಟಿತು ಎಂದಾದರೂ, ಅದು ಇಲ್ಲದಿದ್ದ ಕಾಲವೊಂದಿತ್ತು ಎಂಬುದು ಸ್ವತಸ್ಸಿದ್ಧವಾಗುತ್ತದೆ.

ವೇದಗಳು ಮರ್ತ್ಯರು ಬರೆದ ಕೃತಿಗಳು ಎಂದು ಪರಿಗಣಿತವಾದರೆ ಮೇಲೆ ಕೇಳಿದಂಥ ಪ್ರಶ್ನೆಗಳು ಸಮರ್ಥನೀಯವೆನಿಸುತ್ತವೆ. ಹಾಗಿದ್ದ ಪಕ್ಷದಲ್ಲಿ ಅವನ್ನು 'ಅನಾದಿ' ಎಂದು ಕರೆಯುವುದು ತಪ್ಪಾಗುತ್ತದೆ. ವೇದಗಳನ್ನು ಮರ್ತ್ಯರಾದ ಋಷಿಗಳೂ ದ್ರಷ್ಟಾರರೂ ಬರೆದರು ಎಂದು ನಾವು ತಿಳಿಯುವುದಿದೆ; ನಾವು ಕಲಿಯುತ್ತಿರುವ ಚರಿತ್ರೆಯ ಪುಸ್ತಕಗಳಲ್ಲಿ ಹಾಗೆಂದೇ ಹೇಳಲಾಗಿದೆ.

ವೇದಗಳಲ್ಲಿ ಹಲವು 'ಸೂಕ್ತ'ಗಳಿವೆ ಎಂಬುದನ್ನೂ ಗಣನೆಗೆ ತೆಗೆದುಕೊಳ್ಳೋಣ. ಜ್ಞಾನಸಂಬಂಧರ್ ಅವರ 'ತೇವಾರಮ್'ನಲ್ಲಿ ಹಲವು ಪಟಿಕಮ್‌ಗಳಿವೆ. ಪ್ರತಿ ಪಟಿಕಮ್‌ನಲ್ಲಿಯೂ 10 ಚರಣಗಳಿರುವ ಹಾಗೆ ಪ್ರತಿ ಸೂಕ್ತದಲ್ಲಿಯೂ ಹಲವು ಮಂತ್ರಗಳಿವೆ. ಸು+ಉಕ್ತ= ಸೂಕ್ತ. ಪೂರ್ವ ಪ್ರತ್ಯಯವಾದ 'ಸು'ಗೆ ಒಳ್ಳೆಯ ಎಂಬುದು ಅರ್ಥ. 'ಸುಗುಣ', 'ಸುಲೋಚನ' ಇವುಗಳಲ್ಲಿರುವ ಹಾಗೆ ಅದು. 'ಉಕ್ತ' ಎಂದರೆ ಹೇಳಿದ್ದು. ಸೂಕ್ತ ಎಂದರೆ ಚೆನ್ನಾಗಿ ಹೇಳಿದ್ದು, ಒಳ್ಳೆಯ ಮಾತು, ಒಳ್ಳೆಯ ಹೇಳಿಕೆ.

ಶಾಸ್ತ್ರೋಕ್ತವಾಗಿ ವೇದಘೋಷ ಮಾಡುವಾಗ, ಪ್ರತಿಯೊಂದು ಸೂಕ್ತಕ್ಕೂ ಸಂಬಂಧಿಸಿದ ದ್ರಷ್ಟಾರರ ಹೆಸರು, ಅದರ ಛಂದಸ್ಸು ಮತ್ತು ಅದರಲ್ಲಿ ಕುರಿಯುವ ದೇವತೆಯ ಹೆಸರನ್ನು ಹೇಳುತ್ತೇವೆ. ಅನೇಕ ದ್ರಷ್ಟಾರರಿಗೆ ಹೊಂದಿಕೊಂಡಂತೆ ಹಲವು ಮಂತ್ರಗಳಿರುವುದರಿಂದ, ಅವನ್ನು ಅವರೇ ರಚಿಸಿದರು ಎಂದು ನಾವು ಭಾವಿಸುತ್ತೇವೆ. ಆಯಾ ದ್ರಷ್ಟಾರರ ಕುಲ ಗೋತ್ರ ಇತ್ಯಾದಿಗಳ ಬಗೆಗೂ ಉಲ್ಲೇಖಿಸುತ್ತೇವೆ–ಉದಾಹರಣೆಗೆ **ಅಗಸ್ತ್ಯೋ ಮೈತ್ರಾವರುಣಿಃ** ಅಂದರೆ ಮೈತ್ರಾವರುಣನ ಮಗನಾದ ಅಗಸ್ತ್ಯ ಎಂಬುದಾಗಿ. ಇನ್ನೊಂದು: 'ಮಧುಚ್ಛಂದ ವೈಶ್ವಾಮಿತ್ರಃ', ಮಧುಚ್ಛಂದ ಋಷಿಯು ವಿಶ್ವಾಮಿತ್ರ ಗೋತ್ರದಲ್ಲಿ ಬಂದವನು. ಹೀಗೆ ಅನೇಕ ಋಷಿಗಳ ಹೆಸರಿನಲ್ಲಿ ಮಂತ್ರಗಳಿವೆ. ಅಗಸ್ತ್ಯರ ಹೆಸರಿನೊಂದಿಗೆ ಹೊಂದಿಕೊಂಡಿರುವ ಮಂತ್ರಗಳನ್ನು ಅವರೇ ರಚಿಸಿದ್ದಾಗಿದ್ದ ಪಕ್ಷದಲ್ಲಿ ಮೈತ್ರಾವರುಣರ ಕಾಲದಲ್ಲಿ ಅದು ಇದ್ದಿರುವುದು ಸಾಧ್ಯವಿಲ್ಲ. ಹಾಗೆಯೇ ಮಧುಚ್ಛಂದನ ಹೆಸರಿನೊಂದಿಗೆ ಸೇರಿದ ಮಂತ್ರವು ವಿಶ್ವಾಮಿತ್ರರ ಕಾಲಕ್ಕೆ ಇದ್ದಿರಲು ಸಾಧ್ಯವಿಲ್ಲ. ಇದು ನಿಜವೇ ಆದರೆ, ವೇದಗಳು ಅನಾದಿ ಎಂದು ಹೇಗೆ ಹೇಳುವುದು?

ಮಂತ್ರಗಳು ಋಷಿಗಳ ಹೆಸರುಗಳೊಂದಿಗೆ ಹೊಂದಿಕೊಂಡಿರುವುದರಿಂದ ನಾವು ಆಯಾ ಋಷಿಗಳೇ ಅವನ್ನು ರಚಿಸಿದ್ದಿರಬಹುದೆಂದು ತಪ್ಪಾಗಿ ಭಾವಿಸುತ್ತೇವೆ.

ಆದರೆ ವಾಸ್ತವವಾಗಿ ಅದು ಹಾಗಿಲ್ಲ. 'ಅಪೌರುಷೇಯ' ಎಂದರೆ ಅದು ಯಾವುದೇ ಮನುಷ್ಯಕೃತವಲ್ಲ ಎಂದು ಅರ್ಥ. ಅವರು ಋಷಿಗಳೇ ಆಗಿದ್ದರೂ ಮಂತ್ರಗಳನ್ನು ರಚಿಸಿದವರು ಒಬ್ಬರೋ ಹಲವರೋ ಮನುಷ್ಯರಾಗಿದ್ದಾರೆ ಅವನ್ನು 'ಪೌರುಷೇಯ' ಎಂದೇ ಕರೆಯುತ್ತಿದ್ದರು. ಆದರೆ ಅವನ್ನು ಅಪೌರುಷೇಯ ಎನ್ನುವುದರಿಂದಾಗಿ, ದ್ರಷ್ಟಾರರು ಕೂಡ ಅವನ್ನು ರಚಿಸಿದ್ದಿರಲಾರರು. ಹಾಗೊಂದು ವೇಳೆ ದ್ರಷ್ಟಾರರು ಅವನ್ನು ರಚಿಸಿದ್ದಿದ್ದರೆ ಅವರನ್ನು 'ಮಂತ್ರ-ಕರ್ತಾ'ರು ಎಂದು ಕರೆಯುತ್ತಿದ್ದರು. 'ಮಂತ್ರವನ್ನು ರಚಿಸಿದವರು' ಎಂದು ಆ ಮಾತಿನ ಅರ್ಥ. ಆದರೆ ಋಷಿಗಳನ್ನು 'ಮಂತ್ರ-ದ್ರಷ್ಟಾರು' ಎನ್ನುತ್ತಾರೆ. ಅದನ್ನು 'ಕಂಡವರು' ಎಂದು ಅದರ ಅರ್ಥ.

ಕೊಲಂಬಸನು ಅಮೇರಿಕವನ್ನು ಕಂಡುಹಿಡಿದನು ಎನ್ನುವಾಗ, ಆ ಭೂಖಂಡವನ್ನು ಅವನು ಸೃಷ್ಟಿಸಿದ ಎಂದು ಅರ್ಥವಾಗುವುದಿಲ್ಲ, ಅವನು ಆ ಭೂಖಂಡವನ್ನು ಜಗತ್ತಿಗೆ ಪ್ರಚುರಪಡಿಸಿದ ಎಂದು ಅರ್ಥವಾಗುತ್ತದೆ. ಹಾಗೆಯೇ ನ್ಯೂಟನ್, ಐನ್‌ಸ್ಟೈನ್ ಮೊದಲಾದವರ ಹೆಸರಿನಲ್ಲಿರುವ ನಿಯಮಗಳನ್ನು ಅವರು ಸೃಷ್ಟಿಸಲಿಲ್ಲ. ಯಾವುದಾದರೊಂದು ವಸ್ತುವನ್ನು ಮೇಲೆಸೆದಾಗ ಭೂಮಿಯ ಮೇಲೆ ಅದು ಬಿದ್ದರೆ ಅದು ನ್ಯೂಟನ್ ಆ ನಿಯಮವನ್ನು ಹೇಳಿದ ಎಂಬುದಕ್ಕಲ್ಲ. ನ್ಯೂಟನ್ನನಂಥ ವಿಜ್ಞಾನಿಗಳು ನಿಸರ್ಗದ ನಿಯಮಗಳನ್ನು ಗ್ರಹಿಸಿದರು ಮತ್ತು ಜಗತ್ತಿಗೆ ತಿಳಿಸಿದರು. ಹಾಗೆಯೇ ದ್ರಷ್ಟಾರರು ಮಂತ್ರಗಳನ್ನು ಬೆಳಕಿಗೆ ತಂದರು ಮತ್ತು ಜಗತ್ತಿಗೆ ಉಡುಗೊರೆಯಾಗಿ ನೀಡಿದರು. ಅವರ ತಂದೆ, ಅಜ್ಜ, ಮುತ್ತಜ್ಜಂದಿರ ಕಾಲಕ್ಕೂ ಮೊದಲೂ ಆ ಮಂತ್ರಗಳು ಅಸ್ತಿತ್ವದಲ್ಲಿದ್ದವು; ಆದರೆ ಅವು ಜಗತ್ತಿಗೆ ತಿಳಿದಿರಲಿಲ್ಲ. ಆ ದ್ರಷ್ಟಾರರು ಬಂದಾಗ ಅವು ಜಗತ್ತಿನ ಅರಿವಿಗೆ ಬಂದವು. ಹಾಗಾಗಿ ಮಂತ್ರಘೋಷ ಮಾಡುವಾಗ ಆ ದ್ರಷ್ಟಾರರ ಹೆಸರನ್ನು ಹೇಳುವುದು ಪದ್ಧತಿಯಾಯಿತು.

ಪುಸ್ತಕದ ಪ್ರಕಾಶಕನು ಅದರ ಲೇಖಕನೇ ಆಗಿರಬೇಕೆಂದಿಲ್ಲ, ಚಲನಚಿತ್ರವೊಂದನ್ನು ಬಿಡುಗಡೆ ಮಾಡುವವನು ಅದರ ನಿರ್ಮಾಪಕನೇ ಆಗಿರಬೇಕೆಂದಿಲ್ಲ. ದ್ರಷ್ಟಾರರು ಮಂತ್ರಗಳನ್ನು ಸೃಷ್ಟಿಸಲಿಲ್ಲ, ಜಗತ್ತಿಗೆ ಪ್ರಕಟಿಸಿದರು. ಅವರಿಗೂ ಮೊದಲು ಆ ಮಂತ್ರಗಳು ಅಸ್ತಿತ್ವದಲ್ಲಿದ್ದರೂ ಅವರು ನಮಗಾಗಿ ಅವನ್ನು ಕಾಣುವಂತೆ ಮಾಡುವ ಉದಾತ್ತವಾದ ಸೇವೆಯನ್ನು ಮಾಡಿದರು. ಆದ್ದರಿಂದ ಆಯಾ ಮಂತ್ರಗಳನ್ನು ಘೋಷಿಸುವಾಗ ಅದರ ದ್ರಷ್ಟರರಾದ ಋಷಿಗಳ ಹೆಸರನ್ನು ಸ್ಮರಿಸಿ ಗೌರವಾರ್ಪಣೆ ಮಾಡಬೇಕಾದುದು ಯುಕ್ತವಾದುದೇ ಆಗಿದೆ.



ದ್ರಷ್ಟಾರರಾದ ಋಷಿಗಳು ಅವನ್ನು ಕಾಣುವವರೆಗೆ ಆ ಮಂತ್ರಗಳು ಅಸ್ತಿತ್ವದಲ್ಲಿದ್ದ ಬಗೆಗೆ ನಮಗೇನಾದರೂ ತಿಳಿದಿದೆಯೆ? ಅವು ನಿತ್ಯವಾದಂಥವು ಎಂದೇ ಆದಲ್ಲಿ ಅವು ಜಗತ್ತಿನ ಸೃಷ್ಟಿಕಾರ್ಯದ ಹೊತ್ತಿನಲ್ಲಿ ತಾವಾಗಿಯೇ ಉದ್ಭವವಾದುವು ಎಂದು ಅರ್ಥವೆ? ಭೂಮಿಯ ಮೇಲೆ ಮನುಷ್ಯನು ಕಾಣಿಸಿಕೊಳ್ಳುವುದಕ್ಕೂ ಮೊದಲೇ ಅವು ಇದ್ದುವೆ? ಅವು ಅಸ್ತಿತ್ವಗೊಂಡ ಬಗೆ ಯಾವುದು?

ಜಗತ್ತಿನ ಸೃಷ್ಟಿಯೊಂದಿಗೇ ವೇದಗಳೂ ಕಾಣಿಸಿಕೊಂಡುವು ಎನ್ನುವುದಾದರೆ, ಜಗತ್ತಿನ ಜತೆಗೇ ಪರಮಾತ್ಮನು ಅವನ್ನು ಸೃಷ್ಟಿಸಿದ ಎಂದು ಅರ್ಥವಾಗುತ್ತದೆ. ಮುಂದೆ ದ್ರಷ್ಟಾರರು ಅವನ್ನು ಬೆಳಕಿಗೆ ತರಬಹುದಾದಂತೆ ದೇವರೇನು ಅವನ್ನು ಬರೆದು ಎಲ್ಲೋ ಬಿಟ್ಟಿದ್ದನೇನು? ಹಾಗೆನ್ನುವುದಾದರೆ ವೇದಗಳನ್ನು 'ಅನಾದಿ' ಎಂದು ಹೇಳಲು ಬರುವುದಿಲ್ಲ. ಪ್ರಕೃತ ಜಗತ್ತನ್ನು ಬ್ರಹ್ಮನು ಯಾವಾಗ ಸೃಷ್ಟಿಸಿದ ಎಂಬ ವಿವೇಚನೆಯೊಂದು ನಮಗಿದೆ.

ಕೃತ, ತ್ರೇತಾ, ದ್ವಾಪರ ಮತ್ತು ಕಲಿ ಎಂಬ ನಾಲ್ಕು ಯುಗಗಳಿಗೂ ಒಂದೊಂದು ಕ್ಲುಪ್ತವಾದ ಅವಧಿ ಇದೆ. ನಾಲ್ಕು ಯುಗಗಳನ್ನೂ ಕೂಡಿಸಿ ಚತುರ್ಯುಗ ಎನ್ನುತ್ತಾರೆ. 1000 ಚತುರ್ಯುಗವಾದರೆ ಬ್ರಹ್ಮನಿಗೆ ಒಂದು ಹಗಲು, ಮತ್ತೆ 1000 ಚತುರ್ಯುಗವಾದರೆ ಅವನಿಗೆ ಒಂದು ರಾತ್ರಿ. ಈ ಲೆಕ್ಕಾಚಾರದಂತೆ ಬ್ರಹ್ಮನಿಗೆ ಈಗ ಐವತ್ತಕ್ಕೂ ಹೆಚ್ಚು ವರ್ಷಗಳಾಗಿವೆ. ಯಾವುದೇ ಧಾರ್ಮಿಕ ಆಚರಣೆಯೂ 'ಸಂಕಲ್ಪ'ದಿಂದ ಪ್ರಾರಂಭವಾಗುತ್ತದೆ. ಅದರಲ್ಲಿ ಕರ್ಮವನ್ನು ಆಚರಿಸುವ ಸ್ಥಳ ಮತ್ತು ಕಾಲದ ಲೆಕ್ಕವನ್ನು ಹೇಳಲಾಗುತ್ತದೆ. ಬ್ರಹ್ಮನ ಇಂಥ ವರ್ಷ, ತಿಂಗಳು, ಪಕ್ಷ ಇತ್ಯಾದಿಯಾಗಿ ಲೆಕ್ಕ ಅದರಲ್ಲಿರುತ್ತದೆ. ಈ ಲೆಕ್ಕಾಚಾರದಂತೆ ಪ್ರಕೃತ ಬ್ರಹ್ಮನು ಯಾವಾಗ ಅಸ್ತಿತ್ವಕ್ಕೆ ಬಂದನೆಂಬುದು ನಮಗೆ ತಿಳಿದಿದೆ. ಅವನು ಮಿಲಿಯ ಮಿಲಿಯ ವರ್ಷಗಳ ಹಿಂದೆ ಗೋಚರಿಸಿಕೊಂಡನೆಂದು ಒಪ್ಪಿಕೊಂಡರೂ ಅವನನ್ನು ಅನಾದಿ ಎಂದು ಹೇಳಲು ಬರುವುದಿಲ್ಲ. ಆಗ ಸೃಷ್ಟಿಯು ಅನಾದಿ ಎಂದು ಹೇಗೆ ಹೇಳುವುದು ಸಾಧ್ಯ? ಸೃಷ್ಟಿಗೇ ಒಂದು ಮೂಲ ಇರುವಾಗ ವೇದಗಳು ಅನಾದಿ ಎಂಬ ನಮ್ಮ ವಾದವನ್ನು ಸಮರ್ಥಿಸುವುದಾದರೂ ಹೇಗೆ?

ಪರಮಾತ್ಮನು ನಿತ್ಯನು. ಅವನು ಸೃಷ್ಟಿಗೂ ಮೊದಲು, ಬ್ರಹ್ಮನು ಗೋಚರಿಸುವುದಕ್ಕೂ ಮೊದಲು ಇರತಕ್ಕವನು. ಬ್ರಹ್ಮಾಂಡವೂ ಇಂದ್ರಿಯ ವ್ಯಾಪಾರವುಳ್ಳವುಗಳೂ ಇಂದ್ರಿಯವ್ಯಾಪಾರವಿಲ್ಲದ ವಸ್ತುಗಳೂ ಅವನಿಂದ ಹೊಮ್ಮಿದಂಥವು. ಪರಮಾತ್ಮನು ತಾನೇ ಅವುಗಳನ್ನು ಸೃಷ್ಟಿಸಲಿಲ್ಲ. ಬ್ರಹ್ಮನ ನಿಯೋಗದ ಮೂಲಕ ಅವುಗಳನ್ನು ಸೃಷ್ಟಿಸಿದ. ವಿಷ್ಣುವಿನ ಮೂಲಕ ಅವನ್ನು ಪಾಲಿಸುತ್ತಾನೆ, ರುದ್ರನ ಮೂಲಕ ಲಯಗೊಳಿಸುತ್ತಾನೆ. ಮುಂದೆ, ಬ್ರಹ್ಮ ವಿಷ್ಣು ರುದ್ರರನ್ನೇ ಪರಮಾತ್ಮನು ಲಯಗೊಳಿಸಿಬಿಡುತ್ತಾನೆ. ಪ್ರಕೃತ ಬ್ರಹ್ಮನು ತನಗೆ 100 ವರ್ಷ ತುಂಬಿದಾಗ ಪರಮಾತ್ಮನಲ್ಲಿ ಲೀನವಾಗಿ ಹೋಗುತ್ತಾನೆ. ಮತ್ತೊಬ್ಬ ಬ್ರಹ್ಮನು ಕಾಣಿಸಿಕೊಂಡು ಮೊದಲಿನಿಂದ ಸೃಷ್ಟಿ ಕೆಲಸವನ್ನು ಪ್ರಾರಂಭಿಸುತ್ತಾನೆ. ಅಂದರೆ, ಪರಮಾತ್ಮನು ಇನ್ನೊಬ್ಬ ಬ್ರಹ್ಮನನ್ನು ಸ್ಥಾಪಿಸುವ ಮೊದಲೇ ವೇದವನ್ನು ಸೃಷ್ಟಿಸುತ್ತಾನೆಯೆ ಎಂಬ ಪ್ರಶ್ನೆ

ಏಳುತ್ತದೆ.

ಶಾಸ್ತ್ರಗಳು ಹೇಳುವಂತೆ ವೇದಗಳು ಜಗತ್ತಿನ ಸೃಷ್ಟಿಗೂ ಮೊದಲಿಂದಲೂ ಅಸ್ತಿತ್ವದಲ್ಲಿವೆ. ಬ್ರಹ್ಮನು ವೇದಮಂತ್ರಗಳ ಸಹಾಯದಿಂದ ತನ್ನ ಸೃಷ್ಟಿಕ್ರಿಯೆಯನ್ನು ಜರುಗಿಸಿದನೆಂದು ಅವು ಹೇಳುತ್ತವೆ. ಅವನು ನಾದರೂಪದಲ್ಲಿ ಗೋಚರಿಸಿದ ಮಂತ್ರಗಳ ನೆರವಿನಿಂದ ಸೃಷ್ಟಿಯನ್ನು ಹೇಗೆ ನೆರವೇರಿಸಿದ ಎಂಬ ಬಗ್ಗೆ ಮುಂದೆ ಹೇಳುತ್ತೇನೆ. ಸೃಷ್ಟಿಕಾರ್ಯದ ಬಗ್ಗೆ ಹೇಳುವ ಪರಿಚ್ಛೇದದಲ್ಲಿ ಭಾಗವತವು ಕೂಡ ಬ್ರಹ್ಮನು ವೇದಗಳ ನೆರವಿನಿಂದ ಪ್ರಪಂಚವನ್ನು ಸೃಷ್ಟಿಸಿದ ಎಂದು ಹೇಳುತ್ತದೆ.



ಬ್ರಹ್ಮನು ವೇದಮಂತ್ರಗಳ ಸಹಾಯದಿಂದ ಪ್ರಪಂಚವನ್ನು ಸೃಷ್ಟಿಸಿದ ಎಂಬ ಕಾರಣದಿಂದ ವೇದಗಳನ್ನು 'ಅನಾದಿ' ಎನ್ನಲಾಗುತ್ತಿದೆಯೆ? ವೇದಗಳು ಮತ್ತು ಈಶ್ವರ ಇಬ್ಬರೂ ಅನಾದಿ ಎಂಬ ಆಧಾರದಿಂದ ಅಂಥ ಧೋರಣೆ ತಳೆಯುವುದು ಸರಿಯೆ? ಈಶ್ವರನು, ಪ್ರಪಂಚವನ್ನು ಸೃಷ್ಟಿಸುವ ಮೊದಲೇ ವೇದಗಳನ್ನು ಸೃಷ್ಟಿಸಿದ್ದ ಎಂದು ನಾವು ಸೂಚಿಸುವುದಾದರೆ ವೇದಗಳು ಅಸ್ತಿತ್ವದಲ್ಲಿದ್ದಿರದ ಒಂದು ಕಾಲವಿತ್ತು ಎಂದು ಅರ್ಥವಾಗುತ್ತದೆ. ಅದು ವೇದಗಳು ಅನಾದಿ ಎಂಬ ವಾದಕ್ಕೆ ವಿರುದ್ಧವಾಗುತ್ತದೆ.

ಈಶ್ವರ ಮತ್ತು ವೇದ ಎರಡೂ ಅನಾದಿ ಎಂಬುದು ನಮ್ಮ ನಂಬಿಕೆಯಾದಲ್ಲಿ ಈಶ್ವರನು ವೇದವನ್ನು ಸೃಷ್ಟಿಸಿರಲಾರ ಎಂದು ಅರ್ಥವಾಗುತ್ತದೆ. ಆದರೆ ಈಶ್ವರನು ಅವುಗಳನ್ನು ಸೃಷ್ಟಿಸಿದ ಎಂದು ನಂಬುವುದಾದಲ್ಲಿ ಅವು ಆದಿಯಿಲ್ಲದವೆಂದು ಹೇಳಲಾಗದು. ಪ್ರತಿಯೊಂದೂ ಈಶ್ವರನಲ್ಲಿ ತನ್ನ ಉಗಮವನ್ನು ಹೊಂದಿದೆ. ಈ ತರ್ಕದಂತೆ ಈಶ್ವರ ಮತ್ತು ವೇದಗಳು ಎರಡೂ ಆದಿ ಇಲ್ಲದವು–ಎಂದು ಹೇಳುವುದು ತಪ್ಪಾಗುತ್ತದೆ. ಹೇಗೂ, ಇದೆಲ್ಲ ಇಷ್ಟೊಂದು ಗೊಂದಲಮಯವೇ ಆಗಿದೆ.

ವೇದಗಳು ಅನಾದಿ ಮತ್ತು ಈಶ್ವರನಿಂದ ಸೃಷ್ಟಿಗೊಂಡುವಲ್ಲ ಎಂಬ ನಂಬಿಕೆಗೆ ಆಧಾರವೇನು? ವೇದಗಳಲ್ಲೇ ಒಂದು ಉತ್ತರ ಅಡಗಿದೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ (2, 4, 10)–ಉಪನಿಷತ್ತುಗಳೆಲ್ಲ ವೇದಗಳ ಭಾಗಗಳು–ಋಕ್, ಯಜುಸ್ ಮತ್ತು ಸಾಮ ವೇದಗಳೆಲ್ಲ ಈಶ್ವರನ ಶ್ವಾಸ ಎಂದು ಹೇಳಿದೆ. 'ನಿಃಶ್ವಸಿತಮ್' ಎಂಬುದು ಇಲ್ಲಿ ಬಳಸಿರುವ ಪದವಾಗಿದೆ. ಶ್ವಾಸವಿಲ್ಲದೆ ಒಂದು ಕ್ಷಣವೂ ಬದುಕಿರಲಾರೆವು ಎಂದು ಮತ್ತೆ ಹೇಳಬೇಕಾದುದಿಲ್ಲ. ನಿತ್ಯಸತ್ಯನಾದ ಪರಮಾತ್ಮನ ಜೀವದುಸಿರೇ ವೇದಗಳಾಗಿವೆ. ವೇದಗಳು ಅವನೊಂದಿಗೇ ಅವನ ಶ್ವಾಸರೂಪದಲ್ಲಿ ಅಸ್ತಿತ್ವದಲ್ಲಿವೆ.

ವೇದಗಳು ಈಶ್ವರಸೃಷ್ಟಿ ಎಂದು ಹೇಳುವ ಪದ್ಧತಿ ಇಲ್ಲವೆಂಬುದನ್ನು ಇಲ್ಲಿ ನಾವು ಗಮನಿಸಬೇಕು. ನಾವು ನಮ್ಮದೇ ಉಸಿರನ್ನು ಸೃಷ್ಟಿಸುತ್ತೇವೆಯೆ? ನಮ್ಮ ಹುಟ್ಟಿನೊಂದಿಗೇ ನಮ್ಮ ಉಸಿರೂ ಇರುತ್ತದೆ. ಈಶ್ವರ ಮತ್ತು ವೇದಗಳ ವಿಷಯವೂ ಹಾಗೆಯೇ. ಅವನು ವೇದಗಳನ್ನು ಸೃಷ್ಟಿಸಿದ ಎಂದು ನಾವು ಹೇಳಲಾರೆವು.

ವಿದ್ಯಾರಣ್ಯಸ್ವಾಮಿಗಳು ವೇದಗಳಿಗೆ ತಮ್ಮ ಭಾಷ್ಯವನ್ನು ಬರೆದಾಗ ತಮ್ಮ ಗುರುಗಳನ್ನು ಸಾಕ್ಷಾತ್ ಈಶ್ವರನೆಂದು ತಿಳಿದು ಸ್ತುತಿಸಿದರು. ಅವರು ತಮ್ಮ ಸ್ತುತಿಯಲ್ಲಿ 'ಯಸ್ಯ ನಿಃಶ್ವಸಿತಂ ವೇದಾಃ' (ವೇದಗಳು ಈಶ್ವರನ ಶ್ವಾಸ) ಎಂದಿದ್ದಾರೆ. ಉಪನಿಷತ್ತುಗಳಲ್ಲಿಯೂ 'ನಿಃಶ್ವಸಿತಮ್' ಎಂಬ ಶಬ್ದ ದೊರೆಯುತ್ತದೆ. ಇಲ್ಲಿಯೂ ಈಶ್ವರನು ವೇದಗಳನ್ನು ಸೃಷ್ಟಿಸಿದ ಎಂದು ಹೇಳಿಲ್ಲ.

ಪರಮಾತ್ಮನು ಗೀತೆಯಲ್ಲಿ 'ಎಲ್ಲ ವೇದಗಳೂ ಅರಿತಿರುವವನೇ ನಾನು' ಎಂದು ಹೇಳಿದ್ದಾನೆ (ವೇದೈಶ್ಚ ಸರ್ವೈರಹಮ್ ಏವ ವೇದ್ಯಃ). ತನ್ನನ್ನು ತಾನು 'ವೇದಕರ್ತ' ಎಂದು ವರ್ಣಿಸಿಕೊಳ್ಳುವ ಬದಲು 'ವೇದಾಂತಕೃದ್' (ವೇದಗಳಿಗೆ ಮುಕುಟಪ್ರಾಯವಾಗಿರುವ ತತ್ತ್ವಜ್ಞಾನದ ವ್ಯವಸ್ಥೆಯನ್ನು ಸೃಷ್ಟಿಸಿದವನು) ಎಂದು ಕರೆದುಕೊಂಡಿದ್ದಾನೆ. ತನ್ನ ಬಗೆಗೆ ತಾನು 'ವೇದವಿದ್' ಎಂದು (ವೇದಗಳನ್ನು ಅರಿತವನು) ಉಲ್ಲೇಖಿಸಿಕೊಂಡಿದ್ದಾನೆ. ಮಹಾತತ್ತ್ವಜ್ಞಾನ–ಸತ್ಯಗಳನ್ನು ತನ್ನಲ್ಲಿ ಒಳಗೊಂಡ ವೇದಾಂತವು ಜಗತ್ತಿನಲ್ಲಿ ಪ್ರಚುರಗೊಳ್ಳುವುದಕ್ಕೆ ಮೊದಲು ವೇದಗಳು ನಾದರೂಪದಲ್ಲಿ ಅಸ್ತಿತ್ವದಲ್ಲಿದ್ದುವು; ಅವು ಈಶ್ವರನ ಶ್ವಾಸವೇ ಆಗಿದ್ದು, ಈಶ್ವರನು ಈಶ್ವರನಲ್ಲಿ ನೆಲೆಸಿದಂತೆ ಇರತಕ್ಕವಾಗಿವೆ.

ಗೀತೆಯಂತೆ ಭಾಗವತವು ಕೂಡ ಪರಮಾತ್ಮನು ವೇದಗಳನ್ನು ಸೃಷ್ಟಿಸಿದನೆಂದು ಹೇಳುವುದಿಲ್ಲ. ಅವನ ಹೃದಯಸ್ಥವಾದ ಒಂದು ಮಿಂಚು ಅದು, ಪ್ರಜ್ವಲಿಸುವ ಬೆಳಕಿನ ರೂಪದಲ್ಲಿ ಅವನಲ್ಲಿ ಗೋಚರಿಸಿದಂಥವು ಎಂದೇ ಹೇಳುತ್ತವೆ. ಅದನ್ನು 'ಸ್ಫುರಣ' ಎನ್ನುತ್ತಾರೆ. ಮನಸ್ಸಿನಲ್ಲಿ ಮಿಂಚಿನಂತೆ ಹೊಳೆಯುವುದು ಎಂದು ಅದರ ಅರ್ಥ. ಹೊಸದಾಗಿ ಸೃಷ್ಟಿಗೊಂಡ ಯಾವುದೇ ವಸ್ತುವಿಗಾಗಲಿ ನಾವು ಈ ಪದವನ್ನು ಬಳಸಲಾಗದು. ಎಲ್ಲ ಮಂತ್ರಗಳನ್ನೂ ಮೊದಲು ಕಂಡ ಋಷಿಯು ಬ್ರಹ್ಮ. ಆದರೆ ಅದನ್ನು ಅವನಿಗೆ ಗೋಚರಪಡಿಸಿದವನು ಪರಮಾತ್ಮ. ಅವನೇನು ಮೌಖಿಕವಾಗಿ ತಲಪಿಸಿದನೆ? ಇಲ್ಲ ಎನ್ನುತ್ತದೆ ಭಾಗವತ. ಪರಮಾತ್ಮನು ವೇದಗಳನ್ನು ಬ್ರಹ್ಮನಿಗೆ ಹೃದಯಸ್ಥಗೊಳಿಸಿದನು.

'ತೇನೇ ಬ್ರಹ್ಮ ಹೃದಾಯ ಆದಿಕವಯೇ' ಎನ್ನುತ್ತದೆ ಪುರಾಣದ ಮೊಟ್ಟಮೊದಲ ಶ್ಲೋಕ. ವೇದಗಳು ಪರಮಾತ್ಮನಿಂದ ಸೃಷ್ಟಿಗೊಳ್ಳಲಿಲ್ಲ. ಸತ್ಯವೇನೆಂದರೆ ಅವು ಯಾವಾಗಲೂ ಅವನ ಹೃದಯಸ್ಥವಾಗಿರತಕ್ಕವು. ಪರಮಾತ್ಮನು ಬ್ರಹ್ಮನಲ್ಲಿ ವೇದಗಳನ್ನು ನೆಲೆಗೊಳಿಸಬೇಕೆಂದುಕೊಂಡನೋ ಇಲ್ಲವೋ, ಆದಾಗಲೇ ಅವು ಅಲ್ಲಿ ನೆಲೆಗೊಂಡಿದ್ದವು. ಆ ನಾದದ ಮೂಲಕವೇ ಅವನು ಸೃಷ್ಟಿಕ್ರಿಯೆಯಲ್ಲಿ ತೊಡಗಿಕೊಂಡನು.

ತಮಿಳಿನ 'ತೇವಾರಮ್' ಈಶ್ವರನನ್ನು 'ವೇದಿಯಾ ವೇದಗೀತಾ' ಎಂದು ವರ್ಣಿಸುತ್ತದೆ. ವೇದಗಳ ಅನೇಕಾನೇಕ ಶಾಖೆಗಳ ಋಕ್ಕುಗಳನ್ನು ಪರಮಾತ್ಮನು ಹಾಡುತ್ತಿರುತ್ತಾನೆ ಎನ್ನುತ್ತದೆ ಅದು. ಪರಮಾತ್ಮನು ವೇದಗಳನ್ನು ಕಂಡನು ಎಂಬ ಹೇಳಿಕೆಯ ಮರ್ಮವೇನು? ಶ್ವಾಸವೇ ನಾದ. ನಮ್ಮ ನಿಶ್ವಾಸಕ್ಕೆ 'ಹಂಸ-ಗೀತ' ಎಂದು ಹೆಸರು. ಹೀಗೆ, ವೇದ ಪರಮಾತ್ಮನ ಶ್ವಾಸದ ನಾದವಾಗಿದೆ. ತೇವಾರಮ್ ಮುಂದುವರಿದು, 'ಪವಿತ್ರವಾದ ಜನಿವಾರವನ್ನೂ ವಿಭೂತಿಯನ್ನೂ ಧರಿಸಿ ಎಲ್ಲ ಹೊತ್ತೂ ಸ್ನಾನ ಮಾಡುತ್ತಾ ಈಶ್ವರನು ವೇದಘೋಷ ಮಾಡುತ್ತಲೇ ಇರುವನು' ಎನ್ನುತ್ತದೆ. ಈ ವಿವರಣೆಯಿಂದ ಭಾವಿಸಬಹುದಾದುದೇನೆಂದರೆ ಪರಮಾತ್ಮನು ಒಬ್ಬ ದೊಡ್ಡ 'ಘನಪಾಠಿ' ಎಂದು. ಈಶ್ವರನ ದೇಹಕ್ಕೆ ತೊಡೆದಿರುವ ಹವಳದಂತೆಯೂ ಹಾಲಿನಂತೆಯೂ ಇರುವ ವಿಭೂತಿಯ ಬಗೆಗೆ ಅಪ್ಪರ್ ಸ್ವಾಮಿಗಳು ಉಲ್ಲೇಖಿಸಿದ್ದಾರೆ. ಪರಮಾತ್ಮನು ವೇದಘೋಷ ಮಾಡುತ್ತಾನೆ, ಅವನ್ನು ಹಾಡುತ್ತಾನೆ; ಅವನ್ನು ಅವನು ಸೃಷ್ಟಿಯನ್ನಲ್ಲ ಮಾಡುವುದು ಎನ್ನುತ್ತಾರವರು. ವೈಷ್ಣವ ದಿವ್ಯ ಪ್ರಬಂಧದಲ್ಲಿಯೂ ವೈದಿಕಯಾಗಗಳಿಗೆ ಸಂಬಂಧಿಸಿದ ಅನೇಕ ಉಲ್ಲೇಖಗಳಿವೆ. ಆದರೆ ಹೇಗೋ, ಪರಮಾತ್ಮನು ವೇದಘೋಷ ಮಾಡುವ ಬಗ್ಗೆ ಅದರಲ್ಲಿನ ಯಾವುದೇ ಉಲ್ಲೇಖವೂ ನನಗೆ ನೆನಪಿಗೆ ಬರುತ್ತಿಲ್ಲ.

ಪುಗಲೇಂದಿ ಪುಳವರ್ ನಿರೂಪಿಸಿರುವ ಗಜೇಂದ್ರಮೋಕ್ಷದ ಒಂದು ಕಥೆ ಇದೆ. ಆತ ತಮಿಳಿನ ವೈಷ್ಣವ ಸಂತಕವಿ. ಅದರಲ್ಲಿ, ಮೊಸಳೆಯು ಆನೆಯೊಂದರ ಕಾಲನ್ನು ಕಚ್ಚಿ ಹಿಡಿಯುತ್ತದೆ. ಆನೆಯು 'ಆದಿಮೂಲನೇ' ಎಂದು' ಆರ್ತನಾದ ಮಾಡುತ್ತದೆ. ಆದಿಮೂಲ ಎಂದರೆ ಅನಾದಿಯಾದ ಪರಮಾತ್ಮ ಆಗ ಪರಮಾತ್ಮನು 'ಏನು' ಎಂದು ಕೇಳಿಕೊಂಡು ಬರುತ್ತಾನೆ. 'ಮಹಾವಿಷ್ಣುವು ವೇದಗಳ ಮುಂದೆ ನಿಂತನು' ಎನ್ನುತ್ತಾನೆ ಕವಿ (ವೇದತಿನ್ ಮುನ್ ನಿನ್ರಾನ್). ಕವಿಯು ಹೇಳುವಂತೆ ಪರಮಾತ್ಮನು ವೇದಗಳ ಮುಂದೆ ನಿಂತನು' ವೇದಗಳಿಗಿಂತ ಮುನ್ನ ಅಲ್ಲ. ತಮಿಳಿನಲ್ಲಿ, 'ಒಬ್ಬಾತನು ಬಾಗಿಲಲ್ಲಿ ನಿಂತನು' ಎನ್ನುವುದಕ್ಕೆ 'ವೀಟ್ಟಿನ್ ಮುನ್ ನಿನ್ರಾನ್' ಎನ್ನುತ್ತಾರೆ. ಹಾಗೆ, 'ವೇದತ್ತಿನ್ ಮುನ್ ನಿನ್ರಾನ್' ಎಂಬುದನ್ನು 'ಅವನು ಸಮಸ್ತ ವೇದಗಳ ಮುಂದೆ ಇದ್ದನು' ಎಂದು ಅರ್ಥ ಮಾಡಿಕೊಳ್ಳಬೇಕು. ನನಗೆ ಇನ್ನೊಂದು ರೀತಿ ತೋಚುತ್ತದೆ. ಪೆರುಮಾಳ್‌ರನ್ನು (ವಿಷ್ಣು ಅಥವಾ ಯಾವುದೇ ವೈಷ್ಣವ ದೇವತೆ) ಮೆರವಣಿಗೆಯಲ್ಲಿ ಹೇಗೆ ಒಯ್ಯುತ್ತಾರೆ? ಉತ್ಸವಮೂರ್ತಿಯ ಮುಂದೆ ತಿರುವಾಯ್‌ಮೊಳಿಯನ್ನು ಪಠಿಸುತ್ತಿರುವ ಭಕ್ತರು ಹೋಗುತ್ತಿರುತ್ತಾರೆ. ಉತ್ಸವಮೂರ್ತಿಯ ಹಿಂದೆ ವೇದಘೋಷ ಮಾಡುವವರ ಗುಂಪು ಇರುತ್ತದೆ. ಇಲ್ಲಿ ಕೂಡ 'ಪರಮಾತ್ಮನು ವೇದಗಳ ಮುಂದೆ ನಿಂತನು' 'ವೇದತ್ತಿನ್ ಮುನ್ ನಿನ್ರಾನ್' ಎಂದು ಹೇಳಬಹುದು.

ವೈಷ್ಣವ ಆಗಮಗಳಲ್ಲಿಯೂ ಪುರಾಣಗಳಲ್ಲಿಯೂ ಮಹಾವಿಷ್ಣುವನ್ನು ವಿಶೇಷವಾಗಿ 'ಯಜ್ಞ ಸ್ವರೂಪಿನ್' 'ವೇದಸ್ವರೂಪಿನ್' ಎಂದು ಕರೆಯಲಾಗಿದೆ. ಗರುಡನನ್ನೂ 'ವೇದಸ್ವರೂಪ' ಎಂದು ಕರೆಯಲಾಗಿದೆ. ಆದರೆ ಈ ಯಾವ ಗ್ರಂಥಗಳಲ್ಲೂ ವಿಷ್ಣುವನ್ನು ವೇದವನ್ನು ಸೃಷ್ಟಿಸಿದವನು ಎಂದು ಉಲ್ಲೇಖಿಸಿಲ್ಲ.

ವೇದಗಳಲ್ಲೇ ಬರುವ ಪುರುಷಸೂಕ್ತದಲ್ಲಿ ಮಾತ್ರ ವೇದಗಳನ್ನು 'ಹುಟ್ಟಿದವು' ಎಂದು ಹೇಳಲಾಗಿದೆ. ಆದಾಗ್ಯೂ, ಈ ಸ್ತೋತ್ರವು ಸಾಂಕೇತಿಕವಾದ ಒಂದು ರೂಪಕ, ಅದನ್ನು ಅಕ್ಷರಶಃ ಅರ್ಥೈಸಬಾರದು. ಪಶುವಿನಂತೆ ಪರಮಪುರುಷನನ್ನು ಬಲಿಯಾಗಿ ಅರ್ಪಿಸಲಾಯಿತು ಮತ್ತು ಆ ಯಾಗದಿಂದಲೇ ಸೃಷ್ಟಿಯು ಸಾಂಗವಾಯಿತು ಎಂದು ಅದರಲ್ಲಿ ಹೇಳಿದೆ. ಈ ಹೊತ್ತಿನಲ್ಲಿಯೇ ವೇದಗಳು ಕೂಡ ಗೋಚರಿಸಿದವು. ಪರಮಪುರುಷನನ್ನು ಬಲಿಪಶುವಿನಂತೆ ಅರ್ಪಿಸಲಾಯಿತು ಎಂಬುದನ್ನು ನಾವು ಅರ್ಥೈಸಬೇಕಾದುದಾದರೂ ಹೇಗೆ? ಅಕ್ಷರಶಃ ಅಲ್ಲ. ಈ ಯಾಗದಲ್ಲಿ ತುಪ್ಪದ ಬದಲು ವಸಂತಕಾಲವನ್ನು ಆಹುತಿಯಾಗಿ ಕೊಡಲಾಯಿತು, ಬೇಸಗೆಯೇ ಸಮಿತ್ತಾಗಿ ಒದಗಿತು, ಚಳಿಗಾಲವೇ ಹವಿಸ್ಸಾಯಿತು. ಮಂತ್ರಗಳನ್ನು ಧ್ಯಾನಿಸಿ ಅವುಗಳಲ್ಲಿ ತನ್ಮಯಗೊಳ್ಳಬಲ್ಲವರಿಗೆ ಮಾತ್ರ ಅವುಗಳ ಅಂತರಾರ್ಥವು ಅನುಭವಕ್ಕೆ ಬರುತ್ತದೆ. ಆದ್ದರಿಂದ ವೇದಗಳು 'ಹುಟ್ಟಿದುವು' ಎಂಬ ಹೇಳಿಕೆಯನ್ನು ಅಕ್ಷರಶಃ ಅರ್ಥೈಸುವುದು ಸಲ್ಲದು.



ಈಶ್ವರನ ಶ್ವಾಸವೇ ನಾದರೂಪದಲ್ಲಿ ತೋರಿಕೊಂಡಿತು, ಈ ನಾದದಿಂದಲೇ ಬ್ರಹ್ಮನು ಸೃಷ್ಟಿಕ್ರಿಯೆಯನ್ನು ಪೂರೈಸಿದನು ಎಂದು ಹೇಳುವುದು ಆಧುನಿಕರಿಗೆ ಅಸಂಬದ್ಧವಾಗಿ ಕಾಣುತ್ತದೆ. ಆದರೆ ಆಳವಾದ ಚಿಂತನೆ ಮಾಡಿದರೆ, ಈ ನಂಬಿಕೆಗೆ ವೈಜ್ಞಾನಿಕವಾದ ಮಹಾಸತ್ಯವು ಆಧಾರವಾಗಿದೆ ಎಂಬುದು ಹೊಳೆಯುತ್ತದೆ.

ಸದ್ಯಕಾಲದ ವಿಜ್ಞಾನಕ್ಕೆ ಒಪ್ಪಿತವಾದರೆ ಮಾತ್ರ ವೇದಗಳನ್ನು ಒಪ್ಪಿಕೊಳ್ಳಬೇಕು ಎಂದು ನನ್ನ ಮಾತಿನ ಅರ್ಥವಲ್ಲ. ಅಥವಾ, ಪರಮಾತ್ಮನ ಬಗೆಗಿನ ಸತ್ಯವನ್ನು ಅಧಿಕಾರಯುತವಾಗಿ ಘೋಷಿಸುವ, ಮತ್ತು ವಿಜ್ಞಾನಕ್ಕೂ ವಿಜ್ಞಾನಿಗಳ ಅರಿವಿಗೂ ಅತೀತವಾದ ನಮ್ಮ ಧರ್ಮಗ್ರಂಥವನ್ನು ವಿಜ್ಞಾನದ ಪರಿಧಿಗೆ ತರಬೇಕೆಂದೂ ನಾನು ಹೇಳುತ್ತಿಲ್ಲ. ವೇದಗಳಲ್ಲಿರುವ ಅನೇಕ ವಿಷಯಗಳು ವಿಜ್ಞಾನಕ್ಕೆ ಒಪ್ಪಿಗೆಯಾಗುವಂತೆ ಕಾಣದೆಂಬ ಕಾರಣಕ್ಕಾಗಿ ಅವನ್ನು ತಪ್ಪೆಂದು ಭಾವಿಸಬಾರದು. ಆದರೆ ನಮಗೆ ಪ್ರಕೃತವಾದ-ಪರಮಾತ್ಮನ ಶ್ವಾಸವು ಹೇಗೆ ನಾದವಾಗಬಹುದು ಮತ್ತು ಅದರಿಂದ ಸೃಷ್ಟಿಕಾರ್ಯ ಹೇಗೆ ನಡೆಯಬಹುದು ಎಂಬ ವಿಷಯವು-ವಿಜ್ಞಾನಸಮ್ಮತವಾಗಿದೆ. ●





ತೆಲುಗು ಮೂಲ:
■ ಪಿ.ವಿ.ಆರ್.ಕೆ. ಪ್ರಸಾದ್
(ನಿವೃತ್ತ ಐ.ಎ.ಎಸ್. ಅಧಿಕಾರಿ)

■ ಕನ್ನಡಕ್ಕೆ: ಸೂರ್ಯವಂಶಿ


**ಎಷ್ಟೇ ನಾಸ್ತಿಕನಾದರೂ ಬೈಯ್ಯಲಾರದಷ್ಟು ಘೋರವಾಗಿ ಆಸ್ತಿಕನಾದ ಒಬ್ಬ ಕವಿ (ಭಕ್ತ) ತಿರುಮಲೇಶನನ್ನು ಜರಿದ. ಒಮ್ಮೊಮ್ಮೆ ಮಹಾಭಕ್ತರಿಗೂ ಕಷ್ಟ ಬಂದರೆ, ದೇವರನ್ನು ನಿಂದಿಸುವುದು ಸಹಜ. ಆದರೆ ಶ್ರೀನಿವಾಸನ ಭಕ್ತನಾದ ಈ ಕವಿಪುಂಗವನು (ಕೂರ್ಮನಾಥ ಕವಿ...?) ಮಾತ್ರಾ ದೇವರಿಗೇ, ಸಮಸ್ಯೆ ಉಂಟಾದಾಗ ದೇವರೇ ಕಾಪಾಡಿಕೊಳ್ಳಲಾಗುತ್ತಿಲ್ಲವೆಂಬ ನೋವು, ಅಸಹನೆಯಿಂದ, ಆಗ್ರಹಾವೇಶದಿಂದ "ಅಸಮರ್ಥ ದೇವರೆಂದು" ಬೈಗುಳನ್ನೊಳಗೊಂಡ ಕವಿತೆಯನ್ನು ರಚಿಸಿದ. ಅದೂ ಶ್ರೀ ವೇಂಕಟೇಶ್ವರ ಸ್ವಾಮಿಯ ಮೇಲೆ!**

• • •



# ದೇವರನ್ನೇ ಜರಿದ ಮಹಾಭಕ್ತ

ಆ ಕಾಲದಲ್ಲಿ ಕವಿ ತೆಲುಗಿನಲ್ಲಿ ಬರೆದ 'ವೇಂಕಟಾಚಲ ವಿಹಾರ ಶತಕ' ಗೋಲ್ಕೊಂಡ ನವಾಬರ ಸೈನ್ಯಗಳು ಸೃಷ್ಟಿಸಿದ ವಿಧ್ವಂಸ ಕಾಂಡವನ್ನು ಕಣ್ಣಿಗೆ ಕಟ್ಟಿದಂತೆ ವಿವರಿಸುತ್ತಿದೆ.

ಇವುಗಳಲ್ಲಿ 98 ಪದ್ಯಗಳು ಮಾತ್ರ ಲಭ್ಯವಾಗಿದೆ. ಕೊನೆಯ ಕವಿತೆ 'ಶತ್ರು ಸಂಹಾರ ವೇಂಕಟಾಚಲ ವಿಹಾರ'ದೊಂದಿಗೆ ಅಂತ್ಯವಾಗುವ ಈ ಪದ್ಯಗಳಲ್ಲಿ, ಅಂದಿನ ಮಾನಭಂಗಗಳು, ಹಿಂದೂ ದೇವಾಲಯದ ನಾಶನ, ವಿಗ್ರಹಗಳ ಧ್ವಂಸ, ಮಾರಣಹೋಮ, ಗ್ರಾಮ, ಗ್ರಾಮಗಳನ್ನೇ ಸುಟ್ಟುಹಾಕಿದ್ದು, ಪ್ರಜೆಗಳ ಕಷ್ಟ ತಿಳಿಸುತ್ತಾ ತಿರುಲೇಶನನ್ನು ನಿಂದಾಸ್ತುತಿ ಮಾಡುತ್ತವೆ.

ಗಾಯತ್ರಿ ಮಂತ್ರವನ್ನು ಬಿಟ್ಟು, 'ಮುಸ್ಲಿಂ'ರ 'ಕರ್ತರ' ಮಂತ್ರಗಳನ್ನು ಹೇಳುವುದು ಹೇಗೆ? ನಾಮವನ್ನು ಧರಿಸದೇ ಇರುವುದು ಹೇಗೆ? ಇಷ್ಟೊಂದು ಅನ್ಯಾಯ ನಡೆಯುತ್ತಿದ್ದರೆ ನೀನೇನು ಮಾಡುತ್ತಿದ್ದಿ? ನನ್ನಂತಹ ಬ್ರಾಹ್ಮಣರ ಬಳಿ, ನಿನ್ನ ಸುದರ್ಶನ ಚಕ್ರದಂತಹ ಆಯುಧವಿದ್ದಿದ್ದರೆ ಏನು ಮಾಡುತ್ತಿದ್ದೆನೋ? ನೀನೇಕೆ ಉದಾಸೀನದಿಂದಿದ್ದೀ? ಎಂದು ಆಶ್ಚರ್ಯಗೊಂಡ. ಕವಿಗಳು ತಮಿಳಪಾಶುರಗಳನ್ನು ಕೇಳಿಸಿಕೊಳ್ಳಬೇಕೇ ಹೊರತು, ಮುಸಲ್ಮಾನರ ಮಂತ್ರಗಳನ್ನಲ್ಲ ಅಲ್ಲವೇ? ಎನ್ನುತ್ತಾ ನೋವನ್ನು ವ್ಯಕ್ತಪಡಿಸಿದ.

ನೆಲ್ಲೂರು, ಪಾಲೂರು, ಪಲ್ಲಕೂರು, ರಾವೂರು, ಯಾವ ರೀತಿ ಮಹಮ್ಮದೀಯರ ವಶವಾದವು. ನೇಲಟೂರು, ತಾಳ್ಳಪಾಕ, ಮಿನ್ನೂರು, ಊಟಕೂರು, ಮಾಮಂಡೂರು, ಕಾಳಹಸ್ತಿ ಯಾವ ರೀತಿ ವಿನಾಶಗೊಂಡವು, ಪ್ರತಿ ದೇವಾಲಯವೂ ಯಾವ ರೀತಿ ವಿಧ್ವಂಸವಾಯಿತೋ, ಪ್ರತೀ ಪುಷ್ಕರಿಣಿಯೂ ಮಲ, ಮೂತ್ರಗಳಿಂದ ಯಾವ ರೀತಿ ಮಲಿನವಾಯ್ತೋ, ವೇದಪಂಡಿತರು, ಅರ್ಚಕರ ಶಿಖೆಗಳನ್ನು ಯಾವ ರೀತಿ ಕಿತ್ತುಹಾಕಿದರೆಂದು ವರ್ಣಿಸಿದ.

ನೋವು, ಕೋಪ, ಆಕ್ರೋಶ, ಉಕ್ಕುವಂತಹ ಈ ಸಾಹಿತ್ಯದಲ್ಲಿ ಒಂದೆಡೆ, "ನಿನ್ನ ಬಳಿ ಬಂದು, ಕೃಷ್ಣದೇವರಾಯರು ನೀಡಿದ ಸಂಪತ್ತನ್ನೆಲ್ಲ ಆ ಮುಸಲ್ಮಾನರು ತೆಗೆದುಕೊಂಡು ಹೋಗಿದ್ದನ್ನು ಹೇಗೆ ನೋಡಲಿ? ನಿನ್ನ ಹುಂಡಿಯಲ್ಲಿ ಹಾಕಿದ ನಾಣ್ಯಗಳನ್ನು ದೋಚಿದ್ದನ್ನು ಹೇಗೆ ಸಹಿಸಲಿ?" ಎಂದು ರೋದಿಸಿದ.

ಆ ರೀತಿ ಮುಸಲ್ಮಾನರ ಸೈನ್ಯ ಅಶ್ವವಾಹನಗಳನ್ನು ಹತ್ತಿ ಗ್ರಾಮಗಳಲ್ಲಿ ವರ್ತಕರ ಹೆಂಡತಿಯರನ್ನು ಹೆಣ್ಣುಮಕ್ಕಳನ್ನು ಹಾಳುಮಾಡಿ, ಬಲವಂತದಿಂದ ಅವರ ಧನವನ್ನು ಅಪಹರಿಸುತ್ತಿರುವಾಗ "ನಿನ್ನ ಅಣ್ಣ ಗೋವಿಂದರಾಜ, ತಿರುಪತಿಯಲ್ಲಿ ನಿದ್ರಿಸುತ್ತಿದ್ದನೇ" ಎಂದು ಪ್ರಶ್ನಿಸಿದ.

"ಗೋವಿಂದರಾಜನ ಆಯುಧಗಳು ಮೊಂಡಾದುವೇ? ದೇವಸ್ಥಾನಕ್ಕೆ ಹಣ ಸಾಲದೇ ಚಕ್ರವನ್ನು ಅಡವಿರಿಸಿದನೇನೋ! ವಯಸ್ಸಾಗಿದೆಯೆಂದೂ ಯುದ್ಧ ಮಾಡಲಾರೆನೆಂದು ಸುಮ್ಮನಾದನೇ? ಸಂಬಳವಿಲ್ಲದೆ ಕೆಲಸವನ್ನು ಬಿಟ್ಟುಬಿಟ್ಟ. ಉದ್ಯೋಗಿಗಳ ಸಹಾಯವಿಲ್ಲವೆಂದು ಸುಮ್ಮನಿದ್ದುಬಿಟ್ಟನೇ? ಎಂದು ವ್ಯಂಗ್ಯವಾಡುತ್ತಲೇ ಗೋವಿಂದರಾಜ ಸ್ವಾಮಿಯನ್ನು ನಿಂದಿಸಿದ.

"ದೇವಸ್ಥಾನದಲ್ಲಿನ ಕಂಚು, ತಾಮ್ರದ ಪಾತ್ರೆಗಳನ್ನು ತೋಪುಗಳ ಗುಂಡುಗಳಂತೆ, ದೇವಾಲಯದಲ್ಲಿನ ಸಾಲಿಗ್ರಾಮಗಳನ್ನು ತುಪಾಕಿಗಳ ಗುಂಡುಗಳಾಗಿ

ಉಪಯೋಗಿಸುತ್ತಿದ್ದಾರೆ. ಗುಡಿಯಲ್ಲಿ ದೇವಿಯು ತನ್ನ ಆಭರಣಗಳನ್ನು ಕೆಲದಿನಗಳಿಂದ ಧರಿಸುತ್ತಿಲ್ಲ. ಅದು ಮುಸ್ಲಿಮರಿಗೆ ಹೆದರಿದ್ದೇ ಕಾರಣವಲ್ಲವೇ? ಆ ತುರುಕನ್ನು ಓಡಿಸಲಾರೆಯಾ?

"ರಕ್ತ, ಮದ್ಯವನ್ನು ಕುಡಿದ ಮತ್ತಿನಲ್ಲಿ ಈ ಮುಸ್ಲಿಂ ನಾಯಕರು ಜೀಯ್ಯಂಗಾರರನ್ನು ಹೊಡೆದಾಗ ಅವರು ತಪ್ಪಿಸಿಕೊಂಡು ಓಡಿಹೋಗಿದ್ದನ್ನು ನೋಡುವುದು ಹೇಗೆ? ಅರ್ಚಕರು ಓಡಿಹೋಗುತ್ತಿದ್ದಾರೆ. ಚೇಳು ಕುಟುಕಿದರೂ ಜೋರಾಗಿ ಅರಚಲಾರದ ಪರಿಸ್ಥಿತಿಯಲ್ಲಿ ದೇವಸ್ಥಾನದ ಪಾರುಪತ್ತೇದಾರರಿದ್ದಾರೆ. ಹೆಂಗಸರು, ಮಕ್ಕಳು ಬಚ್ಚಿಟ್ಟುಕೊಳ್ಳುತ್ತಿದ್ದಾರೆ. ಆಳ್ವಾರರು ಓಡಿಹೋಗುತ್ತಿದ್ದಾರೆ. ದೇವಸ್ಥಾನದಲ್ಲಿ ಮುಸಲ್ಮಾನರು ಕೆಟ್ಟ ಮಾತುಗಳಿಂದ ಜರಿಯುತ್ತಾ, ಚಿತ್ರಹಿಂಸೆ ಮಾಡುತ್ತಿದ್ದರೆ ಹೇಗೆ ನೋಡುವುದು? ಕೈಲಾಗದವನಂತೆ ಮೌನವಾಗಿರುವ ಗೋವಿಂದರಾಜನನ್ನು ಏನೆನ್ನಬಲ್ಲೆವು?

ಹಿಂದೂ ಆಲಯಗಳಲ್ಲಿ ಮುಸಲ್ಮಾನರ ಆಕ್ರಮಣ ಯಾವ ರೀತಿ ನಡೆಯಿತೆಂದು ತಿಳಿಸುವ ಪದ್ಯದಲ್ಲಿ...

"ಯವನರು ಗರ್ಭಗೃಹದೊಳಗೆ ಬಂದು, ನಿನ್ನ ಮೈಮೇಲಿನ, ನಿನ್ನ ಪತ್ನಿಯರ ಮೈಮೇಲಿನ ಆಭರಣಗಳನ್ನು ದೋಚುತ್ತಿದ್ದರೆ ಹೇಗೆ ಸುಮ್ಮನಿದ್ದೆ?" ಎಂದು ತಿರುಪತಿಯ ಗೋವಿಂದರಾಜ ಗುಡಿ, ತಿರುಚಾನೂರಿನ ಅಮ್ಮನವರ ಗುಡಿಯ ಮೇಲೆ ನಡೆದ ದಾಳಿಯನ್ನು ಪ್ರಸ್ತಾವಿಸುತ್ತಾರೆ.

ಕೋಪ, ಏನೂ ಮಾಡಲಾರದ ನಿಸ್ಸಹಾಯಕತೆ, ನಂಬಿದ ದೇವರೂ ನಿಸ್ಸಹಾಯಕನಂತೆ ಮೌನವಹಿಸಿದನೆಂಬ ಗಾಬರಿ, ನೋವು ಮೇಳೈಸಿದ ಕವಿತೆಯಲ್ಲಿ ಆ ಕವಿ ಇನ್ನೂ ಈ ರೀತಿ ದೇವರುಗಳನ್ನು ನಿಂದಿಸಿದ.

"ನಿನ್ನನ್ನು ಬಡ್ಡಿವಸೂಲು ಮಾಡುವವನೆನ್ನುತ್ತಾರಲ್ಲ? (ವಡ್ಡೀಕಾಸುಲವಾಡಾ) ನಿನಗೆ ಹರಕೆ ಹೊತ್ತಿರುವುದರಲ್ಲಿ ಒಂದು ನಯಾ ಪೈಸವನ್ನೂ ಬಿಡುವುದಿಲ್ಲವೇ? ತಿಂದ ತಟ್ಟೆಯನ್ನೂ ತೊಳೆಯದವನು ಅನ್ನುತ್ತಾರಲ್ಲವೇ? ಈ ರೀತಿ ಜಿಪುಣನಂತೆ ಹಣವನ್ನೆಲ್ಲ ಕೂಡಿಸಿಕೊಂಡು ಈ ತುರುಕರಿಗೆ ನೀಡಿದರೇ ನಿನ್ನ ಭಕ್ತರು ಸಹಿಸುವರೇ? ತಿರುಪತಿಗೆ ಬಂದು, ಸಾವಿರಕಾಲುಗಳ ಮಂಟಪಗಳನ್ನು ಆಕ್ರಮಿಸಿ, ನಿನ್ನ ಭಕ್ತರುಗಳನ್ನು, ನಿನ್ನ ಆಲಯಗಳನ್ನು ಹಾಳುಮಾಡಿ ದೋಚುತ್ತಿದ್ದರೆ, ಅವರನ್ನೆಲ್ಲ ಓಡಿಸುವ ಜವಾಬ್ದಾರಿ ನಿನ್ನದಲ್ಲವೇ? ನಿನ್ನ ದೇವಾಲಯಗಳನ್ನು ಬಾಬಯ್ಯ (ಮುಸ್ಲಿಂ ಅಧಿಕಾರಿ) ಗೋರಿಗಳನ್ನಾಗಿ ಮಾಡುತ್ತಿದ್ದರೆ, ಗರ್ಭಗುಡಿಯಲ್ಲಿ ಕಸ ಹಾಕುತ್ತಿದ್ದರೆ, ನೋಡುತ್ತಾ ಸುಮ್ಮನಿರುವೆ ಏಕೆ?

"ಯವನ ಕಾಲಾಂತಕರಿಂದ ಜೀರ್ಣ ಕರ್ನಾಟಕ ಲಕ್ಷ್ಮಿಯನ್ನು ಉದ್ಧರಿಸಲಾರೆಯಾ? ಮಠಗಳಲ್ಲಿ ಕಮಂಡಲುಗಳಲ್ಲಿ ಯವನರ ಕೆಟ್ಟ ಮಾತುಗಳನ್ನು ಬಿಟ್ಟು, ವೇದಮಂತ್ರಗಳ ಸುಳಿವಿಲ್ಲ. ಇವನ್ನೆಲ್ಲ ಹೇಗೆ ಸಹಿಸುತ್ತಿದ್ದೀಯಯ್ಯಾ? ಇವರು ಬಂದು ವರಾಹ ಪುಷ್ಕರಿಣಿಯಲ್ಲಿ ರಕ್ತಸಿಕ್ತವಾದ ಆಯುಧಗಳನ್ನು ತೊಳೆದುಕೊಳ್ಳುತ್ತಿದ್ದರೆ ಹೇಗೆ ನೋಡುತ್ತಿದ್ದೀ? ನೀನೀರೀತಿ ಮೌನ ತಾಳುವುದು ಸರಿಯೇ? ನೂರಾರು, ಸಾವಿರಾರು ಗೋವುಗಳನ್ನು ಕೊಲ್ಲುತ್ತಿದ್ದರೆ ನೋಡುತ್ತಿರುವೆಯಲ್ಲ? ಗೋವುಗಳನ್ನು ಕಾಪಾಡಿದ ಗೋಪಾಲ ನೀನಲ್ಲವೇ? ದ್ರೌಪದಿಯ ಮಾನವನ್ನು ರಕ್ಷಿಸಿದ ನೀನು, ಸಾವಿರಾರು ಸ್ತ್ರೀಯರ ಮಾನಭಂಗ ನಡೆಯುತ್ತಿದ್ದರೆ ಹೇಗೆ ಸುಮ್ಮನಿದ್ದೀ?

"ಸಿದ್ಧವಟ್ಟಂನಲ್ಲಿದ್ದ ಕಾಮಾಕ್ಷಿ ಅಮ್ಮನವರ ಮುಖವನ್ನೇ ಕೆತ್ತಿಹಾಕಿದರೇ ಸಿದ್ಧಲಿಂಗನನ್ನು ಗರ್ಭಗುಡಿಯಿಂದ ಕಿತ್ತುಹಾಕಿದರೇ? ಚೆನ್ನಕೇಶವನನ್ನು ಪೆನ್ನಾನದಿಯಲ್ಲಿ ಎಸೆದರೇ! ಒಂಟಿಮಿಟ್ಟದ ರಘುನಾಥನನ್ನು ಬಿಟ್ಟು ಎಲ್ಲ ದೇವರುಗಳನ್ನೂ, ಧ್ವಂಸ ಮಾಡಿದರೇ!

"ರಾಮೇಶ್ವರದಲ್ಲಿನ ಸ್ವಾಮಿಯನ್ನು ಮರಳಿನಲ್ಲಿ ಹೂತುಹಾಕಿದರು! ಜಂಬುಕೇಶ್ವರದಲ್ಲಿ, ಚಿದಂಬರದಲ್ಲಿ, ಶ್ರೀರಂಗಂನಲ್ಲಿ..ಇಷ್ಟು ಕ್ರೂರವಾದ ಸಂಘಟನೆಗಳು ನಡೆಯುತ್ತಿದ್ದರೆ ಬೆಟ್ಟವನ್ನಿಳಿದು ಬರಬಾರದೇಕೆ? ಅವರನ್ನು ಕೊಲ್ಲುವುದು ನಿನ್ನ ಕೈಲಾಗದೇ? ನೀನು ಅಷ್ಟೊಂದು ನಿಶ್ಶಕ್ತನೇ?

"ಮಂಗಳ ಗಿರಿಯ ಪಾನಕಾಲಸ್ವಾಮಿ ಪಾನಕ ಕುಡಿಯುವುದರಲ್ಲಿ, ಅಹೋಬಿಲ ನಾರಸಿಂಹನು ಲಕ್ಷ್ಮೀ ವಿಲಾಸದಲ್ಲಿ, ಪುರುಷೋತ್ತಮನು ಪ್ರಸಾದಗಳನ್ನು ಸ್ವೀಕರಿಸುವುದರಲ್ಲಿ ಧರ್ಮಪುರಿಯ ದೇವರು ಆಧ್ಯಾತ್ಮಿಕ ಚಿಂತನೆಯಲ್ಲಿ ಮುಳುಗಿ ತೇಲುತ್ತಿದ್ದಾರೆ. ಇವರೆಲ್ಲರೂ ಇಸ್ಲಾಂ ಮತವನ್ನು ಸ್ವೀಕರಿಸಿದರೇ? ಅವರೆಲ್ಲ ಉತ್ತರಾದಿಯವರು, ದಕ್ಷಿಣದಲ್ಲಿ ಮುಸ್ಲಿಂ ರಾಜ್ಯದಲ್ಲಿರುವ ಸರ್ವಶಕ್ತಿವಂತ ನೀನೇ ಎಂದು ಭಕ್ತರೆಲ್ಲ

▶▶ 47ನೇ ಪುಟಕ್ಕೆ



ತಿರುಮಲೆಯ ಚರಿತಾಮೃತ ಗ್ರಂಥ ಬರೆದಿರುವ **ಶ್ರೀ ಪಿ.ವಿ.ಆರ್.ಕೆ. ಪ್ರಸಾದ್**ರವರು ತಿರುಮಲೆಯ ಶ್ರೀನಿವಾಸ ದೇವರ ಮಹಾಭಕ್ತರು. ಉತ್ತಮ ಐಎಎಸ್ ಅಧಿಕಾರಿ ಎಂದು ಕೀರ್ತಿ ಗಳಿಸಿರುವವರು. ಅನೇಕ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಶ್ರೀಯುತರು ಪ್ರಧಾನಮಂತ್ರಿ ದಿವಂಗತ ಪಿ.ವಿ. ನರಸಿಂಹರಾಯರ ಪತ್ರಿಕಾ ಕಾರ್ಯದರ್ಶಿಗಳಾಗಿದ್ದವರು. ಅಂತೆಯೇ ತಿರುಮಲೆ ತಿರುಪತಿ ದೇವಸ್ಥಾನದ ನಿರ್ವಹಣಾ ಅಧಿಕಾರಿಗಳಾಗಿ ಅಪೂರ್ವ ಸೇವೆ ಸಲ್ಲಿಸಿರುವ ಶ್ರೀಯುತರು ತಮ್ಮನ್ನು 'ಶ್ರೀನಿವಾಸದಾಸ' ಎಂದು ಕರೆದುಕೊಳ್ಳುವಲ್ಲಿ ಹೆಮ್ಮೆ ಪಡುವ ಭಾಗವತರು. 'ತಿರುಮಲೆಯ ಚರಿತಾಮೃತ'ವನ್ನು ಕನ್ನಡಕ್ಕೆ ತಂದಿರುವ



**ಶ್ರೀಮತಿ ಸೂರ್ಯವಂಶಿ** ಉತ್ತಮ ಅನುವಾದಕಿ. ತೆಲುಗಿನಿಂದ ಹಲವಾರು ಕಾದಂಬರಿಗಳನ್ನು ಕನ್ನಡಕ್ಕೆ ತಂದಿರುವವರು. ಟಿಟಿಡಿ ನಿರ್ವಹಣಾಧಿಕಾರಿಗಳಾಗಿದ್ದ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್‌ರವರು ತಿರುಮಲೆ ಪತ್ರಾಗಾರದಲ್ಲಿ ದೊರೆತ ಅನೇಕ ದಸ್ತಾವೇಜುಗಳನ್ನು, ಪ್ರಾಚೀನ ದಾಖಲೆಗಳನ್ನು, ಹಳೆಯ ರೆಕಾರ್ಡ್‌ಗಳನ್ನು, ಶಿಲಾಶಾಸನಗಳನ್ನು ಅಧ್ಯಯನ ಮಾಡಿ ರಚಿಸಿರುವ 'ತಿರುಮಲೆಯ ಚರಿತಾಮೃತ' ಒಂದು ಅಧಿಕೃತ ಗ್ರಂಥ. ಈ ಇಬ್ಬರು ದೈವಭಕ್ತರಿಗೆ ಹಾರ್ದಿಕ ಕೃತಜ್ಞತೆಗಳನ್ನು ಅರ್ಪಿಸುತ್ತಾ 'ತಿರುಮಲೆಯ ಚರಿತಾಮೃತ'ವನ್ನು ಓದುಗರಿಗೆ ನೀಡುತ್ತಿದ್ದೇವೆ

–ಸಂ.


# ಮಾಸ ವೈಶಿಷ್ಟ್ಯ

**ನಮ್ಮ ಹಿಂದೂ ಧರ್ಮದ ಆಚರಣೆಗಳಲ್ಲಿ ಹಬ್ಬ ಹರಿದಿನಗಳಿಗೆ, ಮಹಾನ್ ಸಂತರ, ಮಹಾನ್ ಸತ್ಪುರುಷರ ಜಯಂತಿ ಹಾಗೂ ಪುಣ್ಯ ದಿನಗಳಿಗೆ ವಿಶೇಷವಾದ ಸ್ಥಾನ ಉಂಟು. ಈ ಕುರಿತು ಪ್ರತಿ ತಿಂಗಳೂ ಮಾಸ ವೈಶಿಷ್ಟ್ಯದಲ್ಲಿ ತಿಳಿಸಿಕೊಡುತ್ತಾರೆ ಶ್ರೀ ಜಿ.ಸಿ.ಎಸ್.**

**1. ರಥಸಪ್ತಮೀ: (01–02–2020).** ಮಾಘಮಾಸದ ಸಪ್ತಮಿಯಂದು ರಥಸಪ್ತಮೀ. ಜಗತ್ತಿನ ಅಧಿನಾಯಕ ಸೂರ್ಯ ಈ ಹಬ್ಬದ ಕೇಂದ್ರ ಬಿಂದು. ಸಪ್ತ ಕುದುರೆಗಳ ರಥವನ್ನೇರಿದ ಸೂರ್ಯ ತನ್ನ ಪಥವನ್ನು ಉತ್ತರದತ್ತ ತಿರುಗಿಸಿ, ಹೊರಡುವ ಪರ್ವಕಾಲವೇ ಈ ರಥಸಪ್ತಮೀ. ಉತ್ತಮ ಆರೋಗ್ಯ ಮತ್ತು ಎಲ್ಲರ ಯೋಗಕ್ಷೇಮಕ್ಕಾಗಿ ಈ ದಿನ ಸೂರ್ಯನನ್ನು ನಮಸ್ಕರಿಸಿ, ಪ್ರಾರ್ಥಿಸಲಾಗುತ್ತದೆ. ರಥಸಪ್ತಮಿಯ ಅನಂತರ ಚಳಿ ಕಡಮೆಯಾಗಿ ಬಿಸಿಲಿನ ಪ್ರಖರತೆ ಹೆಚ್ಚುತ್ತದೆ.



**2. ಮಧ್ವನವಮೀ: (03–02–2020).** ಮಾಘಮಾಸದ ಶುಕ್ಲ ಪಕ್ಷ ನವಮಿಯಂದು ಮಧ್ವಾಚಾರ್ಯರು ಅದೃಶ್ಯರಾದ ದಿನ. ಕ್ರಿ.ಶ. 1200ರಿಂದ 1280 ಮಧ್ವಾಚಾರ್ಯರ ಕಾಲವೆಂದು ಇತಿಹಾಸ ಸಂಶೋಧಕರ ನಿರ್ಣಯ. ಹುಟ್ಟಿದ್ದು ಉಡುಪಿಯ ಬಳಿಯ 'ಪಾಜಕ' ಎಂಬಲ್ಲಿ. ಶ್ರೀ ಮಧ್ವಾಚಾರ್ಯರ ಮುಖ್ಯವಾದ ಪ್ರತಿಪಾದನೆ ದ್ವೈತ ಸಿದ್ಧಾಂತ. ದ್ವೈತ ಎಂದರೆ ಎರಡು. ಜೀವಾತ್ಮ ಮತ್ತು ಪರಮಾತ್ಮ ಒಂದಲ್ಲ, ಬೇರೆ ಬೇರೆ ಎಂಬುದು. ನಾರಾಯಣನೊಬ್ಬನೇ ಸರ್ವೋತ್ತಮ. ಭಕ್ತಿಮಾರ್ಗದಿಂದ ನಾರಯಣನನ್ನು ಸೇವಿಸಿ ಅವರ ಪಾದಗಳ ಬಳಿ ಸೇರಿ ಮೋಕ್ಷವನ್ನು ಪಡೆಯುವುದು ಇವರ ಸಿದ್ಧಾಂತದ ತಿರುಳು.




**3. ಭದ್ರಾಚಲ ರಾಮದಾಸರ ಜಯಂತಿ. (07–02–2020).** ಮಾಘ ಶುಕ್ಲ ತ್ರಯೋದಶಿ. 'ಭದ್ರಾಚಲ ರಾಮದಾಸ'ನೆಂದೇ ಪ್ರಸಿದ್ಧಿ ಗಳಿಸಿದ ಈತನ ನಿಜ ಹೆಸರು ಕಂಚೆರ್ಲ ಗೋಪನ್ನ. ಆಂಧ್ರ ಪ್ರದೇಶದಲ್ಲಿನ ಖಮ್ಮಂ ಜಿಲ್ಲೆಯ ನೆಲಕೊಂಡಪಲ್ಲಿಯಲ್ಲಿ 1620ರಲ್ಲಿ ಜನನ. ಭದ್ರಾಚಲ ದೇವಸ್ಥಾನ ನಿರ್ಮಾಣ ಈತನ ಜೀವಿತಾವಧಿಯ ಪ್ರಮುಖ ಘಟನೆ. ತೆಲುಗು ಕೀರ್ತನೆಗಳಷ್ಟೆ ಈತನ ಆದ್ಯತೆ. ದಾಶರಥಿ ಶತಕ, ಮತ್ತೆಷ್ಟೋ ರಾಮ ಕೀರ್ತನೆಗಳನ್ನು ಹಾಡಿ ರಾಮಭಕ್ತರ ಹೃದಯಗಳಲ್ಲಿ ನೆಲೆಸಿದ್ದಾನೆ.




**4. ಭಾರತ ಹುಣ್ಣಿಮೆ: (09–02–2020).** ಈ ದಿನದಂದು ಬಳ್ಳಾರಿ ಜಿಲ್ಲೆಯ ಹಡಗಲಿ ತಾಲ್ಲೂಕಿನಲ್ಲಿ ನಡೆಯುವ ಮೈಲಾರ ಜಾತ್ರೆಯು ದಕ್ಷಿಣ ಭಾರತದಲ್ಲಿಯೇ ಪ್ರಸಿದ್ಧಿ ಹೊಂದಿದೆ. ಈ ಜಾತ್ರೆಯಲ್ಲಿ ಸುಮಾರು 10 ಲಕ್ಷಕ್ಕೂ ಅಧಿಕ ಭಕ್ತಾದಿಗಳು ವಿವಿಧ ರಾಜ್ಯಗಳಿಂದ ಆಗಮಿಸಿ ಭಾಗವಹಿಸುತ್ತಾರೆ. ಅಂದಿನ ದಿನ ಮೈಲಾರ ಲಿಂಗೇಶ್ವರನಿಗೆ ಭಕ್ತಾದಿಗಳು ಬಾಳೆಹಣ್ಣು, ಸಕ್ಕರೆ, ತುಪ್ಪ, ಹಾಲು ಮಿಶ್ರಿತ ನೈವೇದ್ಯವನ್ನು ಅರ್ಪಿಸುವುದು ವಿಶೇಷವಾಗಿದೆ.






**5. ಸೀತಾವತಾರ (15–02–2020):** ಮಾಘಮಾಸದಲ್ಲಿನ ಕೃಷ್ಣ ಪಕ್ಷ ಸಪ್ತಮಿ ದಿನದಂದು ಸೀತಾದೇವಿಯ ಜನನ. ಜನಕ ಮಹಾರಾಜನ ಪುತ್ರಿ ಸೀತೆ ನಮ್ಮ ಭಾರತೀಯ ಸ್ತ್ರೀಯರ ಆದರ್ಶ ಮಾತೆ. ಶ್ರೀರಾಮನ ಧರ್ಮಪತ್ನಿ. ಈಕೆಯ ಜೀವನ ಎಲ್ಲರಿಗೂ ಆದರ್ಶಪ್ರಾಯವಾಗಿದೆ.


**6. ಶ್ರೀ ದಾಸನವಮೀ: (17–02–2020).** ಮಾಘಮಾಸದಲ್ಲಿನ ಕೃಷ್ಣ ಪಕ್ಷ ನವಮಿಯಂದು. ದಾಸ ಪಂಥ ಹುಟ್ಟಿದ ದಿನವನ್ನು ಶ್ರೀ ದಾಸ ನವಮಿಯಾಗಿ ಆಚರಿಸುತ್ತಾರೆ. ಈ ದಿನದಂದು ಶ್ರೀ ಪುರಂದರದಾಸರ, ತ್ಯಾಗರಾಜರ, ಕನಕದಾಸರ ಕೀರ್ತನೆಗಳನ್ನು ಹಾಡುವ ಸಂಪ್ರದಾಯ ಬೆಳೆದುಕೊಂಡು ಬಂದಿದೆ.




**7. ಮಹಾಶಿವರಾತ್ರಿ (21–02–2020):** ಮಾಘಮಾಸ ಕೃಷ್ಣ ಪಕ್ಷ ತ್ರಯೋದಶಿ. ಹಿಂದೂ ಧರ್ಮದಲ್ಲಿ ಶಿವರಾತ್ರಿಗೆ ಅದರದ್ದೇ ಆದ ಮಹತ್ವವಿದೆ. ಕೈಲಾಸನಾಥನಾದ ಶಿವನು ಆ ದಿನದಂದು ಭೂಮಿಗೆ ಆಗಮಿಸಿ ಸಕಲ ಇಷ್ಟಾರ್ಥಗಳನ್ನು ಪೂರೈಸುತ್ತಾನೆಂಬ ನಂಬಿಕೆ ಎಲ್ಲ ಶಿವಭಕ್ತರಲ್ಲಿದೆ. ಶಿವರಾತ್ರಿಗೆ ಹೆಚ್ಚು ಪಾವಿತ್ರ್ಯ, ಪ್ರಾಮುಖ್ಯವಿರುವುದು ಅಂದು ಆಚರಿಸುವ ಉಪವಾಸದಲ್ಲಿ ಶಿವನಿಗೆ ಮಂಗಳಕರ ರಾತ್ರಿ.



**8. ಶನೈಶ್ಚರ ಜಯಂತಿ (22–02–2020):** ಮಾಘಮಾಸ ಕೃಷ್ಣ ಪಕ್ಷ ಚತುರ್ದಶಿ. ಸೂರ್ಯ ಮತ್ತು ಛಾಯಾರ ಪುತ್ರ ಶನಿ. ಕಪ್ಪು ಬಣ್ಣವುಳ್ಳ ಶನಿಯು ನವಗ್ರಹಗಳಲ್ಲಿ ಒಬ್ಬ. ಸೂರ್ಯನಿಂದ ಬಹಳ ದೂರವಿರುವ ಗ್ರಹ. ಶನಿಯ ಇತರ ಹೆಸರುಗಳು ಪಿಂಗಳ, ಕಾಕೀಧ್ವಜ, ಕೋನಷ್ಟ, ಬಭ್ರು, ಕೃಷ್ಣ, ರೌದ್ರಾಯಾಂತಕ್, ಯಮ್, ಸೌರಿ...ಇತ್ಯಾದಿ.



**9. ಶ್ರೀ ರಾಮಕೃಷ್ಣರ ಜಯಂತಿ (25–02–2020):** ಫಾಲ್ಗುಣಮಾಸ ಶುಕ್ಲ ಪಕ್ಷ ದ್ವಿತೀಯ. 1836 ಫೆಬ್ರವರಿ 18ರಂದು ಬಂಗಾಳದ ಸಣ್ಣ ಹಳ್ಳಿ ಕಾಮಾರಕಪುರದಲ್ಲಿ ಇವರ ಜನನ. ಅದ್ವೈತ ವೇದಾಂತ, ಭಕ್ತಿ, ತಂತ್ರಗಳ ಪ್ರತಿಪಾದಕರು. ಹಿಂದೂ ಧರ್ಮ ಬ್ರಿಟಿಷರ ದಾಸ್ಯಕ್ಕೆ ಸಿಕ್ಕಿಬಿದ್ದಂತಹ ಕಾಲದಲ್ಲಿ ಹಿಂದೂ ಧರ್ಮದ ಉಳಿವಿಗಾಗಿ ಶ್ರಮಿಸಿದಂತಹವರು.



▶▶ 45ನೇ ಪುಟದಿಂದ

ನಂಬಿದರೂ...ನೀನೇನೂ ಮಾಡಲಾರೆಯಾ?

“ಕಾವೇರಿ ರಂಗನ ಪ್ರಸಾದ ವೈಭವ, ಕಂಚಿವರದಪ್ಪನ ಗರುಡಸೇವೆ, ಪೆನುಗೊಂಡ ರಾಮಭದ್ರನ ವೈವಿಧ್ಯ, ಗಂಡಿಕೋಟೆಯ ಮಾಧವನ ಗಾಂಭೀರ್ಯ, ಕಡಪ ವೇಂಕಟೇಶ್ವರನ ಪ್ರಾಶಸ್ತ್ಯ, ಕಾಳಹಸ್ತೀಶ್ವರನ ಪ್ರಾಧಾನ್ಯ, ಉದಯಗಿರಿ ರಘುವೀರನ ಸೌಭಾಗ್ಯ, ಶ್ರೀಶೈಲ ಮಲ್ಲಿಕಾರ್ಜುನನ ಮಹಿಮೆ ಎಲ್ಲ ಏನಾದುವು? ಇನ್ನುಳಿದಿರುವುದು ನೀನೊಬ್ಬನೇ! ಇಂದಿಗೂ ನಿನ್ನ ಆದಾಯವಾಗಲೀ, ಪ್ರಸಾದವಾಗಲೀ, ವೈಭವವಾಗಲೀ, ಎಲ್ಲ ಹಾಗೇ ಇವೆ...ಹೀಗೇ ನೋಡುತ್ತಾ ಸುಮ್ಮನಿದ್ದರೆ, ಆ ಫಕೀರರು ನಿನ್ನ ನೈವೇದ್ಯವನ್ನೂ ಕೊಳ್ಳೆ ಹೊಡೆಯುತ್ತಾರೆ...ನಿನ್ನ ಆಭರಣಗಳು, ಹುಂಡಿಗಳನ್ನು ದೋಚುತ್ತಾರೆ.

“ಈಗಲಾದರೂ ಕಣ್ತೆರೆ ಸ್ವಾಮೀ! ಏಳು, ಆ ದುಷ್ಕರ್ಮಿಗಳನ್ನು ನಾಶ ಮಾಡು...” (ಹೀಗೆ ಕವಿತೆ ಮುಂದುವರಿದಿದೆ) ಕೊನೆಯ ಪದ್ಯಗಳಲ್ಲಿ ಇನ್ನೂ ಖಾರವಾಗಿ...ಇನ್ನೆಷ್ಟೋ ಸಮಯವಿಲ್ಲ.

...ಮುಸಲ್ಮಾನರು ತಿರುಪತಿ ತಲಪಿದರು.

...ಊರನ್ನು, ಗುಡಿಗಳನ್ನು ನಾಶಮಾಡುತ್ತಿದ್ದಾರೆ.

...ಗರ್ಭಗುಡಿಯಲ್ಲಿ ಕಸವನ್ನು ಪೇರಿಸುತ್ತಿದ್ದಾರೆ.

...ಜೀಯ್ಯಂಗಾರರನ್ನು ಹೊಡೆಯುತ್ತಿದ್ದಾರೆ.

...ಆದರೂ ಇನ್ನೂ ನಿದ್ರಿಸುತ್ತಿರುವೆಯಾ ಸ್ವಾಮಿ...?

ಇಷ್ಟೆಲ್ಲ ನಿಂದಿಸಿದ ಅನಂತರ, ಈ ಕವಿ ದೇವರಿಗೆ ಕ್ಷಮಾಪಣೆ ಹೇಳುತ್ತಾನೆ.

“ನಿನ್ನನ್ನು ಏನೇನೋ ಎಂದೆ. ಕೈಲಾಗದವನೆಂದೆ, ನಿರ್ದಯಿಯೆಂದೆ, ಇನ್ನೂ ನಿಂದಿಸಿದೆ. ಇಲ್ಲಿ ನಡೆಯುತ್ತಿರುವ ಹಿಂಸಾಕಾಂಡ, ಹಿಂದೂಗಳಿಗೆ ನಡೆಯುತ್ತಿರುವ ಅವಮರ್ಯಾದೆ, ಮಾರಣಕಾಂಡ, ದೇವಾಲಯಗಳಲ್ಲಿ ನಡೆಯುತ್ತಿರುವ ರಾಕ್ಷಸಕಾಂಡವನ್ನು ಸಹಿಸಲಾರದೇ ನಿನ್ನ ಸಹಾಯವನ್ನು ಬಯಸಿ ಆ ರೀತಿ ಅಂದೆ. ನಿನ್ನ ಸಂಸ್ಕೃತಿ ಸಂಪ್ರದಾಯಗಳನ್ನು ರಕ್ಷಿಸಬೇಕಾದ ಕರ್ತವ್ಯ ನಿನ್ನದೇ ಎಂದು ಹೇಳುವುದಕ್ಕಾಗಿ ಆ ರೀತಿ ಹೇಳಿದೆ. ನಿನ್ನ ಲೀಲೆಗಳು ನಮಗೆ ಹೇಗೆ ತಿಳಿಯುತ್ತವೆ? ನನ್ನ ತಪ್ಪುಗಳನ್ನು ಕ್ಷಮಿಸು ಸ್ವಾಮಿ!” ಎನ್ನುತ್ತಾ ಆ ಶತಕವನ್ನು ಪೂರ್ತಿ ಮಾಡಿದ.

ಈ ಕವಿ ತನ್ನ ವಿವರಗಳನ್ನು ಎಲ್ಲೂ ವಿಶದೀಕರಿಸಿಲ್ಲ. ನಿಖರವಾಗಿ ಹೇಳುವುದಕ್ಕೆ ಆಧಾರಗಳಿಲ್ಲ.

ಆದರೆ ವಿದ್ವಾನ್ ವೇದಂ ವೆಂಕಟಕೃಷ್ಣಶರ್ಮರು ತಮ್ಮ ‘ಶತಕವಾಙ್ಮಯ ಸರ್ವಸ್ವ’ ಎಂಬ ಪುಸ್ತಕದಲ್ಲಿ, ಈ ‘ಶತ್ರು ಸಂಹಾರ ಶತಕ ಅಥವಾ ವೇಂಕಟಾಚಲ ವಿಹಾರ ಶತಕ’ ರಚಿಸಿರುವುದು, 18ನೆಯ ಶತಮಾನದ ಗೋಗುಲಪಾಟಿ ಕೂರ್ಮನಾಥಕವಿ’ ಎಂದು ನಿರ್ಧರಿಸಿದ್ದಾರೆ.

ಈ ಶತಕದಲ್ಲಿ ಗೋಲ್ಕೊಂಡ ಅಬ್ದುಲ್ಲಾ ಕುತುಬ್‌ಷಾ ಮಾಡಿದ ಅತ್ಯಾಚಾರಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತವೆ. ದೇವಾಲಯದ ವಿಧ್ವಂಸ, ವಿಗ್ರಹನಾಶ, ಹಿಂದೂಗಳ ಆತ್ಮಗೌರವವನ್ನು, ಮನಃ ಸ್ಥೈರ್ಯವನ್ನು ಕುಂದುಗೊಳಿಸಿದೆ.

ತಿರುಪತಿಯ ಗೋವಿಂದರಾಜರ ಗುಡಿ, ಉಳಿದ ಗುಡಿ, ಅಚ್ಯುತರಾಯರ ಗುಡಿ ಗ್ರಾಮದೊಂದಿಗೆ ಹಾಳಾಗಿದೆ. ತಿರುಚಾನೂರು ಸಹ ವಿನಾಶಕ್ಕೆ ಗುರಿಯಾಯ್ತು.

ಈ ಮಾರಣಕಾಂಡವೆಲ್ಲ ಕ್ರಿ.ಶ. 1656–1668ರ ನಡುವೆ ನಡೆದಿರಬೇಕು.

(ಮುಂದುವರಿಯುವುದು)

ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ

# ಮಲ್ಲಾರ

## ಚಂದಾ ಪತ್ರಕ

**ನೀವು ಚಂದಾದಾರರಾಗಿ ! ನಿಮ್ಮ ಬಂಧು ಮಿತ್ರರನ್ನು ಚಂದಾದಾರರನ್ನಾಗಿ ಮಾಡಿ !**

**ಕೈವಾರ ಶ್ರೀ ಯೋಗಿ ನಾರೇಯಣರ** ವಿಚಾರಗಳಿಂದ ಪ್ರೇರಣೆ ಪಡೆದು, ಭಾರತೀಯ ಸನಾತನ ಧರ್ಮ, ಸಂಸ್ಕೃತಿ, ಪರಂಪರೆಗಳನ್ನು ಕುರಿತು ಅಪೂರ್ವ ಮಾಹಿತಿಯನ್ನು ನೀಡುತ್ತಿರುವ ಜನಪ್ರಿಯ ಮಾಸಪತ್ರಿಕೆ **ಮಲ್ಲಾರ**. ಸುಲಭ ಬೆಲೆಯ ಸಮೃದ್ಧ ಸಾಹಿತ್ಯದ ರೂವಾರಿ ಮಲ್ಲಾರ.

ಮಲ್ಲಾರ ಚಂದಾದಾರರಾಗಲು ಕೆಳಗಿನ ಪತ್ರಕವನ್ನು ತುಂಬಿ ‘Sri Yogi Nareyana Study Centre’ ಹೆಸರಿನಲ್ಲಿ ಡಿಡಿ ಅಥವಾ ಚೆಕ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಿ ಚಂದಾದಾರರಾಗಿ

For Subscription - Bank Transfer/ RTGS:
Sri Yogi Nareyana Study Centre
SB A/c No. 141201011016824,
IFSC Code: VIJB0001412.
After Transfer Please Contact No. 94480 85975

**ಮಲ್ಲಾರ ಕಳುಹಿಸಬೇಕಾದ ನನ್ನ ವಿಳಾಸ**

ಹೆಸರು:..........................................

ವಿಳಾಸ:..........................................

..........................................

..........................................

ಪಿನ್ ಕೋಡ್ ಸಂಖ್ಯೆ: ..........................

ಮೊಬೈಲ್ /ಫೋನ್:..........................

☐ **ಆಜೀವ ಚಂದಾ ರೂ.** 1500/-
☐ **5 ವರ್ಷಗಳ ಚಂದಾ ರೂ.** 500/-
☐ **ವಾರ್ಷಿಕ ಚಂದಾ ರೂ.** 140/-

ನಾನು ಡಿಡಿ/ಚೆಕ್/ಮನಿಯಾರ್ಡರ್ ಮೂಲಕ

(ಚೆಕ್/ಡಿಡಿ ಸಂ..........................................

ಬ್ಯಾಂಕ್..........................................)


ಚಂದಾ ಹಣವನ್ನು ಕಳುಹಿಸಿದ್ದೇನೆ.

**ಸಹಿ**/-

**ನಿರ್ವಾಹಕ ಸಂಪಾದಕರು**
ಮಲ್ಲಾರ ಮಾಸಪತ್ರಿಕೆ, ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ, ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು–560 054.

**ಜಾಹೀರಾತು ನೀಡಲು ಮತ್ತು ಚಂದಾದಾರರಾಗಲು ಸಂಪರ್ಕಿಸಿ**
**ಮೊ: 9916854885**

# ಸಂಕಟಗಳಿಂದ ಮುಕ್ತಿ



ನಿವೃತ್ತ ಹಿರಿಯ ಬ್ಯಾಂಕ್ ಅಧಿಕಾರಿಗಳಾದ ಶ್ರೀ ಹೆಚ್.ವಿ. ಶ್ರೀನಿವಾಸ ಅವರ ಕಾವ್ಯನಾಮವೇ ಸಾಯಿಬಿಂದು. ಪ್ರಗತಿಪರ ಅಧ್ಯಾತ್ಮ ಚಿಂತಕರೂ ಉಪನ್ಯಾಸಕರೂ ಆಡಳಿತ, ತತ್ತ್ವಜ್ಞಾನ, ಧ್ಯಾನ, ವ್ಯಕ್ತಿತ್ವ ವಿಕಸನ, ಬ್ಯಾಂಕಿಂಗ್ ಮುಂತಾದ ಗಂಭೀರ ವಿಷಯಗಳನ್ನು ಕುರಿತು ಪುಸ್ತಕಗಳನ್ನು ರಚಿಸಿದ್ದಾರೆ. ಸಾಯಿ ಎಂದರೆ ಸಾಗರ. ಬಿಂದು ಎಂದರೆ ಹನಿ. ಸಾಯಿ ಎಂಬ ಸಾಗರದಲ್ಲಿ ತಾನು ಒಂದು ಹನಿ ಎಂದು ತಮ್ಮ ಕಾವ್ಯನಾಮದ ಬಗ್ಗೆ ವಿವರಣೆ ನೀಡುತ್ತಾರೆ. 'ವ್ಯಕ್ತಿತ್ವ ವಿಕಸನ ಲೇಖನ ಮಾಲೆ'ಯಲ್ಲಿ ಅವರ ಚಿಂತನೆಗಳನ್ನು ಕಾಣುವಿರಿ.

ದೇಹ ಧರಿಸಿದ ಮೇಲೆ, ಜಗತ್ತಿಗೆ ಪಾದವಿರಿಸಿದ ಮೇಲೆ, ಸಂಸಾರಕ್ಕೆ ಪ್ರವೇಶಿಸಿದ ಮೇಲೆ ಜಂಜಾಟಗಳು, ಸಂಕಟಗಳು, ಸಮಸ್ಯೆಗಳು, ಸವಾಲುಗಳು ಸದಾ ಇದ್ದದ್ದೇ. ಆದರೆ, ಅವುಗಳನ್ನು ಕಾಣುವ ನಮ್ಮ ದೃಷ್ಟಿಕೋನ ಮತ್ತು ನಾವು ಧರಿಸಿರುವ ಕನ್ನಡಕವು ಬದಲಾಗಬೇಕಷ್ಟೆ.

ಎಲ್ಲ ಸಂಕಟ–ಸಮಸ್ಯೆಗಳಿಗೂ ಅಜ್ಞಾನವೇ ಕಾರಣ. ನನ್ನ ಅಜ್ಞಾನವನ್ನು ನನ್ನ ಪ್ರಯತ್ನದಿಂದ ಕಳೆದುಕೊಳ್ಳಬಹುದು. ಆದರೆ, ಇತರರ ಅಜ್ಞಾನವನ್ನು ಕಳೆಯುವುದು ಕಷ್ಟವೇ! ಅದಕ್ಕೂ ಕಾಲಾವಕಾಶ ಬೇಕು. ಮಿಗಿಲಾಗಿ ದೈವಕೃಪೆ ಬೇಕು. ಜೀವನದ ಕಠೋರ ಪರಸ್ಪರತೆಯಲ್ಲಿ ಇತರರ ಅಜ್ಞಾನವೂ ನಮ್ಮನ್ನು ಪೀಡಿಸುತ್ತದೆ, ಬಾಧಿಸುತ್ತದೆ. ಕೆಲವು ಸಂಬಂಧಗಳನ್ನು ಕೈ ಬಿಡಬಹುದು. ಆದರೆ ಕೆಲವು ಸಂಬಂಧಗಳನ್ನು ಕಳಚಲು ಸಾಧ್ಯವೇ ಇಲ್ಲ.

ಸಜ್ಜನ, ಸುಶಿಕ್ಷಿತ, ದೈವಭಕ್ತಿಯುಳ್ಳ ಮಾತಾಪಿತೃಗಳು ತಮ್ಮ ಮಕ್ಕಳನ್ನು ಸುಸಂಸ್ಕೃತರನ್ನಾಗಿ, ಸಂಸ್ಕಾರವಂತರನ್ನಾಗಿ ಮಾಡಿ ಬೆಳೆಸಿರಬಹುದು. ಆದರೆ, ವಿಧಿಯ ಕಾಲದ ಕೈಚಳಕದಲ್ಲಿ, ಅವರಿಗೆ ಕೆಟ್ಟವರು ಗಂಟು ಬೀಳಬಹುದು. ಅದು ಅವರು ಬೆಳೆದು ಬಂದ, ರೂಢಿಸಿಕೊಂಡು ಬಂದ ಚಾಳಿಗಳು. ಅದಕ್ಕೆ ಹೊರಗಿನ ಪರಿಸರ ಸನ್ನಿವೇಶಗಳ ಮಾಲಿನ್ಯತೆಯೂ ಇರಬಹುದು; ಸ್ವಂತದ ಹೃದಯಹೀನತೆ ಇರಬಹುದು; ಅಥವಾ ಹಿರಿಯರಿಂದಲೇ ಕೆಟ್ಟ ಸಂಸ್ಕಾರಗಳನ್ನು ರಕ್ತನಾಳಗಳಲ್ಲಿ ಇಳಿಸಿಕೊಂಡವರಿರಬಹುದು. ಕೌಟುಂಬಿಕ ಕಲಹಗಳಿಂದ ಕುಟುಂಬಗಳು ಬಿರುಕು ಬಿಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಯಾವ ಪ್ರೀತಿಗೂ, ನೀತಿಗೂ, ತರ್ಕಕ್ಕೂ, ತಾಳಕ್ಕೂ ತಾಗದ ಬಾಗದ ಇವರಿಂದ ಕಠಿಣ ಪರಿಣಾಮವೇ ತಲೆದೋರಬಹುದು. ಇಂತಹ ಹಿಂಸೆಯಿಂದ ಹೊರಬರುವುದಕ್ಕೆ ದೀರ್ಘಕಾಲವೇ ಹಿಡಿಯಬಹುದು ಮತ್ತು ಅಪಾರ ದೈವಕೃಪೆಯು ಬೇಕಾಗುವುದು. ಅಂತಹ ಸನ್ನಿವೇಶಗಳಲ್ಲಿ ಅಗತ್ಯವಾದುದು (1) ಆತ್ಮಸಾಕ್ಷಿಯಲ್ಲಿ (ಸ್ವಧರ್ಮ) ನಡೆದುಹೋಗುವುದು. (2) ಸಕಾರಾತ್ಮಕ ಚಿಂತನೆ–ಭಾವನೆಗಳಲ್ಲೇ ವಿಶ್ವಾಸವಿಡುವುದು, (3) ಭಗವಂತನಿಗೆ ಶರಣಾಗಿ ಸರ್ವವನ್ನೂ ಒಪ್ಪಿಸುವುದು ಮತ್ತು (4) ಮೌನ ಸಾಮ್ರಾಜ್ಯದ ಉತ್ತುಂಗ ಶಿಖರವಾದ ಧ್ಯಾನ ಸಾಧನೆಯಲ್ಲಿ ತೊಡಗಿಸಿಕೊಳ್ಳುವುದು.

ಯಾರೂ ಸಹ ಪೂರ್ಣಸ್ವಾವಲಂಬಿಗಳಲ್ಲ; ಪರಾವಲಂಬಿಗಳೂ ಅಲ್ಲ. ಎಲ್ಲರೂ ಪರಸ್ಪರ ಅವಲಂಬಿಗಳೇ. "ಹಾವು ಸಾಯೋಲ್ಲ, ದೊಣ್ಣೆ ಮುರಿಯೋಲ್ಲ" ಇದೇ ಜನ ಮಾನಸದ ವಿಧಿ, ಗತಿ. ಪರಸ್ಪರತೆಯು ಅದೆಷ್ಟೇ ಅನಿವಾರ್ಯವಾದರೂ ಆಂತರಿಕ ಸ್ವಾತಂತ್ರ್ಯವು ಧ್ಯಾನದಿಂದ ಮಾತ್ರ ಸಾಧ್ಯ.

ಅಸ್ತಿತ್ವದಲ್ಲಿ ತೋರಿಕೆಯ ನನ್ನ ಯಾವುದೇ ಸಂಬಂಧವಾದರೂ ಅದು ನನಗೆ ಶಾಶ್ವತವಲ್ಲ. ಆದರೆ ಶಾಶ್ವತವಾದುದು "ನಾನು". "ನಾನು" ಎಂದರೆ ಈ ವ್ಯಕ್ತಿಗತವಾದ ದೇಹವಲ್ಲ. "ನಾನು" ಎಂದರೆ ಆ ಶುದ್ಧ ಪ್ರಜ್ಞೆ, ಬೇಕಾದರೆ ಅದಕ್ಕೆ ಪಾರಮಾರ್ಥಿಕ ಸಂಬಂಧವನ್ನು ಆರೋಪಿಸಿ, ಅಜ್ಞಾನದಲ್ಲಿ ಸಿಲುಕಿರುವ ಈ ನನ್ನನ್ನು, ಆ ಅದರಲ್ಲಿ ಲಯಿಸಬಹುದು. ಧ್ಯಾನದಿಂದ ಪ್ರಾರಬ್ಧಗಳ ಗುಡ್ಡೆಗಳೇ ಕರಗಿಹೋದಾವು.

ಶತ್ರುಗಳು ಹಲವು ವಿಧದಲ್ಲಿ ಒದಗುತ್ತಾರೆ. 1. ಜನ್ಮಾಂತರ ಶತ್ರುಗಳು ಪೂರ್ವಜನ್ಮದಿಂದ ಸಂಕಲ್ಪ ಹೊತ್ತು ಬಂದವರಂತೆ, ನಮ್ಮ ಬೆನ್ನಿಗೆ ಬಿದ್ದು, ಕಾರಣವೇ ಇಲ್ಲದೆ ಸೇಡನ್ನು ತೀರಿಸಿಕೊಂಡೇ ಬಿಡುತ್ತಾರೆ. ಅವರೇ ಪ್ರಾರಬ್ಧ ಶತ್ರುಗಳು–ನಮ್ಮದೇ ಪೂರ್ವ ಪ್ರಾರಬ್ಧಗಳು ಕಳೆದುಹೋಗಬೇಕಾದರೆ, ಪ್ರಕೃತಿಮಾತೆಯು ಕಳುಹಿಸುವ ಈ ಶತ್ರುಗಳು ಅನಿವಾರ್ಯ. ಈ ಮಹಾಶತ್ರುಗಳು ಆಗಿಂದಾಗ್ಯೆ ನಮ್ಮ ಜೀವನದಲ್ಲಿ ಪ್ರಕಟವಾಗಿ, ತಮ್ಮ ಕೆಲಸವನ್ನು ಮುಗಿಸಿಕೊಂಡು ಹೋಗುತ್ತಾರೆ. 2. ಸಾಮಾನ್ಯ ಶತ್ರುಗಳು, ದಿನನಿತ್ಯದ ವ್ಯವಹಾರಗಳಲ್ಲಿ ಕಾಣಿಸಿಕೊಂಡು ಆಗಲೇ ಮರೆಯಾಗುವ ಶತ್ರುಗಳು. ನಿಜಕ್ಕೂ ಹೇಳುವುದಾದರೆ, ಶತ್ರುಗಳು ಯಾರೂ ಹೊರಗಿನವರಲ್ಲ. "ನನಗೆ ನಾನೇ ಮಿತ್ರ. ನನಗೆ ನಾನೇ ಶತ್ರು. ನನ್ನ ಉದ್ಧಾರ ಅಥವಾ ಅವನತಿ ನನಗೇ ಸೇರಿದ್ದಾಗಿರುತ್ತದೆ." ಇದು ಗೀತಾ ವಾಕ್ಯ ಸಂದೇಶ. ಈ ಸತ್ಯವನ್ನು ಅರಿಯಲು ದಿಟ್ಟತನ ದಿವ್ಯಸಂಕಲ್ಪ ಬೇಕು. ಅದಕ್ಕಾಗಿ, ಆತ್ಮದ ನೆಲೆಯಲ್ಲಿ ನಮ್ಮನ್ನು ನಾವು ಸ್ಥಾಪಿಸಿಕೊಳ್ಳಬೇಕು. ಅದು ಧ್ಯಾನದಿಂದ ಮಾತ್ರ ಸಾಧ್ಯ.

ಜಗತ್ತೇ ಎದುರಾಗಲಿ, ಪರಮಾತ್ಮ ನನ್ನೊಂದಿಗೆ ಇದ್ದಾನೆ ಎಂದಲ್ಲ, ನನ್ನೊಳಗೇ ಇದ್ದಾನೆ ಎಂಬ ನಿಶ್ಚಿತ ನಂಬಿಕೆ ಇರಬೇಕು. ಏಕಾಂಗಿಯೇ ಆಗಿದ್ದರೂ ನನ್ನದು ಒಂಟಿತನವಲ್ಲ, ನನ್ನದು ಏಕತನ ಎಂಬ ದೃಢನಿಲುವು ಇರಬೇಕು. ಅಂತಹ ಪರಮೋಚ್ಚ ಮನೋಸ್ಥಿತಿಯನ್ನು ಹೊಂದಬೇಕಾದರೆ, ಮುಖ್ಯ ಮೈಲಿಗಲ್ಲುಗಳಾದ ಕರ್ಮ–ಭಕ್ತಿ–ಜ್ಞಾನ–ವೈರಾಗ್ಯ ಎಂಬ ಸಾಧನಾ ವಲಯಗಳನ್ನು ದಾಟಿಕೊಂಡು, ಏಕಾಂಗಿ ವೀರನಂತೆ ಧ್ಯಾನ ವಲಯಕ್ಕೆ ಪ್ರವೇಶಿಸಬೇಕು. ಇದು ಕೆಲವರಿಗೆ ಸಾಧ್ಯ. ಮಿಕ್ಕವರಿಗೆ ಪ್ರಯಾಣವು ನಿಧಾನಗತಿಯಲ್ಲಿ ಸಾಗಿದರೂ ಅಂತಿಮವಾಗಿ ಗುರಿ ಸಾಧ್ಯ.

ಅಂದು ವಿಶ್ವಾಮಿತ್ರ ಋಷಿಯು ಸತ್ಯ ಸಂಕಲ್ಪವುಳ್ಳವನಾಗಿ, ಜಗತ್ತಿನ ಒಳಿತಿಗಾಗಿ, ಯಜ್ಞಯಾಗಾದಿ ಕಾರ್ಯಗಳನ್ನು ಕೈಗೊಂಡಾಗ, ಮಾರೀಚ, ಸುಬಾಹು ಎಂಬ ಅಸುರರು ಅತ್ಯಂತ ಹೀನವಾಗಿ ಭಂಗ ತಂದರು. ಅನಂತರ ಅವರನ್ನು ಹತ್ತಿಕ್ಕಲು, ಬಾಲಕರಾದ ರಾಮ–ಲಕ್ಷ್ಮಣರನ್ನೇ ತರಬೇಕಾಯಿತು. ನಮ್ಮ ಇಂದಿನ ಸನ್ನಿವೇಶಗಳಲ್ಲೂ ಸಹ, ನಾವು ತೊಡಗಿಸಿಕೊಳ್ಳುವ ಸತ್ಕಾರ್ಯಗಳಲ್ಲಿ, ರಾಕ್ಷಸೀ ಪ್ರವೃತ್ತಿಯ ಜನರು ತಂದೊಡ್ಡುವ ತೊಂದರೆಗಳನ್ನು ನಾವು ಮನಗಾಣಬಹುದು. ಹಾಗೆಂದು ಶ್ರೀರಾಮಚಂದ್ರನನ್ನೇ ತರಲು ಸಾಧ್ಯವೇ?

ಋಷಿಗಳ ಮಕ್ಕಳು ಕೆಲವರು ಅಸುರರಾಗಿ ಜನ್ಮ ತಾಳುತ್ತಿದ್ದ ಘಟನೆಗಳನ್ನು ಸ್ಮರಿಸಿಕೊಳ್ಳಬಹುದು. ಅಸುರರಿಗೂ ಭಕ್ತಶ್ರೇಷ್ಠರಾದ, ಸಾತ್ತ್ವಿಕ ಮಹಾಪುರುಷ ಮಕ್ಕಳೂ ಹುಟ್ಟುತ್ತಿದ್ದರು. (ಉದಾಹರಣೆಗೆ, ಹಿರಣ್ಯಕಶಿಪು–ಪ್ರಹ್ಲಾದ). ಇದು ವಿಧಿಲೀಲೆ ಅಥವಾ ದೈವಲೀಲೆ. ಇಂದೂ ಸಹ ಅಂತಹದೇ ವಿಚಿತ್ರಗಳನ್ನು ನಾವು ಕಾಣಬಹುದು. ಸಾತ್ತ್ವಿಕ ತಂದೆತಾಯಿಗೆ ದುಷ್ಟ ಮಕ್ಕಳು ಮತ್ತು ದುಷ್ಟ ತಂದೆತಾಯಿಗೆ ಸತ್ಪುತ್ರರು ಹುಟ್ಟುವುದನ್ನು ನಾವು ಕಾಣುತ್ತಿದ್ದೇವೆ. ಇದಕ್ಕೆ ಕಾರಣ, ಆ ಮಕ್ಕಳೇ ತಂದಂತಹ ಅವರವರ ಹಿಂದಿನ ಜನ್ಮದ ಸಂಸ್ಕಾರಗಳು. ಬದುಕು ನಿಜಕ್ಕೂ ಘರ್ಷಣೆ. ಜೀವನದುದ್ದಕ್ಕೂ ಚೆಲ್ಲಾಟವಾಡುವ ವಿಕೃತ ಜೂಜುಗಾರರದು ಇದರಲ್ಲಿ ಸಿಂಹಪಾಲು. ಇಂತಹ ಸಂಘರ್ಷಗಳು ಉತ್ಕರ್ಷವಾಗುವುದು ಹೇಗೆ, ಎಂದಿಗೆ?

ಪುರಾಣ ಕಾವ್ಯಕಥೆಗಳು ಅಂದಿನ ಋಷಿಗಳ ದಿವ್ಯದೃಷ್ಟಿ ಮತ್ತು

ಭವ್ಯಸೃಷ್ಟಿ ಬಹುಶಃ ಅಲ್ಲಿನ ವ್ಯಕ್ತಿಗಳು ಮತ್ತು ಸಂಗಾತಿಗಳು ಸಾಂಕೇತಿಕ... ಅಲ್ಲಿ ಘಟಿಸುವ ವಿಶೇಷಗಳು ಸತ್ಯಸೂಚಕ.

ದೇವತೆಗಳು, ಅಸುರರು, ಬ್ರಹ್ಮ-ವಿಷ್ಣು-ಮಹೇಶ್ವರರು, ನಾರದರು, ಯಮಧರ್ಮರಾಯ, ಸ್ವರ್ಗ, ನರಕ, ವೈಕುಂಠ, ಕೈಲಾಸ ಈ ಎಲ್ಲವೂ ಕಥಾ ಚೌಕಟ್ಟಿಗಾಗಿ ಹೆಣೆದಿರುವ ರೂಪಕ-ಸೂಚಕಗಳಿರಬಹುದು. ಈ ಅಮರ ಕಥೆಗಳ ಮೂಲಕ, ಋಷಿಗಳು ಸತ್ಯಸಂಗತಿಗಳನ್ನು ಸಮಾಜಕ್ಕೆ ವರದಾನವಾಗಿ ನೀಡಿದ್ದಿರಬಹುದು.

ದೇವತೆಗಳೆಂದರೆ ಕೆಲವೊಂದು ಪ್ರಾಕೃತಿಕ ಜವಾಬ್ದಾರಿಗಳನ್ನು ವಹಿಸಿಕೊಂಡವರು. ಕೆಲವೊಂದು ಭೋಗ ಸಾಮ್ರಾಜ್ಯಗಳಿಗೆ ಅಧಿಪತಿಗಳಾಗಿರುವವರು. ಅವು ಅವರ ವಾಸನೆ ಮತ್ತು ಸಾಧನೆಗಳಿಂದ ಪಡೆದುಕೊಂಡ ಭಾಗ್ಯ. ಅವು ಅವರಿಗೆ ಶಾಶ್ವತವೇನಲ್ಲ. ಪುಣ್ಯದ ಅವಧಿ ತೀರಿದ ಬಳಿಕ, ಅವನ್ನು ಕಳೆದುಕೊಳ್ಳುವರು. ಭೋಗಲಾಲಸೆಗಳಿಗೆ ಅಂಟಿದ ಅವರಿಗೆ ಮೋಕ್ಷದ ಹಂಬಲವಿರುವುದಿಲ್ಲ. ಸ್ವಾರ್ಥ ಸಾಧನೆಗಾಗಿ ಸಂಚು ವಂಚನೆಗಳಲ್ಲೂ ತೊಡಗಿದವರು. ಸುಖದ ಜೊತೆಯೇ ಕೆಲವೊಂದು ಸಂಕಟಗಳಿಗೂ ತುತ್ತಾದವರು. ಇವು ಪುರಾಣ ಕಥೆಗಳಲ್ಲಿ ಕಾಣಬರುವ ಸಂಗತಿಗಳು. ಅಂತೆಯೇ ಇಂದಿನ ಸಮಾಜದ ಅನೇಕ ಬಂಡವಾಳಶಾಹೀ ಜನರು, ದೇಶದ, ಸಮಾಜದ ಪ್ರಗತಿಗೆ ಕಾರಣರಾದರೂ ಭೋಗಸುಖಗಳನ್ನು ರೂಢಿಸಿಕೊಂಡು ಬಂದವರು. ಭೋಗದ ಅನಂತರ ರೋಗಕ್ಕೂ ತುತ್ತಾದವರು. ಸಾವು ಬರುವ ಕ್ಷಣದಲ್ಲೂ ನಿಜ ಜ್ಞಾನವುಂಟಾಗದೇ ಹೋದವರು. ಜನ್ಮ ಮರಣ ಚಕ್ರದಿಂದ ಆಚೆಗೆ ಬರಲು ಸಾಧ್ಯವಾಗಲೇ ಇಲ್ಲ. ಬುದ್ಧಿ ಸಾಮ್ರಾಜ್ಯದ ವಿಶಿಷ್ಟ ಅಧಿಪತಿಗಳಾದರೂ ದೈವಿಕ-ವಿವೇಕ ಹೊಂದದೇ ಹೋದರು.

ಅಸುರರು ಪುರಾಣ ಕಥೆಗಳಲ್ಲಿ ಮಿಂಚಿದವರು. ಹಿಂಸಾಪರರಾದ ಅವರು ಅಂದೂ ಇದ್ದರು, ಇಂದೂ ಇದ್ದಾರೆ, ಮುಂದೆಯೂ ಇರುತ್ತಾರೆ. ಹೃದಯ ಹೀನರಾದ ಇವರದು ದುಷ್ಟಬುದ್ಧಿ ಮತ್ತು ದುಷ್ಟಪ್ರವೃತ್ತಿ. ಇವರ ಸಂತೋಷವಿರುವುದು ಲೋಕಹಿತದಲ್ಲಲ್ಲ. ಹಿಂಸೆ ಮಾಡುವುದರ ಮೂಲಕವೇ ತೃಪ್ತಿಪಡುವ ವಿಕೃತ ಮನಹೊಂದಿದ ಇವರ ಗುಣ, ಧ್ವಂಸ ಮಾಡುವುದು. ಬೆಟ್ಟದಷ್ಟೇ ಇವರ ಪಾಪ ಸಂಗ್ರಹ. ದುಸ್ಸಂಗಿಗಳಾದ ಇವರಿಗೆ ಪಾಪದ ಪರಿಕಲ್ಪನೆಯೇ ಇರುವುದಿಲ್ಲ. ಮೋಕ್ಷದ ಕಲ್ಪನೆಯಂತೂ ಇಲ್ಲವೇ ಇಲ್ಲ. ಪೈಶಾಚ ಬುದ್ಧಿ ಇನ್ನೂ ಕೇಡಿನ ಅಂಶ. "ಅಲ್ಲೂ ಇಲ್ಲ-ಇಲ್ಲೂ ಇಲ್ಲ-ಎಲ್ಲೆಲ್ಲೂ ಅವರ ಕಾಣದ ಕೈವಾಡ". ತಂದಿಟ್ಟು ತಮಾಷೆ ನೋಡಿ, ಬೀಗುವ ವಿಕಾರೀ ಮಾನವರು. ಪಶ್ಚಾತ್ತಾಪ-ಮನೋವಿಕಾಸ ಎಂಬುದು ಇವರಿಗೆ ಎಟುಕದ ಸಂಗತಿಗಳು. ಸತ್ತನಂತರ ಪಿಶಾಚಿಯಾಗಿ ಬಂದು ಕಾಡಿದರೆ ಅದಕ್ಕೆ ನಿವಾರಣಾ ಉಪಾಯವಿದೆ. ಆದರೆ ಬದುಕಿರುವಾಗಲೇ, ಪಿಶಾಚಿಗಿಂತಲೂ ಹೀನವಾಗಿ ಬಂದು ಕಾಡಿದರೆ ನಿವಾರಣೆ ಏನು? ನಮ್ಮ ಈಗಿನ ಕಾಲದಲ್ಲೂ ದೇವತೆಗಳು, ಅಸುರರು, ಪಿಶಾಚಿಗಳು, ಪಶುಗಳು ಮಾನವ ಮುಖವಾಡಗಳನ್ನು ಧರಿಸಿ, ನಮ್ಮೊಂದಿಗೇ ಇದ್ದು ವ್ಯವಹರಿಸುತ್ತಾರೆ. ನಮ್ಮ ಮುಖಗಳನ್ನು ನಾವು ನೋಡಿಕೊಳ್ಳಬೇಕು. ಅದಕ್ಕಾಗಿ ಗುರುವೆಂಬ ಕನ್ನಡಿ ಬೇಕೇ ಬೇಕು.

ತ್ರಿಲೋಕ ಸಂಚಾರಿಗಳಾಗಿದ್ದ ನಾರದರೂ ಸಹ ಪುರಾಣ ಕಥೆಗಳಲ್ಲಿ ಮಿಂಚಿದವರು. ಅವರನ್ನು ವ್ಯಕ್ತಿರೂಪವಾಗಿ ನೋಡ ಬಯಸುವ ಬದಲು, ತಾತ್ತ್ವಿಕವಾಗಿ ನೋಡಬೇಕು. ದೈವಕ್ಕಾಗಿ, ಧರ್ಮಕ್ಕಾಗಿ, ದೇವತೆಗಳಿಗೂ ಅಸುರರಿಗೂ ತೋರಿಕೆಯಲ್ಲಿ ತಾರತಮ್ಯವಾಗಿ ಪ್ರೇರಣೆಗಳನ್ನಿತ್ತು, ದೈವಸಂಕಲ್ಪಕ್ಕೆ ಮಿಡಿದು, ಅಸ್ತಿತ್ವದ ಶಾಂತಿ-ಸಮತೋಲನಕ್ಕೆ ಕಾರಣರಾಗಿದ್ದರು.

ನಮ್ಮ ಪ್ರಾರಬ್ಧ-ವಾಸನೆಗಳಿಗೆ ಅನುಗುಣವಾಗಿ ನಮಗೆಲ್ಲ ಸತತವಾಗಿ ಅವ್ಯಕ್ತದಿಂದ ಪ್ರೇರಣೆಗಳು ಒದಗುತ್ತವೆ. ವಿಜ್ಞಾನಿಗಳಿರಬಹುದು, ವೈದ್ಯರಿರಬಹುದು, ಕವಿಕೋವಿದರಿರಬಹುದು, ಕರ್ಮನಿಷ್ಠರಿರಬಹುದು, ಜ್ಞಾನಿಗಳಿರಬಹುದು, ಸಾಧಕರಿರಬಹುದು, ದುಷ್ಟರೇ ಇರಬಹುದು. ಆ ಪ್ರೇರಣೆಗಳ ಹಿಂದೆ ದೈವೀಶಕ್ತಿಗಳು ಅಥವಾ ಆಸುರೀಶಕ್ತಿಗಳೇ ಇರಬಹುದು. ಸೂತ್ರಧಾರನ ಅಂಕಿತದಲ್ಲಿ ಪಾತ್ರಧಾರಿಗಳಾಗಿ ಆಡುತ್ತಿದ್ದೇವೆ. ಅದನ್ನೇ ಶಾಶ್ವತ ನಿಜವೆಂದು ತಿಳಿದಿರುವ ನಮಗೆ, ನಾವು ಪಾತ್ರಧಾರಿಗಳು ಎಂಬ ತಿಳಿವಳಿಕೆ ಬಂದಿಲ್ಲ. ಹಾಗಾಗಿ, ನಾವು ಎಲ್ಲ ಸಾವು, ನೋವು, ಸಂಕಟಗಳಿಗೆ ತುತ್ತಾಗಿದ್ದೇವೆ. ಇದು, ನಮ್ಮ ಒಳಗೇ ಹುದುಗಿರುವ ಜ್ಞಾನ-ಭಾಸ್ಕರನಿಗೆ ಹಿಡಿದಿರುವ ಗ್ರಹಣ. ಶುದ್ಧ ಬುದ್ಧಿಗಾಗಿ, ನಾವು ದೈವಶಕ್ತಿಗೇ ಮೊರೆಹೋಗಬೇಕು.

ಇಂದಿನ ಬದುಕಿನ ಮಹಾಸಮರದಿಂದ, ವಿಸ್ಮಯ ಪಾಠಶಾಲೆಯಿಂದ, ವೈವಿಧ್ಯ ಪ್ರಯೋಗಶಾಲೆಯಿಂದ, ಭೀಕರ ಗರಡಿಯಿಂದ, ಚಕಿತಗೊಳಿಸುವ ಗಾರುಡಿಯಿಂದ ಹೊರಬರುವುದು ಹೇಗೆ ಎಂಬುದು ನಮ್ಮ ಚಿಂತನೆ ಮತ್ತು ಪ್ರಶ್ನೆ. ಋಷಿಗಳು ತಮ್ಮ ಕಾವ್ಯಕಥಾರೂಪಕಗಳ ಮೂಲಕ, ಸುಂದರ ಉಪಾಯಗಳನ್ನು ನಮಗೆ ರಸವತ್ತಾಗಿ ನಿರೂಪಿಸಿದ್ದಾರೆ. ನಮಗೆ ಅಗತ್ಯವಿರುವುದು ತಾಳ್ಮೆ, ಗ್ರಹಿಕೆ, ವಿಶ್ವಾಸ, ಪ್ರಯತ್ನ ಮತ್ತು ಸ್ವೀಕಾರ.

ನಮ್ಮ ಸತ್‌ಸಂಕಲ್ಪಗಳಲ್ಲಿ, ಸತ್ಕಾರ್ಯಗಳಲ್ಲಿ, ದುಷ್ಟಶಕ್ತಿಗಳು ತಂದೊಡ್ಡುವ ಸಮಸ್ಯೆಗಳನ್ನು ಆತಂಕಗಳನ್ನು ನಿಭಾಯಿಸಲು, ಸಿದ್ಧಿದಾಯಕ, ವಿಘ್ನನಿವಾರಕ ಗಣಪತಿಯನ್ನು ಪ್ರಾರ್ಥಿಸಿ ಎಂದಿರಬಹುದು. ನಮಗೆ ಅಗತ್ಯವಾದ ವೀರ್ಯ, ಶೌರ್ಯ, ಸಾಹಸ, ಸಾಧನೆಗಳಿಗಾಗಿ ಹನುಮಂತನನ್ನು ಪ್ರಾರ್ಥಿಸಿ ಎಂದಿರಬಹುದು. ನಮಗೆ ಅಗತ್ಯವಾದ ವಿದ್ಯಾಬುದ್ಧಿಗಳಿಗೆ ಸರಸ್ವತಿಯನ್ನು ಪೂಜಿಸಿ ಎಂದಿರಬಹುದು. ನಮಗೆ ಅಗತ್ಯವಾದ ಪ್ರೇಮ, ಪುಷ್ಟಿ, ಪೋಷಣೆಗಾಗಿ ದೇವಿಯನ್ನು ಪ್ರಾರ್ಥಿಸಿ ಎಂದಿರಬಹುದು. ಹೀಗೆ, ಹತ್ತು ಹಲವಾರು ದೇವರುಗಳು ಭಾವನಾಪ್ರತೀಕವಾಗಿ, ಸ್ಪಂದನಾ ಪ್ರತೀಕವಾಗಿ, ಶಕ್ತಿ ಆವಾಹನಾ ಮಾಯೆಗಳಾಗಿ, ಅಸ್ತಿತ್ವದಲ್ಲಿ ಕಾರ್ಯವೆಸಗಬಹುದು. ಎಲ್ಲೆಲ್ಲೂ ಇರುವ ಮತ್ತು ನಮ್ಮ ಒಳಗೇ ಇರುವ ಆ ಏಕೈಕ ದೇವರನ್ನು ಹಲವಾರು ರೂಪ-ನಾಮ-ಗುಣ ಭೇದಗಳಿಂದ ಆರೋಪಿಸಿ, ಆ ದೇವರುಗಳನ್ನು ಹೊರಗಿರಿಸಿ, ಅವರುಗಳನ್ನು ಕಾರ್ಯಸಾಧನೆಗಳಿಗಾಗಿ ಪ್ರಾರ್ಥಿಸಿ, ಆವಾಹಿಸಿ, ಫಲಾನುಭವಿಗಳಾಗುವುದು ಸರಿಯೇ ಸರಿ. ಆದರೆ, ಇವೆಲ್ಲವೂ ತಾತ್ಕಾಲಿಕ ಮುಕ್ತಿಗಳೇ ವಿನಾ ಅಂತಿಮ ಮುಕ್ತಿಯೇನಲ್ಲ. ಒಂದು ಸಮಸ್ಯೆಯು ಪರಿಹಾರವಾದರೆ, ಕಾಲಗತಿಯಲ್ಲಿ ಮತ್ತೊಂದು ಸಮಸ್ಯೆಯು ಉದ್ಭವಿಸುತ್ತದೆ. ಅಂತಿಮ ಸತ್ಯವನ್ನು ಸ್ಪರ್ಶಿಸಿದಾಗಲೇ ಅಂತಿಮ ಶ್ರೇಷ್ಠಜ್ಞಾನವು ಲಭಿಸುವುದು. ಬಹುಶಃ ಅದೇ ಜೀವನ್ಮುಕ್ತ ಸ್ಥಿತಿ. ಅದಕ್ಕಾಗಿ ನಾವು ಮೂಲಕ್ಕೆ ಧಾವಿಸಬೇಕು.

ಎಲ್ಲ ದೇವರುಗಳ, ಎಲ್ಲ ಅಸ್ತಿತ್ವಗಳ ಮೂಲವು ಅಡಗಿರುವುದು ನಮ್ಮ ಅಂತರಾಳದಲ್ಲಿ. ಅದು ನಿರಾಕಾರ, ನಿತ್ಯ ಸತ್ಯ. ಆ ಸ್ಥಿತಿಯನ್ನು ತಲಪಿದಾಗ, ಈ ಮಾಯಾ ಪ್ರಪಂಚವು ಇಲ್ಲವಾಗಿಬಿಡುತ್ತದೆ. ನಮ್ಮ ಮನಗಳಲ್ಲಿ ಅವಿತುಕೊಂಡಿರುವ ಶತ್ರುಗಳು, ಮಿತ್ರರು, ಬಂಧುಗಳು ಎಲ್ಲರೂ ಇಲ್ಲವಾಗುತ್ತಾರೆ. ಕೇವಲ ಪರಮಸತ್ಯವಾದ ಪರಮಾತ್ಮವೊಂದೇ ಉಳಿಯುತ್ತದೆ. ಆಗ ನಾನು ದೇಹಭಾವದಲ್ಲಿ ಅಳಿಯುತ್ತೇನೆ. ಕೇವಲ ಶುದ್ಧ ಪ್ರಜ್ಞೆಯಾಗಿ ಉಳಿಯುತ್ತೇನೆ. ಅದು ಧೀರರಿಗೆ ಮಾತ್ರ ಸಾಧ್ಯ. ಧೀರರಾಗಿ ಬದುಕಲು ಧೀರಸಂಕಲ್ಪವೇ ಬೇಕು. ಅಂತಹ ಸ್ಥಿತಿಯನ್ನು ಗಳಿಸಿದ, ಜೀವಕುಲ ಪ್ರೇಮಿಗಳಾದ ಯೋಗಿಗಳೇ ನಮಗೆ ಆಶಾದೀಪ.

ಋಷಿಗಳು ಅಂತಿಮ ಸತ್ಯವನ್ನು, ಅಂತಿಮ ಉಪಾಯವನ್ನು ಅಂತರಮುಖಿಗಳಾಗಿ ಕಂಡುಕೊಂಡರು. ಅದನ್ನು ಮಾನವ ಕುಲದ ಉದ್ಧಾರಕ್ಕಾಗಿ ದಯಪಾಲಿಸಿದರು. ಅದು ಭವಸಾಗರವನ್ನೇ ದಾಟುವ ಉಪಾಯ. ಅದೇ ಧ್ಯಾನ. "ಧ್ಯಾನ-ಧ್ಯಾನ-ಧ್ಯಾನ". ಅದೇ ಏಕೈಕ ಸಾಧನ-ಸಿದ್ಧಿ. ಅದೇ ಅಂತರ್‌ಯಾತ್ರೆ. ಅದಕ್ಕೆ ಅಡ್ಡಿಯಾಗುವುದು ಕಾಡು ಹರಟೆ, ಅನ್ಯರ ಟೀಕೆ, ಕೇಡುತರುವ ಪ್ರಲಾಪ ಸಲ್ಲಾಪಗಳು.

**ಮುಂದುವರಿಯುವುದು)**

**'ಮೈತ್ರೇಯಿ' ೧೪೮೮, ೭ನೇ ಮುಖ್ಯರಸ್ತೆ, 'ಇ' ವಿಭಾಗ, ೨ನೇ ಹಂತ, ರಾಜಾಜಿನಗರ (ಸುಬ್ರಮಣ್ಯನಗರ) ಬೆಂಗಳೂರು-೫೬೦ ೦೧೦.**



# ಕೈವಾರದಲ್ಲಿ 2020 ನೂತನ ವರ್ಷಕ್ಕೆ ಜನಸಾಗರ

ದೇವಾಲಯಗಳ ನಗರಿ ಶ್ರೀ ಕ್ಷೇತ್ರ ಕೈವಾರದಲ್ಲಿ ಅಮರನಾರೇಯಣಸ್ವಾಮಿ ದೇವಾಲಯ, ಭೀಮಲಿಂಗೇಶ್ವರಸ್ವಾಮಿ ದೇವಾಲಯ ಮತ್ತು ಸದ್ಗುರು ಯೋಗಿನಾರೇಯಣ ಮಠದಲ್ಲಿ 2020 ಆಂಗ್ಲ ನೂತನ ವರ್ಷದ ದಿನ ಜನವರಿ 1ರಂದು ವಿಶೇಷ ಪೂಜಾ ಕೈಂಕರ್ಯಗಳನ್ನು ನೇರವೇರಿಸಲಾಯಿತು. ದೇವಾಲಯಗಳನ್ನು ತಳಿರು ತೋರಣ, ಹೂಗಳಿಂದ ಸಿಂಗರಿಸಲಾಗಿತ್ತು.

ಭಕ್ತಾದಿಗಳು ದೂರದ ಊರುಗಳಿಂದ ತಂಡೋಪ ತಂಡವಾಗಿ ಆಗಮಿಸಿ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನಕ್ಕಾಗಿ ಕಾಯುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ತಾತಯ್ಯನವರು ಜೀವ ಸಮಾಧಿಸ್ಥರಾಗಿರುವ ಮೂಲ ಬೃಂದಾವನವನ್ನು ವಿವಿಧ ಪುಷ್ಪಗಳಿಂದ ಅಲಂಕಾರ ಮಾಡಲಾಗಿತ್ತು. ಭಕ್ತರು ತಾತಯ್ಯನವರ ದರ್ಶನವನ್ನು ಪಡೆದು ಪುನೀತರಾದರು.

ಸದ್ಗುರು ಯೋಗಿನಾರೇಯಣ ತಾತಯ್ಯನವರ ಉತ್ಸವ ವಿಗ್ರಹವನ್ನು ನಗರದ ಮುಖ್ಯ ಬೀದಿಗಳಲ್ಲಿ ಮಂಗಳವಾದ್ಯ, ಭಜನೆಯೊಂದಿಗೆ ಮೆರವಣಿಗೆ ಮಾಡಲಾಯಿತು. ಹೊಸ ವರ್ಷದ ಪ್ರಯುಕ್ತ ಮಠದ ನಾದಸುಧಾರಸ ವೇದಿಕೆಯಲ್ಲಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಸಂಜೆ ವಿಶೇಷ ಮಹಾಮಂಗಳಾರತಿ ನೆರವೇರಿಸಲಾಯಿತು.

**ಕೈವಾರದ ಬೆಟ್ಟದ ಮೆಟ್ಟಲುಗಳಿಗೆ ದೀಪಾರಾಧನೆ:** ಹೊಸ ವರ್ಷದ ಪ್ರಯುಕ್ತ ದೀಪಾರಾಧನೆಯನ್ನು ಸ್ಥಳೀಯ ಗ್ರಾಮಸ್ಥರ ವತಿಯಿಂದ ಏರ್ಪಡಿಸಲಾಗಿತ್ತು. ಸಂಜೆ ವಿದ್ಯುತ್ ದೀಪಗಳಿಂದ ಬೆಟ್ಟವನ್ನು ಅಲಂಕರಿಸಲಾಗಿತ್ತು. ಬೆಟ್ಟದ ಮೇಲಿರುವ ಚಾಮುಂಡೇಶ್ವರಿ ದೇವಿಗೆ ವಿಶೇಷ ಅಭಿಷೇಕ ಮತ್ತು ಪೂಜಾ ವ್ಯವಸ್ಥೆಯನ್ನು ಮಾಡಲಾಗಿತ್ತು.

ಕ್ಷೇತ್ರಕ್ಕೆ ಆಗಮಿಸಿದ ಸಹಸ್ರಾರು ಭಕ್ತಾದಿಗಳಿಗೆ ಶ್ರೀಯೋಗಿ ನಾರೇಯಣ ಮಠದಲ್ಲಿ ವಿಶೇಷ ದಾಸೋಹದ ವ್ಯವಸ್ಥೆಯನ್ನು ಟ್ರಸ್ಟ್ ಸಮಿತಿಯು ಆಯೋಜಿಸಿದ್ದರು.

**ಆಲಂಬಗಿರಿಯಲ್ಲಿ ವಿಶೇಷ ಪೂಜೆ:** ಆಲಂಬಗಿರಿ ಕಲ್ಕಿ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಾಲಯ ಮತ್ತು ಆಂಜನೇಯಸ್ವಾಮಿ ದೇವಾಲಯಗಳಲ್ಲಿ ಹೊಸ ವರ್ಷದ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ●







# ಆಲಂಬಗಿರಿಯಲ್ಲಿ ವೈಕುಂಠ ಏಕಾದಶಿ/ದ್ವಾದಶಿಗೆ ಹರಿದು ಬಂದ ಜನಸಾಗರ

ಶ್ರೀ ಆಲಂಬಗಿರಿ ಕಲ್ಕಿ ಶ್ರೀಲಕ್ಷ್ಮೀ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ವೈಕುಂಠ ಏಕಾದಶಿ ಹಾಗೂ ಮುಕ್ಕೋಟಿ ದ್ವಾದಶಿ ಪೂಜೆಯನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಲಾಯಿತು. ಶ್ರೀದೇವಿ ಭೂದೇವಿ ಸಮೇತ ವೆಂಕಟರಮಣಸ್ವಾಮಿ ಉತ್ಸವ ವಿಗ್ರಹಕ್ಕೆ ಏಕಾದಶಿಯಂದು ವಿಶೇಷ ತ್ರಿವಿಕ್ರಮ ಅಲಂಕಾರವನ್ನು ಮಾಡಲಾಗಿತ್ತು. ಪ್ರತಿ ವರ್ಷವೂ ವೈಕುಂಠ ಏಕಾದಶಿಯಂದು ವಿಶೇಷ ಅಲಂಕಾರವನ್ನು ಮಾಡಿಕೊಂಡು ಬರುವುದು ರೂಢಿಯಲ್ಲಿದೆ.

ಪ್ರಾತಃಕಾಲ ಬ್ರಾಹ್ಮೀ ಮುಹೂರ್ತದಲ್ಲಿ ಘಂಟಾನಾದದೊಂದಿಗೆ ಪೂಜೆಗಳು ಆರಂಭವಾದವು. ಅನಂತರ ಸುಪ್ರಭಾತ, ಗೋಪೂಜೆಯನ್ನು ಶಾಸ್ತ್ರೋಕ್ತವಾಗಿ ನಡೆಸಲಾಯಿತು. ಅನಂತರ ಗರುಡಾಳ್ವಾರ್ ಹಾಗೂ ಶ್ರೀ ಆಂಜನೇಯಸ್ವಾಮಿಗೆ ಪೂಜೆಯನ್ನು ನೆರವೇರಿಸಿ ವೈಕುಂಠದ್ವಾರ ಪೂಜೆಯೊಂದಿಗೆ ಪೂಜಾ ಕೈಂಕರ್ಯಗಳು ಆರಂಭವಾದವು. ಸ್ವಾಮಿಯನ್ನು ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಭಕ್ತರು ಕ್ಷೇತ್ರಕ್ಕೆ ಭೇಟಿ ನೀಡಿ ಹಣ್ಣು ಕಾಯಿ ಮಾಡಿಸುವ ದೃಶ್ಯ ಸಾಮಾನ್ಯವಾಗಿತ್ತು. ವೆಂಕಟರಮಣಸ್ವಾಮಿಯ ಮೂಲ ವಿಗ್ರಹಕ್ಕೆ ಅಭಿಷೇಕವನ್ನು ಸಮರ್ಪಿಸಿ ವಿಶೇಷ ಹೂಗಳಿಂದ ಸಿಂಗರಿಸಲಾಗಿತ್ತು. ವೈಕುಂಠ ಏಕಾದಶಿಯಂದು ವೈಕುಂಠ ದ್ವಾರದಲ್ಲಿ ದೇವಾಲಯವನ್ನು ಪ್ರವೇಶ ಮಾಡುವುದು ವಿಶೇಷವಾಗಿರುವುದರಿಂದ ಬೆಳಗಿನಿಂದಲೇ ಸಾವಿರಾರು ಭಕ್ತಾಧಿಗಳು ವೈಕುಂಠ ದ್ವಾರದ ಬಳಿ ಸರದಿಯಂತೆ ನಿಂತು ಸ್ವಾಮಿಯ ತ್ರಿವಿಕ್ರಮ ಅಲಂಕಾರದ ವಿಶ್ವರೂಪದರ್ಶನ ಭಾಗ್ಯವನ್ನು ಪಡೆದರು.

ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ದಂಪತಿಗಳು ಬೆಳಗಿನ ಪ್ರಥಮ ಪೂಜೆಯಲ್ಲಿ ಭಾಗವಹಿಸಿದ್ದರು. ●





# ಮುಕ್ಕೋಟಿದ್ವಾದಶಿಯಂದು ಗರುಡೋತ್ಸವ

ಆಲಂಬಗಿರಿ ದೇವಾಲಯದ ಮುಕ್ಕೋಟಿ ದ್ವಾದಶಿ ಪೂಜಾ ಕೈಂಕರ್ಯಕ್ಕೆ ಭಕ್ತ ಜನರ ಸಮೂಹವೇ ಹರಿದು ಬಂದಿತು. ಮುಕ್ಕೋಟಿ ದ್ವಾದಶಿ ಸಂದರ್ಭದಲ್ಲಿ ದೇವರಿಗೆ ವಿಶೇಷ ಅಲಂಕಾರವನ್ನು ಮಾಡಲಾಗಿತ್ತು. ಗರುಡ ವಾಹನದಲ್ಲಿ ಶ್ರೀದೇವಿ ಭೂದೇವಿ ಸಮೇತ ವೆಂಕಟರಮಣಸ್ವಾಮಿಯ ಉತ್ಸವ ಮೂರ್ತಿಯನ್ನು ಅಲಂಕರಿಸಿ ರಥ ಬೀದಿಯಲ್ಲಿ ಉತ್ಸವವನ್ನು ಮಾಡಲಾಯಿತು. ವೆಂಕಟರಮಣ ಸ್ವಾಮಿಯ ವಿಗ್ರಹದ ಮುಂದೆ ಸದ್ಗುರು ಯೋಗಿ ನಾರೇಯಣ ತಾತಯ್ಯನವರ ಉತ್ಸವ ವಿಗ್ರಹವನ್ನು ಉತ್ಸವದಲ್ಲಿ ಕರೆತರಲಾಯಿತು.

ಗರುಡೋತ್ಸವದಲ್ಲಿ ಕೈವಾರ ಕ್ಷೇತ್ರದ ಧರ್ಮಾಧಿಕಾರಿಗಳ ನೇತೃತ್ವದಲ್ಲಿ ಭಜನಾ ತಂಡಗಳು ಭಾಗವಹಿಸಿ ಉತ್ಸವದುದ್ದಕ್ಕೂ ಭಜನೆ ಮಾಡುತ್ತ ಸಾಗಿದ ದೃಶ್ಯ ಮನಮೋಹಕವಾಗಿತ್ತು ಮತ್ತು ಭಕ್ತಿಭಾವದ ಸಂಚಲವನ್ನುಂಟುಮಾಡಿತು. ಉತ್ಸವದಲ್ಲಿ ವೇದಘೋಷ, ನಾದಸ್ವರ ವಾದನ ಮೂಡಿಬಂದಿತು. ಶ್ರೀಕ್ಷೇತ್ರ ಕೈವಾರ ಯೋಗಿ ನಾರೇಯಣ ಮಠದಿಂದ ಭಕ್ತಾದಿಗಳಿಗೆ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿತ್ತು.

ಶ್ರೀ ವಾನರಾಶಿ ಬಾಲಕೃಷ್ಣ ಭಾಗವತರ್, ಕೈವಾರ ಯೋಗಿ ನಾರೇಯಣ ಮಠದ ಉಪಾಧ್ಯಕ್ಷರಾದ ಜೆ. ವಿಭಾಕರರೆಡ್ಡಿ, ಖಜಾಂಚಿ ಆರ್.ಪಿ.ಎಂ. ಸತ್ಯನಾರಾಯಣ್ ಮತ್ತು ಗ್ರಾಮಸ್ಥರು ಸಂಕೀರ್ತನೆಯಲ್ಲಿ ಭಾಗವಹಿಸಿದ್ದರು.



ಧರ್ಮಾಧಿಕಾರಿ ನೇತೃತ್ವದಲ್ಲಿ ಸಂಕೀರ್ತನೆ




# ಕೈವಾರದಲ್ಲಿ ಸಂಕ್ರಾಂತಿ ಸಂಭ್ರಮ

ಕೈವಾರದಲ್ಲಿ ಸಂಕ್ರಾಂತಿಯ ಪ್ರಯುಕ್ತ ಅಮರ ನಾರೇಯಣಸ್ವಾಮಿ, ಭೀಮಲಿಂಗೇಶ್ವರ ಸ್ವಾಮಿ ಮತ್ತು ಶ್ರೀ ಯೋಗಿ ನಾರೇಯಣ ಮಠದ ದೇವಾಲಯದಲ್ಲಿ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಸಂಕ್ರಾಂತಿ ಸಂದರ್ಭದಲ್ಲಿ ವಿಶೇಷವಾಗಿ ಯೋಗಿ ನಾರೇಯಣ ತಾತಯ್ಯನವರಿಗೆ ಮಾಲೆಯನ್ನು ಹಾಕುವ ಸಂಪ್ರದಾಯ ಮೊದಲಿನಿಂದಲೂ ರೂಢಿಯಲ್ಲಿದೆ. ಇದರಂತೆ ಈ ಬಾರಿಯೂ ಸಹಸ್ರಾರು ಮಾಲಾಧಾರಿಗಳು ಮಠಕ್ಕೆ ಬಂದು ತಾತಯ್ಯನವರ ಸೇವೆಯಲ್ಲಿ ಪಾಲ್ಗೊಂಡಿದ್ದರು. ಈ ಬಾರಿ ಆನೇಕಲ್, ದೊಡ್ಡಬಳ್ಳಾಪುರ, ಕದರಿ, ಧರ್ಮಾವರಂ ಮತ್ತು ಮಾಲೂರುನಿಂದ ಭಕ್ತರು ಮಾಲೆ ಧರಿಸಿ ಕೈವಾರಕ್ಕೆ ಆಗಮಿಸಿದ್ದರು. ಕೈವಾರದಲ್ಲಿ ಸಂಕೀರ್ತನಾ ಪಾದಯಾತ್ರೆಯಲ್ಲಿ ಬಂದರು.

ಶ್ರೀ ಯೋಗಿನಾರೇಯಣ ಯತೀಂದ್ರರ ದೇವಾಲಯದ ಪ್ರಾಕಾರೋತ್ಸವದಲ್ಲಿ ಸಹಸ್ರಾರು ಭಕ್ತರು ಭಾಗವಹಿಸಿದ್ದರು. ತಾತಯ್ಯನವರ ಉತ್ಸವ ವಿಗ್ರಹವನ್ನು ಪಲ್ಲಕ್ಕಿಯಲ್ಲಿರಿಸಿ ಉತ್ಸವವನ್ನು ನಡೆಸಲಾಯಿತು. ಭಕ್ತರು ತಾತಯ್ಯನವರ ದರ್ಶನವನ್ನು ಪಡೆದು ಪುನೀತರಾದರು. ತಾತಯ್ಯನವರ ದೇವಾಲಯದ ಆವರಣದಲ್ಲಿ ಸಂಕೀರ್ತನೆ ಭಜನೆಯನ್ನು ಮಾಲಾಧಾರಿಗಳು ಮಾಡಿದರು. ತಾತಯ್ಯನವರು ಜೀವ ಸಮಾಧಿಸ್ಥರಾಗಿರುವ ಮೂಲ ವಿಗ್ರಹವನ್ನು ವಿವಿಧ ಪುಷ್ಪಗಳಿಂದ ಅಲಂಕಾರ ಮಾಡಲಾಗಿತ್ತು. ನಾದಸುಧಾರಸ ವೇದಿಕೆಯಲ್ಲಿ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಮಾಲಾಧಾರಿಗಳಾಗಿ ಬಂದಿದ್ದ ಭಕ್ತರು ಕೈವಾರದ ಪ್ರಮುಖ ಬೀದಿಗಳಲ್ಲಿ ನಗರ ಸಂಕೀರ್ತನೆಯೊಂದಿಗೆ ಭಜನೆಯಲ್ಲಿ ಪಾಲ್ಗೊಂಡರು. ಕ್ಷೇತ್ರಕ್ಕೆ ಆಗಮಿಸಿದ ಸಹಸ್ರಾರು ಭಕ್ತಾದಿಗಳಿಗೆ ಶ್ರೀಯೋಗಿ ನಾರೇಯಣ ಮಠದಲ್ಲಿ ವಿಶೇಷ ಸಿಹಿ ಊಟದ ವ್ಯವಸ್ಥೆಯನ್ನು ಟ್ರಸ್ಟ್ ಸಮಿತಿಯು ಆಯೋಜಿಸಿದ್ದರು.

**ಮಠಕ್ಕೆ ಅಕ್ಕಿ ದಾನ:** ತಾತಯ್ಯನವರ ಮಾಲೆಯನ್ನು ಧರಿಸಿ ಬಂದಿದ್ದ ಮಾಲಾಧಾರಿ ಭಕ್ತರು ಮಠದ ನಿತ್ಯ ಅನ್ನದಾಸೋಹಕ್ಕೆ ಸುಮಾರು 40 ಕ್ವಿಂಟಾಲ್ ಅಕ್ಕಿಯನ್ನು ದಾನವಾಗಿ ನೀಡಿದರು. ಪ್ರತಿನಿತ್ಯ ಮಧ್ಯಾಹ್ನ ಹಾಗೂ ರಾತ್ರಿಯಲ್ಲಿ ಕ್ಷೇತ್ರಕ್ಕೆ ಬರುವ ಭಕ್ತರಿಗೆ ಉಚಿತ ಅನ್ನದಾಸೋಹವನ್ನು ಶ್ರೀಮಠದ ಟ್ರಸ್ಟ್ ಸಮಿತಿಯ ವತಿಯಿಂದ ನಡೆಸಲಾಗುತ್ತದೆ.

**ಸಂಕ್ರಾಂತಿ ಪ್ರಯುಕ್ತ ಗೋಪೂಜೆ:** ಶ್ರೀ ಯೋಗಿ ನಾರೇಯಣ ಮಠದ ಗೋಶಾಲೆಯಲ್ಲಿ ಸಂಕ್ರಾಂತಿ ಪ್ರಯುಕ್ತ ವಿಶೇಷವಾದ ಗೋಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ಗೋವುಗಳನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು, ಹರಿಶಿನ, ಕುಂಕುಮ, ಗಂಧ, ಧೂಪಗಳನ್ನು ಸಮರ್ಪಿಸಿ, ಅಷ್ಟೋತ್ತರ ಪೂಜೆ ನೆರವೇರಿಸಿ, ಮಂಗಳ ನಿರಾಜನವನ್ನು ಸಮರ್ಪಿಸಲಾಯಿತು. ಊರಿನ ಗ್ರಾಮಸ್ಥರು ಹಸುಗಳನ್ನು ಸಿಂಗರಿಸಿ ಮಠಕ್ಕೆ ಕರೆತಂದು ಪೂಜೆ ಸಲ್ಲಿಸಿದರು.●



# ಬದುಕು ನಿಸ್ವಾರ್ಥ ಆಗಬೇಕು



ಕೈವಾರದ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಡಾ. ಎಂ.ಆರ್.ಜಯರಾಮ್ ಅವರಿಂದ ಹಿತನುಡಿ

"ವಿಜ್ಞಾನ ಮತ್ತು ತಂತ್ರಜ್ಞಾನ ಬದುಕಿನ ಅವಿಭಾಜ್ಯ ಅಂಗವಾಗಿದೆ. ಇದರೊಂದಿಗೆ ಮಾನವೀಯ ಮೌಲ್ಯಗಳನ್ನು ಬೆಸೆದು ಜೀವಿಸಿದರೆ ಬದುಕು ಆದರ್ಶವಾಗುತ್ತದೆ" ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಅಭಿಪ್ರಾಯಪಟ್ಟರು.

ತಾಲೂಕಿನ ಕೈವಾರದ ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಗೆ ಬೆಂಗಳೂರಿನ ದೀಪಮ್ ಇನಿಷಿಯೇಟಿವ್ಸ್ ಯುವಕರ ತಂಡವು ಉಚಿತವಾಗಿ ಗಣಕಯಂತ್ರಗಳನ್ನು ವಿತರಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

"ಸ್ವಾರ್ಥದಿಂದ ಕೂಡಿದ ಬದುಕು ಬದುಕಲ್ಲ. ಬದುಕು ನಿಸ್ವಾರ್ಥವಾಗಬೇಕು, ಸೇವಾ ಮನೋಭಾವ ಬೆಳೆಸಿಕೊಳ್ಳಬೇಕು. ಸಾಮಾಜಿಕ ಕಳಕಳಿ, ಶಿಸ್ತು, ಶ್ರದ್ಧೆ, ಸತತ ಅಧ್ಯಯನ ಬೆಳೆಸಿಕೊಂಡು ಸುಂದರ ಜೀವನವನ್ನು ನಿರ್ಮಾಣ ಮಾಡಿಕೊಳ್ಳಬೇಕು. ಶಿಕ್ಷಣದ ಜೊತೆಗೆ ಗುರು–ಹಿರಿಯರಲ್ಲಿ ಗೌರವ ಭಾವನೆ ಬೆಳೆಸಿಕೊಳ್ಳಬೇಕು. ಉತ್ತಮ ಚಿಂತನೆ ಆಲೋಚನೆ ಆವಶ್ಯಕವಾಗಿದೆ. ವಿದ್ಯಾರ್ಥಿ ದೆಸೆಯಿಂದಲೇ ಸಾಮಾಜಿಕ ಕಾರ್ಯಗಳನ್ನು ತೊಡಗಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ದೀಪಂ ಇನಿಷಿಯೆಟಿವ್ಸ್ ವಿದ್ಯಾರ್ಥಿವೃಂದದವರು ಮಾಡುತ್ತಿರುವ ಕಾರ್ಯ ಶ್ಲಾಘನೀಯ" ಎಂದರು.

ಚಿಂತಾಮಣಿ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಜಿ. ಸುರೇಶ್ ಮಾತನಾಡಿ, "ವಿದ್ಯಾರ್ಥಿಗಳ ಗುರಿ ಇಡೇರಲು ಗುರುವಿನ ಬಲದ ಆವಶ್ಯಕತೆ ಇದೆ. ಶಿಕ್ಷಣದ ಮಹತ್ತ್ವವನ್ನು ಅರಿತು ನಿರಂತರ ಅಧ್ಯಯನಶೀಲರಾಗಿ. ಪ್ರಸ್ತುತ ಬೆರಳಿನ ತುದಿಯಲ್ಲಿ ಜ್ಞಾನವಿದೆ. ವಿದ್ಯಾರ್ಥಿಗಳು ನಿಮ್ಮ ಮೆದುಳಿಗೆ ಕೆಲಸಕೊಡಬೇಕು. ಗಣಕಯಂತ್ರಗಳು ನಿಮ್ಮ ಓದಿಗೆ ಪೂರಕವಾಗಿದೆ. ಇದನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಿ. ಸರ್ಕಾರಿ ಶಾಲೆಗಳಲ್ಲಿ ಹೆಚ್ಚು ಹೆಚ್ಚು ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ಸರ್ಕಾರಿ ಶಾಲೆಗಳಲ್ಲಿ ಓದಿದರು ಉನ್ನತವಾದ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಸರ್ಕಾರಿ ಶಾಲೆಗಳಿಗೆ ಈ ರೀತಿಯಾಗಿ ಹೆಚ್ಚು ಉಪಯುಕ್ತವಾದ ದಾನವನ್ನು ನೀಡಿರುವ ದೀಪಂ ಇನಿಷಿಯೆಟಿವ್ಸ್ ಯುವಕರ ತಂಡವು ಪ್ರಶಂಸನೀಯವಾಗಿದೆ" ಎಂದರು.

ಕಾರ್ಯಕ್ರಮದಲ್ಲಿ ಶ್ರೀಮತಿ ಜಯಕುಮಾರಿ ಜಯರಾಂ, ಶ್ರೀಮತಿ ಚಂದ್ರಪ್ರಭಾ, ಶ್ರೀನಿವಾಸ್ ಪ್ರಸಾದ್, ಅನುರಾಧ ಪ್ರಸಾದ್, ವಾನರಾಶಿ ಬಾಲಕೃಷ್ಣ ಭಾಗವತರ್, ದೀಪಂ ಇನಿಷಿಯೆಟಿವ್ಸ್‌ನ ವೈಶಾಖ ಜಿ. ದತ್ತ, ಕೈವಾರ ಮಠದ ಸದಸ್ಯರಾದ ಆರ್.ಪಿ.ಎಂ. ಸತ್ಯನಾರಾಯಣ್ ಮತ್ತು ಕೆ. ನರಸಿಂಹಪ್ಪ ಹಾಗೂ ಶಾಲೆಯ ಎಲ್ಲ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಬಡ್ತಿ ಶಿಕ್ಷಕರ ಸಂಘದ ರಾಜ್ಯಾಧ್ಯಕ್ಷ ಯಲ್ಲಪ್ಪ ಗೌಡ ಸ್ವಾಗತಿಸಿದರು. ಶಾಲಾ ಮುಖ್ಯ ಶಿಕ್ಷಕಿ ಗಿರಿಜಮ್ಮ ವಂದಿಸಿದರು. ಶಾಲೆಯ ಎಲ್ಲ ಮಕ್ಕಳಿಗೂ ಸಿಹಿ ಹಂಚಲಾಯಿತು.



# ಕರ್ಮಗಳಿಂದ ಮುಕ್ತವಾಗಲು ಆತ್ಮಬೋಧೆ ಅಗತ್ಯ

"ಲೌಕಿಕವಾದ ಪ್ರಪಂಚದ ಮಾಯೆಗಳಿಂದ ಹಾಗೂ ಎಲ್ಲ ಕರ್ಮಗಳಿಂದ ಮುಕ್ತವಾಗಲು ಆತ್ಮಬೋಧನೆ ಅತ್ಯವಶ್ಯಕವಾಗಿದೆ" ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಅಭಿಪ್ರಾಯಪಟ್ಟರು.

ಕೈವಾರದ ಶ್ರೀಯೋಗಿನಾರೇಯಣ ಮಠದ ವತಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ ನಗರದ ತೇರಿನ ಬೀದಿಯಲ್ಲಿರುವ ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಾಲಯದಲ್ಲಿ ಕೈವಾರ ಶ್ರೀ ಯೋಗಿನಾರೇಯಣ ಮಠದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಧರ್ಮ ಚಿಂತನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

"ಆತ್ಮಬೋಧಾಮೃತ, ಇದು ಗುರು ಮತ್ತು ಶಿಷ್ಯರ ನಡುವೆ ಇರುವ ಅಮೃತ. ಯಾರಾದರೆ ಆತ್ಮಬೋಧಾಮೃತವನ್ನು ಸೇವಿಸುತ್ತಾರೋ ಅವರೆಲ್ಲರೂ ಹುಟ್ಟು–ಸಾವನ್ನು ಜಯಿಸುವ ಶಕ್ತಿಯನ್ನು ಪಡೆಯುತ್ತಾರೆ. ಶಾಶ್ವತವಾಗಿ ಪರಮಾತ್ಮನಲ್ಲಿ ಸೇರಬೇಕಾದರೆ ಆತ್ಮಬೋಧನೆ ಅತಿಮುಖ್ಯವಾದುದು. ಈ ಆತ್ಮಬೋಧನೆ ಒಬ್ಬೊಬ್ಬರಿಗೆ ಮಾತ್ರ ಸಂಬಂಧಿಸಿದ್ದು. ಆತ್ಮಬೋಧನೆ ಅವರಿಗವರೇ ಅನುಭವಿಸಬೇಕು. ಇದನ್ನು ಬೇರೆಯವರಿಗೆ ವರ್ಗಾಯಿಸಲು ಬರುವುದಿಲ್ಲ. ಗುರುಗಳು ಶಿಷ್ಯರಿಗೆ ಆತ್ಮಬೋಧನೆಯನ್ನು ಉಪದೇಶಿಸುತ್ತಾರೆ. ಈ ಆತ್ಮಬೋಧಾಮೃತ ಉಪದೇಶದ ಚಿಂತನೆಯನ್ನು ಮಾಡುತ್ತಿದ್ದೇವೆ. ನಮ್ಮ ನಮ್ಮ ಕರ್ಮದ ಫಲಗಳಿಂದ ಎಷ್ಟೋ ಜೀವರಾಶಿಗಳಲ್ಲಿ ಜನ್ಮವೆತ್ತಿ ಬಂದಿದ್ದೇವೆ. ಹಿಂದೆ ಮಾಡಿರುವ ಪುಣ್ಯದಿಂದ ಈಗ ಮಾನವಜನ್ಮ ಬಂದಿದೆ. ಈಗ ನಾವು ಈ ಕರ್ಮಗಳಿಂದ ಮುಕ್ತರಾದರೆ ಮಾತ್ರ ಮೋಕ್ಷದ ಹಾದಿ ಕಾಣುತ್ತದೆ. ಕರ್ಮಗಳು ನಿಶ್ಶೇಷವಾಗಬೇಕಿದ್ದರೆ ಆತ್ಮಬೋಧಾಮೃತದ ಮೊರೆ ಹೋಗಬೇಕೆಂದರು."



ಕಾರ್ಯಕ್ರಮ ಉದ್ಘಾಟನೆ

## ಭಗವದ್ಗೀತೆ ಒಂದು ಆತ್ಮಬೋಧೆ

"ಭಾರತೀಯರ ಸನಾತನ ಪರಂಪರೆಯಲ್ಲಿ ಭಗವದ್ಗೀತೆಗೆ ಮಹತ್ತ್ವದ ಸ್ಥಾನವಿದೆ. ಭಗವದ್ಗೀತೆಯು ಒಂದು ಆತ್ಮಬೋಧೆ. ಶ್ರೀಕೃಷ್ಣ ಪರಮಾತ್ಮನು ಅಜ್ಞಾನಿಯಾದ ಅರ್ಜುನನಿಗೆ ಭಗವದ್ಗೀತೆಯನ್ನು ಉಪದೇಶಿಸಿದ್ದಾನೆ. ಶ್ರೀಕೃಷ್ಣನು ಕುರುಕ್ಷೇತ್ರ ಯುದ್ಧದಲ್ಲಿ ಅರ್ಜುನನಿಗೆ ರಥದ ಸಾರಥಿಯಾಗಿರುತ್ತಾನೆ. ಆಗ ಅರ್ಜುನನು ಯುದ್ಧಭೂಮಿಯನ್ನು ಕಂಡು, "ಶ್ರೀಕೃಷ್ಣ, ನನ್ನನ್ನು ಈ ಎರಡು ಸೈನ್ಯಗಳ ಮಧ್ಯದಲ್ಲಿ ಕರೆದುಕೊಂಡು ಹೋಗು. ಅಧರ್ಮದಲ್ಲಿರುವ ದುರ್ಯೋಧನನ ಪರವಾಗಿ ಯಾರ್‍ಯಾರು ಇದ್ದಾರೆ ನೋಡಬೇಕು" ಎನ್ನುತ್ತಾನೆ. ಆಗ ಶ್ರೀಕೃಷ್ಣನು ರಥವನ್ನು ಸೈನ್ಯಗಳ ಮಧ್ಯದಲ್ಲಿ ತೆಗೆದುಕೊಂಡು ಹೋಗುತ್ತಾನೆ. ಆಗ ಅರ್ಜುನನು ದುರ್ಯೋಧನನ ಪರವಾಗಿರುವ ಮುತ್ತಾತ, ಗುರುಗಳು, ಕುಲಗುರು, ಮಾವಂದಿರು, ಸಹೋದರಾದಿಯಾಗಿ ಎಲ್ಲರನ್ನೂ ಕಾಣುತ್ತಾನೆ. ಅರ್ಜುನನು ಕೃಷ್ಣನನ್ನು ಕುರಿತು ಕೇಳುತ್ತಾನೆ, "ನಾನೇನಾದರೂ ಈ ಬಂಧು–ಬಳಗದವರನ್ನು ಅದರಲ್ಲೂ ಮುತ್ತಾತ, ಗುರುಗಳನ್ನು ಕೊಂದರೆ, ಅದೆಷ್ಟು ಜನ್ಮಗಳಲ್ಲಿ ಪಾಪವನ್ನು ಅನುಭವಿಸಬೇಕೋ. ಹೀಗೇನಾದರೂ ಮಾಡಿದರೆ ಪ್ರಜೆಗಳು ನನ್ನನ್ನು ಒಪ್ಪುತ್ತಾರೆಯೇ, ಈ ಕಾರಣದಿಂದ ನನಗೆ ಇಂದು ಯುದ್ಧಮಾಡಲು ಶಕ್ತಿಯಿಲ್ಲ" ಎನ್ನುತ್ತಾನೆ. ಆಗ ಕೃಷ್ಣಪರಮಾತ್ಮನು ಅರ್ಜುನನ್ನು ಕುರಿತು ಹೀಗೆ ಹೇಳುತ್ತಾನೆ, "ಅರ್ಜುನ, ಎದ್ದೇಳು, ನೀನು ಕ್ಷತ್ರಿಯನಾಗಿ ಹುಟ್ಟಿದ್ದೀಯಾ, ಇದು ಸಾಮಾನ್ಯವಾದ ಯುದ್ಧವಲ್ಲ. ಧರ್ಮ ಯುದ್ಧ. ಇದರಲ್ಲಿ ನೀನು ವೀರಮರಣವನ್ನು ಅಪ್ಪಿದರೆ ಸ್ವರ್ಗಸ್ಥನಾಗುತ್ತೀಯಾ, ಗೆದ್ದರೆ ಧರ್ಮದಿಂದ ರಾಜ್ಯವನ್ನಾಳಿ ಮುಕ್ತನಾಗುತ್ತೀಯಾ. ಇಂತಹ ಸಮಯದಲ್ಲಿ ನೀನು ಯುದ್ಧವನ್ನು ಮಾಡದಿದ್ದರೆ ಯಾರೂ ನಿನ್ನನ್ನು ಒಪ್ಪುವುದಿಲ್ಲ, ನಿನ್ನನ್ನು ಹೇಡಿಯೆನ್ನುತ್ತಾರೆ" ಎಂದು ಹೇಳುತ್ತಾ ಅರ್ಜುನನಿಗೆ ಕೃಷ್ಣನು ಆತ್ಮಬೋಧನೆಯನ್ನು ಮಾಡುತ್ತಾನೆ.

ಅರ್ಜುನನು, ಶ್ರೀಕೃಷ್ಣನನ್ನು ಪ್ರಶ್ನಿಸುತ್ತಾನೆ, ಚಂಚಲವಾದ ಮನಸ್ಸನ್ನು ಹತೋಟಿಗೆ ತರುವುದು ಹೇಗೆ? ಚಂಚಲತೆಯನ್ನು ಮನಸ್ಸಿನಿಂದ ತೆಗೆಯುವುದು ಹೇಗೆ? ಈ ಪ್ರಶ್ನೆಗೆ ಶ್ರೀಕೃಷ್ಣನು ಉತ್ತರಿಸುತ್ತಾ, "ನಿನಗೆ ಹಾಗೂ ಇಲ್ಲಿರುವವರಿಗೆ ಹಿಂದಿನ ಮತ್ತು ಮುಂದಿನ ಜನ್ಮದ ಅರಿವಿಲ್ಲ, ಈ ಜನ್ಮ ಮಾತ್ರ ಗೊತ್ತಿದೆ. ಆದರೆ ನನಗೆ ಹಿಂದಿನ ಜನ್ಮದ, ಈ ಜನ್ಮದ ಹಾಗೂ ಮುಂದಿನ ಜನ್ಮದ ಸ್ವರೂಪದ ಸಂಪೂರ್ಣ ಅರಿವಿದೆ. ಪ್ರತಿಯೊಂದು ಪ್ರಾಣಿಯೂ ಬಾಲ್ಯ, ಯೌವ್ವನ ಹಾಗೂ ಮುಪ್ಪು ಈ ಮೂರರಲ್ಲಿ ಓಡಾಡುತ್ತಿರುತ್ತದೆ. ಪ್ರಾಣಿಯ ಜೀವಿತಾವಧಿಯ ಸಮಯ ಮುಗಿದ ಅನಂತರ ಸಾವು ಸಂಭವಿಸುತ್ತದೆ. ಆಗ ಜೀವಾತ್ಮನು ಮತ್ತೊಂದು ಪ್ರಾಣಿಯಲ್ಲಿ ಸೇರಿಕೊಳ್ಳುತ್ತದೆ. ನಾವು ಹೇಗೆ ಒಂದು



ಧರ್ಮಾಧಿಕಾರಿಗಳಿಂದ ಧರ್ಮ ಸಂದೇಶ

ವಸ್ತ್ರವನ್ನು ತೊರೆದು ಇನ್ನೊಂದು ವಸ್ತ್ರವನ್ನು ಧರಿಸುತ್ತೇವೆಯೋ ಹಾಗೆ. ಯಾಕೆ ಇದರ ಅರಿವು ನಿನಗೆ ಆಗುತ್ತಿಲ್ಲವೆಂದರೆ ಅದಕ್ಕೆ ಪ್ರಬಲವಾದ ಕಾರಣವೆಂದರೆ ನೀನು ಈ ಮಾಯಾ ಪ್ರಪಂಚದಲ್ಲಿ ಸಿಕ್ಕಿ ಹಾಕಿಕೊಂಡಿದ್ದೀಯಾ. ಈ ಪ್ರಪಂಚವನ್ನೇ ಶಾಶ್ವತವೆಂದು ತಿಳಿದು ನೀನು ಜೀವಿಸುತ್ತಿದ್ದಿಯಾ, ಯಾವಾಗಾದರೆ ಈ ಮಾಯಾ ಪ್ರಪಂಚದಿಂದ ಅಂದರೆ ಅಜ್ಞಾನದಿಂದ ಹೊರಬರುತ್ತೀಯೋ ಆ ಸಮಯದಲ್ಲಿ ಸತ್ಯವು ಗೋಚರವಾಗುತ್ತದೆ ತಿಳಿಕೋ. ಜ್ಞಾನಿಯಾದವನು ಹುಟ್ಟು–ಸಾವುಗಳಿಗೆ ಎಂದಿಗೂ ಯೋಚಿಸುವುದಿಲ್ಲ. ನಿಷ್ಕಾಮಕರ್ಮದಲ್ಲಿ ನಿನ್ನ ಕರ್ತವ್ಯವನ್ನು ನಿರ್ವಹಿಸು ಎಂದು" ಶ್ರೀಕೃಷ್ಣನು ಅರ್ಜುನನಿಗೆ ಬೋಧಿಸುತ್ತಾ, ಕರ್ಮಯೋಗ, ಭಕ್ತಿಯೋಗ, ಜ್ಞಾನಯೋಗ, ರಾಜಯೋಗ ಈ ರೀತಿಯಾಗಿ ಜ್ಞಾನವನ್ನು ಅರ್ಜುನನಿಗೆ ನೀಡಿದ ಅನಂತರ ಅರ್ಜುನನು ಯುದ್ಧವನ್ನು ಮಾಡಲು ಸನ್ನದ್ಧನಾಗುತ್ತಾನೆ. ಇದನ್ನು ಕೇವಲ ಅರ್ಜುನನಿಗೆ ಬೋಧಿಸಿದ್ದಲ್ಲ. ಇದು ನಮಗೆಲ್ಲರಿಗೂ ಕೂಡ ಶ್ರೀಕೃಷ್ಣ ಪರಮಾತ್ಮನು ಬೋಧಿಸುತ್ತಿರುವ ಆತ್ಮಬೋಧೆ."

ಅನುಭವದ ಆತ್ಮಭೋಧನೆ: "ಯೋಗಿಶ್ವರನೆನಿಸಿಕೊಂಡವರಿಗೆ ಮಾತ್ರ ಕಾಲದ ಅಧಿಪತಿಯಾಗಿ ಅತೀಂದ್ರಿಯವಾದ ಜ್ಞಾನವನ್ನು ಪಡೆಯುವ ಶಕ್ತಿ ಇರುತ್ತದೆ. ಕೈವಾರ ತಾತಯ್ಯನವರು ಮಾನವರ ಭವಿಷ್ಯದ ಬಗ್ಗೆ ಜಾಗೃತಿಗೊಳಿಸಲು ಹಲವಾರು ಉಪದೇಶಗಳನ್ನು ಆತ್ಮಬೋಧಾಮೃತದಲ್ಲಿ ನೀಡಿದ್ದಾರೆ. ಮಾಯಾ ಪ್ರಪಂಚವನ್ನು ಕಂಡು ಮೋಸಹೋಗಬೇಡಿ. ಮಾನವ ಜನ್ಮವನ್ನು ಪಡೆಯಲು ಅದೆಷ್ಟೋ ಜೀವರಾಶಿಗಳಲ್ಲಿ ಈ ಆತ್ಮವು ಸೇರಿ ನೊಂದಿದೆಯೋ ಗೊತ್ತಿಲ್ಲ. ಈ ಸಮಯದಲ್ಲಿ ಎಚ್ಚರ ತಪ್ಪಿದರೆ ಮುಂದೆ ಅನಾಹುತವಾಗುತ್ತದೆ" ಎಂದು ತಾತಯ್ಯನವರು ಎಚ್ಚರಿಸಿದ್ದಾರೆ. ತಾತಯ್ಯನವರು ತಾವು ಕಂಡುಕೊಂಡ ಸತ್ಯವನ್ನು ಹಾಗೂ ಅನುಭವದಿಂದ ಹೇಳಿದ್ದಾರೆ. ಈ ಹಿಂದೆಯೂ ಶ್ರೀ ಶಂಕರಾಚಾರ್ಯರು ಆತ್ಮಬೋಧೆಯನ್ನು ನೀಡಿದ್ದಾರೆ. ಆದರೆ ಅದರಲ್ಲಿ ತಪಸ್ಸನ್ನು ಮಾಡಿ ಕರ್ಮ–ಅಕರ್ಮಗಳನ್ನು ಜಯಿಸಬೇಕು, ಅವಿದ್ಯೆಗಳು ನಾಶವಾದ ಮೇಲೆ ಮಾತ್ರ ಈ ಆತ್ಮಬೋಧನೆಯನ್ನು ಸ್ವೀಕಾರ ಮಾಡು, ಅಲ್ಲಿಯವರೆಗೂ ಆತ್ಮಬೋಧನೆ ಇಲ್ಲ ಎಂದಿದ್ದಾರೆ. ಈ 2500 ವರ್ಷಗಳಲ್ಲಿ ಆತ್ಮಬೋಧನೆಯನ್ನು ನೀಡಿರುವವರು ಕೈವಾರದ ತಾತಯ್ಯನವರು. ಈ ಕಾರಣದಿಂದಲೇ ತಾತಯ್ಯನವರು ಋಷಿಮುನಿಗಳಾದರು. ತಾತಯ್ಯನವರು ನೀಡಿರುವ ಆತ್ಮಬೋಧಾಮೃತವು ಅನುಭವಪರವಾದುದು. ಅನುಭವವಿಲ್ಲದೆ ಸತ್ಯವನ್ನು ಹೇಳಲು ಸಾಧ್ಯವಿಲ್ಲ."

## ಚಿಂತೆ ಬಿಡು, ಗುರು ಚಿಂತನೆ ಮಾಡು

"ಆತ್ಮಬೋಧೆ ಸಿಗಬೇಕಾಗಿದ್ದರೆ ಮೊಟ್ಟಮೊದಲನೆಯದಾಗಿ ನಾವು ಗುರುವಿಗೆ ಶರಣಾಗಬೇಕು. ಗುರುವಿಗೆ ಶರಣಾಗದ ಹೊರತು ಯಾವುದೂ ಸಿದ್ಧಿಸುವುದಿಲ್ಲ. ಇದನ್ನೇ ತಾತಯ್ಯನವರು;

**"ಚಿಂತಲನ್ನಿಯು ವಿಡಚಿ–ಶ್ರೀಗುರುನಿ ಯೇವ್ವಾಳ**
**ಚಿಂತ ಶಾಯವೆ ನೀವು–ಮನಸಾ**
**ಚಿಂತ ಜೇಸಿನಯಪುಡೆ–ಸಿದ್ಧಿಂಚು ಪರಮಪದವಿ**
**ಶೀಘ್ರಮುನ ತೆಲಿಯವೇ–ಮನಸಾ"**

'ಪ್ರಾಪಂಚಿಕವಾದ ಚಿಂತೆಗಳನ್ನು ಬಿಟ್ಟು ಶ್ರೀಗುರುವಿನ ಚಿಂತನೆಯನ್ನು ಸದಾಕಾಲ ಮಾಡು. ಈ ರೀತಿಯಾಗಿ ಸದಾಕಾಲ ಶ್ರೀ ಗುರುವಿನ ಚಿಂತನೆ ಮಾಡಿದರೆ ಮಾತ್ರ ಪರಮ ಪದವಿಯು ಸಿದ್ಧಿಸುತ್ತದೆ, ಹೆಚ್ಚು ಸಮಯವನ್ನು ವ್ಯರ್ಥಮಾಡದೆ ಶೀಘ್ರವಾಗಿ ತಿಳಿದುಕೋ ಮನಸ್ಸೇ' ಎನ್ನುತ್ತಿದ್ದಾರೆ ತಾತಯ್ಯನವರು. ಗುರುವಿನ ಮಾರ್ಗದರ್ಶನವಿಲ್ಲದೆ ಅಂತರಂಗದ ಸಾಧನೆ ಸಾಧ್ಯವಿಲ್ಲ. ಮಾನವ ಜನ್ಮದಲ್ಲಿ ಪ್ರತಿಯೊಬ್ಬರೂ ಗುರುಭಕ್ತಿಯಲ್ಲಿ ತೊಡಗಬೇಕು. ಗುರುಭಕ್ತಿಯಿಂದ ಆತ್ಮಚಿಂತನೆ ಪ್ರಾರಂಭವಾಗುತ್ತದೆ. ಆತ್ಮಚಿಂತನೆಯಿಂದ ಆತ್ಮಜ್ಞಾನವು ಸಿಗುತ್ತದೆ. ಹಲವಾರು ಶಾಸ್ತ್ರಗಳ ಓದಿಗಿಂತಲೂ ಆತ್ಮಜ್ಞಾನ ಪವಿತ್ರವಾದುದು ಹಾಗೂ ಶ್ರೇಷ್ಠವಾದುದು."

### ಆತ್ಮಬೋಧೆ ಎಚ್ಚರಿಕೆಯ ಗಂಟೆ:

"ಸಂಸಾರ ಸಾಗರವನ್ನು ದಾಟಲು ಗುರುವಿನ ದೋಣಿಯ ನೆರವು ಬೇಕು. ಗುರುವಿನ ಅನುಗ್ರಹವಿಲ್ಲದೆ ಸಂಸಾರ ಸಾಗರವನ್ನು ದಾಟಲು ಸಾಧ್ಯವಿಲ್ಲ. ಎಲ್ಲಿಯವರೆಗೂ ಪ್ರಾಪಂಚಿಕತೆಯಲ್ಲಿಯೇ ಮುಳುಗಿರುತ್ತೆವೆಯೋ, ಅಲ್ಲಿಯವರೆಗೂ ನಾವೆಲ್ಲರೂ ಅಜ್ಞಾನಿಗಳೇ. ಈ ಜನ್ಮದಲ್ಲಿ ಗಂಡಾಗಿ ಹುಟ್ಟಿದವರು, ಮುಂದಿನ ಜನ್ಮದಲ್ಲಿ ಹೆಣ್ಣಾಗಿ ಹುಟ್ಟಬಹುದು, ಮರವಾಗಬಹುದು, ಪಕ್ಷಿಯಾಗಬಹುದು ಯಾವುದೇ ಪ್ರಾಣಿಯಾಗಬಹುದು. ಶರೀರಕ್ಕೂ ಆತ್ಮಕ್ಕೂ ಸಂಬಂಧವಿಲ್ಲ. ನಮ್ಮ ನಮ್ಮ ಕರ್ಮಾನುಸಾರವಾಗಿ ಜನ್ಮಗಳು ನಿಗಧಿಯಾಗುತ್ತದೆ. ಈ ಕಾರಣದಿಂದಲೇ ಆತ್ಮಬೋಧಾಮೃತ ಮಹತ್ವವನ್ನು ಪಡೆದಿದೆ. ಆತ್ಮಬೋಧೆಯನ್ನು ಎಲ್ಲರೂ ಬೋಧಿಸಲು ಆಗುವುದಿಲ್ಲ. ಆತ್ಮಬೋಧೆಯನ್ನು ಬೋಧಿಸಬೇಕಾದರೆ ಅತೀಂದ್ರಿಯವಾದ ಜ್ಞಾನವನ್ನು ಪಡೆದಿರಬೇಕು. ಯೋಗೀಶ್ವರನೆನಿಸಿಕೊಂಡವರಿಗೆ ಮಾತ್ರ ಅತೀಂದ್ರಿಯವಾದ ಜ್ಞಾನವಿರುತ್ತದೆ. ಕೈವಾರ ತಾತಯ್ಯನವರು ಭವಿಷ್ಯದ ಬಗ್ಗೆ ಜಾಗೃತಿಗೊಳಿಸಲು ಆತ್ಮಬೋಧಾಮೃತವನ್ನು ಶಿಷ್ಯರಿಗಾಗಿ ರಚಿಸಿದ್ದಾರೆ. ಮಾಯಾಪ್ರಪಂಚವನ್ನು ಕಂಡು ಮೋಸಹೋಗಬೇಡಿ. ಮಾನವ ಜನ್ಮವನ್ನು ಪಡೆಯಲು ಅದೆಷ್ಟೋ ಜೀವರಾಶಿಗಳಲ್ಲಿ ಈ ಆತ್ಮವು ಸೇರಿ ನೊಂದಿದೆಯೋ ಗೊತ್ತಿಲ್ಲ. ಈ ಸಮಯದಲ್ಲಿ ಎಚ್ಚರ ತಪ್ಪಿದರೆ ಮುಂದೆ ಅನಾಹುತವಾಗುತ್ತದೆ ಎಂದು ತಾತಯ್ಯನವರು ಎಚ್ಚರಿಸಿದ್ದಾರೆ. ತಾತಯ್ಯನವರು ತಾವು ಕಂಡುಕೊಂಡ ಸತ್ಯವನ್ನು ಹಾಗೂ ಅನುಭವದಿಂದ ಹೇಳಿದ್ದಾರೆ."

### ಸ್ಥೂಲ, ಸೂಕ್ಷ್ಮ, ಕಾರಣ ಶರೀರ

"ನಾವೆಲ್ಲರೂ ನೋಡುತ್ತಿರುವುದು ಸ್ಥೂಲ ದೇಹ ಮಾತ್ರ. ಈ ಶರೀರವು ಮಣ್ಣು ಸೇರಿದಾಗ ಸೂಕ್ಷ್ಮ ಶರೀರವು ಕಾಣುತ್ತದೆ. ಮಾನವನು ಸತ್ತಮೇಲೆ ಮತ್ತೆ ಸ್ಥೂಲ ಶರೀರವನ್ನು ಕಾಣಲು ಸಾಧ್ಯವಿಲ್ಲ. ನಾವು ಮಾಡಿರುವ ಕರ್ಮಗಳನ್ನು ಅನುಭವಿಸುವುದು ಕೇವಲ ಸೂಕ್ಷ್ಮ ಶರೀರ ಮಾತ್ರ. ಪುಣ್ಯವಂತನಾಗಿ ಪುಣ್ಯದ ಕೆಲಸಗಳನ್ನು ಮಾಡಿ ಪ್ರಾಣಬಿಟ್ಟರೆ, ಈ ಸೂಕ್ಷ್ಮ ಶರೀರವು ಸ್ವರ್ಗಾದಿಲೋಕಗಳಲ್ಲಿ ಒಂದಷ್ಟು ವರ್ಷಗಳು ಇದ್ದು ಮತ್ತೆ ಜನ್ಮವೆತ್ತಬೇಕಾಗುತ್ತದೆ. ಪಾಪದ ಕಾರ್ಯಗಳನ್ನು ಮಾಡಿದ್ದರೆ ನರಕದ ಫಲವನ್ನು ಅನುಭವಿಸಬೇಕಾಗುತ್ತದೆ. ಜೀವವು ಅದೆಷ್ಟೋ ಬಾರಿ ವಿವಿಧ ವರ್ಣಗಳಲ್ಲಿ ಜನ್ಮವೆತ್ತಿರುತ್ತದೆ. ಇದರ ಸೂಕ್ಷ್ಮತೆಯನ್ನು ಯೋಗಿಪುರುಷರಾದ ಗುರುಗಳು ಮಾತ್ರ ಅರಿತಿರುತ್ತಾರೆ. ಇದನ್ನು ಗುರುಗಳು ಶಿಷ್ಯನಿಗೆ ಉಪದೇಶಿಸುತ್ತಾರೆ. ಹೆಜ್ಜೆ, ಹೆಜ್ಜೆಗೂ ತಾತಯ್ಯನವರು ಮಾನವನ ಉನ್ನತಿಗಾಗಿ ಬೋಧನೆಗಳನ್ನು ನೀಡಿದ್ದಾರೆ. ಜೀವಾತ್ಮನನ್ನು ಗುರುಗಳು ತೋರಿಸುತ್ತಾ, ಪರಮಾತ್ಮನಿರುವ ಸ್ಥಳವನ್ನು ತೋರಿಸಿ ಅಲ್ಲಿ ಗುರಿಯನ್ನಿಡು ಎಂದು ಅಭಯವನ್ನು ಕೊಟ್ಟು ಪರಮಾತ್ಮನಲ್ಲಿ ಜೀವಾತ್ಮನನ್ನು ಸೇರಿಸುವ ಜವಾಬ್ದಾರಿಯನ್ನು ಗುರುಗಳು ಹೊತ್ತುಕೊಂಡು ಶಿಷ್ಯನು ಮೋಕ್ಷವನ್ನು ಹೊಂದುವಂತೆ ಗುರುಗಳು ನೋಡಿಕೊಳ್ಳುತ್ತಾರೆ. ಯೋಗಿಗಳು ಮಾತ್ರ ಈ ರಹಸ್ಯದ ಮರ್ಮವನ್ನು ತಿಳಿದಿರುತ್ತಾರೆ. ಯಾಕೆಂದರೆ ಅವರು ಸೃಷ್ಠಿಕರ್ತರಾಗಿರುತ್ತಾರೆ. ಕಾಲದ ಮಹಿಮೆಯನ್ನು ಅರಿತವರು ಯೋಗಿಗಳು. ತಾತಯ್ಯನವರು "ನಾರೇಯಣ" ಎಂಬ ಬೀಜಾಕ್ಷರವನ್ನು ನೀಡಿದ ಮಹಿಮಾನ್ವಿತರು."

### ಕಾರಣ ಶರೀರದ ವರ್ಣನೆಗೊಂದು ಕಥೆ

ಕಾರಣ ಶರೀರ ಬಹಳ ಮುಖ್ಯವಾದುದು. ಕಾರಣ ಶರೀರವನ್ನು ಅರ್ಥಮಾಡಿಕೊಳ್ಳಲು ಧರ್ಮಾಧಿಕಾರಿಗಳು ಒಂದು ಕಥೆಯ ಮೂಲಕ ವಿವರಿಸಿದರು.

"ದ್ವಾಪರಯುಗದಲ್ಲಿ ಶ್ರೀಕೃಷ್ಣ ಪರಮಾತ್ಮನ ಆಳ್ವಿಕೆ ನಡೆಯುತ್ತಿದೆ. ರುಕ್ಮಿಣಿದೇವಿ ಶ್ರೀಕೃಷ್ಣನ ಪಕ್ಕದಲ್ಲಿದ್ದಾಳೆ. ಇಬ್ಬರೂ ಸಂತೋಷವಾಗಿರುವ ಸಮಯವದು. ಆಗ ದೂರ್ವಾಸ ಮುನಿಗಳು ಅವರ ಶಿಷ್ಯರೊಂದಿಗೆ ಆಗಮಿಸುತ್ತಿದ್ದಾರೆ, ನದಿಯ ಅಂಚಿನಲ್ಲಿದ್ದಾರೆ ಎಂಬ ಸುದ್ದಿಯು ಶ್ರೀಕೃಷ್ಣ ರುಕ್ಮಿಣಿಯರಿಗೆ ತಲಪುತ್ತದೆ. ದೂರ್ವಾಸ ಮುನಿಗಳು, "ಕೃಷ್ಣಾ, ನನ್ನ ಶಿಷ್ಯವರ್ಗದವರೆಲ್ಲರೂ ಬರುತ್ತಿದ್ದೇವೆ. ಈಗ ಪೂಜೆಯ ಸಮಯ, ನದಿಯಲ್ಲಿ ಸ್ನಾನ ಮಾಡಿ, ಪೂಜೆಯನ್ನು ಮಾಡಿಕೊಂಡು ನಾವು ನಿಮ್ಮಿಂದ ಪ್ರಸಾದವನ್ನು ಸ್ವೀಕರಿಸಬೇಕೆಂದು ನಿಶ್ಚಯಿಸಿದ್ದೇವೆ" ಎಂದು ಹೇಳಿಕಳುಹಿಸಿದ್ದಾರೆ. ಆಗ ಶ್ರೀಕೃಷ್ಣನು ರುಕ್ಮಿಣಿದೇವಿಗೆ, "ನೀವೆಲ್ಲರೂ ಭಕ್ಷ್ಯಭೋಜ್ಯಗಳನ್ನು ತೆಗೆದುಕೊಂಡು ಹೋಗಿ, ಗುರುಗಳ ಸೇವೆಯನ್ನು ಮಾಡಿ" ಎಂದು ಶ್ರೀಕೃಷ್ಣನು ಹೇಳುತ್ತಾನೆ. ಕುಟುಂಬದ ಸದಸ್ಯರೊಂದಿಗೆ ರುಕ್ಮಿಣಿದೇವಿಯು ದೂರ್ವಾಸ ಮುನಿಗಳಿಗೆ ಹಾಗೂ ಶಿಷ್ಯರಿಗೆ ಭೋಜನವನ್ನು ತೆಗೆದುಕೊಂಡು ನದಿಯ ತೀರಕ್ಕೆ ಬರುತ್ತಾಳೆ. ಅಲ್ಲಿ ನದಿಯು ಉಕ್ಕಿ ಹರಿಯುತ್ತಿರುತ್ತದೆ. ನದಿಯನ್ನು ದಾಟಲು ಆಗುತ್ತಿಲ್ಲ. ಮೊದಲೆ ದೂರ್ವಾಸ ಮುನಿಗಳು, ಅವರಿಗೆ ಕೋಪಬಂದರೆ ಯಾವ ಶಾಪವನ್ನು ನೀಡುತ್ತಾರೋ ಎಂದು ಚಿಂತಿತಳಾದಳು ರುಕ್ಮಿಣಿದೇವಿ. ಮತ್ತೆ ಶ್ರೀಕೃಷ್ಣನ ಬಳಿ ಬಂದ ರುಕ್ಮಿಣಿದೇವಿ, "ನಾನೇನು ಮಾಡಲಿ ನದಿ ಉಕ್ಕಿ ಹರಿಯುತ್ತಿದೆ. ದಾಟಲು ಸಾಧ್ಯವಾಗುತ್ತಿಲ್ಲ. ಮುನಿಗಳಿಗೆ ಹೇಗೆ ಆಹಾರವನ್ನು ನೀಡಲಿ" ಎಂದು ಪ್ರಾರ್ಥಿಸುತ್ತಾಳೆ. ಆಗ ಕೃಷ್ಣನು ರುಕ್ಮಿಣಿಯನ್ನು ಕುರಿತು ಆ ನದಿಗೆ ಹೇಳು "ನಾನೇನಾದರೂ (ಶ್ರೀಕೃಷ್ಣನೇನಾದರೂ) ನಿತ್ಯ ಬ್ರಹ್ಮಚಾರಿಯಾಗಿದ್ದರೆ, ನೀನು ದಾರಿಯನ್ನು ಕೊಡು" ಎಂದು ನದಿಯ ಬಳಿ ಪ್ರಾರ್ಥಿಸಿಕೋ ಎಂದು ಹೇಳಿ ಕಳುಹಿಸುತ್ತಾನೆ. ರುಕ್ಮಿಣಿ ದೇವಿಗೆ ಮನಸ್ಸಿನಲ್ಲಿ ಕಳವಳವಾಗುತ್ತದೆ. ಕೃಷ್ಣ ನೀವು ಹೇಳುತ್ತಿರುವುದೇನು, ನೀವು ನಿತ್ಯ ಬ್ರಹ್ಮಚಾರಿ ಎಂದರೆ ಇದು ಒಪ್ಪುವಂತಹುದೇ? ಇದನ್ನೆಲ್ಲವನ್ನು ಈಗ ಚರ್ಚಿಸಲು ಸಮಯವಿಲ್ಲವೆಂದುಕೊಂಡು



ಕಾರ್ಯಕ್ರಮಕ್ಕೆ ಮೆರುಗು ತಂದ ಭರತನಾಟ್ಯ

ಉಕ್ಕಿ ಹರಿಯುತ್ತಿರುವ ನದಿಯ ಬಳಿಗೆ ಬರುತ್ತಾಳೆ. ಅಲ್ಲಿ, "ಶ್ರೀಕೃಷ್ಣನೇನಾದರೂ ನಿತ್ಯ ಬ್ರಹ್ಮಚಾರಿಯಾಗಿದ್ದರೆ, ನದಿಮಾತೆ ನನಗೆ ದಾರಿಯನ್ನು ಕೊಡು, ಗುರುಗಳ ಸೇವೆಯನ್ನು ಮಾಡಬೇಕು" ಎಂದು ಪ್ರಾರ್ಥಿಸುತ್ತಾಳೆ. ಆಗ ನದಿ ದಾರಿಯನ್ನು ಬಿಡುತ್ತದೆ. ದಡವನ್ನು ಸೇರುತ್ತಾಳೆ. ಅಲ್ಲಿರುವ ದೂರ್ವಾಸ ಮುನಿಗಳು ಹಾಗೂ ಶಿಷ್ಯರಿಗೆ ಆಹಾರವನ್ನು ನೀಡಿ ಅವರನ್ನು ಸಂತೋಷಪಡಿಸುತ್ತಾಳೆ. ಅನಂತರ ಮತ್ತೆ ಅರಮನೆಗೆ ಹಿಂತಿರುಗಲು ಬಂದು ನೋಡುತ್ತಾರೆ ಮತ್ತೆ ನದಿ ಉಕ್ಕಿ ಹರಿಯುತ್ತಿದೆ. ಇದನ್ನು ನೋಡಿದ ರುಕ್ಮಿಣಿ ದೇವಿ ಮತ್ತೆ ದೂರ್ವಾಸಮುನಿಗಳ ಬಳಿ ಬಂದು, "ನಾನು ಯಾವ ರೀತಿಯಾಗಿ ನದಿಯನ್ನು ದಾಟಬೇಕು" ಎಂದು ಕೇಳುತ್ತಾಳೆ. ಆಗ ದೂರ್ವಾಸಮುನಿಗಳು, "ನಾನೇನಾದರೂ (ದೂರ್ವಾಸ ಮುನಿಯೇನಾದರೂ) ನಿತ್ಯ ಉಪವಾಸಿಯಾಗಿದ್ದರೆ ನದಿಮಾತೆ ನನಗೆ ದಾರಿಯನು ಕೊಡು" ಎಂದು ಪ್ರಾರ್ಥಿಸು ಎನ್ನುತ್ತಾರೆ. ರುಕ್ಮಿಣಿದೇವಿಗೆ ಆಶ್ಚರ್ಯವಾಗುತ್ತದೆ. ಇದೇನಪ್ಪ ಇದು ಈಗ ತಾನೆ ಹೊಟ್ಟೆ ತುಂಬ ಊಟವನ್ನು ಮಾಡಿದ್ದಾರೆ, ನಿತ್ಯ ಉಪವಾಸಿ ಎನ್ನುತ್ತಿದ್ದಾರಲ್ಲ ಎಂದುಕೊಂಡು ನದಿಯ ಬಳಿ ಹೋಗಿ ದೂರ್ವಾಸಮುನಿಗಳು ಹೇಳಿದಂತೆ ಹೇಳುತ್ತಾಳೆ, ನದಿಯು ದಾರಿಯನ್ನು ಬಿಡುತ್ತದೆ. ರುಕ್ಮಿಣಿ ಕೃಷ್ಣನ ಬಳಿ


ಧರ್ಮಾಧಿಕಾರಿ ಡಾ.ಎಂ.ಆರ್. ಜಯರಾಮ್ ಅವರಿಗೆ ಗೌರವ ಸಮರ್ಪಣೆ

ಬಂದು ನಡೆದದ್ದೆಲ್ಲವನ್ನೂ ತಿಳಿಸುತ್ತಾ, "ಇದು ಹೇಗೆ ಸಾಧ್ಯ ಕೃಷ್ಣ ನೀವಾದರೋ ಸದಾಕಾಲ ನನ್ನ ಬಳಿಯೇ ಇರುತ್ತೀರಾ ನೀವು ಹೇಗೆ ನಿತ್ಯ ಬ್ರಹ್ಮಚಾರಿಯಾಗುತ್ತೀರಾ, ದೂರ್ವಾಸಮುನಿಗಳಿಗೆ ನಾನೇ ಕೈಯ್ಯಾರೆ ಊಟವನ್ನು ಬಡಿಸಿದ್ದೇನೆ. ಅವರು ತೃಪ್ತಿಯಾಗಿ ಊಟವನ್ನು ಮಾಡಿದ್ದಾರೆ ಅವರೇಗೆ ನಿತ್ಯ ಉಪವಾಸಿಯಾಗುತ್ತಾರೆ ನನಗೆ ವಿಸ್ತಾರವಾಗಿ ಹೇಳಬೇಕು" ಎಂದು ಪ್ರಾರ್ಥಿಸುತ್ತಾಳೆ. ಆಗ ಕೃಷ್ಣನು, "ಹೌದು ನಾನು ನಿತ್ಯ ಬ್ರಹ್ಮಚಾರಿ, ನನ್ನ ಮನಸ್ಸು ನಿತ್ಯವೂ ನಿಶ್ಚಲವಾದ ತತ್ತ್ವದ ಪರಮಾತ್ಮನಲ್ಲಿ ಲೀನವಾಗಿರುತ್ತದೆ. ಈ ಶರೀರವು ಕಾರಣ ಅಷ್ಟೇ. ಇಲ್ಲಿ ಏನೇನು ಅನುಭವಿಸಬೇಕೋ ಅದೆಲ್ಲವನ್ನೂ ಈ ಕಾರಣಶರೀರ ಅನುಭವಿಸುತ್ತದೆ. ಆದರೆ ಮನಸ್ಸು ಮಾತ್ರ ನಿಶ್ಚಲವಾಗಿರುತ್ತದೆ" ಎನ್ನುತ್ತಾನೆ. ಇದಕ್ಕೆ ತಾತಯ್ಯನವರು, "ಕಾರಣ ಶರೀರವೂ ಕೂಡ ಮಾಯೆಗೆ ಸಂಬಧಿಸಿದ್ದು" ಎನ್ನುತ್ತಾರೆ. ತಾತಯ್ಯನವರ ಅನುಭವದ ಸಾರವನ್ನು ಆತ್ಮಬೋಧಾಮೃತದಲ್ಲಿ ತಿಳಿಸಿದ್ದಾರೆ. ಒಂದೊಂದು ಪದವೂ ವಜ್ರದಂತೆ ಅಮೂಲ್ಯ ಎಂದರು.

## ಪಾಪಕ್ಕೆ ಯಾರೂ ಭಾಗಿಯಲ್ಲ:

"ನೀನು ಈ ದಿನ ಏನಾದರೂ ಮಾಡುತ್ತಿದ್ದಿಯೋ ಇದನ್ನು ಮುಂದೆ ಅನುಭವಿಸಲೇಬೇಕು. ಇದರಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ. ನಿನ್ನ ಪಾಪವನ್ನು ಯಾರೂ ಹೊರಲು ತಯಾರಾಗಿರುವುದಿಲ್ಲ. ಇದನ್ನು ಅತ್ಯಂತ ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬೇಕು. ಯಾಕೆಂದರೆ ಮಾಡಿದ ಪಾಪಕ್ಕೆ ನೀನೆ ಹೊಣೆಗಾರನಾಗಿರುತ್ತಿಯೇ ಹೊರತು ನಿನ್ನ ಸಂಸಾರ, ಮಕ್ಕಳು, ಬಂಧುಗಳು ಯಾರೂ ಹೊಣೆಯಾಗಿರುವುದಿಲ್ಲ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ವಾಲ್ಮೀಕಿ ಮಹರ್ಷಿಗಳು. ವಾಲ್ಮೀಕಿ ಮಹರ್ಷಿಗಳು ಪೂರ್ವದಲ್ಲಿ ಜನಗಳನ್ನು ಹಿಂಸಿಸುವ ದರೋಡೆಕೋರನಾಗಿದ್ದನು. ಒಮ್ಮೆ ನಾರದ ಮಹರ್ಷಿಗಳು ಬಂದು ಕೇಳುತ್ತಾರೆ, 'ಅಯ್ಯಾ ನೀನು ಮಾಡುತ್ತಿರುವುದು ಪಾಪದ ಕೆಲಸ. ಇದನ್ನು ಯಾಕೆ ಮಾಡುತ್ತಿದ್ದೀಯಾ' ಎನ್ನುತ್ತಾರೆ. 'ನನ್ನ ಸಂಸಾರದ ಪೋಷಣೆಗಾಗಿ ನಾನು ಈ ಕೆಲಸವನ್ನು ಮಾಡುತ್ತಿದ್ದೀನಿ' ಎನ್ನುತ್ತಾರೆ ವಾಲ್ಮೀಕಿ. 'ಹಾಗಾದರೆ ನೀನು ಮಾಡುವ ಈ ಪಾಪದಲ್ಲಿ ನಿನ್ನ ಸಂಸಾರಸ್ಥರೂ ಪಾಲನ್ನು ಹೊರುತ್ತಾರೆಯೇ' ಎನ್ನುತ್ತಾರೆ ನಾರದರು. 'ಖಂಡಿತವಾಗಿ' ಎನ್ನುತ್ತಾರೆ ವಾಲ್ಮೀಕಿಗಳು. 'ಹಾಗಾದರೆ ಕೇಳಿ ಬರುವೆಯಾ' ಎನ್ನುತ್ತಾರೆ ನಾರದರು. 'ಓ! ಅದಕ್ಕೆನಂತೆ ಈಗಲೇ ಕೇಳಿಬರುತ್ತೇನೆ' ಎಂದು ಮನೆಗೆ ಬಂದು, ಹೆಂಡತಿ, ಮಕ್ಕಳೆಲ್ಲರನ್ನೂ ಕೇಳುತ್ತಾನೆ, 'ನಾನು ಮಾಡುತ್ತಿರುವುದು ಪಾಪದ ಕೆಲಸವಂತೆ, ಈ ಪಾಪದ ಕೆಲಸದಿಂದ ನಾನು ಧನವನ್ನು ಸಂಪಾದಿಸಿ ನಿಮ್ಮ ಪೋಷಣೆಯನ್ನು ಮಾಡುತ್ತಿದ್ದೇನೆ. ನೀವೂ ಕೂಡ ಈ ಪಾಪದ ಹೊರೆಯನ್ನು ಹೊರುತ್ತೀರಿ ಅಲ್ಲವೆ' ಎನ್ನುತ್ತಾನೆ, ಆಗ ಹೆಂಡತಿ ಹೇಳುತ್ತಾಳೆ, 'ನಮ್ಮನ್ನು ಸಾಕುವುದು ನಿನ್ನ ಧರ್ಮ. ನೀನು ಮಾಡಿರುವ ಪಾಪಗಳಿಗೆ ನಾವು ಹೊಣೆಯಲ್ಲ, ಅದರ ಪಾಲನ್ನು ನಾವು ಹೊರುವುದಿಲ್ಲ' ಎನ್ನುತ್ತಾಳೆ. ಆಗ ವಾಲ್ಮೀಕಿಗಳಿಗೆ ಜ್ಞಾನೋದಯವಾಗುತ್ತದೆ. ನಾರದ ಮಹರ್ಷಿಗಳ ಪಾದಗಳಿಗೆರಗಿ, ಕಠಿಣವಾದ ತಪಸ್ಸನ್ನು ಆಚರಿಸುತ್ತಾರೆ. ತಪಸ್ಸಾಚರಿಸುವಾಗ ಶರೀರದ ಮೇಲೆ ಪರಿವೆಯೇ ಇರುವುದಿಲ್ಲ. ಹುತ್ತ ಬೆಳೆಯುತ್ತದೆ. ಅನಂತರ ಹುತ್ತದಿಂದ ಎದ್ದು ಬರುತ್ತಾರೆ. ಹುತ್ತವನ್ನು ವಾಲ್ಮೀಕ ಎನ್ನುತ್ತಾರೆ. ವಾಲ್ಮೀಕದಿಂದ ಎದ್ದು ಬಂದವರೆ ವಾಲ್ಮೀಕಿ ಮಹರ್ಷಿಗಳಾಗುತ್ತಾರೆ. ಈ ಘಟನೆಯಿಂದ ನಮಗೆ ಅರಿವಾಗುವುದೆನೆಂದರೆ ನಮ್ಮ ಪಾಪಗಳ ಪಾಲನ್ನು ಯಾರೂ ಹೊರುವುದಿಲ್ಲ, ಭಾಗಿಗಳೂ ಅಲ್ಲ. ನಮ್ಮ ಪಾಪಗಳಿಗೆ ನಾವೇ ಹೊಣೆಗಾರರು" ಎಂದರು.

"ಭಕ್ತಿಯ ಬಾಹ್ಯಾಡಂಬರದಿಂದ ಮುಕ್ತಿ ಸಿಗುವುದಿಲ್ಲ. ಅಂತರಂಗದ ಸಾಧನೆ ಶ್ರೇಷ್ಠವಾದುದು. ಅಂತರಂಗದಲ್ಲಿ ದ್ವೇಷ, ಅಸೂಯೆ, ಸ್ವಾರ್ಥ ಮುಂತಾದ ಕಲ್ಮಷವನ್ನು ತೆಗೆದು, ಅಲ್ಲಿ ಭವ್ಯವಾದ ಮಂದಿರವನ್ನು ನಿರ್ಮಿಸಿ, ಮಾನಸಪೂಜೆಯನ್ನು ನಿರಂತರವಾಗಿ ಮಾಡಬೇಕು. ಧರ್ಮದ ಜಾಗೃತಿಯನ್ನು ಮೂಡಿಸುತ್ತಾ, ಸತ್ಯವಾದ ಧರ್ಮವನ್ನು ಅನುಷ್ಠಾನಗೊಳಿಸುವುದೇ ಧರ್ಮ ಚಿಂತನೆ ಕಾರ್ಯಕ್ರಮದ ಉದ್ದೇಶ ಎಂದು ಹೇಳುತ್ತಾ ಸಭೆಗೆ ಆತ್ಮಪೂಜೆಯ ವಿವರವನ್ನು ತಿಳಿಸುತ್ತಾ ಸಭೆಗೆ ಗುರುಪೂಜೆ, ಮಾನಸಪೂಜೆಯ ಮಹತ್ತ್ವವನ್ನು ಮನವರಿಕೆ ಮಾಡಿಕೊಟ್ಟರು." ●



ಡಾ ಬಾಬು ಕೃಷ್ಣಮೂರ್ತಿ ಅವರಿಗೆ ಸನ್ಮಾನ

# ಭಾರತ ದೇಶ ಧರ್ಮಭೂಮಿ

ಹಿರಿಯ ಅಧ್ಯಾತ್ಮ ಚಿಂತಕ ಡಾ. ಬಾಬುಕೃಷ್ಣಮೂರ್ತಿರವರು ಮಾತನಾಡಿ, "ಭಾರತದ ಸನಾತನ ಧರ್ಮವನ್ನು ಪರಿಚಯಿಸುವ ಸಲುವಾಗಿ ತತ್ತ್ವಚಿಂತನೆ ಅಗತ್ಯ. ಧರ್ಮ ಉಳಿದರೆ ಮಾತ್ರ ಪ್ರಪಂಚ ಉಳಿಯುತ್ತದೆ. ಧರ್ಮ ಉಳಿದರೆ ಮಾತ್ರ ಜನ ಉಳಿಯುತ್ತಾರೆ. ಧರ್ಮಕ್ಕೆ ಪೆಟ್ಟುಬಿದ್ದರೆ ಪ್ರಪಂಚ ಸರ್ವನಾಶವಾಗುತ್ತದೆ. ಭಾರತ ದೇಶ ಪುಣ್ಯಭೂಮಿ, ಧರ್ಮಭೂಮಿ. ಅನೇಕ ಪುರಾಣಗಳಲ್ಲಿ ಇದರ ಉಲ್ಲೇಖವಿದೆ. ಜೀವನದ ಮೌಲ್ಯಗಳನ್ನು ಅನೇಕ ಸಾಧು ಸಂತರು ಭಾರತದಲ್ಲಿ ಬೋಧಿಸಿದ್ದಾರೆ.

ಮಾನವ ಜನ್ಮ ಶ್ರೇಷ್ಠವಾದುದು ಇದನ್ನು ವ್ಯರ್ಥಮಾಡಿಕೊಳ್ಳದೆ ಮುಕ್ತಿಯೆಡೆಗೆ ಹೋಗಬೇಕು. ಹುಟ್ಟು ಸಾವುಗಳ ಚಕ್ರದಿಂದ ಹೊರಬರಬೇಕು. ಈ ಚಕ್ರದಿಂದ ಹೊರಬರಲು ಮಾನವ ಜನ್ಮವೇ ಸಾಧನ. ವಿವೇಕಯುತವಾಗಿ ಮಾನವ ಜನ್ಮವನ್ನು ಬಳಸಿಕೊಂಡು ಭಗವಂತನ ಸ್ಮರಣೆಯನ್ನು ನಿರಂತರವಾಗಿ ಮಾಡಬೇಕು. ಮಹಾಪುರುಷರಾದ ಸಂತರ ಸಹವಾಸ ಸಿಗುವುದು ದುರ್ಲಭ. ಸಂತರ ಸಂಘ ಸತ್ಸಂಗ. ಸತ್ಸಂಗದಿಂದ ಜೀವನ್ಮುಕ್ತನಾಗುವ ಅವಕಾಶ ಸಿಗುತ್ತದೆ" ಎಂದರು.

ಕಾರ್ಯಕ್ರಮಕ್ಕೂ ಮೊದಲು ಭಜನೆಯಟ್ಟಿ ರಂಗಪ್ಪ ಸರ್ಕಲ್‌ನಿಂದ ನಾದಸ್ವರ, ಭಜನೆಯೊಂದಿಗೆ ದೇವಾಲಯದಿಂದ ಕಾರ್ಯಕ್ರಮ ನಡೆಯುವ ಸ್ಥಳದವರೆಗೂ ಶೋಭಾಯಾತ್ರೆಯಲ್ಲಿ ಬರಲಾಯಿತು. ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಿದರು. ಶ್ರೀ ವಾನರಾಶಿ ಬಾಲಕೃಷ್ಣ ಭಾಗವತರ್ ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ಹಲವಾರು ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

● ವರದಿ: ಟಿ.ಎಲ್. ಆನಂದ್, ತಳಗವಾರ

**ಶ್ರೀಯೋಗಿನಾರೇಯಣ ಮಠ, ಶ್ರೀಕ್ಷೇತ್ರ ಕೈವಾರ**

## ಈ ತಿಂಗಳ ಧರ್ಮ ಚಿಂತನೆ ಕಾರ್ಯಕ್ರಮ

ಸ್ಥಳ:
ಡಾ. ಹೆಚ್.ಎನ್. ಕಲಾಮಂದಿರ,
ವಿ.ವಿ.ಪುರಂ, ಗೌರಿಬಿದನೂರು.

ದಿನಾಂಕ 08 ಫೆಬ್ರವರಿ 2020
ಶನಿವಾರ ಸಂಜೆ 5.30 ಗಂಟೆಗೆ

ಸರ್ವರಿಗೂ ಆದರದ ಸುಸ್ವಾಗತ


# 'ಏನು ಶೆಟ್ಟರೇ, ಬರೀ ಸೊನ್ನೆ ಸುತ್ತುತ್ತಿದ್ದೀರಲ್ಲ'

■ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ

ಬೆಂಗಳೂರಿನ ಎಲೆ ಮಲ್ಲಪ್ಪ ಶೆಟ್ಟರು (1815–87) ತಮ್ಮ ಕಾಲದ ಪ್ರಸಿದ್ಧ ವ್ಯಾಪಾರಿಗಳು. ಸಮೃದ್ಧವಾದ ಸಂಪಾದನೆ. ಈ ಸಂಪಾದನೆಯನ್ನು ಸದ್ವಿನಿಯೋಗಮಾಡುವ ದಾನಗುಣವೂ ಅವರಿಗಿತ್ತು. ಅನೇಕ ಗುಡಿ, ಕೆರೆ, ಛತ್ರ ಮಾಡಿಸಿದರು; ಕ್ಷಾಮ ಕಾಲದಲ್ಲಿಯೂ ದಾಸೋಹ ಮಾಡಿದರು; ಜನರ ಕಷ್ಟ ಕಾರ್ಪಣ್ಯಗಳಲ್ಲಿ ಅವರಿಗೆ ದ್ರವ್ಯ ಸಹಾಯ ಮಾಡಿದರು; ಫಲವಾಗಿ, ಕೈ ಬರಿದುಮಾಡಿಕೊಂಡರು. ಅವರ ಜನೋಪಕಾರಕ ಗುಣವನ್ನು ಗುರುತಿಸಿ, ಅಂದಿನ ವಿಕ್ಟೋರಿಯಾ ರಾಣಿಯವರ ಇಂಗ್ಲಿಷ್ ಸರ್ಕಾರದವರು ಅವರಿಗೆ 'ರಾಯ್ ಬಹದ್ದೂರ್' ಬಿರುದುಕೊಟ್ಟರು (1–1–1877).

ಮಲ್ಲಪ್ಪ ಶೆಟ್ಟರು ಹೊಸಕೋಟೆ ತಾಲ್ಲೂಕು ಜೋಡಿವೀರಿನಹಳ್ಳಿಯಲ್ಲಿ ದೊಡ್ಡಕೆರೆ ಕಟ್ಟಿಸಿ ಸುಮಾರು 150 ಎಕರೆ ಜಮೀನಿಗೆ ನೀರು ಸಿಕ್ಕುವಂತೆ ಮಾಡಿದರು. ಅದೇ 'ಎಲೆ ಮಲ್ಲಪ್ಪ ಶೆಟ್ಟರ ಕೆರೆ'. ಕೂಲಿಕಾರರಿಗೆ ಶೆಟ್ಟರು ದುಡ್ಡು ಎಣಿಸಿಕೊಡುತ್ತಿರಲಿಲ್ಲ, ಜೋಳಿಗೆಯಿಂದ ಕೈ ಹಿಡಿಯಲ್ಲಿ ತೆಗೆದುಕೊಡುತ್ತಿದ್ದರು. ಗರ್ಭಿಣಿ ಹೆಂಗಸರಿಗೆ ಎರಡು ಹಿಡಿ ನಾಣ್ಯ! 'ಇದೇನು ಸ್ವಾಮಿ, ನಾನು ಒಬ್ಬಳೇ ಇರೋದು, ಎರಡು ಕೂಲಿ ಕೊಟ್ಟರಲ್ಲಾ" ಎಂದರೆ, ಶೆಟ್ಟರು ನಕ್ಕು, 'ನಿನಗೊಂದು ಕೂಲಿ, ನಿನ್ನ ಹೊಟ್ಟೇಲಿರೋ ಮಗುವಿಗೆ ಒಂದು ಕೂಲಿ' ಎನ್ನುತ್ತಿದ್ದರು.

ಒಂದು ಮಧ್ಯಾಹ್ನ ಮಲ್ಲಪ್ಪ ಶೆಟ್ಟರು ತಮ್ಮ ದೈನಂದಿನ ಕೆರೆಯ ಕೆಲಸದ ಉಸ್ತುವಾರಿ ಮುಗಿಸಿ ಮನೆಗೆ ಮರಳಲು ತಮ್ಮ ಕೋಚ್‌ಗಾಡಿ ಹತ್ತಿ ಕುಳಿತರು. ಗಾಡಿ ಸ್ವಲ್ಪ ದೂರ ಸಾಗಿದಾಗ, ಅವರಿಗೆ ಹೃದಯವಿದ್ರಾವಕವಾದ ದೃಶ್ಯವೊಂದು ಕಂಡಿತು. ರಸ್ತೆ ಬದಿಯ ಮರದಡಿಯಲ್ಲಿ ತುಂಬುಗರ್ಭಿಣಿಯೊಬ್ಬಳು ಪ್ರಸವವೇದನೆಯಿಂದ ಬಾಧೆಪಡುತ್ತಿದ್ದಳು. ಶೆಟ್ಟರು ತತ್‌ಕ್ಷಣವೇ ಗಾಡಿಯಲ್ಲಿ ಹಿಂದಿರುಗಿ ಕೆರೆ ಕೆಲಸ ನಡೆಯುತ್ತಿದ್ದ ಜಾಗದಿಂದ ಕೆಲವರು ಹೆಂಗಸರನ್ನು ಸಹಾಯಕ್ಕೆ ಕರೆತಂದರು. ಹೆರಿಗೆಯೇನೋ ಆಯಿತು. ಆದರೆ ತಿಳಿವಳಿಕೆಯ ಆರೈಕೆ ಇಲ್ಲದೆ, ಆಗಲೇ ಬಸಿರಿಹೆಂಗಸು ತೀರಿಕೊಂಡಳು. ಶೆಟ್ಟರ ಮನಸ್ಸಿಗೆ ತುಂಬ ನೋವಾಯಿತು.



ಆಗಲೇ ಬೆಂಗಳೂರಿನಲ್ಲಿ ಒಂದು ಹೆರಿಗೆ ಆಸ್ಪತ್ರೆ ಕಟ್ಟಿಸಲು ಶೆಟ್ಟರು ಸಂಕಲ್ಪಿಸಿದರು. ಗಣ್ಯವ್ಯಕ್ತಿಗಳ ಸಭೆ ಕೂಡಿಸಿದರು. ಸಭೆಗೆ ಮದರಾಸು ಸರ್ಕಾರದ ಗೌರ್ನರ್ ಸಹ ಬಂದಿದ್ದರು. ಅಲ್ಲಿ ಶೆಟ್ಟರು ನಡೆದ ಸಂಗತಿ ವಿವರಿಸಿದರು. ಹೆರಿಗೆ ಆಸ್ಪತ್ರೆ ಕಟ್ಟಬೇಕೆಂಬ ಅವರ ಸಲಹೆ ಎಲ್ಲರಿಗೂ ಒಪ್ಪಿಗೆಯಾಯಿತು; ಚಂದಾ ಕೂಡಿಸಲು ನಿಶ್ಚಯಿಸಿದರು; "ಶೆಟ್ಟರೇ, ಈ ಯೋಜನೆ ನಿಮ್ಮದು, ನೀವೇ ಮೊದಲು ಚಂದಾ ಹಾಕಿ" ಎಂದರು. ಹೀಗೆ ಹೇಳಿ, ಚಂದಾಪಟ್ಟಿಯನ್ನು ಅವರ ಮುಂದೆ ಚಾಚಿದರು, ಗಣ್ಯರೊಬ್ಬರು, ಶೆಟ್ಟರು, "ನೀವೆಲ್ಲ ಹಾಕಿ, ಆಮೇಲೆ

ನೋಡೋಣ" ಎಂದು ಹೇಳಿ, ಒಂದು ಮೂಲೆಯಲ್ಲಿ ಕುಳಿತರು. ಗಣ್ಯವರ್ತಕರೆಲ್ಲ ತಮ್ಮ ಹೆಸರು, ಹಣದ ಮೊತ್ತ ಬರೆಯುತ್ತ ಹೋದರು.

ಈಗ ಮದರಾಸು ಗೌರ್ನರ್, "ಆ ಮೂಲೆಯಲ್ಲಿ ಕುಳಿತಿರುವ ಆ ಕರೀಕೋಟು ಕೆಂಪುವಸ್ತ್ರದ ಮುದುಕರನ್ನು ಕೇಳಿ, ಏನು ಕೊಡುವರೋ ನೋಡೋಣ" ಎಂದರು. ಈಗ ಕೊನೆಯದಾಗಿ ಚಂದಾಪಟ್ಟಿ ಶೆಟ್ಟರ ಕೈಗೆ ಬಂತು. ಅವರಿಗೆ ಬರವಣಿಗೆ ಬರುತ್ತಿತ್ತೋ ಇಲ್ಲವೋ ತಿಳಿಯದು. ಪಟ್ಟಿಯನ್ನು ಕೈಗೆ ತೆಗೆದುಕೊಂಡು ತಮ್ಮ ಹೆಸರಿನ ಮುಂದೆ ಉದ್ದಕ್ಕೆ ಸೊನ್ನೆಗಳನ್ನು ಸುತ್ತಾತ್ತಾ ಹೋದರು. ಅವರೊಂದಿಗೆ ಸದಾ ಇರುತ್ತಿದ್ದ ಅವರ ಗುಮಾಸ್ತೆ 35 ಸೊನ್ನೆಗಳಾಗುತ್ತಲೇ ಅವರ ಕೈ ತಡೆದ. ಸೇರಿದ್ದ ಜನ "ಏನು ಶೆಟ್ಟರೇ, ಬರೀ ಸೊನ್ನೆ ಸುತ್ತುತ್ತಿದ್ದೀರಲ್ಲ, ಏನೂ ಕೊಡುವುದಿಲ್ಲ ಎಂದರ್ಥವೇ?" ಎಂದು ಹೇಳಿ ನಕ್ಕರು.

ಶೆಟ್ಟರು "ದಯಮಾಡಿ ಎಲ್ಲರೂ ಇನ್ನು ಒಂದು ಗಂಟೆ ಕಾಲ ಇಲ್ಲೇ ಕುಳಿತಿರಬೇಕು, ಯಾರೂ ಎದ್ದು ಹೋಗಬಾರದು" ಎಂದು ಕೇಳಿಕೊಂಡರು. ತಮ್ಮ ಗುಮಾಸ್ತೆಯನ್ನು ಮನೆಗೆ ಕಳಿಸಿ ಹಣ ತರಿಸಿದರು. ಆಗ ಬಳಕೆಯಲ್ಲಿದ್ದುದು ಬೆಳ್ಳಿರೂಪಾಯಿ. ಸಾವಿರ ರೂಪಾಯಿಗಳನ್ನು ಒಂದೊಂದು ಸಣ್ಣಪೀಪಾಯಿಯಲ್ಲಿ ತುಂಬಿಸಿತ್ತು. ಅಂತಹ 35 ಪೀಪಾಯಿಗಳನ್ನು ಒಡೆಸಿ ಒಂದು ಸೊನ್ನೆಗೆ ಸಾವಿರದಂತೆ 35 ಸಾವಿರ ರೂಪಾಯಿಗಳನ್ನು ಶೆಟ್ಟರು ತಮ್ಮ ಚಂದಾ ಆಗಿ ಆಗಲೇ ಸಲ್ಲಿಸಿದರು.

ಹೆರಿಗೆ ಆಸ್ಪತ್ರೆ ಕಟ್ಟಿದ್ದಾಯಿತು. ಆಸ್ಪತ್ರೆಯ ಆ ಹಳೆಯ ಕಟ್ಟಡ ಈಗ ಬೆಂಗಳೂರಿನ ನೃಪತುಂಗ ರಸ್ತೆಯ ಐಜಿಪಿ ಆಫೀಸ್ ಇರುವ ಸ್ಥಳದಲ್ಲಿತ್ತು; ಈಚೆಗೆ ಸ್ಥಳಾಂತರಗೊಂಡಿತು. ಧರ್ಮಕಾರ್ಯ ಮಾಡಿದ ದಾನಿಗಳ ಪಟ್ಟಿಯಲ್ಲಿ ಎಲೆ ಮಲ್ಲಪ್ಪ ಶೆಟ್ಟರ ಹೆಸರು ಅಗ್ರಸ್ಥಾನದಲ್ಲಿದೆ; ಆಸ್ಪತ್ರೆಯಲ್ಲಿ ಅವರ ಭಾವಚಿತ್ರವೂ ಇದೆ.

'ಬ್ರಾಹ್ಮಿ', ೬೮ಬಿ, ಆಶ್ರಮ ರಸ್ತೆ, ೩ನೇ ಬ್ಲಾಕ್,
ಜಯಲಕ್ಷ್ಮೀಪುರಂ, ಮೈಸೂರು – ೫೭೦ ೦೧೨.



# ಮಹಾಗುರು


ಒಂದು ದಿನ ಅಲೆಗ್ಸಾಂಡರ್ ಮಹಾರಾಜನು ದಾರಿಯಲ್ಲಿ ನಡೆದಿದ್ದಾನೆ. ಮಧ್ಯದಲ್ಲಿ ಆತನ ಪರಮಗುರು ಅರಿಸ್ಟಾಟಲ್ ಭೇಟಿಯಾದ. ತತ್‌ಕ್ಷಣವೇ ಅಜೇಯ ದೊರೆ ಅಲೆಗ್ಸಾಂಡರನು ಮಂಡಿಯೂರಿ, ಗುರುವಿಗೆ ತಲೆಬಾಗಿದ. ಜನರು ಬೆರಗಾದರು! ರಾಜನ ವಂದನೆಯನ್ನು ವಿನಯದಿಂದ ಸ್ವೀಕರಿಸಿದ ಗುರು ಅರಿಸ್ಟಾಟಲ್ ಒಂದು ಶಬ್ದವೂ ಮಾತನಾಡದೆ ಹೊರಟು ಹೋದ.

ಆ ಬಳಿಕ ರಾಜನಿಗೆ ಮಂತ್ರಿ ಕೇಳಿದ, "ಮಹಾಪ್ರಭು! ತಾವು ಅಜೇಯ ವೀರರು, ನಿಮ್ಮ ತಂದೆ ನಿಮಗೆ ಸುಂದರ ದೇಹವನ್ನಿತ್ತ ಯುದ್ಧ ಕಲೆಯನ್ನು ಕಲಿಸಿ ಬೆಳೆಸಿದ. ಸಮಸ್ತ ಐಶ್ವರ್ಯವನ್ನು ಕೊಟ್ಟು ನಿಮ್ಮನ್ನು ಏಕಛತ್ರಾಧಿಪತಿಗಳನ್ನಾಗಿ ಮಾಡಿದ. ಇಂಥ ತಂದೆಗಿಂತಲೂ ಹೆಚ್ಚಿನ ಗೌರವವನ್ನು ಈ ಭಿಕ್ಷುಕವೇಷದ ಬಡಗುರುವಿಗೆ ಕೊಡುವಿರಲ್ಲ, ಏಕೆ?"

ಆಗ ಅಲೆಗ್ಸಾಂಡರ್ ದೊರೆ ನೀಡಿದ ಉತ್ತರವನ್ನು ಸುವರ್ಣಾಕ್ಷರದಲ್ಲಿ ಬರೆದಿಡಬೇಕು.

"ನನ್ನ ತಂದೆ ನನ್ನನ್ನು ಸ್ವರ್ಗದಿಂದ ಈ ಭೂಮಿಗೆ ತಂದ. ಗುರುವು ನನ್ನನ್ನು ಈ ಭೂಮಿಯಿಂದ ಸ್ವರ್ಗದೆತ್ತರಕ್ಕೆ ಏರಿಸಿದ. ನನ್ನ ತಂದೆ ನನಗೆ ನಾಶವಾಗುವ ದೇಹವನ್ನು, ಸಂಪತ್ತನ್ನು ಕೊಟ್ಟ. ನನ್ನ ಗುರುವು ನನಗೆ ಅಮರಸಿರಿಯನ್ನು ದಿವ್ಯಜೀವನವನ್ನು ಕರುಣಿಸಿದ. ಅಂಥ ಮಹಾಗುರುವನ್ನು ನಾನು ಹಾಗೆ ಗೌರವಿಸದೆ ಇರಬಹುದೆ?" ಎಂದ ರಾಜ. ●

ಸಂಗ್ರಹ: ಡಾ॥ ಶ್ರದ್ಧಾನಂದಸ್ವಾಮಿ




ಈಗ ಅಮ್ಮನಿಗೆ, ಸೋದರರಿಗೆ ನೀರು ತೆಗೆದುಕೊಂಡು ಹೋಗುತ್ತೇನೆ.
2010 © MALAY FEATURES PB 608, KOTTAYAM -1
ಅಯ್ಯೋ! ಇಲ್ಲಿ ಎಲ್ಲರೂ ಬಳಲಿ ಹೋಗಿ ನಿದ್ರಿಸುತ್ತಿದ್ದಾರೆ.
ನಮ್ಮ ತಾಯಿಗೆ ಈ ಕಾಡಿನಲ್ಲಿ ಈ ರೀತಿಯಲ್ಲಿ ಮಲಗಬೇಕಾಗಿ ಬಂದಿತೇ! ದುರ್ದೈವ!
28


ಕುಂತಿಭೋಜ ಮಹಾರಾಜನ ಮಗಳು! ಪಾಂಡು ಮಹಾರಾಜನ ಧರ್ಮಪತ್ನಿ...
2010 © MALAY FEATURES PB 608, KOTTAYAM -1
ಅತಿ ಶಕ್ತಿಶಾಲಿಗಳಾದ ನಾವು ಐವರು ಪುತ್ರರ ತಾಯಿಯಾದ ಈಕೆ. ಕೋಮಲವಾದ ಶಯ್ಯೆಯಲ್ಲಿ ಮಲಗಬೇಕಿತ್ತು.
ಓಹ್!
ರಾಜ ಮಹಲುಗಳಲ್ಲಿ ಮಲಗಬೇಕಾದವರು ಈಗ ಈ ದಟ್ಟ ಅರಣ್ಯದಲ್ಲಿ ಕಲ್ಲು ಮುಳ್ಳುಗಳ ಮೇಲೆ ಮಲಗಬೇಕದ ದುಃತಿ!
29

(ಮುಂದುವರಿಯುವುದು)

# ಮಹಾಭಾರತ–6

ಕಥೆ: ಕುಮಾರ ಮೋಹನ್ ಚಲಮ್
ಕಲೆ: ಅಜಯನ್ ಸಂತೂ



Licensed to post without prepayment-WPP-102 **MALLARA** Monthly, FEBRUARY-2020,
64 pages and cost Rs. 12/- RNI. No. KARBIL/2009/30225 Reg. KA/BGW-492/2018-2020
Published and Posted at Bengaluru PSO, Bengaluru-560026 on 30th of every month.



ದಕ್ಷಿಣೇಶ್ವರದಲ್ಲಿರುವ ಕಾಳೀ ದೇವಸ್ಥಾನ (ಪಶ್ಚಿಮ ಬಂಗಾಳ)